Yojana (Kannada) July 2015
"Registered" Reg.No.RNP/KA/BGS/2024/2013-2015
Date of Publication: 3rd July, Posted on 10th July at Bengaluru PSO BG - 560026
Total No. of Pages : 52 + 4 Cover Pages
ISSN 0971-8737
Regd.No. RNI 43034/85

ಹರಿಪ್ರಸಾದ್
ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

KAS 2015
MAINS EXAM BATCHES
As per New Syllabus

ETHICS, INTEGRITY & APTITUDE & SCIENCE & TECHNOLOGY
ಕನ್ನಡ ಮಾಧ್ಯಮದಲ್ಲಿ ಬೋಧಿಸಲಾಗುವುದು

OPTIONAL SUBJECTS
* ಕನ್ನಡ ಸಾಹಿತ್ಯ (ಖ್ಯಾತಸಾಹಿತಿ ಮತ್ತು ವಿಮರ್ಶಕರಿಂದ)
* ಇತಿಹಾಸ
* ಮಾನವ ಶಾಸ್ತ್ರ (Anthropology)
* ಸಾರ್ವಜನಿಕ ಆಡಳಿತ
* ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ (Rural Development & Cooperation)

FREE UPDATES ON CURRENT EVENTS @
www.ambitionias.com


G. HARIPRASAD
DIRECTOR

# 6, 4th Cross, 5th Main, B/h. Hampinagar Post Office,
(Next to SBM), Vijayanagar 2nd Stage, Bangalore-104
Ph: 080-23354445, 9740472728, 9482013522

Printed & Published by Dr. Sadhana Rout, Additional Director General and Head on behalf of Publications Division Soochna Bhawan, C.G.O. Complex, Lodhi Road, New Delhi - 110 003. & Printed at Omkar Offset Printers, 3/3, 1st Main Road, New Tharagupet, Bengaluru - 560 002. Ph. : 080-26708186/7 and Published at 1st Floor, 'F' Wing, Kendriya Sadana, Koramangala, Bengaluru - 560 034. Ph : 080 2553 7244 Chief Editor : Deepika Kachhal, Senior Editor : B.S. Meenakshi.

# ಯೋಜನಾ

ಜುಲೈ 2015 ಅಭಿವೃದ್ಧಿ ಮಾಸಪತ್ರಿಕೆ ₹ 10

## ಅಂತಾರಾಷ್ಟ್ರೀಯ ಸಂಬಂಧಗಳಲ್ಲಿ ಹೊಸ ಹೊಳಹು


ಹೊಸ ಚೈತನ್ಯ : ಹೊಸ ಗೊತ್ತು ಗುರಿ
ಅಚಲ್ ಮಲ್ಹೋತ್ರಾ
ಭಾರತ – ಅಮೆರಿಕ ಬಾಂಧವ್ಯ
ಕೆ.ಸಿ. ಸಿಂಗ್
ಆರ್ಥಿಕಾಭಿವೃದ್ಧಿಗೆ ರಾಜತಾಂತ್ರಿಕತೆ
ರಾಮ್ ಉಪೇಂದ್ರ ದಾಸ್
ಉತ್ತಮ ಆಡಳಿತ – ಶೈಲಿ ಮತ್ತು ಸತ್ವ
ಎ. ಸೂರ್ಯಪ್ರಕಾಶ







ಜ್ಞಾನಾರ್ಜನೆಗಾಗಿ...
ಯೋಜನಾ – ಕನ್ನಡ ಮಾಸ ಪತ್ರಿಕೆ
ಚಂದಾದಾರರಾಗಿ




ವಿಳಾಸ
**ಯೋಜನಾ – ಕನ್ನಡ**
ಮೊದಲನೆ ಅಂತಸ್ತು,
'ಎಫ್' ವಿಂಗ್, ಕೇಂದ್ರೀಯ ಸದನ,
ಕೋರಮಂಗಲ, ಬೆಂಗಳೂರು – 560 034.
✆ : 25537244
e-mail : yojanakannada@yahoo.com

ಪತ್ರಿಕೆ ಸರಿಯಾಗಿ ತಲುಪಲು
ಚಂದಾದಾರರು, ಅಂಚೆ ಪಿನ್‌ಕೋಡ್ ಒಳಗೊಂಡ
ತಮ್ಮ ಪೂರ್ಣ ವಿಳಾಸ ಒದಗಿಸಬೇಕು.

**ಚಂದಾ ವಿವರ**


| | |
|---|---|
| ಒಂದು ವರ್ಷಕ್ಕೆ | ರೂ. 100/- |
| ಎರಡು ವರ್ಷಗಳಿಗೆ | ರೂ. 180/- |
| ಮೂರು ವರ್ಷಗಳಿಗೆ | ರೂ. 250/- |

ಚಂದಾ ಹಣವನ್ನು ಮನಿ ಆರ್ಡರ್- ಎಂ ಓ ಮೂಲಕವೇ ನಮ್ಮ ವಿಳಾಸಕ್ಕೆ ಕಳಿಸಿದರೆ ಉತ್ತಮ. ಎಂ ಓ ಕಳಿಸಿದ ಒಂದು ವಾರದ ಒಳಗೆ ನಮ್ಮ ಕಚೇರಿಯನ್ನು ಸಂಪರ್ಕಿಸಿ ನಿಮ್ಮ ವಿಳಾಸ-ವಿವರಗಳನ್ನು ದೃಢೀಕರಿಸಿಕೊಳ್ಳಬೇಕಾಗಿ ಕೋರಲಾಗಿದೆ.

# ವರುಷ ಒಂದು – ಆರಂಭ ಅನೇಕ



ಜಾಹಿರಾತು ಮತ್ತು ದೃಶ್ಯ ಪ್ರಚಾರ ನಿರ್ದೇಶನಾಲಯ, ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಏರ್ಪಡಿಸಿದ್ದ "ವರುಷ ಒಂದು ಆರಂಭ ಅನೇಕ" ಛಾಯಾ ಚಿತ್ರ ಪ್ರದರ್ಶನವನ್ನು ಕೇಂದ್ರ ಸಚಿವರುಗಳಾದ ಶ್ರೀ ವೆಂಕಯ್ಯನಾಯ್ಡು, ಶ್ರೀ ಸದಾನಂದ ಗೌಡ, ಶ್ರೀ ಅನಂತಕುಮಾರ್, ಸಂಸದ ಶ್ರೀ ಪಿ.ಸಿ. ಮೋಹನ್, ಉದ್ಘಾಟಿಸಿದರು. ಪ್ರಕಾಶನ ವಿಭಾಗದ ಹೆಚ್ಚುವರಿ ಮಹಾ ನಿರ್ದೇಶಕರಾದ ಡಾ॥ ಸಾಧನಾ ರಾವತ್ ಮತ್ತು ಪಿ ಐ ಬಿಯ ಹೆಚ್ಚುವರಿ ಮಹಾ ನಿರ್ದೇಶಕ ಶ್ರೀ ಎಸ್ ವೆಂಕಟೇಶ್ವರ್ ಅವರನ್ನು ಚಿತ್ರದಲ್ಲಿ ಕಾಣಬಹುದು. ಇದೇ ಸಂದರ್ಭದಲ್ಲಿ ಪ್ರಕಾಶನ ವಿಭಾಗ ಏರ್ಪಡಿಸಿದ್ದ ಪುಸ್ತಕ ಪ್ರದರ್ಶನ ಮತ್ತು ಮಾರಾಟ ಮಳಿಗೆಯಲ್ಲಿ "ಯೋಜನಾ" ಕನ್ನಡ ಹಾಗೂ ಇಂಗ್ಲಿಷ್ ಜೂನ್ ಸಂಚಿಕೆಗಳನ್ನು ಸಚಿವರು ಬಿಡುಗಡೆ ಮಾಡಿದರು.



ಜುಲೈ 2015 ಸಂಚಿಕೆ – 12 ಸಂಪುಟ – 30

# ಯೋಜನಾ

ಮುಖ್ಯ ಸಂಪಾದಕಿ
**ದೀಪಿಕಾ ಕಚ್ಚಲ್**

ಹಿರಿಯ ಸಂಪಾದಕಿ
**ಬಿ.ಎಸ್. ಮೀನಾಕ್ಷಿ**

ಸಂಪಾದಕಿ
**ಬಿ.ಕೆ. ಕಿರಣ್ಮಯಿ**

ವಿಳಾಸ
ಯೋಜನಾ – ಕನ್ನಡ,
ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ,
ಭಾರತ ಸರ್ಕಾರ,
ಮೊದಲನೆಯ ಅಂತಸ್ತು, 'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ,
ಬೆಂಗಳೂರು – 560 034.
ದೂರವಾಣಿ : 080 – 25537244.
E-mail : yojanakannada@yahoo.com

## ಈ ಸಂಚಿಕೆಯಲ್ಲಿ ..........

ಸಂಪಾದಕೀಯ .......... 2
ಹೊಸ ಚೈತನ್ಯ : ಹೊಸ ಗೊತ್ತುಗುರಿ .......... 3
* ಅಚಲ್ ಮಲ್ಹೋತ್ರಾ
ಭಾರತ–ಅಮೆರಿಕ ಬಾಂಧವ್ಯ .......... 9
* ಕೆ. ಸಿ. ಸಿಂಗ್
ಉತ್ತಮ ಆಡಳಿತ – ಶೈಲಿ ಮತ್ತು ಸತ್ವ .......... 12
* ಡಾ. ಎ. ಸೂರ್ಯಪ್ರಕಾಶ
ರಕ್ಷಣಾ ಕ್ಷೇತ್ರದ ಸಂಬಂಧ : ಹೊಸ ದಿಸೆ .......... 15
* ಅಲೋಕ ಬನ್ಸಾಲ್
ಆರ್ಥಿಕಾಭಿವೃದ್ಧಿಗೆ ರಾಜತಾಂತ್ರಿಕತೆ .......... 19
* ಡಾ. ರಾಮ್ ಉಪೇಂದ್ರ ದಾಸ್
ಹೆಣ್ಣು ಮಗುವಿನತ್ತ .......... 22
* ಚಂದ್ರಾಣಿ ಬ್ಯಾನರ್ಜಿ
ಭಾರತ – ಚೀನಾ ಬಾಂಧವ್ಯ .......... 24
* ಮನೀಷ ಚಂದ
ಬಹುರಾಷ್ಟ್ರೀಯತೆಗೆ ಸವಾಲು .......... 27
* ದಿಲೀಪ್ ಸಿನ್ಹಾ
ವಿದೇಶಾಂಗ ನೀತಿ; ಹೊಸ ಯುಗ .......... 29
* ಕೃಷ್ಣ ವಟ್ಟಂ
ಆಧುನಿಕ ದೃಶ್ಯ ಸಂಸ್ಕೃತಿ ಮತ್ತು ಅಂತಾರಾಷ್ಟ್ರೀಯ ಸಂಬಂಧ .. 30
* ಎನ್. ವಿದ್ಯಾಶಂಕರ
ದೇಶ–ದೇಶಗಳ ಬೆಸುಗೆ : ಹೊಸ ಹೊಳಹು .......... 33
* ಸುಧಾ ಹೆಗಡೆ
ಜಾಗತಿಕ ಸಂಬಂಧದಲ್ಲಿ ಸಾಂಸ್ಕೃತಿಕ ರಂಗ .......... 36
* ನಾ. ದಾಮೋದರ ಶೆಟ್ಟಿ
ಅಂತಾರಾಷ್ಟ್ರೀಯ ವಾಣಿಜ್ಯ ಸಂಬಂಧ .......... 40
* ದಾಸನೂರು ಕೂಸಣ್ಣ
ವಲಸೆ ಮತ್ತು ಸಂಬಂಧ .......... 46
* ಡಾ. ಡೊಮಿನಿಕ್ ಡಿ.
ಕರ್ನಾಟಕದ ತಂತ್ರಜ್ಞಾನ ಸಂಬಂಧ .......... 48
* ಮಾಧವ
ನಿಮಗಿದು ತಿಳಿದಿದೆಯೇ? .......... 51
ವಾರ್ತಾ ವಿಶೇಷ .......... 52

ಮುಖಪುಟ ವಿನ್ಯಾಸ : ಅನಿಲ್ ತಿವಾರಿ

ಯೋಜನೆಯ ಸಂದೇಶವನ್ನು ಎಲ್ಲ ಜನಗಳಿಗೆ ಮುಟ್ಟಿಸಲು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಎಲ್ಲ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕ ಚರ್ಚೆ ಕೈಗೊಳ್ಳುವುದನ್ನು ಯೋಜನಾ ಉತ್ತೇಜಿಸುತ್ತದೆ. ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದಿಂದ ಪ್ರಕಟಿತವಾದರೂ, ಯೋಜನಾ ಕೇವಲ ಅಧಿಕೃತ ದೃಷ್ಟಿಕೋನವನ್ನು ಬಿಂಬಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಕನ್ನಡ, ಇಂಗ್ಲೀಷ್, ಹಿಂದಿ, ಅಸ್ಸಾಮಿ, ಗುಜರಾತಿ, ಬಂಗಾಲಿ, ಮಲಯಾಳಂ, ಮರಾಠಿ, ತಮಿಳು, ತೆಲುಗು, ಒರಿಯಾ, ಪಂಜಾಬಿ ಮತ್ತು ಉರ್ದು ಭಾಷೆಯಲ್ಲಿ ಯೋಜನಾ ಪ್ರಕಟವಾಗುತ್ತಿದೆ.

**ಚಂದಾ ವಿವರ**

| | |
|---|---|
| ಒಂದು ವರ್ಷಕ್ಕೆ | 100.00 |
| ಎರಡು ವರ್ಷಗಳಿಗೆ | 180.00 |
| ಮೂರು ವರ್ಷಗಳಿಗೆ | 250.00 |


**ಚಂದಾ ಹಣವನ್ನು ಮನಿಯಾರ್ಡರ್ ಮೂಲಕವೇ ನಮ್ಮ ವಿಳಾಸಕ್ಕೆ ಕಳಿಸಿರಿ.**

**ಒಂದು ಪಕ್ಷ ಡಿಮಾಂಡ್ ಡ್ರಾಫ್ಟ್ ಕಳಿಸುವುದಾದರೆ ಅದನ್ನು PUBLICATIONS DIVISION, MINISTRY OF I & B, GOVERNMENT OF INDIA ಹೆಸರಿನಲ್ಲಿ CHENNAI ನಲ್ಲಿ ಸಂದಾಯವಾಗುವಂತೆ ಪಡೆದು ಅದನ್ನು ನಮ್ಮ ವಿಳಾಸಕ್ಕೆ ಕಳುಹಿಸಬೇಕು.**

**ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು. ಅವರು ಪ್ರತಿನಿಧಿಸುವ ಸಂಸ್ಥೆ ಅಥವಾ ಸರ್ಕಾರದ ಅಭಿಪ್ರಾಯವಲ್ಲ. ಯೋಜನಾ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹಿರಾತುಗಳ ಯಥಾರ್ಥತೆ ಆಯಾ ಸಂಸ್ಥೆಗಳ ಹೊಣೆಗಾರಿಕೆಯಾಗಿರುತ್ತದೆ. ಚಿತ್ರಗಳು ಸಾಂದರ್ಭಿಕ.**

ಮುಖ್ಯ ಸಂಪಾದಕರ ಲೇಖನಿಯಿಂದ

## ಪ್ರವರ್ಧಮಾನದತ್ತ ಭಾರತ




ಯಾವುದೇ ದೇಶದ ಸ್ಥಾನಮಾನ ಹಾಗೂ ಭವಿಷ್ಯ ಆ ದೇಶದ ಮಿಲಿಟರಿ ಸಾಮರ್ಥ್ಯಕ್ಕಿಂತಲೂ ಹೆಚ್ಚಾಗಿ ರಾಜತಾಂತ್ರಿಕ ರಂಗದಲ್ಲಿ ಅದು ಸಾಧಿಸುತ್ತಿರುವ ಯಶಸ್ಸನ್ನು ಅವಲಂಬಿಸಿದೆ. ಇದು ಅಂತಾರಾಷ್ಟ್ರೀಯ ಸಂಬಂಧ ಕುರಿತಾದ ಪರಿಣಿತರ ಅಭಿಪ್ರಾಯ. ಭಾರತದ ವಿಷಯದಲ್ಲೂ ಈ ಮಾತು ಅಕ್ಷರಶಃ ಸತ್ಯ. ದೇಶಭಕ್ತಿ, ಸ್ವಾಭಿಮಾನಗಳ ಬಗ್ಗೆ ಪ್ರಶಂಸೆ ವ್ಯಕ್ತವಾಗುತ್ತಿರುವ ಜೊತೆಗೆ, ಶಾಂತಿಪ್ರಿಯ ದೇಶವೆಂಬ ಭಾರತದ ಅಂತಾರಾಷ್ಟ್ರೀಯ ಖ್ಯಾತಿ ಬಲಗೊಳ್ಳುತ್ತಿದೆ. ರಾಜತಾಂತ್ರಿಕ ನೆಲೆಗಳಲ್ಲಿ ಭಾರತಕ್ಕೆ ಸಿಗಬೇಕಾಗಿದ್ದ ಮನ್ನಣೆ ಇತ್ತೀಚಿನವರೆಗೂ ದೊರೆತಿರಲಿಲ್ಲ. ಆದರೆ ಇದೀಗ ಆ ಸ್ಥಾನಮಾನ ದೊರಕುತ್ತಿರುವುದು ಸ್ವಾಗತಾರ್ಹ ಸಂಗತಿ. ಜನಸಾಮಾನ್ಯರೂ ಕೂಡಾ ದೇಶ ನಿರ್ಮಾಣ ಕಾರ್ಯದಲ್ಲಿ ರಾಜತಾಂತ್ರಿಕ ಪ್ರಯತ್ನಗಳ ಮಹತ್ವ ಅರಿತು ಮೆಚ್ಚುಗೆ ವ್ಯಕ್ತಪಡಿಸುತ್ತಿರುವುದು ಇತ್ತೀಚಿನ ಬೆಳವಣಿಗೆಯಾಗಿದೆ.

ಉದಾರೀಕರಣ ಮತ್ತು ಜಾಗತಿಕ ವಾಣಿಜ್ಯದಲ್ಲಿ ತೀವ್ರಗತಿಯಲ್ಲಿ ಬದಲಾಗುತ್ತಿರುವ ಪ್ರವೃತ್ತಿಗಳು ಭಾರತದ ಅಂತಾರಾಷ್ಟ್ರೀಯ ಸಂಬಂಧಗಳಲ್ಲೂ ಸಾಕಷ್ಟು ಬದಲಾವಣೆ ತಂದಿವೆ. ಒಳಮುಖ ಆರ್ಥಿಕತೆಯನ್ನು, ಜಾಗತಿಕ ಸಮಗ್ರ ಆರ್ಥಿಕತೆಯತ್ತ ರೂಪಾಂತರಗೊಳಿಸಲು ನಡೆದಿರುವ ಪ್ರಯತ್ನಗಳು ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಭಾರತಕ್ಕೆ ಸಕಾರಾತ್ಮಕ ಇಮೇಜ್ ತಂದುಕೊಟ್ಟಿವೆ. ಕಳೆದೊಂದು ವರ್ಷದಲ್ಲಿ ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಭಾರತ ಪ್ರಜ್ಞಾಪೂರ್ವಕ ದೃಢ ಹೆಜ್ಜೆಗಳನ್ನು ಇಡುತ್ತಾ ಬಂದಿದೆ. ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಅಧಿಕಾರ ಸ್ವೀಕಾರ ಸಮಾರಂಭಕ್ಕೆ ಸಾರ್ಕ್ ದೇಶಗಳ ಧುರೀಣರನ್ನು ಆಹ್ವಾನಿಸುವುದರೊಂದಿಗೆ ಭಾರತದ ಖಚಿತ ನಡೆ ಆರಂಭವಾಯಿತು. ಪ್ರಧಾನಮಂತ್ರಿಯವರು ಅಭಿವೃದ್ಧಿ ಹೊಂದುತ್ತಿರುವ ಹಾಗೂ ಅಭಿವೃದ್ಧಿ ಹೊಂದಿದ ಒಟ್ಟು 19 ದೇಶಗಳಿಗೆ ಒಂದು ವರ್ಷದಲ್ಲೇ ಭೇಟಿನೀಡಿದರು; ನಮ್ಮ ವಿದೇಶಾಂಗ ಸಂಬಂಧಗಳಿಗೆ ಹೊಸಭಾಷ್ಯ ಬರೆದರು. ನೆರೆಹೊರೆಯವರೊಂದಿಗೆ ಸಂಬಂಧಗಳಲ್ಲದೆ, ವಿಶ್ವದ ಎಲ್ಲ ಪ್ರಮುಖ ಜಾಗತಿಕ ಬಲಿಷ್ಠ ದೇಶಗಳೊಡನೆ ಸಂಬಂಧ ಬಲಗೊಳಿಸಲಾಯಿತು. ನೆರೆಯ ನೇಪಾಳದಲ್ಲಿ ಭೂಕಂಪದ ಆಘಾತ ಬಂದೆರಗಿದಾಗ ಸಂತಾಪದಿಂದ ನೆರವಿಗೆ ಧಾವಿಸಲಾಯಿತು. ರಕ್ಷಣಾ ಕಾರ್ಯಾಚರಣೆಗೆ ಭಾರತ ತಕ್ಷಣ ಮುಂದಾಯಿತು. ವಿಶ್ವಸಂಸ್ಥೆಯ ಶಾಂತಿಪಾಲನಾ ದಳದಲ್ಲಿ ಭಾರತದ ಪಾಲುದಾರಿಕೆಯೂ ಜಗತ್ತಿನಲ್ಲೆ ಹೆಚ್ಚಿನವುಗಳಲ್ಲಿ ಒಂದಾಗಿದೆ.

ವಿಶ್ವದೆಲ್ಲೆಡೆ ತನ್ನದೇ ವಲಸೆ ಬಾಂಧವರನ್ನೂ ಅತಿ ಹೆಚ್ಚು ಪ್ರಮಾಣದಲ್ಲಿ ಹೊಂದಿದ ಎರಡನೇ ದೇಶ ಭಾರತವಾಗಿದೆ. ಭಾರತದ ವಿದೇಶಾಂಗ ಸಾಮರಸ್ಯ ಸಂಬಂಧಗಳಿಗೆ ಇದೂ ಒಂದು ಕಾರಣವಾಗಿದೆ. ಇದುವರೆಗೆ ಮೌನವಾಗಿದ್ದ ದೇಶಗಳೂ ಇದೀಗ ಸೌಹಾರ್ದದ ಮಾತುಗಳನ್ನಾಡುತ್ತಿವೆ. ಕೌಶಲ್ಯದ ಬೃಹತ್ ಮಾನವಶಕ್ತಿ ಹೊಂದಿರುವ ಭಾರತವನ್ನು ಯಾರೂ ಉಪೇಕ್ಷಿಸುವಂತೆಯೇ ಇಲ್ಲ; ಭಾರತ ಜಗತ್ತಿನ ಅತಿದೊಡ್ಡ ಪ್ರಜಾತಾಂತ್ರಿಕ ವ್ಯವಸ್ಥೆಯ ದೇಶ ಹಾಗೂ ಚೀನಾವನ್ನು ಮೀರಿ ತೀವ್ರಗತಿಯಲ್ಲಿ ಬೆಳೆಯುತ್ತಿರುವ ಆರ್ಥಿಕತೆಯಾಗಿದೆ.

ಆರ್ಥಿಕ ಕ್ಷೇತ್ರ, ಮಾನವ ಸಂಪನ್ಮೂಲ ಅಭಿವೃದ್ಧಿ ಹಾಗೂ ಅಂತಾರಾಷ್ಟ್ರೀಯ ಸಂಬಂಧಗಳಲ್ಲಿ ಭಾರತ ಮಾಡುತ್ತಿರುವ ಪ್ರಯತ್ನಗಳು ಜಗತ್ತಿನ ಗಮನ ಸೆಳೆದಿವೆ. ಪ್ರಧಾನಮಂತ್ರಿಯವರ ಕರೆಗೆ ಸ್ಪಂದಿಸಿದ ವಿಶ್ವಸಂಸ್ಥೆ (2015) ಜೂನ್ 21ನ್ನು ಅಂತಾರಾಷ್ಟ್ರೀಯ ಯೋಗದಿನವನ್ನಾಗಿ ಘೋಷಿಸಿತು. ಸತತ ಪ್ರಯತ್ನ ಹಾಗೂ ನೀತಿ ಉಪಕ್ರಮಗಳ ಮೂಲಕ ಭಾರತ ಎಲ್ಲ ಸವಾಲುಗಳನ್ನು ನಿಭಾಯಿಸಲು ಸಮರ್ಥವಾಗಿದೆ.

1947 ರಿಂದ ಇದುವರೆಗೂ ಭಾರತ ಬಲಿಷ್ಠವಾಗುತ್ತಲೇ ಬಂದಿದೆ. ತನ್ನ ಬಹುದಿನಗಳ ನಿರೀಕ್ಷೆಯಾದ, ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಶಾಶ್ವತ ಸದಸ್ಯವಾಗಬೇಕೆನ್ನುವ ಆಶಯ ಸಾಕಾರಗೊಳ್ಳಲು ಬಹಳ ತಡವಾಗದಿರಲೆಂದು ಆಶಿಸೋಣ !

❑

# ಹೊಸ ಚೈತನ್ಯ : ಹೊಸ ಗೊತ್ತುಗುರಿ

* ಅಚಲ್ ಮಲ್ಹೋತ್ರಾ
ಕನ್ನಡಕ್ಕೆ : ನರೇಂದ್ರ ಪೈ




ಕಳೆದ 2014ರ ಲೋಕಸಭಾ ಚುನಾವಣೆಗಳ ಬಳಿಕ ದೆಹಲಿಯಲ್ಲಿ ರೂಪುಗೊಂಡ ಸುಭದ್ರ ಮತ್ತು ಸ್ಥಿರ ಸರ್ಕಾರವು ನೆರೆಹೊರೆಯ ದೇಶಗಳಿಗೂ ಸೇರಿದಂತೆ ಒಟ್ಟು ಅಂತಾರಾಷ್ಟ್ರೀಯ ಸಮೂಹಕ್ಕೆ ಇದೀಗ ಭಾರತವನ್ನು ಗಂಭೀರವಾಗಿ ಪರಿಗಣಿಸಲು ಕಾಲ ಪಕ್ವವಾಗಿದೆ ಎಂಬ ಬಗ್ಗೆ ಸೂಕ್ತವಾದ ಸಂದೇಶವನ್ನು ರವಾನಿಸಿದೆ. ಪ್ರಧಾನಮಂತ್ರಿ ಶ್ರೀ ಮೋದಿಯವರು ವಿದೇಶಾಂಗ ವ್ಯವಹಾರಗಳ ಬಗ್ಗೆ ತಮ್ಮ ವ್ಯಕ್ತಿಗತವಾದ ಬದ್ಧತೆಯನ್ನು ಪ್ರತಿಬಿಂಬಿಸುವಂತೆ ಕಳೆದ ಒಂದು ವರ್ಷದ ಅವಧಿಯಲ್ಲಿ ಹತ್ತೊಂಭತ್ತು ದೇಶಗಳಿಗೆ ಭೇಟಿನೀಡಿದ್ದಲ್ಲದೆ ಹಲವಾರು ಪ್ರಮುಖ ನಾಯಕರನ್ನು ದೆಹಲಿಗೆ ಆಹ್ವಾನಿಸಿಕೊಂಡಿದ್ದಾರೆ. ಈ ಪ್ರಕ್ರಿಯೆಯಲ್ಲಿ ಅವರು ಸರಿಸುಮಾರು ಎಲ್ಲಾ ಪ್ರಮುಖ ಜಾಗತಿಕ ನಾಯಕರನ್ನು ದ್ವಿಪಕ್ಷೀಯ ಅಥವಾ ಪ್ರಾದೇಶಿಕ ಅಥವಾ ಸಾಮೂಹಿಕ ನೆಲೆಗಳಲ್ಲಿ ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ.

ಪ್ರಸ್ತುತ ಸರ್ಕಾರದ ವಿದೇಶಾಂಗ ನೀತಿಯ ಆದ್ಯತೆಗಳಲ್ಲಿ ನೆರೆಹೊರೆಗೆ ಪ್ರಥಮ ಪ್ರಾಶಸ್ತ್ಯ ನೀಡುವುದು ಸರ್ಕಾರದ ಮುತ್ಸದ್ಧಿತನದ ಪ್ರಮುಖ ಹೆಜ್ಜೆಯಾಗಿದೆ ಎಂಬುದು ಈಗ ಅತ್ಯಂತ ಸ್ಪಷ್ಟವಾಗಿದೆ. ಶ್ರೀ ಮೋದಿಯವರು ಪ್ರಧಾನಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳುವುದಕ್ಕಿಂತಲೂ ಮೊದಲೇ ಆಸುಪಾಸಿನ ದೇಶಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ನಿಟ್ಟಿನಲ್ಲಿ ಮೊಟ್ಟಮೊದಲ ಹೆಜ್ಜೆಯನ್ನು ಇಡಲಾಯಿತು. ಕಳೆದ ವರ್ಷದ ಮೇ 26ರಂದು ಪ್ರಧಾನ ಮಂತ್ರಿ ಶ್ರೀ ಮೋದಿಯವರ ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಎಲ್ಲಾ ಸಾರ್ಕ್ ಸದಸ್ಯ ರಾಷ್ಟ್ರಗಳ ಮತ್ತು ಸರ್ಕಾರಗಳ ಮುಖ್ಯಸ್ಥರನ್ನು ಆಹ್ವಾನಿಸಲಾಗಿತ್ತು. ಅದ್ಭುತ ನಿರ್ಧಾರವೆಂದು ಸರಿಯಾಗಿಯೇ ಕರೆಸಿಕೊಂಡ ಈ ಕ್ರಮ ಒಂದು ದಿಟ್ಟಹೆಜ್ಜೆಯಾಗಿತ್ತು ಮತ್ತು ಭಾರತದಲ್ಲಾದ ಹೊಸ ರಾಜಕೀಯ ಬದಲಾವಣೆಗಳು ಅದು ದಕ್ಷಿಣಾ ಏಶಿಯಾದ ತನ್ನ ನೆರೆಹೊರೆಯ ದೇಶಗಳೊಂದಿಗಿನ ಸಂಬಂಧಗಳಿಗೆ ಹಾಗೂ ಈ ಭೂಭಾಗದಲ್ಲಿ ಸಮೂಹಪ್ರಜ್ಞೆಯನ್ನು ಜಾಗೃತಗೊಳಿಸುವುದಕ್ಕೆ ಭಾರೀ ಮಹತ್ವವನ್ನು ನೀಡುತ್ತದೆ ಎಂಬ ಸುಸ್ಪಷ್ಟ ಸಂದೇಶವನ್ನು ಮೊಳಗಿಸಿತ್ತು. ಈ ಭೂಭಾಗದ ಎಲ್ಲಾ ರಾಷ್ಟ್ರ ಹಾಗೂ ಸರ್ಕಾರಗಳ ಮುಖ್ಯಸ್ಥರೂ ಸಮಾರಂಭದಲ್ಲಿ ಪಾಲ್ಗೊಂಡಿದ್ದು ಹೇಗಿತ್ತೆಂದರೆ, ಭಾರತವು ನೀಡಿದಂಥ ಸಂದೇಶಕ್ಕೆ ತಾವೆಲ್ಲರೂ ಪ್ರತಿಸ್ಪಂದಿಸುತ್ತೇವೆ ಎಂಬುದನ್ನು ದೃಢಪಡಿಸಿದ ಹಾಗಿತ್ತು. ಈ ಸಂದರ್ಭವು ಆರಂಭಿಕ ಸಂವಹನಕ್ಕೊಂದು ಅದ್ಭುತವಾದ ಅವಕಾಶವನ್ನು ಒದಗಿಸಿತು; ತದನಂತರದಲ್ಲಿ ಪ್ರಾದೇಶಿಕ ಮತ್ತು ಅಂತಾರಾಷ್ಟ್ರೀಯ ಅಧಿವೇಶನಗಳ ಸಂಬಂಧ ಸಾಧ್ಯವಾದ ಪರಸ್ಪರ ಭೇಟಿ ಹಾಗೂ ಮಾತುಕತೆಗಳ ಮೂಲಕ ಇದು ಮತ್ತಷ್ಟು ನಿಕಟಗೊಂಡಿತು. ಅಧಿಕಾರಾವಧಿಯ ಮೊದಲ ವರ್ಷದಲ್ಲಿ ಪ್ರಧಾನಿಯವರ ವಿದೇಶ ಪ್ರವಾಸದ ರಾಷ್ಟ್ರಗಳಲ್ಲಿ ದಕ್ಷಿಣ ಏಶಿಯಾ ಪ್ರಾದೇಶಿಕ ಸಹಕಾರ ಒಕ್ಕೂಟ (ಸಾರ್ಕ್)ದ ಏಳು ರಾಷ್ಟ್ರಗಳಲ್ಲಿ ನಾಲ್ಕು (ಭೂತಾನ್, ನೇಪಾಳ, ಶ್ರೀಲಂಕಾ ಮತ್ತು ಬಾಂಗ್ಲಾದೇಶ) ರಾಷ್ಟ್ರಗಳು ಮತ್ತು ಚೀನಾ ಸೇರಿವೆ. ಉಳಿದ ಮೂರು ಸಾರ್ಕ್ ಸದಸ್ಯ ರಾಷ್ಟ್ರ (ಅಫಘಾನಿಸ್ತಾನ, ಪಾಕಿಸ್ತಾನ ಮತ್ತು ಮಾಲ್ಡೀವ್ಸ್)ಗಳಿಗೆ ರಾಜಕೀಯ, ಭದ್ರತೆ ಮತ್ತು ವಿದೇಶಿ ನೀತಿ–ನಿಲುವುಗಳಿಗನುಸಾರವಾಗಿ ಪ್ರವಾಸ ನಿಗದಿಗೊಳಿಸುವಲ್ಲಿ ಕೊಂಚ ಕಾಲಾವಕಾಶದ ಅಗತ್ಯವಿರುವಂತೆ ಕಂಡುಬರುತ್ತದೆ. ಸಾಂದರ್ಭಿಕವಾಗಿ ಅಫ್ಘಾನ್ ಅಧ್ಯಕ್ಷರು ಈ ವರ್ಷದ ಏಪ್ರಿಲ್‌ನಲ್ಲಿ ಭಾರತಕ್ಕೆ ಭೇಟಿ ನೀಡಿದ್ದಾರೆ ಹಾಗೂ ಪ್ರಧಾನಿ ಶ್ರೀ ಮೋದಿಯವರು ಪಾಕಿಸ್ತಾನಿ ಹಾಗೂ ಮಾಲ್ಡೀವ್ಸ್ ನಾಯಕರುಗಳನ್ನು ದೆಹಲಿಯಲ್ಲಿಯೇ ತಮ್ಮ ಪ್ರಮಾಣವಚನ ಸ್ವೀಕಾರ ಸಮಾರಂಭದ ಸಂದರ್ಭದಲ್ಲಿ ಭೇಟಿಯಾಗಿದ್ದರು. ಒಟ್ಟಿನಲ್ಲಿ ಈ ಒಂದು ವರ್ಷದ ಅವಧಿಯಲ್ಲಿ ಪ್ರಧಾನಿ ತಮ್ಮ ನಿಕಟ ನೆರೆಹೊರೆಯ ಎಲ್ಲಾ ರಾಷ್ಟ್ರನಾಯಕರನ್ನು ಕನಿಷ್ಠ ಒಂದು ಬಾರಿ, ಕೆಲವು ಸಂದರ್ಭದಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಭೇಟಿಯಾಗಿದ್ದಾರೆ.

ಈ ಪ್ರದೇಶದ ನಿರ್ದಿಷ್ಟ ರಾಷ್ಟ್ರಗಳೊಂದಿಗೆ ಭಾರತದ ಸ್ನೇಹ ಸಂಬಂಧ ಪಡೆದುಕೊಳ್ಳುತ್ತಿರುವ ಸ್ವರೂಪದ ಬಗ್ಗೆ ಚರ್ಚಿಸುವುದಕ್ಕೂ ಮುನ್ನ ದಕ್ಷಿಣ ಏಶಿಯಾವನ್ನು ಒಂದು ಪ್ರಾದೇಶಿಕ ಭೂಭಾಗವಾಗಿ ಗಮನಿಸುವುದು ಸೂಕ್ತ. ದಕ್ಷಿಣ ಏಶಿಯಾ ಒಂದು ಸಂಕೀರ್ಣ ಭೂಪ್ರದೇಶ ಎಂಬುದಂತೂ ನಿಶ್ಚಿತ. ಇಲ್ಲಿನ ದೇಶಗಳ ಪಾರಂಪರಿಕ ಮತ್ತು ಚಾರಿತ್ರಿಕ ಸಂಗತಿಗಳಲ್ಲಿ ಸಾಮ್ಯತೆಯ ಎಳೆಗಳಿವೆ. ಅದೇ ಕಾಲಕ್ಕೆ, ಈ ದೇಶಗಳ ಧಾರ್ಮಿಕ, ಆಧುನಿಕ, ಭಾಷಿಕ ಮತ್ತು ರಾಜಕೀಯ ವಲಯಗಳ ಹಾಸುಹೊಕ್ಕುಗಳಲ್ಲಿ ವೈವಿಧ್ಯತೆಯೂ

* ವಿದೇಶಾಂಗ ನೀತಿ ಮತ್ತು ಅಂತರಾಷ್ಟ್ರೀಯ ವ್ಯವಹಾರಗಳ ವಿಶ್ಲೇಷಕರು. Email : achal_malhotra@hotmail.com

ಕಂಡುಬರುತ್ತದೆ. ಇದು ದೇಶ ದೇಶಗಳ ನಡುವಿನ ಮತ್ತು ಆಂತರಿಕ ಸಂಘರ್ಷಗಳ, ರಂಗಸ್ಥಳವೂ ಆಗಿತ್ತು; ಸ್ವಾತಂತ್ರ್ಯ ಸಂಗ್ರಾಮ, ದಾಯಾದಿ ಕಲಹ, ಮಿಲಿಟರಿ ಸರ್ವಾಧಿಪತ್ಯಗಳಿಗೆ ಅದು ಸಾಕ್ಷಿಯಾಗಿತ್ತು ಮಾತ್ರವಲ್ಲ ಈಗಲೂ ಮಾದಕ ದ್ರವ್ಯ ಹಾಗೂ ಮಾನವ ಕಳ್ಳಸಾಗಣೆ/ ಮಾರಾಟದಂಥ ವಿದ್ಯಮಾನಗಳೂ ಸೇರಿದಂತೆ ಆಂತರಿಕ ಗಲಭೆ / ದಂಗೆ, ಧಾರ್ಮಿಕ ಮೂಲಭೂತವಾದಿತ್ವ ಮತ್ತು ಭಯೋತ್ಪಾದನೆಯಂಥ ಪಿಡುಗುಗಳಿಂದ ನಲುಗುತ್ತಿದೆ. ಧಾರ್ಮಿಕ ಸಹಿಷ್ಣುತೆಯ ವಿಚಾರದಲ್ಲಿ ಈ ಭಾಗದ ದೇಶಗಳು ಉದಾರವಾದಿ ಜಾತ್ಯತೀತ ಮನೋಧರ್ಮದಿಂದ ತೊಡಗಿ ಕಟ್ಟಾ ಮೂಲಭೂತವಾದಿತ್ವದ ತನಕ ಆ ನಡುವಿನ ಯಾವುದೇ ಬಿಂದುವಿನಲ್ಲಿರುವ ಸಾಧ್ಯತೆಯನ್ನು ಉಳಿಸಿಕೊಂಡಿರುವಂತೆ ಕಂಡುಬರುತ್ತದೆ. ಜಗತ್ತಿನಲ್ಲೇ ಅತ್ಯಂತ ಅಸಂಘಟಿತ ಪ್ರದೇಶವೆಂದು ದಕ್ಷಿಣ ಏಶಿಯಾವನ್ನು ಪರಿಗಣಿಸಲಾಗುತ್ತದೆ. ಕಳೆದ ಮೂವತ್ತು ವರ್ಷಗಳ ಅಸ್ತಿತ್ವದ ಹೊರತಾಗಿಯೂ ಸಾರ್ಕ್ ದಾಖಲಿಸಿರುವ ಪ್ರಗತಿ ತೀರಾ ವಿಳಂಬಿತವೂ ನಿಧಾನಗತಿಯದ್ದೂ ಆಗಿದೆ. ತೀರ ಈಚೆಗಷ್ಟೇ ಪ್ರಜಾಪ್ರಭುತ್ವವಾದಿ ಮಾದರಿಯ ಸರ್ಕಾರಗಳು ಈ ಭಾಗದಲ್ಲಿ ಅಸ್ತಿತ್ವಕ್ಕೆ ಬರುತ್ತಿವೆ ಹಾಗೂ ಕೆಲವೊಂದು ದೇಶಗಳಲ್ಲಿ ಮುಂದೆ ಧನಾತ್ಮಕ ಆರ್ಥಿಕ ಬೆಳವಣಿಗೆ ಸಾಧ್ಯವೆನ್ನುವ ಲಕ್ಷಣಗಳು ಕಂಡುಬರುತ್ತಿವೆ. ಈ ಭೂಭಾಗದಲ್ಲಿ ಭಾರತದ ಸ್ಥಾನಮಾನವೇನು? ಗಾತ್ರ ಮತ್ತು ಜನಸಂಖ್ಯೆಯಲ್ಲಿ ಭಾರತವು ಮೊದಲ ಸ್ಥಾನದಲ್ಲಿದೆ; ಸಮರ್ಥ ಪ್ರಜಾಪ್ರಭುತ್ವ ರಾಷ್ಟ್ರವಾಗಿ ಅದು ಸರಿಸುಮಾರು ಸ್ವಚ್ಛವಾದ ಚಾರಿತ್ರ್ಯವನ್ನು ದಾಖಲಿಸಿದೆ; ತೌಲನಿಕವಾಗಿ ಅದು ಸ್ಥಿರವಾದ ಆರ್ಥಿಕತೆಯ ರಾಷ್ಟ್ರವಾಗಿದ್ದು ಅಂತಾರಾಷ್ಟ್ರೀಯವಾಗಿ ಅದರ ಸ್ಥಾನಮಾನದಲ್ಲಿ ಗಣನೀಯ ಪ್ರಗತಿಯಾಗಿದ್ದು ಅದನ್ನು ಜಾಗತಿಕ ವಲಯದಲ್ಲಿ ಮಂಚೂಣಿಯ ಪಾತ್ರ ನಿಭಾವಣೆಗೆ ಸಿದ್ಧವಾಗುತ್ತಿರುವ ಒಂದು ರಾಷ್ಟ್ರವೆಂಬುದಾಗಿ ಪರಿಗಣಿಸಲಾಗುತ್ತದೆ. ಇದೆಲ್ಲದರಿಂದಾಗಿ ದಕ್ಷಿಣ ಏಶಿಯಾದ ಇತರೆಲ್ಲ ರಾಷ್ಟ್ರಗಳಿಗಿಂತ ಭಾರತ ಎದ್ದು ಕಾಣುತ್ತಿದೆ. ಹೀಗಾಗಿ ದುರದೃಷ್ಟವಶಾತ್ ಅದರ ನೆರೆಹೊರೆಯ ಚಿಕ್ಕಪುಟ್ಟ ರಾಷ್ಟ್ರಗಳು ಅದು ದೊಡ್ಡಣ್ಣನ ಪಾತ್ರವನ್ನು ವಹಿಸಿಕೊಂಡಂತೆ ವರ್ತಿಸುತ್ತಿದೆ ಎಂದು ಅದನ್ನು ತಪ್ಪಾಗಿ ದೂಷಿಸುವುದಕ್ಕೂ ಅವಕಾಶ ಒದಗಿದಂತಾಗಿದೆ. ಆಗಾಗ ಕೆಲವೊಂದು ನೆರೆಯ ರಾಷ್ಟ್ರಗಳು ಚೈನಾ ಕಾರ್ಡ್ ಬಳಸಿ ಭಾರತದಿಂದ ಕೆಲವೊಂದು ರಿಯಾಯಿತಿಗಳನ್ನು ಗಿಟ್ಟಿಸುವುದು ಕೂಡ ಸೂಕ್ತವೆಂದು ತಿಳಿದಿವೆ. ಕಠ್ಮಂಡುವಿನಲ್ಲಿ ನಡೆದ ಸಾರ್ಕ್ ಸಮ್ಮೇಳನದಲ್ಲಿ (ನವೆಂಬರ್ 26, 2014) ಪ್ರಧಾನಿ ಶ್ರೀ ಮೋದಿಯವರು ಈ ಪ್ರದೇಶದ ಬಗ್ಗೆ ಭಾರತದ ಮುನ್ನೋಟವನ್ನು ತಮ್ಮ ಮಾತುಗಳಲ್ಲಿ ಸ್ಪಷ್ಟಪಡಿಸಿದ್ದಾರೆ. ಭಾರತದ ಮಟ್ಟಿಗೆ ಈ ಪ್ರದೇಶದ ಮುನ್ನೋಟವು ಐದು ಸ್ತಂಭಗಳ ಮೇಲೆ ನಿಂತಿದೆ: ವ್ಯಾಪಾರ, ಬಂಡವಾಳ ಹೂಡಿಕೆ, ಸಹಾಯಹಸ್ತ, ಪ್ರತಿಯೊಂದು ಕ್ಷೇತ್ರದಲ್ಲಿಯೂ ಸಹಕಾರ, ನಮ್ಮ ಜನರೊಂದಿಗೆ ಸಂಪರ್ಕ ಮತ್ತು ನಿರಂತರವಾಗಿ ತೊಡಕಿಲ್ಲದ ಸಂವಹನ ಸಾಧ್ಯತೆ. ಅಭಿವೃದ್ಧಿಗೆ ತೊಡಕನ್ನೊಡ್ಡಿ ಅಡ್ಡಿಪಡಿಸುತ್ತಿರುವವರ ಕುರಿತು ಅವರು ಸೂಚ್ಯವಾಗಿ ಹೊಸ ಜಾಗೃತಿ ಮೂಡಿದೆ ಮತ್ತು ಸಾರ್ಕ್ ಸದಸ್ಯ ರಾಷ್ಟ್ರಗಳ ನಡುವಿನ ಬಾಂಧವ್ಯವು ಮುಂದುವರಿಯುವುದು ಎನ್ನುತ್ತ, ಇದು ಸಾರ್ಕ್ ಮುಖಾಂತರ ಅಥವಾ ಅದರ ಹೊರಗಿನಿಂದಲೂ ಸಾಧ್ಯವಾಗಬಹುದು, ಸಾರ್ಕ್ ಸದಸ್ಯ ರಾಷ್ಟ್ರಗಳಲ್ಲೇ ಆಗಬಹುದು ಅಥವಾ ಅವರಲ್ಲೇ ಕೆಲವರ ನಡುವೆಯೂ ಸಾಧ್ಯವಾಗಬಹುದು ಎಂದೂ ಸೇರಿಸಿದ್ದರು. ಈಗ ನಮ್ಮ ನೆರೆಹೊರೆಯ ಕೆಲವೊಂದು ಪ್ರಮುಖ ರಾಷ್ಟ್ರಗಳೊಂದಿಗೆ ನಮ್ಮ ಸ್ನೇಹ ಸಂಬಂಧ ಹೇಗೆ ಮೈದಾಳುತ್ತಿದೆ ಎನ್ನುವುದನ್ನು ಗಮನಿಸೋಣ.

### ಭೂತಾನ್

ಈ ಹಿಮಾಲಯ ರಾಷ್ಟ್ರ ಭೂತಾನ್ ಜೊತೆಗಿನ ನಮ್ಮ ಸಂಬಂಧವನ್ನು ಜೋಪಾನವಾಗಿ ಕಾಯ್ದುಕೊಂಡು ಬರಲಾಗಿದ್ದು ಇದೊಂದು ಮಾದರಿ ಸ್ನೇಹಸಂಬಂಧವಾಗಿದೆ. ಪ್ರಧಾನಿ ಶ್ರೀ ಮೋದಿಯವರ ಪ್ರಪ್ರಥಮ ವಿದೇಶ ಪ್ರವಾಸವೇ (ಜೂನ್ 15–16,2014) ಭೂತಾನಿಗಾಗಿತ್ತೆಂಬುದೇ ಇದನ್ನು ಮನಗಾಣಿಸುವಂತಿದೆ. ಭಾರತವು ಭೂತಾನ್ ತನ್ನ ಪರಮಾಪ್ತ ಮತ್ತು ವಿಶ್ವಾಸಿ ಮಿತ್ರ ಎಂಬುದಕ್ಕೆ ನೀಡುವ ಮಹತ್ವವನ್ನು ಮತ್ತೊಮ್ಮೆ ಎತ್ತಿಹಿಡಿಯುವುದೇ ಈ ಭೇಟಿಯ ಹಿಂದಿನ



ಉದ್ದೇಶ. ನಿರೀಕ್ಷೆಯಂತೆಯೇ ಈ ಭೇಟಿಯಲ್ಲಿ ಅಭಿವೃದ್ಧಿಪರ ಚಟುವಟಿಕೆಗಳಲ್ಲಿ ಪರಸ್ಪರ ಸಹಕಾರ ಮತ್ತು ಆರ್ಥಿಕ ಸಹಭಾಗಿತ್ವದ ಮೇಲೆಯೇ ಹೆಚ್ಚಿನ ಒತ್ತು ನೀಡಲಾಗಿತ್ತು. 1961ರಲ್ಲಿ ಪ್ರಥಮ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತಗೊಳಿಸಿದಾಗಿನಿಂದಲೂ ಭಾರತವು ತನಗೆ ಪಂಚವಾರ್ಷಿಕ ಯೋಜನೆಗಳ ಅನುಷ್ಠಾನದಲ್ಲಿ ನೀಡುತ್ತ ಬಂದ ಸಹಾಯ–ಸಹಕಾರಗಳನ್ನು ಭೂತಾನ್ ಬಹುವಾಗಿ ಗೌರವಿಸುತ್ತದೆ.

### ಬಾಂಗ್ಲಾದೇಶ

1971ರ ಬಾಂಗ್ಲಾ ವಿಮೋಚನಾ ಯುದ್ಧ ಸಂದರ್ಭದಲ್ಲಿ ಭಾರತದ ಪಾತ್ರವನ್ನು ಬಹುವಾಗಿ ಗೌರವಿಸಿ ಪ್ರಶಂಸಿಸಲಾಗುವುದಾದರೂ ಬಾಂಗ್ಲಾದೊಂದಿಗಿನ ಭಾರತದ ಸಂಬಂಧ ಏರಿಳಿತಗಳನ್ನು ಕಾಣುತ್ತಲೇ ಇದೆ. ಶ್ರೀಮತಿ ಶೇಖ್ ಹಸೀನಾ ಅವರ ನಾಯಕತ್ವದ ಅವಾಮಿ ಲೀಗ್ ಪಕ್ಷವು ಭಾರತದತ್ತ ಮೃದು ಧೋರಣೆ ತಳೆದಿದೆ ಎಂದು ಪರಿಗಣಿಸಲಾದರೆ, ಶ್ರೀಮತಿ ಬೇಗಂ ಖಲಿದಾ ಜಿಯಾ ಅವರ ನಾಯಕತ್ವದ ಬಾಂಗ್ಲಾದೇಶ್ ನ್ಯಾಶನಲ್ ಪಾರ್ಟಿ (ಬಿಎನ್‌ಪಿ) ಪ್ರತಿನಿಧಿಸುವ ರಾಜಕೀಯ ಶಕ್ತಿಗಳು ಮತ್ತು ಬಾಂಗ್ಲಾ ದೇಶ್ ಜಮಾತ್–ಎ–ಇಸ್ಲಾಮಿ ಸಂಘಟನೆಗಳು ಭಾರತದ ಬಗ್ಗೆ ಕಠಿಣ ನಿಲುವು ಹೊಂದಿವೆ ಎಂದು ತಿಳಿಯಲಾಗುತ್ತದೆ. ಈಚಿನ ವರ್ಷಗಳಲ್ಲಿ ಬಾಂಗ್ಲಾ ದೇಶವನ್ನು ಬಿಎನ್‌ಪಿ ಅಥವಾ ಅವಾಮಿ ಲೀಗ್ ಸರ್ಕಾರಗಳೇ ಆಳುತ್ತಿರುವುದರಿಂದ ಸಂಬಂಧದಲ್ಲಿನ ಸುಧಾರಣೆ ಅಥವಾ ಹಿನ್ನಡೆಯ ಮೇಲೆಯೂ ಅದರ ಪರಿಣಾಮಗಳಾಗುತ್ತಿವೆ. ಕಾಲಕಾಲಕ್ಕೆ ಬಾಂಗ್ಲಾದೇಶದ ಗಡಿಯೊಳಗಿನಿಂದ ಕಾರ್ಯನಿರ್ವಹಿಸುವ ಭಾರತ ವಿರೋಧಿ ಸಶಸ್ತ್ರಪಡೆಗಳು, ಬಾಂಗ್ಲಾದೇಶದಿಂದ ಭಾರತದೊಳಕ್ಕೆ ಕಾನೂನುಬಾಹಿರ ಒಳನುಸುಳುವಿಕೆ, ಈಶಾನ್ಯ ಭಾರತದಲ್ಲಿ

ಆತಂಕ ಸೃಷ್ಟಿಸುವ ಚಟುವಟಿಕೆಗಳು, ವಿವಾದಿತ ಗಡಿಪ್ರದೇಶದಲ್ಲಿನ ಕಳ್ಳಸಾಗಾಣಿಕೆ, ಒಂದೇ ನದಿಯಿಂದ, ನಿರ್ದಿಷ್ಟವಾಗಿ ತೀಸ್ತಾ ನದಿಯಿಂದ ಕುಡಿಯುವ ನೀರಿನ ಬಳಕೆ ಮುಂತಾದವು ಚರ್ಚೆಯ ವಿಷಯಗಳಾಗಿವೆ. ಈ ಒಂದು ಸೂಕ್ಷ್ಮ ಲೋಪವನ್ನು ಸರಿಪಡಿಸುವಲ್ಲಿ ಪ್ರಧಾನ ಮಂತ್ರಿಯಾಗಿ ಒಂದು ವರ್ಷ ಪೂರೈಸುತ್ತಲೇ ಪ್ರಧಾನಿ ಶ್ರೀ ಮೋದಿಯವರು ಬಾಂಗ್ಲಾದೇಶಕ್ಕೆ ಅಧಿಕೃತ ಭೇಟಿಯನ್ನು (ಜೂನ್ 6–7, 2015) ನೀಡಿದರು. ಸಹಜವಾಗಿಯೇ ಈ ಭೇಟಿಯ ಸಂದರ್ಭದಲ್ಲಿ ಎಲ್ಲರ ಗಮನವೂ 1974ರಷ್ಟು ಹಿಂದೆಯೇ ಸಹಿ ಮಾಡಲಾಗಿದ್ದ ಭೂಪ್ರದೇಶದ ಗಡಿರೇಖೆಗಳ ಒಪ್ಪಂದದ ಮೇಲಿತ್ತು. ಈ ಹಿಂದಿನ ಸರ್ಕಾರಗಳೆಲ್ಲವೂ, ವಿವಿಧ ಕಾರಣಗಳಿಂದಾಗಿ, ಕೆಲವು ರಾಜ್ಯ ಸರ್ಕಾರಗಳ, ನಿರ್ದಿಷ್ಟವಾಗಿ ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ರಾಜ್ಯ ಸರ್ಕಾರಗಳ ಹಿಂಜರಿಕೆಯೂ ಸೇರಿದಂತೆ ಬೇರೆ ಬೇರೆ ಕಾರಣಗಳಿಂದಾಗಿ, ಅದನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಿ ಅದರ ಅನುಮೋದನೆ ಪಡೆಯುವುದಕ್ಕೆ ವಿಫಲವಾಗಿದ್ದವು. ಪ್ರಧಾನಿ ಶ್ರೀ ಮೋದಿಯವರು ಸಂವಿಧಾನದ ನೂರನೆಯ ತಿದ್ದುಪಡಿ ಮಸೂದೆಯಾಗಿ ಇದನ್ನು ಮಂಡಿಸಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮನವೊಲಿಸಿ, ಪಾರ್ಲಿಮೆಂಟಿನ ಎರಡೂ ಸದನಗಳಲ್ಲಿ ಅದನ್ನು ಸರ್ವಾನುಮತದ ಅನುಮೋದನೆಯೊಂದಿಗೆ 1974ರ ಒಪ್ಪಂದವನ್ನೂ, 2011ರಲ್ಲಿ ರೂಪಿಸಲಾದ ಅದರ ನಿಯಮಾವಳಿಗಳನ್ನೂ ಸಂಪನ್ನಗೊಳಿಸುವಲ್ಲಿ ತೋರಿದ ಮುತ್ಸದ್ಧಿತನವಂತೂ ಶ್ಲಾಘನೆಗೆ ಅರ್ಹವಾಗಿದೆ. ಈ ಭೂಗಡಿರೇಖೆಗಳ ಒಪ್ಪಂದ (ಲ್ಯಾಂಡ್ ಬೌಂಡ್ರಿ ಅಗ್ರಿಮೆಂಟ್ ಎಲ್‌ಬಿಎ) ಎರಡೂ ದೇಶಗಳ ನಡುವಿನ 4096 ಕಿಮೀ ಗಡಿಯನ್ನು ನಿರ್ಧರಿಸುವುದಲ್ಲದೆ ಬಾಂಗ್ಲಾದೇಶ–ಭಾರತದ ಗಡಿಪ್ರದೇಶದಲ್ಲಿ ವಾಸಿಸುತ್ತಿದ್ದ 50000ಕ್ಕೂ ಹೆಚ್ಚು ಮಂದಿಗೆ ಹೊಸ ಅಸ್ತಿತ್ವವನ್ನು ಪರಿಕಲ್ಪಿಸಿಕೊಟ್ಟಿದೆ. ಇದರಿಂದಾಗಿ ಇತರ ಹಲವಾರು ಧನಾತ್ಮಕ ಪರಿಣಾಮಗಳೂ ಉಂಟಾಗಿವೆ. ಪ್ರಮುಖವಾಗಿ, ಭಾರತ ವಿರೋಧಿ ಸಶಸ್ತ್ರಪಡೆಯ ಚಟುವಟಿಕೆಗಳನ್ನು ನಿಯಂತ್ರಿಸಿ, ಮಾನವ ಕಳ್ಳಸಾಗಣೆ, ಕಾನೂನುಬಾಹಿರ ಒಳನುಸುಳುವಿಕೆ, ಕಳ್ಳಸಾಗಾಣಿಕೆಯಂಥ ವ್ಯವಹಾರಗಳನ್ನು ನಿಯಂತ್ರಿಸಿ ಪರಿಣಾಮಕಾರಿಯಾದ ಗಡಿ ನಿಯಂತ್ರಣ ಇದರಿಂದಾಗಿ ಸಾಧ್ಯವಾಗುತ್ತದೆ. ಈ ಭೇಟಿಯ ನಿಜವಾದ ಫಲಶ್ರುತಿಯೆಂದರೆ ವ್ಯಾಪಾರ ಮತ್ತು ಸಂಪರ್ಕಗಳಿಗಾಗಿ ಈವರೆಗೂ ಬಳಸುತ್ತಿದ್ದ ಇಕ್ಕಟ್ಟಾದ ಹಾಗೂ ತೀರಾ ಕಚ್ಚಾ ಸ್ಥಿತಿಯಲ್ಲಿದ್ದ ಚಿಕನ್ ನೆಕ್ ಎಂದೇ ಖ್ಯಾತವಾದ ಸಿಲಿಗುರಿ ಕಾರಿಡಾರ್‌ಗೆ ಬದಲಾಗಿ ಬಾಂಗ್ಲಾದೇಶವು ತನ್ನ ಗಡಿಪ್ರದೇಶದ ಮೂಲಕ ಸಾಗುವ ಭೂಮಾರ್ಗವನ್ನು ಬಳಸಿಕೊಳ್ಳಲು ಅವಕಾಶ ನೀಡಿದುದೇ ಆಗಿದೆ. ಇದರಿಂದಾಗಿ ಈಶಾನ್ಯ ಭಾರತ ಮತ್ತಿತರ ಭಾಗಗಳಿಗೆ ಗಣನೀಯವಾಗಿ ಸುಧಾರಿತವಾದ ಸಂಪರ್ಕ ಸಾಧ್ಯತೆಯೊಂದು ಒದಗಿ ಬಂದಂತಾಗಿದೆ. ಡಾಕಾ–ಶಿಲ್ಲಾಂಗ್–ಗೌಹಾತಿ ಮತ್ತು ಕೊಲ್ಕತ್ತಾ–ಢಾಕಾ–ಅಗರ್ತಲ ಬಸ್ ಸಂಪರ್ಕ ಕೂಡಾ ಪ್ರಾದೇಶಿಕವಾಗಿ ಭೂಸಂಪರ್ಕ ಜಾಲದ ಕ್ಷೇತ್ರದಲ್ಲಿ ಹೊಸ ಅಧ್ಯಾಯವೊಂದರ ಆರಂಭವಾಗಿದೆ. ಹಾಗೆಯೇ ಕರಾವಳಿ ಪ್ರದೇಶದ ನೌಕಾಯಾನದ ಒಪ್ಪಂದವು ಜಲಸಾರಿಗೆಯ ಮೂಲಕ ಸಾಮಾನು ಸರಂಜಾಮುಗಳ ಸಾಗಣೆಗೆ ತಗಲುತ್ತಿದ್ದ ಸಮಯವನ್ನು ಗಣನೀಯವಾಗಿ ತಗ್ಗಿಸುವುದಲ್ಲದೆ ತತ್ಸಂಬಂಧಿಯಾದ ಇತರೆಲ್ಲ ಅನುಕೂಲತೆಗಳಿಗೆ ಕಾರಣವಾಗಲಿದೆ. ಇವುಗಳಷ್ಟೇ ಮುಖ್ಯವಾದುದು ಬಾಂಗ್ಲಾದೇಶದ ಚಿಟ್ಟಗಾಂಗ್ ಮತ್ತು ಮೊಂಗ್ಲಾ ಬಂದರುಗಳನ್ನು ಭಾರತವೂ ಬಳಸಲು ಅನುವು ಮಾಡಿಕೊಡುವ ಒಪ್ಪಂದ. ಕುತೂಹಲಕರವಾದ ಸಂಗತಿಯೆಂದರೆ ಈ ಬಾರಿ ಬಾಂಗ್ಲಾದೇಶವು ಈ ಸಾರಿಗೆಯ ಜೊತೆಗೆ ನೀರಿನ (ತೀಸ್ತಾ) ವಿವಾದವನ್ನು ತಳುಕು ಹಾಕದೇ ಇದ್ದುದು. ಬಾಂಗ್ಲಾದೇಶದ ವಿಶೇಷ ಭಾರತೀಯ ಆರ್ಥಿಕ ವಲಯಗಳು ಬಾಂಗ್ಲಾದೇಶದಲ್ಲಿ ಭಾರತೀಯ ಹೂಡಿಕೆಯನ್ನು ಉತ್ತೇಜಿಸಿ, ಬಾಂಗ್ಲಾದೇಶದ ಆಯಾತ–ನಿರ್ಯಾತ ಕೊರತೆಯನ್ನು ಸುಧಾರಿಸುವುದೂ ಅಲ್ಲದೆ ಉದ್ಯೋಗ ಸೃಷ್ಟಿಗೂ ಕಾರಣವಾಗಲಿವೆ. ದ್ವಿತೀಯ ಸಾಲಿನ ಸುಮಾರು ಎರಡು ಬಿಲಿಯನ್ ಡಾಲರ್ ಸಾಲದಿಂದಾಗಿ ಬಾಂಗ್ಲಾದೇಶಕ್ಕೆ ಸಾರ್ವಜನಿಕ ಸಾರಿಗೆ ಸಂಪರ್ಕ ವ್ಯವಸ್ಥೆ, ರಸ್ತೆಗಳು, ರೈಲ್ವೆ, ಒಳನಾಡಿನ ಜಲಸಾರಿಗೆ, ಬಂದರು, ಶಿಕ್ಷಣ, ಆರೋಗ್ಯ ಇತ್ಯಾದಿ ಅಭಿವೃದ್ಧಿಪರ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕೆ ಸಹಾಯವಾಗಲಿದೆ. ಇದು ಭಾರತದಿಂದ ಸಾಮಾನು ಸರಂಜಾಮು, ಯೋಜನಾ



ತಂತ್ರಜ್ಞಾನ ಹಾಗೂ ಇತರ ಸೇವೆಗಳ ರಫ್ತು ಪ್ರಮಾಣದ ಹೆಚ್ಚಳಕ್ಕೂ ಕಾರಣವಾಗಲಿದೆ. ಬಾಂಗ್ಲಾದೇಶ ಮತ್ತು ಭಾರತದ ನಡುವಿನ ಸಂಬಂಧವು ನಿಶ್ಚಿತವಾಗಿಯೂ ಈಗ ಗುಣಮಟ್ಟದ ಒಂದು ಹೊಸ ಮಜಲನ್ನು ಕಂಡುಕೊಂಡಂತಾಗಿದೆ.


### ಅಫ್ಘಾನಿಸ್ತಾನ

ಕಳೆದ ಕೆಲವು ವರ್ಷಗಳಿಂದ ಅಫ್ಘಾನಿಸ್ತಾನವು ಬಿಕ್ಕಟ್ಟಿನಲ್ಲಿದೆ. ತನ್ನದೇ ಭದ್ರತೆಯ ಹಿತಾಸಕ್ತಿಗಳಿಗಾಗಿ ಅಫ್ಘಾನಿಸ್ತಾನದ ಸದ್ಯದ ಪರಿಸ್ಥಿತಿಯನ್ನು ಭಾರತವು ಗಂಭೀರವಾಗಿ ಪರಿಗಣಿಸಬೇಕಾಗಿದೆ. ನ್ಯಾಟೊ ಪಡೆಗಳು ಈಗ ಹಿಂದಕ್ಕೆ ಕರೆಸಿಕೊಳ್ಳುತ್ತಿವೆ. ಅಫ್ಘಾನಿಸ್ತಾನದ ಇತ್ತೀಚಿನ ರಾಜಕೀಯ ಸ್ಥಿತ್ಯಂತರಗಳು ಅಷ್ಟೇನೂ ಸಂಘರ್ಷರಹಿತವಾಗಿರಲಿಲ್ಲ. ತಾಲಿಬಾನಿಗಳ ಮರಳುವಿಕೆಯಂತೂ ಭಾರತಕ್ಕೆ ಅಪೇಕ್ಷಣೀಯವಾದುದಲ್ಲ. ಪಾಕಿಸ್ತಾನದ ಕೈಗೊಂಬೆಯೂ, ಮೂಲಭೂತವಾದಿಗಳ ಹಿಡಿತದಲ್ಲಿಯೂ ಇರುವ ಆಡಳಿತವೊಂದು ಅಫ್ಘಾನಿಸ್ತಾನದಲ್ಲಿರುವುದೂ ಭಾರತದ ಹಿತಾಸಕ್ತಿಗಳಿಗೆ ಪೂರಕವಾಗಿರದು. ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಅಫ್ಘಾನಿಸ್ತಾನದ ಹೊಸ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸುತ್ತಲೇ ಶ್ರೀ ಮಹಮ್ಮದ್ ಆಶ್ರಫ್ ಘನಿಯವರು ತಮ್ಮ ವಿದೇಶಾಂಗ ನೀತಿಯ ಆದ್ಯತೆಗಳಲ್ಲಿ ಭಾರತದ ಸ್ಥಾನ ನಗಣ್ಯವಾದುದು ಎಂದು ಭಾವಿಸುವುದಕ್ಕೆ ಸಾಕಷ್ಟು ಆಧಾರಗಳನ್ನೊದಗಿಸಿದ್ದಾರೆ. ಅಧಿಕಾರ ವಹಿಸಿಕೊಂಡ ಹಲವಾರು ತಿಂಗಳುಗಳ ಬಳಿಕವಷ್ಟೇ ಅವರು ಭಾರತಕ್ಕೆ (ಏಪ್ರಿಲ್ 28–29, 2015) ಭೇಟಿ ನೀಡಿದರು. ಈ ನಡುವೆ ಅವರು ಈ ಭಾಗದ ಇನ್ನೆರಡು ದೇಶಗಳಿಗೆ, ಅಂದರೆ ಯುನೈಟೆಡ್ ಕಿಂಗ್‌ಡಮ್ ಹಾಗೂ ಸೌದಿ ಅರೇಬಿಯಾಗಳಿಗಲ್ಲದೆ ಚೀನಾ ಮತ್ತು ಪಾಕಿಸ್ತಾನಗಳಿಗೆ ಭೇಟಿ ನೀಡಿದ್ದರು. ಇದು ಭಾರತದಲ್ಲಿ ಹಲವರ ಹುಬ್ಬೇರುವಂತೆ ಮಾಡಿದ್ದಲ್ಲದೆ ಈ ನಡೆ ಅಫ್ಘಾನಿಸ್ತಾನದ

ಒಲವು ಭಾರತವನ್ನು ಬಿಟ್ಟು ಪಾಕಿಸ್ತಾನದ ಕಡೆಗೆ ವಾಲಿರುವುದರ ಸಂಕೇತವೇ ಎಂಬ ಪ್ರಶ್ನೆಗೂ ಅವಕಾಶ ಮಾಡಿಕೊಟ್ಟಿತ್ತು. ನವದೆಹಲಿಯಲ್ಲಿ ತಂಗಿದ್ದಾಗ ಅಫ್ಘನ್ ಅಧ್ಯಕ್ಷರು ಇಂಥ ಊಹಾಪೋಹಗಳಿಗೆ ತೆರೆಯೆಳೆಯುವಂಥ ಕೆಲವು ಪ್ರಜ್ಞಾಪೂರ್ವಕ ಪ್ರಯತ್ನಗಳನ್ನು ಮಾಡಿದ್ದರು. ಅಂಥ ಭರವಸೆಗಳ ಪುನರುಚ್ಚಾರಣೆಯ ಹೊರತಾಗಿಯೂ ಭಾರತದ ನಾಯಕತ್ವಕ್ಕೆ ಅಫ್ಘಾನಿಸ್ತಾನದ ಒಳಗಿನ ಮತ್ತು ಆಸುಪಾಸಿನ ಬೆಳವಣಿಗೆಗಳ ಮೇಲೆ ಒಂದು ಕಣ್ಣಿಡುವ ಅಗತ್ಯ ಇದ್ದೇ ಇದೆಯೆಂಬ ಅರಿವಿದೆ. ಅಫ್ಘಾನಿಸ್ತಾನದೊಂದಿಗಿನ ತನ್ನ ಬಾಂಧವ್ಯವು ಸ್ಥಿರವಾಗಿರುವುದರ ಬಗ್ಗೆ ಭಾರತವು ಗಂಭೀರವಾದ ಕಾಳಜಿಯನ್ನು ಹೊಂದಿರುವುದರಿಂದ, ಅಫ್ಘಾನಿಸ್ತಾನವು ಸ್ಥಿರತೆಯನ್ನು ಕಂಡುಕೊಳ್ಳುವುದು ಭಾರತದ ಪ್ರಮುಖ ಆದ್ಯತೆಗಳಲ್ಲಿ ಒಂದಾಗಿದೆ. ಹಾಗಾಗಿ ಆ ನಿಟ್ಟಿನಲ್ಲಿ ದ್ವಿಪಕ್ಷೀಯ ನೆಲೆಯಲ್ಲಿ ಭಾರತವು ಅಫ್ಘಾನಿಸ್ತಾನದೊಂದಿಗೆ ತಾತ್ವಿಕವಾದ ಸಹಭಾಗಿತ್ವದ ಒಪ್ಪಂದಕ್ಕೆ ಬಂದಿದ್ದು ಅಫ್ಘಾನಿಸ್ತಾನದ ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ಪ್ರಜಾಪ್ರಭುತ್ವದ ಸಾಂಸ್ಥಿಕ ಚೌಕಟ್ಟನ್ನು ಸುಭದ್ರಗೊಳಿಸುವುದು, ಅಫ್ಘಾನಿಸ್ತಾನದ ಸಶಸ್ತ್ರಪಡೆಯ ತರಬೇತಿಯೂ ಸೇರಿದಂತೆ ಅದರ ಮೂಲಸೌಕರ್ಯ ಸಾಮರ್ಥ್ಯವೃದ್ಧಿಗಾಗಿ ಎರಡು ಬಿಲಿಯನ್ ಡಾಲರುಗಳ ಸಹಾಯ ಪ್ರಕಟಿಸಿದೆ.

### ಪಾಕಿಸ್ತಾನ

1947ರಲ್ಲಿ ದೇಶ ವಿಭಜನೆಯಾದಂದಿ–ನಿಂದಲೂ ಭಾರತ–ಪಾಕಿಸ್ತಾನದೊಂದಿಗಿನ ಸಂಬಂಧವು ಸಾಮಾನ್ಯ ಸ್ಥಿತಿಗಿಂತ ಕೆಳಮಟ್ಟದಲ್ಲಿಯೇ ಇದೆ. ಎರಡು ದೇಶಗಳ ನಡುವೆ 1948ರಲ್ಲಿ, 1965ರಲ್ಲಿ, 1971ರಲ್ಲಿ ಮತ್ತು ಕೊನೆಗೆ 1999ರಲ್ಲಿ ಕಾರ್ಗಿಲ್‌ನಲ್ಲಿಯೂ ಸಮರಗಳಾಗಿವೆ. ಭಯೋತ್ಪಾದನೆಯ ವಿರುದ್ಧ ಹೋರಾಟವಂತೂ ಗಡಿಯುದ್ದಕ್ಕೂ ಅಬಾಧಿತವಾಗಿ ಮುಂದುವರಿದಿದೆ. ಆಗಾಗ ಸಂಬಂಧ ಸುಧಾರಣೆಯ ಪ್ರಯತ್ನಗಳು ನಡೆಯುತ್ತಲೇ ಇರುವುದಾದರೂ ಪ್ರತಿ ಬಾರಿ ಅದು ಮತ್ತೆ ಹೊರಟಲ್ಲಿಗೇ ಬಂದು ನಿಲ್ಲುವುದು ನಡೆದಿದೆ. ಹೊಸ ಸರ್ಕಾರವು ಅಧಿಕಾರ ವಹಿಸಿಕೊಂಡಾಗ ಪಾಕಿಸ್ತಾನದೊಂದಿಗಿನ ಸಂಬಂಧವು ತೀರ ಹದಗೆಟ್ಟ ಸ್ಥಿತಿಯಲ್ಲಿತ್ತು. ಪಾಕಿಸ್ತಾನವೂ ಸೇರಿದಂತೆ ಸಾರ್ಕ್ ದೇಶಗಳ / ಸರ್ಕಾರಗಳ ಮುಖ್ಯಸ್ಥರಿಗೆ ಕಳೆದ ಮೇ ತಿಂಗಳಲ್ಲಿ ನಡೆದ ಪ್ರಧಾನಿ ಶ್ರೀ ಮೋದಿಯವರ ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಭಾಗವಹಿಸುವಂತೆ ನೀಡಿದ ಆಹ್ವಾನವು ಮತ್ತೆ ಸಂಬಂಧ ಸುಧಾರಣೆಯ ಹೊಸ ಪ್ರಯತ್ನಗಳಿಗೆ ನಾಂದಿ ಹಾಡಿತು. ಆರಂಭಿಕ ಹಿಂಜರಿಕೆಯ ಹೊರತಾಗಿಯೂ ಪಾಕಿಸ್ತಾನದ ಪ್ರಧಾನಮಂತ್ರಿ ಶ್ರೀ ನವಾಜ್ ಶರೀಫ್ ಸಮಾರಂಭದಲ್ಲಿ ಭಾಗವಹಿಸಿದರು ಹಾಗೂ ಎರಡೂ ದೇಶಗಳು ವಿದೇಶಾಂಗ ಕಾರ್ಯದರ್ಶಿಗಳ ಮಟ್ಟದ ಮಾತುಕತೆ ಪುನರಾರಂಭಿಸುವುದಕ್ಕೆ ಸಮ್ಮತಿಸಿದವು. ಕಳೆದ ಆಗಸ್ಟ್‌ನಲ್ಲಿ ಭಾರತದ ವಿದೇಶಾಂಗ ಕಾರ್ಯದರ್ಶಿಯವರು ಇಸ್ಲಾಮಾಬಾದ್‌ಗೆ ಭೇಟಿ ನೀಡಲು ಹೊರಡುವಷ್ಟರಲ್ಲಿ ಪಾಕಿಸ್ತಾನದ ಹೈಕಮೀಷನರ್ ತಾವು ನವದೆಹಲಿಯಲ್ಲಿ ಕಾಶ್ಮೀರ ಪ್ರತ್ಯೇಕತಾವಾದಿಗಳನ್ನು ಭೇಟಿಯಾಗಿ ಮಾತುಕತೆ ನಡೆಸುವ ನಿರ್ಧಾರ ಪ್ರಕಟಿಸಿದ್ದು ಭಾರತ ಸರ್ಕಾರವನ್ನು ಉದ್ದೇಶಿತ ಭೇಟಿಯನ್ನು ರದ್ದು ಪಡಿಸುವಂತೆ ಪ್ರೇರೇಪಿಸಿತು. ಪಾಕ್ ಹೈಕಮೀಷನರ್ ಕಾಶ್ಮೀರದ ಪ್ರತ್ಯೇಕತಾವಾದಿ ನಾಯಕರುಗಳೊಂದಿಗೆ ಮಾತುಕತೆ ನಡೆಸುವುದು ವಿಶೇಷವಾದ ಸಂಗತಿಯೇನಲ್ಲದಿದ್ದರೂ ಸರ್ಕಾರವು ಇದನ್ನು ಗಂಭೀರ ಲೋಪವೆಂದು ಪರಿಗಣಿಸಿ ಅದಕ್ಕೆ ತಕ್ಕುದಾಗಿ ಪ್ರತಿಸ್ಪಂದಿಸಿದೆ. ಭಾರತ ಸರ್ಕಾರವು ತನ್ನ ಒಂದು ಹೇಳಿಕೆಯಲ್ಲಿ ಪಾಕಿಸ್ತಾನದ ಹೈಕಮೀಷನರ್ ಹುರ್‍ರಿಯತ್‌ನ ನಾಯಕರೆಂದು ಹೇಳಿಕೊಳ್ಳುವವರಿಗೆ ನೀಡಿದ ಆಹ್ವಾನವು ನಿಶ್ಚಯವಾಗಿಯೂ ಪಾಕಿಸ್ತಾನದ ಪ್ರಾಮಾಣಿಕತೆಯ ಬಗ್ಗೆ ಸಂದೇಹಗಳನ್ನು ಹುಟ್ಟು ಹಾಕಿದೆ ಮಾತ್ರವಲ್ಲ ಭಾರತದ ಆಂತರಿಕ ವ್ಯವಹಾರಗಳಲ್ಲಿ ಮೂಗು ತೂರಿಸುವ ಅದರ ಪ್ರತಿಗಾಮಿ ಧೋರಣೆಯು ಅಬಾಧಿತವಾಗಿ ಮುಂದುವರಿದಿದೆ ಎಂಬುದನ್ನೂ ತೋರಿಸುತ್ತದೆ, ಇಂಥ ಸಂದರ್ಭದಲ್ಲಿ ಭಾರತದ ವಿದೇಶಾಂಗ ಕಾರ್ಯದರ್ಶಿಯವರು ಮುಂದಿನವಾರ ಇಸ್ಲಾಮಾಬಾದಿಗೆ ತೆರಳುವುದರಿಂದ ಯಾವುದೇ ಫಲಪ್ರದ ಉದ್ದೇಶಗಳೂ ಈಡೇರಲಾರವು ಎಂಬುದಾಗಿ ಭಾವಿಸಲಾಗಿದೆ ಎಂದು ಸ್ಪಷ್ಟಪಡಿಸಿತ್ತು. ಆ ಬಳಿಕ ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ನಡೆದ ವಿಶ್ವಸಂಸ್ಥೆಯ ಮಹಾಸಭೆಯಲ್ಲಿಯೂ ಪಾಕಿಸ್ತಾನವು ಕಾಶ್ಮೀರ ಪ್ರಶ್ನೆಯನ್ನು ಅಂತಾರಾಷ್ಟ್ರೀಯ



ಸಮಸ್ಯೆಯೆಂಬುದಾಗಿ ಬಿಂಬಿಸಲು ಮತ್ತೊಮ್ಮೆ ನಡೆಸಿದ ಪ್ರಯತ್ನವೂ ವಾತಾವರಣವನ್ನು ಮತ್ತಷ್ಟು ಕೆಡಿಸಿದೆ. ಸಾಂದರ್ಭಿಕವಾಗಿ 1972ರ ಸಿಮ್ಲಾ ಒಪ್ಪಂದದನ್ವಯ ಪಾಕಿಸ್ತಾನವು ಕಾಶ್ಮೀರ ಸಮಸ್ಯೆಯನ್ನು ದ್ವಿಪಕ್ಷೀಯ ಪ್ರಶ್ನೆಯೆಂದು ಪರಿಗಣಿಸುವುದಕ್ಕೆ ಒಪ್ಪಿಕೊಂಡಿತ್ತು ಎನ್ನುವುದನ್ನು ಇಲ್ಲಿ ಸ್ಮರಿಸಬೇಕಿದೆ. ಸಾರ್ಕ್ ಯಾತ್ರಾ ಎಂದು ಕರೆಸಿಕೊಂಡ ಪ್ರಕ್ರಿಯೆಯ ಭಾಗವಾಗಿ ವಿದೇಶಾಂಗ ಕಾರ್ಯದರ್ಶಿಯವರನ್ನು ಪಾಕಿಸ್ತಾನಕ್ಕೆ ಕಳುಹಿಸುವ (ಮಾರ್ಚ್ 3,2015) ಸರ್ಕಾರದ ನಿರ್ಧಾರ ಹಾಗೂ ಕೆಲವೊಂದು ಮಾಧ್ಯಮಗಳಲ್ಲಿ ವರದಿಯಾದ, ಪಾಕಿಸ್ತಾನದೊಂದಿಗೆ ಕ್ರಿಕೆಟ್ ಬಾಂಧವ್ಯದ ಪುನರಾರಂಭದ ಸಾಧ್ಯತೆಗಳು ಟೀಕಾಕಾರರಲ್ಲಿ ಪಾಕಿಸ್ತಾನ್ ಬಗ್ಗೆ ಭಾರತದ ನೀತಿಯೇನು ಎಂಬ ಪ್ರಶ್ನೆ ಏಳುವುದಕ್ಕೂ ಕಾರಣವಾಗಿತ್ತು. ಈ ವಿಚಾರಕ್ಕೆ ಸಂಬಂಧಿಸಿದಂತೆ ವಿದೇಶಾಂಗ ವ್ಯವಹಾರಗಳ ಖಾತೆಯ ಸಚಿವರಾದ ಶ್ರೀಮತಿ ಸುಷ್ಮಾ ಸ್ವರಾಜ್ ಅವರು ಮೇ 31,2015ರಂದು ನವದೆಹಲಿಯಲ್ಲಿ ನೀಡಿದ ಹೇಳಿಕೆಯು ಗಮನಾರ್ಹವಾಗಿದೆ. ಅವರು ಭಾರತದ ಪಾಕಿಸ್ತಾನ್ ಕುರಿತ ನೀತಿಯಲ್ಲಿ ಯಾವುದೇ ಬದಲಾವಣೆಯಾಗಿರುವುದನ್ನು ನಿರಾಕರಿಸಿ, ತಮ್ಮ ಸರ್ಕಾರವು ಆರಂಭದಿಂದಲೂ ಮಾತುಕತೆ ನಡೆಸುವುದಕ್ಕೆ ಮೂರು ಮಾನದಂಡಗಳನ್ನು ನಿರ್ಧರಿಸಿದ್ದು ಪಾಕಿಸ್ತಾನಕ್ಕೆ ಅದನ್ನು ಮತ್ತೆ ಮತ್ತೆ ತಿಳಿಸಲಾಗಿದೆಯೆಂದೂ, ಭಾರತವು ಯಾವುದೇ ಲೋಪವಿಲ್ಲದೆ ಅದಕ್ಕೆ ಬದ್ಧವಾಗಿಯೇ ನಡೆದುಕೊಂಡಿದೆ ಎಂದೂ ಸ್ಪಷ್ಟಪಡಿಸಿದ್ದಾರೆ. ಮೊದಲನೆಯ ನಿಯಮವೆಂದರೆ ಎಲ್ಲಾ ವಿವಾದಗಳನ್ನೂ ಶಾಂತಿಯುತ ಮಾತುಕತೆಗಳ ಮೂಲಕವೇ ಬಗೆಹರಿಸಿಕೊಳ್ಳುವುದು; ಎರಡನೆಯದಾಗಿ, ಮಾತುಕತೆಯೇನಿದ್ದರೂ ಭಾರತ ಮತ್ತು ಪಾಕಿಸ್ತಾನದ ನಡುವೆ ನಡೆಯಬೇಕಾಗಿದ್ದು ಹೊರಗಿನ ದೇಶ ಅದರಲ್ಲಿ ಪಾಲ್ಗೊಳ್ಳುವಂತಿಲ್ಲ ಎಂಬುದು ಮತ್ತು ಕೊನೆಯದಾಗಿ ಎಲ್ಲಾ ಚರ್ಚೆ ಮತ್ತು ಮಾತುಕತೆಗಳೂ

ಶಾಂತಿಯುತ ವಾತಾವರಣದಲ್ಲಿ ಹಾಗೂ ಸಿಮ್ಲಾ ಒಪ್ಪಂದ ಮತ್ತು ಲಾಹೋರ್ ಘೋಷಣೆಯಡಿ ನಡೆಯಬೇಕು ಎನ್ನುವುದು. ಮುಂದೇನಾಗಲಿದೆ ಎಂಬುದನ್ನು ಕಾದು ನೋಡಬೇಕಿದೆಯಾದರೂ ಪಾಕಿಸ್ತಾನದೊಂದಿಗಿನ ಸಮಸ್ಯೆಯ ಬೇರುಗಳು ಕಾಶ್ಮೀರದಲ್ಲಿ ಇಲ್ಲ ಎಂಬುದನ್ನಂತೂ ಇಲ್ಲಿ ಉಲ್ಲೇಖಿಸಲೇ ಬೇಕು. ಈ ಬೇರುಗಳು ಪಾಕಿಸ್ತಾನದ ಅಧಿಕಾರ ಕೇಂದ್ರವು ಒಂದೆಡೆ ಕೇಂದ್ರೀಕೃತವಾಗಿರದೆ ಪ್ರಬಲ ಸೇನೆ, ಪ್ರಭಾವಿ ಐಎಸ್ಐ, ಮೂಲಭೂತವಾದಿ ಸಂಘಟನೆ ಮತ್ತದರ ವಶೀಲಿಗಳು ಹಾಗೂ ಪ್ರಜಾಪ್ರಭುತ್ವ ತತ್ವದಡಿ ಚುನಾಯಿತವಾಗಿದ್ದೂ ದುರ್ಬಲವಾಗಿರುವ ಸರ್ಕಾರ ಎಂದೆಲ್ಲ ಹಲವರ ಕೈಯಲ್ಲಿ ಹಂಚಿ ಹೋದಂತಿರುವುದೇ ಕಾರಣವಾಗಿದೆ. ಈ ಹಲವು ಅಧಿಕಾರ ಕೇಂದ್ರಗಳ ನಡುವೆ ಭಾರತದೊಂದಿಗಿನ ಸಂಬಂಧ ಸುಧಾರಿಸಿಕೊಳ್ಳುವ ಬಗ್ಗೆ ಒಂದು ಸಹಮತ ಏರ್ಪಡುವವರೆಗೂ ಯಾವುದೇ ಬಗೆಯ ಪ್ರಗತಿ ಕಂಡುಬರುವುದು ಕೇವಲ ಆಶಾವಾದದ ಮಾತಷ್ಟೇ ಆಗಿದೆ.

### ಶ್ರೀಲಂಕಾ

2009 ರಲ್ಲಿ ಎಲ್‌ಟಿಟಿಇ ಪರ್ಯವಸಾನಗೊಂಡ ಬಳಿಕ ಭಾರತವು ಶ್ರೀಲಂಕಾದತ್ತ ಬಹು ಆಯಾಮಗಳ ಒಂದು ನಿಲುವನ್ನು ಇರಿಸಿಕೊಂಡಿದ್ದು ಈ ನೀತಿಯು ಮುಂದಿನ ಹಲವಾರು ಅಂಶಗಳನ್ನೊಳಗೊಂಡಿದೆ. ಶ್ರೀಲಂಕಾದ ಸರ್ಕಾರಕ್ಕೆ ತಮಿಳು ಶ್ರೀಲಂಕನ್ನರತ್ತ ತನ್ನ ಬದ್ಧತೆಯನ್ನು, ಪ್ರಮುಖವಾಗಿ ಅರ್ಥಪೂರ್ಣ ಅಧಿಕಾರ ಹಂಚಿಕೆ ಹಾಗೂ ಕಾಲಮಿತಿಯ ಬದ್ಧತೆಯೊಂದಿಗೆ 13ನೆಯ ತಿದ್ದುಪಡಿಯನ್ನು ಅನುಷ್ಠಾನಕ್ಕೆ ತರುವುದರ ಕುರಿತಂತೆ, ಸದಾ ಗಮನದಲ್ಲಿರಿಸಿಕೊಳ್ಳುವಂತೆ ಮನವೊಲಿಸುವುದು, ಶ್ರೀಲಂಕಾದ ತಮಿಳರಿಗೆ 13ನೆಯ ತಿದ್ದುಪಡಿಯನ್ನು ತಾನು ಕಡೆಗಣಿಸಿಲ್ಲ ಹಾಗೂ ಈ ಜನಾಂಗದ ಭವಿಷ್ಯವು ಸಮಾನತೆ, ನ್ಯಾಯ ಮತ್ತು ಸ್ವಾಭಿಮಾನದ ನೆಲೆಯಲ್ಲಿ ಸ್ಥಿರಗೊಳ್ಳುವುದು ಎಂಬ ಬಗ್ಗೆ ತಾನು ನೀಡಿದ ಭರವಸೆಯನ್ನು ಕಾಲಕಾಲಕ್ಕೆ ಪುನರುಜ್ಜೀವನಗೊಳಿಸುವುದು ಸುದೀರ್ಘ ಕಾಲ ಸಾಗಿದ ಅಂತಃಕಲಹದಿಂದಾಗಿ ಅತಿ ಹೆಚ್ಚು ಸಂತ್ರಸ್ತಗೊಂಡಿರುವ ಉತ್ತರ ಶ್ರೀಲಂಕಾದ ಪುನರ್ ನಿರ್ಮಾಣಕ್ಕಾಗಿ ಹೂಡಿಕೆ, ಸಾಧ್ಯವಿರುವ ಮಟ್ಟಿಗೆ ಭಾರತದ ತಮಿಳು ನಾಯಕರ ಬೇಡಿಕೆಗಳ ಈಡೇರಿಕೆಗೆ ಅವಕಾಶ ಪರಿಕಲ್ಪಿಸುವ ಇಂಗಿತವಿರಿಸಿಕೊಂಡರೂ ಅಂತಿಮವಾಗಿ ಸಂಕುಚಿತವಾದ ಪ್ರಾದೇಶಿಕ ಆದ್ಯತೆಗಳ ಒತ್ತಡಕ್ಕೆ ಒಳಗಾಗಿ ಸರ್ವಮಾನ್ಯ ಕೇಂದ್ರ ವ್ಯಾಪ್ತಿಯ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಧಕ್ಕೆಯಾಗದ ತೆರದಲ್ಲಿ ವಿದೇಶಾಂಗ ನೀತಿಯನ್ನು ರೂಪಿಸುವುದು, ಶ್ರೀಲಂಕಾದಲ್ಲಿ ಚೀನಾ ತಳವೂರಲು ಮಾಡುತ್ತಿರುವ ಪ್ರಯತ್ನಗಳನ್ನು ಸೂಕ್ಷ್ಮವಾಗಿ ಗಮನಿಸುವುದು ಹಾಗೂ ಶ್ರೀಲಂಕಾ ಚೀನಾದತ್ತ ಸೆಳೆಯಲ್ಪಡದಂತೆ ನೋಡಿಕೊಳ್ಳುವುದು ಮೀನುಗಾರರ ಸಮಸ್ಯೆಗಳ ಪರಿಹಾರ. ದುರದೃಷ್ಟವಶಾತ್ ಶ್ರೀಲಂಕಾದ ಹಿಂದಿನ ಅಧ್ಯಕ್ಷರಾದ ಮಹಿಂದಾ ರಾಜಪಕ್ಸೆಯವರು ತಮ್ಮ ಭರವಸೆಗಳ ಹೊರತಾಗಿಯೂ ತಮಿಳು ಅಲ್ಪಸಂಖ್ಯಾತರಿಗೆ ಅಧಿಕಾರದಲ್ಲಿ ಸಹಭಾಗಿತ್ವವನ್ನು ಒದಗಿಸಿಕೊಡುವಲ್ಲಿ ಕ್ರಿಯಾಶೀಲರಾಗಲಿಲ್ಲ ಮಾತ್ರವಲ್ಲ ಚೈನಾಕಾರ್ಡ್ ತಂತ್ರವನ್ನೂ ಬಳಸಿದರು. ಅವರ ಚೀನಾಪರ ನೀತಿಯಿಂದಾಗಿ ಚೀನಾ ಶ್ರೀಲಂಕಾದಲ್ಲಿ ತನ್ನ ಪ್ರಧಾನ ಕ್ಷೇತ್ರವನ್ನು ಆವರಿಸಿಕೊಳ್ಳುವುದಕ್ಕೆ ಅವಕಾಶ ಲಭಿಸಿತು. ಶ್ರೀಲಂಕಾ ಸರ್ಕಾರವು ಎಲ್‌ಟಿಟಿಇ ವಿರುದ್ಧವಾಗಿ ನಡೆಸಿದ ಕಾರ್ಯಾಚರಣೆಯಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ ಎಂಬ ವಿಷಯವಾಗಿ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಆಯೋಗದ ಮಸೂದೆಗೆ ಭಾರತವು 2012 ಮತ್ತು 2013ರಲ್ಲಿ ಶ್ರೀಲಂಕಾದ ವಿರುದ್ಧ ಮತ ಚಲಾಯಿಸಿದ್ದು ಸಹಜವಾಗಿಯೇ ಮನಃಸ್ತಾಪಕ್ಕೆ ಕಾರಣವಾಯಿತು. 2014ರಲ್ಲಿ ಭಾರತವು ಯಾವುದೇ ಪಕ್ಷವಹಿಸದೇ ಹೊರಗಿರುವ ನಿರ್ಧಾರ ನಿರೀಕ್ಷಿತ ಸಮಾಧಾನ ತರಲಿಲ್ಲ. ಈಗ ಭಾರತ ಮತ್ತು ಶ್ರೀಲಂಕಾ ಎರಡೂ ದೇಶಗಳಲ್ಲಿ ಹೊಸ ಸರ್ಕಾರಗಳಿವೆ. ಈ ವರ್ಷದ ಜನವರಿಯಲ್ಲಿ ಶ್ರೀಲಂಕಾದ ಆಡಳಿತದ ಚುಕ್ಕಾಣಿ ಬದಲಾದ ಬಳಿಕ ಅತ್ಯಂತ ಕ್ಷಿಪ್ರ ಅವಧಿಯಲ್ಲಿ ಒಂದರ ಹಿಂದೊಂದರಂತೆ ಒಟ್ಟು ನಾಲ್ಕು ಉನ್ನತವಲಯದ ಭೇಟಿಗಳು (ಶ್ರೀಲಂಕಾದ ವಿದೇಶಾಂಗ ಸಚಿವರ ಭಾರತ ಭೇಟಿ, ಭಾರತದ ವಿದೇಶಾಂಗ ವ್ಯವಹಾರ ಸಚಿವರ ಶ್ರೀಲಂಕಾ ಭೇಟಿ, ಶ್ರೀಲಂಕಾದ ಅಧ್ಯಕ್ಷರ ಭಾರತ ಭೇಟಿ ಮತ್ತು ಭಾರತದ ಪ್ರಧಾನಿಯವರ ಶ್ರೀಲಂಕಾ ಭೇಟಿ) ಸಾಧ್ಯವಾಗಿವೆ. ಇದೊಂದೇ ತಮ್ಮ



ಸಂಬಂಧ ಸುಧಾರಣೆಯ ನಿಟ್ಟಿನಲ್ಲಿ ಎರಡೂ ದೇಶಗಳ ನಾಯಕರ ಮನೋಧರ್ಮದ ಬಗ್ಗೆ ಸಾಕಷ್ಟು ಹೇಳುವಂತಿದೆ. ಶ್ರೀಲಂಕಾದ ಸಂವಿಧಾನಕ್ಕೆ ತಂದ 13ನೆಯ ತಿದ್ದುಪಡಿಯ ಪೂರ್ಣಪ್ರಮಾಣದ ಅನುಷ್ಠಾನದೊಂದಿಗೆ ಶ್ರೀಲಂಕಾದ ತಮಿಳರಿಗೆ ಅಧಿಕಾರ ನೀಡುವುದಕ್ಕೆ ಸಂಬಂಧಿಸಿದ ವಿಚಾರ, ಶ್ರೀಲಂಕಾದಲ್ಲಿ ಅರ್ಥಪೂರ್ಣ ವಿಧಾನದಲ್ಲಿ ಭಿನ್ನಮತ ಶಮನದ ಯತ್ನಕ್ಕೆ ಸಂಬಂಧಿಸಿದ ವಿಚಾರ, ಮೀನುಗಾರರ ಸಂರಕ್ಷಣೆ ಮತ್ತು ಭದ್ರತೆಯ ವಿಚಾರ, ಭಾರತದ ಸುಭದ್ರತೆಗೆ ಸಂಬಂಧಪಟ್ಟ ಸೂಕ್ಷ್ಮ ಸಂಗತಿಗಳ ವಿಚಾರಗಳೊಂದಿಗೆ ಈಗ ವಾಣಿಜ್ಯ ವ್ಯವಹಾರಗಳನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ, ಜಲಮಾರ್ಗದ ಸುರಕ್ಷತೆ, ಸಾಗರೋತ್ಪನ್ನ ಆರ್ಥಿಕತೆ ಮುಂತಾದ ಹೊಸ ಸಂಗತಿಗಳಿಗೂ ಹೊಸ ಚೈತನ್ಯ ದೊರೆತಂತಾಗಿದೆ.

### ನೇಪಾಳ

ವಿಭಿನ್ನ ಕಾರಣಗಳಿಂದಾಗಿ ಕಳೆದ ಕೆಲವು ವರ್ಷಗಳಿಂದ ನೇಪಾಳದೊಂದಿಗಿನ ಸಂಬಂಧದಲ್ಲಿ ಒಂದು ಮಟ್ಟದ ನಿಲುಗಡೆಯ ಪರಿಸ್ಥಿತಿಯಿದ್ದಿತ್ತು ಎನ್ನಬಹುದು. ನೇಪಾಳದ ರಾಷ್ಟ್ರೀಯವಾದಿ ಗುಂಪುಗಳು ಭಾರತ ಮತ್ತು ನೇಪಾಳದ ನಡುವಿನ ವಿಶೇಷ ಸ್ನೇಹ ಸಂಬಂಧದ ತಳಹದಿಯಂತಿರುವ 1950ರ ಭಾರತ–ನೇಪಾಳ ಶಾಂತಿ ಮತ್ತು ಸೌಹಾರ್ದ ಒಪ್ಪಂದದ ಪುನರುಜ್ಜೀವನದ ಬಗ್ಗೆ ಒತ್ತಾಯಿಸುತ್ತಲೇ ಇದ್ದವು. ಈ ಒಡಂಬಡಿಕೆಯನ್ವಯ ನೇಪಾಳಿ ಪ್ರಜೆಗಳು ಭಾರತದಲ್ಲಿ ಭಾರತೀಯ ಪ್ರಜೆಗೆ ಸರಿಸಮಾನವಾದ ಸೌಕರ್ಯಗಳನ್ನು, ಸರಿಸಾಟಿಯಿಲ್ಲದ ಸೌಲಭ್ಯಗಳನ್ನು ಪಡೆಯುವುದು ಸಾಧ್ಯವಾಗಿತ್ತು. ಮಿಗಿಲಾಗಿ ಒಂದು ದಶಕಕ್ಕೂ ಹೆಚ್ಚು ಕಾಲ ನೇಪಾಳವು ರಾಜಕೀಯ ಪಲ್ಲಟದ ಕಠಿಣ ಪರಿಸ್ಥಿತಿಯನ್ನು

ಹಾದು ಬರುತ್ತ ಇತ್ತು. ಅಲ್ಲಿ ಸರ್ವಾಧಿಕಾರಿ ಆಧಿಪತ್ಯದ ಉಚ್ಚಾಟನೆ, ಮಾವೋವಾದಿ ಪಡೆಗಳ ಮೇಲ್ಗೈ ಮತ್ತು ಅವನತಿ, ಮತ್ತೆ ಮುಖ್ಯವಾಹಿನಿಗೆ ಮಾವೋವಾದಿಗಳ ಆಗಮನ, ಪ್ರಜಾಪ್ರಭುತ್ವದ ಹುಟ್ಟು, ಮತ್ತೀಗ ದೇಶಕ್ಕೆ ಹೊಸ ಸಂವಿಧಾನ ರಚನೆಯ ಪ್ರಕ್ರಿಯೆ ಇವೆಲ್ಲ ಸಾಗುತ್ತಿದ್ದವು. ಕಳೆದ ವರ್ಷದ ಆಗಸ್ಟ್ ತಿಂಗಳಲ್ಲಿ ಪ್ರಧಾನಮಂತ್ರಿಯವರು ನೇಪಾಳಕ್ಕೆ ನೀಡಿದ ಭೇಟಿಯು ಒಂದಕ್ಕಿಂತ ಹೆಚ್ಚು ವಿಧದಲ್ಲಿ ಚಾರಿತ್ರಿಕ ಭೇಟಿಯಾಗಿದೆ. ಕಳೆದ ಹದಿನೇಳು ವರ್ಷಗಳಲ್ಲಿ ಭಾರತದ ಪ್ರಧಾನ ಮಂತ್ರಿಯೊಬ್ಬರು ನೇಪಾಳಕ್ಕೆ ನೀಡಿದ ಮೊಟ್ಟಮೊದಲ ಭೇಟಿ ಇದಾಗಿದೆ. ಅಧಿಕಾರ ಸೂತ್ರ ವಹಿಸಿಕೊಂಡ ಮೂರು ತಿಂಗಳಿಗೂ ಕಡಿಮೆ ಅವಧಿಯಲ್ಲೇ ಪ್ರಧಾನಿಯವರು ಈ ಭೇಟಿ ನೀಡಿದ್ದಾರೆ. ಈ ಭೇಟಿಗೂ ಮುನ್ನ ಇಪ್ಪತ್ಮೂರು ವರ್ಷಗಳ ಇತಿಹಾಸದಲ್ಲೇ ಮೊಟ್ಟಮೊದಲ ಬಾರಿಗೆ ಎರಡೂ ದೇಶಗಳ ವಿದೇಶಾಂಗ ಸಚಿವರ ಮುಂದಾಳತ್ವದ ಭಾರತ–ನೇಪಾಳ ಜಂಟಿ ಆಯೋಗದ ಸಭೆ ಕೂಡಾ ನಡೆಯಿತು. ನೇಪಾಳದ ಪ್ರಭಾರ ಅಸೆಂಬ್ಲಿ ಮತ್ತು ಪಾರ್ಲಿಮೆಂಟರಿ ಶಾಸನಸಭೆಗಳನ್ನು ಉದ್ದೇಶಿಸಿ ಮಾತನಾಡುವ ಅವಕಾಶವನ್ನು ಪಡೆದ ಏಕೈಕ ವಿದೇಶೀ ವ್ಯಕ್ತಿ ಪ್ರಧಾನಿ ಶ್ರೀ ಮೋದಿಯವರಾಗಿದ್ದಾರೆ.

ನೇಪಾಳಿಯರ ಸಂವೇದನಾಶೀಲ ಸ್ವಾಗತಕ್ಕೆ ಪ್ರತಿಯಾಗಿ ಪುನರಾವಲೋಕನ, ಹೊಂದಾಣಿಕೆ ಮತ್ತು ಸಮಕಾಲೀನ ಬದಲಾವಣೆಗಳೊಂದಿಗೆ ಬಹುಮುಖಿಯೂ, ಆಳವಾದ ಬಾಂಧವ್ಯವೂ ಆಗಿರುವಂಥ ಈ ಸಂಬಂಧವನ್ನು ಸಮಕಾಲೀನ ಪರಿಸ್ಥಿತಿಯನ್ನು ಹೆಚ್ಚು ಸಮಂಜಸವಾಗಿ ಪ್ರತಿಬಿಂಬಿಸುವಂತೆ, ಒಂದು ದೂರಗಾಮಿ ಮುನ್ನೋಟವುಳ್ಳ ಬಗೆಯಲ್ಲಿ ಸಂಘಟಿಸಿ ವಿಸ್ತರಿಸುವ ನಿಟ್ಟಿನಲ್ಲಿ 1950ರ ಶಾಂತಿ ಮತ್ತು ಸೌಹಾರ್ದ ಒಡಂಬಡಿಕೆಯನ್ನು ನವೀಕರಿಸಲು ಒಮ್ಮತದ ನಿರ್ಧಾರ ಕೈಗೊಳ್ಳಲಾಯಿತು. (ಆಗಸ್ಟ್ 4, 2014ರಂದು ಪ್ರಧಾನ ಮಂತ್ರಿಯವರು ನೇಪಾಳಕ್ಕೆ ಭೇಟಿ ನೀಡಿದ ಸಂದರ್ಭದ ಜಂಟಿ ಪತ್ರಿಕಾ ಹೇಳಿಕೆ). ಪರಸ್ಪರ ವಿಶ್ವಾಸದ ಕೊರತೆಯನ್ನು ಕುರಿತು ಮಾತನಾಡುತ್ತ ನೇಪಾಳಿಯರಿಗೆ ಪ್ರಧಾನಿಯವರು ಭಾರತಕ್ಕೆ ನೇಪಾಳದ ಆಂತರಿಕ ವಿಚಾರಗಳಲ್ಲಿ ಹಸ್ತಕ್ಷೇಪ ನಡೆಸುವ ಯಾವುದೇ ಉದ್ದೇಶವಿಲ್ಲ ಮತ್ತು ಅದು ನೇಪಾಳಕ್ಕೆ ದ್ವಿಪಕ್ಷೀಯ ಹಾಗೂ ಉಪ ಪ್ರಾದೇಶಿಕ ಹಿನ್ನೆಲೆಯಲ್ಲಿ ಎಲ್ಲಾ ಬಗೆಯ ಸಹಕಾರ ನೀಡಲು ಉತ್ಸುಕವಾಗಿದೆ ಎಂಬ ಭರವಸೆಯನ್ನು ನೀಡಿದರು. ಹಲವಾರು ಕ್ರಿಯಾಯೋಜನೆಗಳಿಗೆ, ಪಂಚೇಶ್ವರ ಅಭಿವೃದ್ಧಿ ಯೋಜನೆ, ಕರ್ನಾಲಿ ಮೇಲ್ದಂಡೆ ಜಲವಿದ್ಯುತ್ ಯೋಜನೆಯ ಕ್ರಿಯಾಯೋಜನಾ ಅಭಿವೃದ್ಧಿ ಒಡಂಬಡಿಕೆ ಇತ್ಯಾದಿ, ಕಾಲಬದ್ಧ ಪರಿಮಿತಿಯನ್ನು ನಿಗದಿಪಡಿಸಲಾಯಿತು. ಹಾಗೂ, ಪರಸ್ಪರ ಸಹಕಾರದ ಸಾಧ್ಯತೆಯುಳ್ಳ ಹಲವಾರು ಹೊಸ ಕ್ಷೇತ್ರಗಳನ್ನು ಗುರುತಿಸಲಾಯಿತು. ಒಟ್ಟಿನಲ್ಲಿ ಭಾರತ–ನೇಪಾಳ ನಡುವಿನ ಸಂಬಂಧ ಸುಧಾರಣೆಗೆ ಹೊಸ ಚೈತನ್ಯವನ್ನೀಯಲು ಅತ್ಯಗತ್ಯವಾದ ಒಂದು ಹೆಜ್ಜೆಯನ್ನು ಇರಿಸಿದಂತಾಗಿದೆ. ಪ್ರಧಾನವಾಗಿ ಸರಿಯಾದ ದಿಕ್ಕಿನಲ್ಲಿ ಸಂಬಂಧಗಳ ಸುಧಾರಣೆ ಸಾಧಿಸುವಲ್ಲಿ ಭಾರತ ಪ್ರಾಮಾಣಿಕವಾದ ಆಸಕ್ತಿ ಹೊಂದಿದೆ ಮತ್ತು ನೇಪಾಳಿಗರು ಭಾರತವು ನೀಡಿದ ಭರವಸೆಗಳನ್ನು ಈಡೇರಿಸುವಷ್ಟು ಸಮರ್ಥವಾಗಿದೆ ಎಂಬ ವಿಶ್ವಾಸವನ್ನಿಡಬಹುದಾಗಿದೆ ಎಂಬುದು ಸ್ಪಷ್ಟವಾದಂತಾಗಿದೆ.

ಕೊನೆಯದಾಗಿ, ಒಂದು ವರ್ಷದ ವಿಸ್ತೃತ ಮತ್ತು ಚುರುಕಾದ ರಾಜತಾಂತ್ರಿಕ ಮುತ್ಸದ್ದಿತನವು ದಕ್ಷಿಣ ಏಶಿಯಾದಲ್ಲಿ ಹಲವು ಹತ್ತು ವಿಧದಲ್ಲಿ ಫಲಪ್ರದವಾಗಿದೆ. ಅದು ಪರಸ್ಪರ ವಿಶ್ವಾಸದ ಕೊರತೆಯನ್ನು ಗಣನೀಯವಾಗಿ ಹೋಗಲಾಡಿಸಿದೆ; ತಾನು ನೀಡಿದ ಭರವಸೆಗಳನ್ನು ಈಡೇರಿಸುವಲ್ಲಿ ಭಾರತವು ಬದ್ಧವಾಗಿದೆ ಎಂಬ ಸಂದೇಶ ನೀಡಿದಂತಾಗಿದೆ; ಇರುವ ಬಾಂಧವ್ಯವನ್ನು ಬಲಪಡಿಸಿದೆ; ಕೆಲವೊಂದು ಸಂದರ್ಭದಲ್ಲಿ ಸಂಬಂಧ ಸುಧಾರಿಸಿ ಸೂಕ್ತವಾದ ಪಥದಲ್ಲಿ ಮುಂದುವರಿಯುವಂತಾಗಿದೆ; ಸಮಕಾಲೀನ ಸವಾಲುಗಳನ್ನು ಎದುರಿಸಿ ದೀರ್ಘಕಾಲೀನ ಸಹಭಾಗಿತ್ವಕ್ಕೆ ಕಾರ್ಯಸೂಚಿಯೊಂದನ್ನು ತೋರಿಸಿಕೊಟ್ಟಿದೆ; ಆರ್ಥಿಕ ಒಗ್ಗೂಡುವಿಕೆಯೂ ಸೇರಿದಂತೆ ಪ್ರಗತಿ ಮತ್ತು ಅಭಿವೃದ್ಧಿಗೆ ಶಾಂತಿಯುತ ಸಹಬಾಳ್ವೆ ಮತ್ತು ಪ್ರಾದೇಶಿಕವಾಗಿ ಭೂ, ಜಲ ಮತ್ತು ವಾಯುಮಾರ್ಗಗಳ ಒಕ್ಕೂಟ ಅತ್ಯಗತ್ಯ ಎನ್ನುವುದನ್ನು ಒತ್ತಿ ಹೇಳಿದೆ; ಎಲ್ಲೆಲ್ಲಿ ಎಲ್ಲಾ ಸದಸ್ಯ ರಾಷ್ಟ್ರಗಳೂ ಒಗ್ಗೂಡಿ ಕೆಲಸ ಮಾಡುವುದೇ ಕಷ್ಟಸಾಧ್ಯವಾಗಿದೆಯೋ ಅಂಥಲ್ಲಿ ದ್ವಿಪಕ್ಷೀಯ ಅಥವಾ ಉಪಪ್ರಾದೇಶಿಕ ನೆಲೆಯಲ್ಲಿ ಕೈಜೋಡಿಸಲು ಸಿದ್ಧವಿರುವ ರಾಷ್ಟ್ರಗಳಷ್ಟೇ ಒಂದಾಗಿ ಮುಂದುವರಿಯುವ ಹೊಸ ಸಾಧ್ಯತೆಯನ್ನು ಕಂಡುಕೊಂಡಿರುವ ಬಗ್ಗೆ ಒಂದು ಸೂಚನೆಯನ್ನು ಸರ್ವರಿಗೂ ನೀಡಿದಂತಾಗಿದೆ. ಸದ್ಯದ ಅಗತ್ಯವೇನೆಂದರೆ, ಕಾಲಬದ್ಧ ಪರಿಮಿತಿಯನ್ನಿರಿಸಿಕೊಂಡು ಈವರೆಗೂ ಸಾಧಿಸಿದ ಪ್ರಗತಿಯನ್ನು ಏಕಪ್ರಕಾರವಾಗಿ ಮುಂದುವರಿಸಿಕೊಂಡು ಹೋಗುವುದು, ಭರವಸೆ ಮತ್ತು ವಾಗ್ದಾನಗಳನ್ನು ಗೌರವಿಸುತ್ತ ಅವುಗಳನ್ನು ಈಡೇರಿಸುವುದು ಮತ್ತು ಪರಿಹರಿಸದೇ ಉಳಿದಿರುವ ಸಂಗತಿಗಳನ್ನು ಪರಿಣಾಮಕಾರಿಯಾಗಿ ಬಗೆಹರಿಸುವುದು. ❑


# ಯೋಜನಾ ಚಂದಾದಾರರಲ್ಲಿ ಕೋರಿಕೆ

**ಯೋಜನಾ ಪತ್ರಿಕೆಗೆ ಚಂದಾ ಬಯಸುವವರು ಮನಿಆರ್ಡರ್ ಕಳಿಸುವಾಗ ಜಿಲ್ಲೆ ಹಾಗೂ ಅಂಚೆ ಪಿನ್‌ಕೋಡ್ ಸಂಖ್ಯೆ ಸೇರಿದಂತೆ ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಒದಗಿಸಬೇಕು. ಚಂದಾದಾರರು ತಮ್ಮ ಯಾವುದೇ ಅಗತ್ಯಗಳಿಗೆ ಕಚೇರಿ ಸಂಪರ್ಕಿಸಿದಾಗ ತಮ್ಮ ಚಂದಾ ಸಂಖ್ಯೆಯನ್ನು ತಿಳಿಸುವುದು ಅತ್ಯವಶ್ಯಕ. ಸಂಪರ್ಕಿಸಬೇಕಾದ ಇ–ಅಂಚೆ : yojanakannada@yahoo.com ದೂರವಾಣಿ ಸಂಖ್ಯೆ : 080 25537244 (ಸೋಮವಾರದಿಂದ – ಶುಕ್ರವಾರ. ವೇಳೆ 2.00 ರಿಂದ 4.00)**

# ಭಾರತ–ಅಮೆರಿಕ ಬಾಂಧವ್ಯ

* ಕೆ. ಸಿ. ಸಿಂಗ್
ಕನ್ನಡಕ್ಕೆ : ಡಾ. ಶ್ರೀಪಾದ ಭಟ್



ಅಂತಾರಾಷ್ಟ್ರೀಯ ಮಟ್ಟದಲ್ಲಿ ಪರಸ್ಪರ ನೆರವಾಗುವಂತೆ ಜನತಂತ್ರ ವ್ಯವಸ್ಥೆ, ಸಮಾನ ನಾಗರಿಕ ಮೌಲ್ಯವುಳ್ಳ, ಆದರೆ ಕೆಲವು ಸಂದರ್ಭಗಳಲ್ಲಿ ಭಿನ್ನಾಭಿಪ್ರಾಯ ಹೊಂದಿರುವ ಭಾರತ ಮತ್ತು ಅಮೆರಿಕಗಳು 1947ರಲ್ಲಿ ಭಾರತ ಸ್ವತಂತ್ರವಾದಾಗಿನಿಂದಲೂ ಉತ್ತಮ ಬಾಂಧವ್ಯವನ್ನು ನಿರಂತರವಾಗಿ ಕಾಪಾಡಿಕೊಂಡು ಬರುತ್ತಿವೆ. 1989ರಲ್ಲಿ “ಶೀತಲ ಸಮರ” ಮುಕ್ತಾಯ ಕಂಡಾಗ ಹಾಗೂ ಸೋವಿಯತ್ ಒಕ್ಕೂಟ ಕುಸಿದ ನಂತರ ಉಭಯ ದೇಶಗಳ ನಡುವೆ ಅಪ್ಪಟ ಒಡಂಬಡಿಕೆ ಮಾರ್ಗ ನಿಜವಾಗಿ ತೆರೆದುಕೊಂಡಿತು.

ಅನಂತರದ ಈ ಪ್ರಕ್ರಿಯೆಯಲ್ಲಿ ಪಿ ವಿ ನರಸಿಂಹರಾವ್ ಅವರಿಂದ ಆರಂಭಿಸಿ ಪ್ರತಿಯೊಬ್ಬ ಪ್ರಧಾನ ಮಂತ್ರಿಯೂ ಕೊಡುಗೆ ನೀಡಿದ್ದಾರೆ. ಈ ಮಧ್ಯೆ ಕೆಲವು ಗಂಭೀರ ತೊಡಕುಗಳಿದ್ದವು. ಅಂದರೆ 1998ರ ಮೇನಲ್ಲಿ ವಾಜಪೇಯಿ ಸರ್ಕಾರ ನಡೆಸಿದ ಪರಮಾಣು ಪರೀಕ್ಷೆಯಿಂದಾಗಿ ಗ್ಲೆನ್ ತಿದ್ದುಪಡಿ ಕಾಯ್ದೆಯಂತೆ ಭಾರತದ ಮೇಲೆ ಅಮೆರಿಕ ನಿಷೇಧ ಹೇರುವಂತಾಯಿತು. ಆದರೂ ಜಸ್ವಂತ್ ಸಿಂಗ್–ಸ್ಟ್ರೋಬ್ ಟಾಲ್‌ಬೋಟ್ ಮಾತುಕತೆಗಳ ಮೂಲಕ ಎರಡೂ ದೇಶಗಳು ಹೊಸ ಸಮಸ್ಯೆಯಿಂದ ಹೊರಬರಲು ಪ್ರಯತ್ನಿಸಿದ್ದರಿಂದ ಜಾಗತಿಕವಾಗಿ ಭಾರತದ ಪಾತ್ರ ಮತ್ತು ಸ್ಥಾನವನ್ನು ಹೆಚ್ಚು ಪ್ರಾಮಾಣಿಕವಾಗಿ ಗುರುತಿಸಲು ಹಾಗೂ ಎರಡೂ ದೇಶಗಳ ನಡುವೆ ನೈಜ ಅನುಸಂಧಾನ ನಡೆಯುವ ಮಾರ್ಗ ತೆರೆದುಕೊಂಡಿತು. ಉದಯಿಸುತ್ತಿರುವ ನೈಜ ಶಕ್ತಿಯಾಗಿ ಸದ್ಯದ ಆರ್ಥಿಕ ಮತ್ತು ಭದ್ರತಾ ಶ್ರೇಣಿಯಲ್ಲಿ ಸ್ಥಾನ ನೀಡಬೇಕಾದ ಅಗತ್ಯವಿರುವುದರಿಂದ ಜಾಗತಿಕ ಪರಮಾಣು ಮತ್ತು ಇತರೆ ತಾಂತ್ರಿಕ ಹಿಡಿತವುಳ್ಳ ಯಾವುದೇ ಬಾಹ್ಯ ಶಕ್ತಿಯಂತೆ ಭಾರತವನ್ನು ಪರಿಗಣಿಸಲು ಸಾಧ್ಯವಿಲ್ಲ ಎಂದು ಅಮೆರಿಕ ಗುರುತಿಸಿದೆ. ಶೀತಲ ಸಮರ ಕಾಲದಲ್ಲಿ ತಟಸ್ಥವಾಗಿದ್ದ ಭಾರತ ಮೈತ್ರಿಯನ್ನು ಹೊಂದಿದ್ದರೂ ಸಹಭಾಗಿತ್ವ ತೋರಿಸಿರಲಿಲ್ಲ. 1971–72ರ ಬಾಂಗ್ಲಾದೇಶ ವಿಮೋಚನೆ ಮತ್ತು ಚೀನಕ್ಕೆ ಅಮೆರಿಕ ಬಾಹ್ಯ ಬೆಂಬಲ ನೀಡಿದ ಅವಧಿಯಲ್ಲಿ ಭಾರತವನ್ನು ಸೋವಿಯತ್ ಒಕ್ಕೂಟದ ಅಘೋಷಿತ ಮಿತ್ರದೇಶವೆಂದು ಪರಿಗಣಿಸಲಾಗಿತ್ತು. ಇಂದಿನ ಬದಲಾದ ಜಾಗತಿಕ ಪರಿಸ್ಥಿತಿ ಹಾಗೂ ಆರ್ಥಿಕತೆಯಲ್ಲಿ ಭಾರತ ಪ್ರಬುದ್ಧವಾಗುತ್ತಿರುವ ಹಿನ್ನೆಲೆಯಲ್ಲಿ ಪಾಲುದಾರಿಕೆಯಲ್ಲಿ ಭಾರತದ ಕಡೆಗಿನ ಆಕರ್ಷಣೆ ಸ್ವಯಂವೇದ್ಯವಾಗಿದೆ. ಕ್ಲಿಂಟನ್ ಅಧ್ಯಕ್ಷತೆಯ ಅವಧಿಯಲ್ಲಿ ರಕ್ಷಣಾ ಸಹಕಾರ ತಂತ್ರವಾಗಿ ಆರ್ಥಿಕ ಒಡಂಬಡಿಕೆಗಳನ್ನು ಅಮೆರಿಕ ಉತ್ತೇಜಿಸಿದ್ದರಿಂದ ಭಾರತದ ಮಾರುಕಟ್ಟೆ ಸಶಕ್ತವಾಗಿಯೂ ದೊಡ್ಡ ಪ್ರಮಾಣದಲ್ಲಿಯೂ ಬೆಳೆದು ಗಮನಸೆಳೆಯುವಂತಾಗಿದೆ. ಅಮೆರಿಕ ಬೃಹತ್ ಉದಯೋನ್ಮುಖ ಮಾರುಕಟ್ಟೆಗಳ ಉಪಕ್ರಮ ಕೈಗೊಳ್ಳಲು ಇದು ನೆರವಾಯಿತು, ಆ ಮೂಲಕ 1995ರಲ್ಲಿ ವಾಣಿಜ್ಯ ಸಚಿವ ಶ್ರೀ ರಾನ್ ಬ್ರೌನ್ ನೇತೃತ್ವದಲ್ಲಿ ಭಾರತಕ್ಕೆ “ಅಧ್ಯಕ್ಷೀಯ ವ್ಯಾಪಾರಾಭಿವೃದ್ಧಿ ಯೋಜನೆ” ಬರಲು ಕಾರಣವಾಯಿತು. 1999ರಿಂದ ಭಾರತ ಮತ್ತು ಅಮೆರಿಕಗಳ ಬಾಂಧವ್ಯದ ಗತಿ ಮತ್ತು ಸ್ವರೂಪ ಬದಲಾಗಿದೆ. 2000ದಲ್ಲಿ ಅಧ್ಯಕ್ಷ ಬಿಲ್ ಕ್ಲಿಂಟನ್‌ರ ಭಾರತ ಭೇಟಿ, ಪ್ರತಿಯಾಗಿ 2001ರಲ್ಲಿ ಪ್ರಧಾನಮಂತ್ರಿ ಶ್ರೀ ಎ. ಬಿ. ವಾಜಪೇಯಿಯವರ ಅಮೆರಿಕ ಭೇಟಿ, 9/11ರ ದಾಳಿಯ ಅನಂತರದ ಬೆಳವಣಿಗೆಗಳ ಫಲವಾಗಿ ಸರ್ಕಾರೇತರ ಶಕ್ತಿಗಳ ಹೊಸ ಜಾಗತಿಕ ಸವಾಲನ್ನು ಹತ್ತಿಕ್ಕಲು ಭಾರತ ಅತ್ಯಗತ್ಯ ಎಂಬುದನ್ನು ಅಮೆರಿಕ ಮನಗಂಡಿದೆ. ಚೀನದ ಪ್ರಭಾವವನ್ನು ಸಮತೋಲನದಲ್ಲಿಡಲು ಏಶಿಯಾದ ಭದ್ರತೆಯ ಹೊಸ ವ್ಯವಸ್ಥೆಗೆ ಬಲಿಷ್ಠ ಭಾರತ ಮುಖ್ಯ ಸಂಗಾತಿಯಾಗಬಹುದೆಂಬ ಅಧ್ಯಕ್ಷ ಶ್ರೀ ಬುಶ್ ಅವರ ನಂಬಿಕೆಯ ಪ್ರಯತ್ನಗಳೂ ಇದಕ್ಕೆ ಪೂರಕವಾದವು. ಈ ಎರಡು ಪ್ರಮುಖ ಬೆಳವಣಿಗೆಗಳು ಅಮೆರಿಕ ನೀತಿಯ ಚಾಲಕ ಶಕ್ತಿಗಳಾದವು. ತರುವಾಯದಲ್ಲಿ ಅಮೆರಿಕ–ಭಾರತಗಳ ವಿಸ್ತೃತ ಜಂಟಿ ಕಾರ್ಯಯೋಜನಾ ತಂಡಗಳ ಸಂರಚನೆ ಹಾಗೂ ಉನ್ನತ ಮಟ್ಟದ ವಿನಿಮಯಗಳು ಉತ್ತೇಜನಾತ್ಮಕವಾಗಿ ರೂಪುಗೊಂಡಿವೆ. ಅಮೆರಿಕದೊಂದಿಗಿನ ಮೋದಿ ಸರ್ಕಾರದ ಒಡನಾಟವನ್ನು ಈ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. ಉದಾಹರಣೆಗೆ, ಭಾರತ–ಅಮೆರಿಕ ನಾಗರಿಕ ಪರಮಾಣು ಒಪ್ಪಂದ ಅಣುಶಕ್ತಿಗೆ ಮಾತ್ರ ಸಂಬಂಧಿಸಿದ್ದಲ್ಲ. 1974ರಲ್ಲಿ ಭಾರತ “ಶಾಂತಿಯುತ” ಪರಮಾಣು ಪರೀಕ್ಷೆ ನಡೆಸಿದಾಗಿನಿಂದ ಅಮೆರಿಕ ಮತ್ತು ಅದರ ಮಿತ್ರ ದೇಶಗಳು ರೂಪಿಸಿದ ಉನ್ನತ ತಂತ್ರಜ್ಞಾನ ವರ್ಗಾವಣೆ ಮೇಲಿನ ನಿಷೇಧ ತೆರವಿಗೂ ಅದು ಸಂಬಂಧಿಸಿದೆ. ನಾಲ್ಕು ಪ್ರಭುತ್ವ ಗುಂಪುಗಳು, ಅಂದರೆ, ಪರಮಾಣು

* ಮಾಜಿ ಕಾರ್ಯದರ್ಶಿ, ವಿದೇಶಾಂಗ ವ್ಯವಹಾರ. Email : ambkcsingh@gmail.com

ವಿತರಣ ಗುಂಪು, ಶಸ್ತ್ರ ತಂತ್ರಜ್ಞಾನ ನಿಯಂತ್ರಣ ಗುಂಪು, ವಾಸೆನಾರ್ ಮತ್ತು ಆಸ್ಟ್ರೇಲಿಯ ಗುಂಪುಗಳು ಪ್ರಪಂಚದ ಬಹುಪಾಲು ಎಲ್ಲ ಬಗೆಯ ಅತ್ಯಾಧುನಿಕ ಮತ್ತು ದ್ವಿಮುಖ ಬಳಕೆಯ ತಂತ್ರಜ್ಞಾನವನ್ನು ಹಿಡಿತದಲ್ಲಿಟ್ಟುಕೊಂಡಿವೆ. ಮುಂದುವರೆದ ದೇಶಗಳೊಂದಿಗೆ ಅದರಲ್ಲೂ ಚೀನದೊಂದಿಗೆ ಭಾರತ ಸಮಾನತೆ ಸಾಧಿಸಲು ಶೀತಲ ಸಮರ ಕಾಲದಲ್ಲಿ ಸೃಷ್ಟಿಯಾದ ಇಂಥ ಅಡ್ಡಿಗಳಿಂದ ಭಾರತ ಮುಕ್ತವಾಗಬೇಕೆಂದು ಅಮೆರಿಕ ಮನಗಂಡಿದೆ.

ಅಮೆರಿಕದ ಹಣಕಾಸು ಮತ್ತು ಬ್ಯಾಂಕ್ ವ್ಯವಸ್ಥೆಗಳ ಸಂಕಷ್ಟ ಹಾಗೂ ಅನಂತರದ ಯೂರೋಪ್ ವಲಯದ ಬಿಕ್ಕಟ್ಟುಗಳಿಂದ ಭಾರತ–ಅಮೆರಿಕ ಬಾಂಧವ್ಯ ಕುಂಠಿತವಾಯಿತು. ಭಾರತ ಕೂಡ ತನ್ನದೇ ಸಮಸ್ಯೆಗಳಿಂದ ಬಳಲುತ್ತಿದ್ದು ನಕಾರಾತ್ಮಕ ಬಾಹ್ಯ ಪರಿಸರದ ಭರಾಟೆಯಲ್ಲಿ ಹೋರಾಡುತ್ತಲೇ ಆರ್ಥಿಕ ಕ್ಷೇತ್ರದಲ್ಲಿ ದೃಢ ನಿರ್ಧಾರ ಕೈಗೊಳ್ಳುವಲ್ಲಿ ತೊಂದರೆ ಅನುಭವಿಸಿತು.


ಎರಡೂ ದೇಶಗಳ ಮಹಾನ್ ಸಾಮರ್ಥ್ಯದ ಮೇಲೆ ಭರವಸೆ ಇಟ್ಟು ಸ್ಥಗಿತವಾಗಿದ್ದ ಭಾರತ–ಅಮೆರಿಕ ಸಂಬಂಧಕ್ಕೆ ಚಾಲನೆ ನೀಡುವ ಮೂಲಕ ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ತಮ್ಮ ಆಡಳಿತ ಆರಂಭಿಸಿದ್ದಾರೆ.

ಎರಡೂ ದೇಶಗಳಲ್ಲೂ ದೊಡ್ಡ ಗುರಿ ಕಣ್ಮರೆಯಾಗಿ ವೈಯಕ್ತಿಕ ಏಜನ್ಸಿ/ಇಲಾಖೆಗಳು ತಮ್ಮ ತಮ್ಮ ಹಿತಾಸಕ್ತಿಗಳನ್ನು ಮಾತ್ರ ಮುಂದುಮಾಡಿದವು. ವ್ಯಾಪಾರ ಕುರಿತ ದೋಹಾ ಮಾತುಕತೆಯ ಸಂದರ್ಭದಲ್ಲಿ ತನ್ನ ಆಹಾರ ದಾಸ್ತಾನು ಕಾಳಜಿ ಕುರಿತಂತೆ ಏನನ್ನೂ ಹೇಳದ ಕಾರಣ ಭಾರತ ವ್ಯಾಪಾರಕ್ಕೆ ಅನುಕೂಲ ಕಲ್ಪಿಸುವುದನ್ನು ಸ್ಥಗಿತಗೊಳಿಸಿತು. ಭಾರತ ಜಾರಿಗೊಳಿಸಿದ ಕಟ್ಟುನಿಟ್ಟಿನ ಪರಮಾಣು ಪರಿಹಾರ ಕಾಯ್ದೆಯಿಂದ ಉಂಟಾದ ಹೇರಿಕೆಯ ಪರಿಸ್ಥಿತಿಯಿಂದ ಉಪಕರಣಗಳ ವಿತರಕರು ಈ ಕಾಯ್ದೆಯನ್ನು ಅನುಸರಿಸಲು ಸಿದ್ಧವಾಗದಿರಬಹುದು ಅಥವಾ ಸಾಧ್ಯವಾಗದಿರಬಹುದು ಎಂದು ಅಮೆರಿಕ ಭಾವಿಸಿತ್ತು. ಭಾರತದಲ್ಲಾಗುತ್ತಿದೆ ಎನ್ನಲಾದ ಬೌದ್ಧಿಕ ಆಸ್ತಿ ಹಕ್ಕಿನ ದುರುಪಯೋಗ ಕುರಿತ ಆರೋಪದ ಮೇಲೆ ಅಮೆರಿಕದ ಸಂಸತ್ತು ಕೂಡ ಗಮನ ನೀಡಲಾರಂಭಿಸಿತ್ತು. ಭಾರತೀಯ ಮಾಹಿತಿ ತಂತ್ರಜ್ಞಾನ ಕೆಲಸಗಾರರನ್ನು ಬಾಧಿಸುವ ಪ್ರತಿಕೂಲಕರ ವೀಸಾ ಕ್ರಮವನ್ನು ಅಮೆರಿಕದ ಅಧ್ಯಕ್ಷರು ಬಲವಾಗಿ ಪ್ರತಿಪಾದಿಸುತ್ತಿದ್ದಾರೆ ಎಂದು ಭಾರತ ಭಾವಿಸಿತ್ತು. ಮಾತುಕತೆಗೆ ಮುಂದಾಗಲೇಬೇಕಾದ ಪರಿಸ್ಥಿತಿಯಲ್ಲಿ ಉಭಯ ದೇಶಗಳ ನಾಯಕರು ಪರಿಪೂರ್ಣ ಮಧ್ಯಸ್ಥಿಕೆಯೊಂದಿಗೆ ಸಂಬಂಧ ಮರುಸ್ಥಾಪಿಸುವ ಸಕಾಲ ಕೂಡಿಬಂದಿತ್ತು.

ಸೆಪ್ಟೆಂಬರ್ 2014ರಲ್ಲಿ ಪ್ರಧಾನಿ ಶ್ರೀ ಮೋದಿ ನೀಡಿದ ಭೇಟಿಗೆ ಪ್ರತಿಯಾಗಿ ಅಧ್ಯಕ್ಷ ಶ್ರೀ ಬರಾಕ್ ಒಬಾಮ ಜನವರಿ 2015ರಲ್ಲಿ ಅದರಲ್ಲೂ ತಮ್ಮ ಅಧಿಕಾರಾವಧಿಯಲ್ಲಿ ಎರಡನೇ ಬಾರಿ ಭಾರತಕ್ಕೆ ಭೇಟಿ ನೀಡಿ ಮೊದಲ ಬಾರಿ ಗಣರಾಜ್ಯೋತ್ಸವದ ಪಥಸಂಚಲನದ ದಿನ ಮುಖ್ಯ ಅತಿಥಿಯಾಗಿ ಪಾಲ್ಗೊಂಡದ್ದು ಅಗತ್ಯ ಒತ್ತಾಸೆಯನ್ನು ನೀಡಿತು.

ಜಾಗತಿಕ ವ್ಯಾಪಾರ ಸಂಘಟನೆ (ಡಬ್ಲುಟಿಓ) ಆಹಾರ ದಾಸ್ತಾನು ಸಂಬಂಧಿ ಸಂಗತಿಗಳನ್ನು ಆರಂಭದಲ್ಲೇ ಸ್ಪಷ್ಟಪಡಿಸಿಕೊಳ್ಳಬೇಕಲ್ಲದೇ ಅನಂತರವಲ್ಲ ಎಂದು ಅಮೆರಿಕ ಒಪ್ಪಿದ್ದರಿಂದ ಡಬ್ಲುಟಿಓ ಸಮಸ್ಯೆ ಬಗೆಹರಿಯಿತು. ಪರಮಾಣು ಹೊಣೆಗಾರಿಕೆ ಸಂಗತಿ ಅಧ್ಯಕ್ಷ ಶ್ರೀ ಒಬಾಮ ಭಾರತಕ್ಕೆ ಭೇಟಿ ನೀಡುವವರೆಗೂ ಕಾಯಬೇಕಾಯಿತಲ್ಲದೇ ಭಾರತ ಪ್ರಸ್ತಾಪಿಸಿದ ಪರಿಹಾರದ ಹೊಣೆಗಾರಿಕೆಯ ಸಂಗತಿಯನ್ನು ಅಮೆರಿಕದ ವಿತರಕರಿಗೆ ಭಾರತ ಪ್ರಸ್ತುತಪಡಿಸಿ ಆ ಬಗ್ಗೆ ಅವರಿಗೆ ಅರ್ಥೈಸಬೇಕೆಂಬ ನಿಲುವನ್ನು ಅಮೆರಿಕ ಸರ್ಕಾರ ಒಪ್ಪುವ ಮೂಲಕ ಪರೋಕ್ಷವಾಗಿ ಬಗೆಹರಿಯುವಂತಾಗಿದೆ.

ಅಧ್ಯಕ್ಷ ಶ್ರೀ ಒಬಾಮರೊಂದಿಗೆ ಪ್ರಧಾನಿ ಶ್ರೀ ಮೋದಿಯವರು ಬೆಳೆಸಿದ ಒಡನಾಟದ ಫಲವಾಗಿ ಮತ್ತು ವೈಯಕ್ತಿಕ ಗಮನದಿಂದ ಕಳೆದ ಒಂದು ವರ್ಷದಲ್ಲಿ ಭಾರತ–ಅಮೆರಿಕ ಸಂಬಂಧ ಚುರುಕು ಪಡೆದಿದೆ. ವಾಷಿಂಗ್ಟನ್‌ನಲ್ಲಿ ಸೆಪ್ಟೆಂಬರ್ 2014ರಲ್ಲಿ ನಡೆದ ಸಭೆಗಳಲ್ಲಿ ಎಲ್ಲ ಬಗೆಯ ಸಂಗತಿಗಳನ್ನೂ ಪರಿಪೂರ್ಣವಾಗಿ ಚರ್ಚಿಸಲಾಗಿದೆಯಲ್ಲದೇ ಜಂಟಿ ಹೇಳಿಕೆಯಲ್ಲಿ ಅವು ಸೇರ್ಪಡೆಯಾಗಿವೆ. ಸಾಮಗ್ರಿ ಮತ್ತು ಸೇವಾವಲಯದ ದ್ವಿಮುಖ ವ್ಯಾಪಾರದಲ್ಲಿ 100 ಶತಕೋಟಿ ಡಾಲರ್‌ಗಳ



ವಹಿವಾಟು ನಡೆಸುವ ಹಾಗೂ ಇದಕ್ಕೆ ಐದುಪಟ್ಟು ಹಣವನ್ನು ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳಿಗೆ ಬಳಸಲು ಶಿಫಾರಸುಮಾಡಲಾಗಿದೆ. ಈ ವಲಯದಲ್ಲಿ ಮುಂದಿನ ಹೆಜ್ಜೆಗಳನ್ನು ಸಮಾಲೋಚಿಸಲು ಉನ್ನತಮಟ್ಟದ ಬೌದ್ಧಿಕ ಆಸ್ತಿ ತಂಡವನ್ನು ಸ್ಥಾಪಿಸಲಾಗಿದೆ. ಅಲ್ಪಕಾಲಿಕ ವೃತ್ತಿನಿರತರ ಎಚ್–1 ವೀಸಾ ಕುರಿತು ಯಾವುದೇ ಬದ್ಧತೆ ಇಲ್ಲವಾದರೂ ಮಾಹಿತಿ ತಂತ್ರಜ್ಞಾನದ ಕೊಡುಗೆಯನ್ನು ಗುರುತಿಸಲಾಗಿದೆ. ಕೌಶಲ್ಯಾಭಿವೃದ್ಧಿಯಲ್ಲಿ ಹೊಸ ಸಹಭಾಗಿತ್ವ ಮತ್ತು ಉತ್ಪಾದನಾ ಕ್ಷೇತ್ರದಲ್ಲಿ ಅನನ್ಯತೆಗಳಿಗಾಗಿ ಮಾತುಕತೆ ನಡೆಸಲು ಪ್ರಸ್ತಾಪಿಸಲಾಗಿದೆ. ಇಂಧನ ಮತ್ತು ಹವಾಮಾನ ಬದಲಾವಣೆ ಕುರಿತ ಚರ್ಚೆಯಲ್ಲಿ ಹವಾಮಾನ ಬದಲಾವಣೆಗೆ ಪರಿಹಾರೋಪಾಯವಾಗಿ ಶುದ್ಧ ಮತ್ತು ಮರುಬಳಕೆಯ ಇಂಧನ ಹಾಗೂ ಪರಮಾಣು ಶಕ್ತಿಯ ಕೊಂಡಿಯನ್ನು ಎತ್ತಿಹೇಳಲಾಗಿದೆ. ಆಧುನಿಕ ಶುದ್ಧ ಇಂಧನ ಸಹಭಾಗಿತ್ವದ (ಪಾರ್ಟ್‌ನರ್‌ಶಿಪ್ ಟು ಅಡ್ವಾನ್ಸ್ ಕ್ಲೀನ್ ಎನರ್ಜಿ–ಪಿಎಸಿಇ) ಅಡಿಯಲ್ಲಿ ಈ ಕ್ಷೇತ್ರದಲ್ಲಿ ಕಾರ್ಯತಂತ್ರ ಸಹಭಾಗಿತ್ವವನ್ನು ಗುರುತಿಸಲಾಗಿದೆ. ಹವಾಮಾನ ಬದಲಾವಣೆ ಕುರಿತಂತೆ ವಿಶ್ವಸಂಸ್ಥೆಯ ಸಮಾವೇಶ ಚೌಕಟ್ಟಿನಡಿಯಲ್ಲಿ 2015ರ ಪ್ಯಾರಿಸ್ ಸಮ್ಮೇಳನದ ಫಲಿತಗಳ ಯಶಸ್ಸಿಗಾಗಿ ಬದ್ಧತೆ ತೋರಿಸಲಾಗಿದ್ದು, ಇದು ಇಂಗಾಲ ಹೊರಸೂಸುವಿಕೆ ಕುರಿತಂತೆ ಕ್ಯೋಟೋತ್ತರ ಮಾರ್ಗನಕ್ಷೆಯನ್ನು ರೂಪಿಸಲಿದೆ. ಅಲ್ಪ ಇಂಗಾಲ ಆರ್ಥಿಕತೆಗೆ ಭಾರತ ಪರಿವರ್ತನೆಯಾಗಲು ಸಾಧ್ಯವಾಗುವಂತೆ ಒಂದು ಶತಕೋಟಿ ಡಾಲರ್‌ಗಳ ಆಮದು–ರಫ್ತು ಬ್ಯಾಂಕಿನ (ಎಕ್ಸ್‌ಪೋರ್ಟ್ ಇಂಪೋರ್ಟ್ ಬ್ಯಾಂಕ್–ಎಕ್ಸಿಂ ಬ್ಯಾಂಕ್) ನೆರವು ನೀಡಲು ಅಮೆರಿಕ ಬದ್ಧವಾಗಿದೆ.

ರಕ್ಷಣೆ ಮತ್ತು ಆಂತರಿಕ ಭದ್ರತೆ ಕುರಿತು ವಿಸ್ತೃತ ಮಾತುಕತೆಗಳಾಗಿದ್ದು ರಕ್ಷಣಾ ಸಹಕಾರಕ್ಕೆ ಸಂಬಂಧಿಸಿದಂತೆ

ಸದ್ಯದ ಒಪ್ಪಂದಗಳನ್ನು ನವೀಕರಿಸಲು, ರಕ್ಷಣಾ ತಂತ್ರಜ್ಞಾನಗಳ ವರ್ಗಾವಣೆ ಮತ್ತು ಮಲಬಾರಿನ ನೌಕಾ ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸುವ ವಿಷಯಗಳು ಚರ್ಚೆಯಾಗಿವೆ.

ಭಯೋತ್ಪಾದನೆಯನ್ನು ನಿಗ್ರಹಿಸುವ ಸಂಬಂಧ ಉಭಯ ದೇಶಗಳು "ಭಯೋತ್ಪಾದಕರ ಸ್ವರ್ಗಸ್ಥಾನಗಳನ್ನು ಹಾಗೂ ಅಪರಾಧೀ ಜಾಲಗಳನ್ನು ದುರ್ಬಲಗೊಳಿಸುವುದೂ ಸೇರಿದಂತೆ ಜಂಟಿ ಹಾಗೂ ಹೊಂದಾಣಿಕೆಯ ಪ್ರಯತ್ನ" ವನ್ನು ಒತ್ತಿಹೇಳಿವೆ.

"ಉನ್ನತ ತಂತ್ರಜ್ಞಾನ, ಬಾಹ್ಯಾಕಾಶ ಮತ್ತು ಆರೋಗ್ಯ ಸಹಕಾರ" ಕುರಿತ ಚರ್ಚೆಯ ಸಂಗತಿಗಳು ಉತ್ಪಾದನಾ ವಲಯದಲ್ಲಿ ಆಧುನಿಕ ಸ್ಪರ್ಶವನ್ನು ತರುವ ಮೂಲಕ ಭಾರತದ ಆರ್ಥಿಕತೆಯನ್ನು 21ನೆಯ ಶತಮಾನಕ್ಕೆ ಚಿಮ್ಮಿಸಬಲ್ಲವು. ಉತ್ಪಾದನೆಯ ಮೂಲಕ ಇಂಧನ ಮಿತವ್ಯಯ ಉದ್ಯೋಗ ಕೊರತೆಯಿಂದ ಬಹಳಷ್ಟು ವಲಯಗಳು ಅಮೆರಿಕಕ್ಕೆ ಮರಳುತ್ತಿರುವುದರಿಂದ ಸರ್ಕಾರದ "ಭಾರತದಲ್ಲಿ ಉತ್ಪಾದಿಸಿ" ಘೋಷಣೆ ಆಯ್ದ ವಲಯಗಳಲ್ಲಿ ಸಹಭಾಗಿತ್ವವನ್ನು ಆಕರ್ಷಿಸಬಹುದು. ಬೋಧನೆಗಾಗಿ ಪ್ರತಿ ವರ್ಷ 1000 ಅಮೆರಿಕದ ಶಿಕ್ಷಣವೇತ್ತರು ಭಾರತಕ್ಕೆ ಬರುವ 'ಶೈಕ್ಷಣಿಕ ಚಟುವಟಿಕೆಯ ಜಾಗತಿಕ ಪ್ರಯತ್ನ' (ಗ್ಲೋಬಲ್ ಇನಿಶಿಯೇಟಿವ್ ಆಫ್ ಅಕಾಡೆಮಿಕ್ ನೆಟ್‌ವರ್ಕ್–ಜಿಎಐಎನ್)ಕ್ಕೆ ಪ್ರಧಾನಿ ಚಾಲನೆ ನೀಡಿದ್ದಾರೆ. ಏಶಿಯಾದಲ್ಲಿ ಕೂಡ ಭಾರತದ ಯಾವುದೇ ವಿಶ್ವವಿದ್ಯಾನಿಲಯ ಉನ್ನತ ಶ್ರೇಣಿಯಲ್ಲಿ ಸ್ಥಾನ ಪಡೆಯದಿರುವುದನ್ನು ಗಮನಿಸಿದಾಗ ಉನ್ನತ ಶಿಕ್ಷಣ ಸಂಸ್ಥೆಗಳ ಸುಧಾರಣೆಗೆ ವೇಗವನ್ನು ಈ ಪ್ರಯತ್ನ ತರುತ್ತದೆ ಅನ್ನಬಹುದು.

ಅಧ್ಯಕ್ಷ ಶ್ರೀ ಬರಾಕ್ ಒಬಾಮ ಜನವರಿ 2015ರಲ್ಲಿ ದೆಹಲಿಗೆ ನೀಡಿದ ಭೇಟಿ, ಜಂಟಿಯಾಗಿ ಮೂರು ದಾಖಲೆಪತ್ರಗಳ ಬಿಡುಗಡೆಗೆ ಕಾರಣವಾಯಿತು. ಇವು 2014ರ ದಾಖಲೆಪತ್ರಗಳ ಸಂಗತಿಗಳನ್ನು ವಿಸ್ತರಿಸುತ್ತವೆಯಾದರೂ ರಕ್ಷಣಾತಂತ್ರಗಳ ಗ್ರಹಿಕೆಯ ಹೊಂದಾಣಿಕೆಯ ಪ್ರಯತ್ನಗಳ ಮೂಲಕ ಹೆಚ್ಚು ನಿರ್ದಿಷ್ಟವಾಗಿವೆ. "ಮಿತ್ರತ್ವದ ಘೋಷಣೆ" ಇಂಥ ಒಂದು ವಿಶೇಷ ದಾಖಲೆಪತ್ರವಾಗಿದೆ. ಮುಂಬರುವ ವರ್ಷಗಳಲ್ಲಿ ಅಂತಾರಾಷ್ಟ್ರೀಯ ಭದ್ರತೆಯನ್ನು ರೂಪಿಸುವ, ಪ್ರಾದೇಶಿಕ ಮತ್ತು ಜಾಗತಿಕ ಶಾಂತಿ, ಸಮೃದ್ಧಿ ಹಾಗೂ ಸುಸ್ಥಿರತೆಯನ್ನು ಕಾಯ್ದುಕೊಳ್ಳುವಂತೆ ರಕ್ಷಣಾತ್ಮಕ ದೃಷ್ಟಿಕೋನ ಒಂದಾಗುವ ಬಗ್ಗೆ ಇದು ಹೇಳುತ್ತದೆ. ಇಂಥ ಪಾತ್ರವನ್ನು ಹಂಚಿಕೊಳ್ಳಲು ಅಥವಾ ನಿರ್ವಹಿಸಲು ಭಾರತ ಹಿಂದಿನ ವರ್ಷಗಳಲ್ಲಿ ಹಿಂದೇಟುಹಾಕಿದ್ದರಿಂದ ಇವೆಲ್ಲವೂ ಶ್ರಮಸಾಧ್ಯವಾದ ಹೊಣೆಗಾರಿಕೆಯುಳ್ಳ ಗುರುತರ ಗುರಿಗಳಾಗಿವೆ.

ಎರಡನೆಯ ದಾಖಲೆಪತ್ರ ಏಶಿಯಾ ಪೆಸಿಫಿಕ್ ವಲಯಕ್ಕೆ ಜಂಟಿ ರಕ್ಷಣಾ ದೃಷ್ಟಿಕೋನವನ್ನು ರೇಖಿಸುತ್ತದೆ. ಇಲ್ಲಿಯೂ ಭಾರತ ಮತ್ತು ಅಮೆರಿಕಗಳು ಜನತಂತ್ರಗಳಾಗಿ ಇಡೀ ಪ್ರದೇಶದಲ್ಲಿ ನಿಯಮಾಧಾರಿತ ವ್ಯವಸ್ಥೆಯ ಖಾತ್ರಿಗಾಗಿ ಕೂಡಿ ಕೆಲಸಮಾಡುವುದಕ್ಕೆ ಗಮನ ನೀಡಲಾಗಿದೆ. ಎರಡೂ ದಾಖಲೆಗಳಲ್ಲಿ ಹೇಳದಿರುವ ಸಂಗತಿ ಎಂದರೆ ಚೀನದ ಢಾಳಾದ ಉಪಸ್ಥಿತಿ ಮತ್ತು ಹಠಮಾರಿತನ.

ಅಮೆರಿಕದ ರಕ್ಷಣಾ ಸಚಿವ ಶ್ರೀ ಆಸ್ಟನ್ ಕಾರ್ಟರ್ 2015 ಜೂನ್ 2–3 ರಂದು ಭಾರತಕ್ಕೆ ಭೇಟಿ ನೀಡುವುದರೊಂದಿಗೆ ರಕ್ಷಣಾ ವಲಯದಲ್ಲಿ ಅನುಸರಣೆ ಕೆಲಸಗಳು ತ್ವರಿತವಾಗಿ ನಡೆದಿವೆ. 10 ವರ್ಷಗಳ ಹೊಸ ಸೇನಾ ವಿನ್ಯಾಸ ಒಪ್ಪಂದ ಭಾರತದ "ಭಾರತದಲ್ಲಿ ಉತ್ಪಾದಿಸಿ" ಘೋಷಣೆಯೊಂದಿಗೆ ಅಮೆರಿಕದ ತಂತ್ರಜ್ಞಾನವನ್ನು ಕೂಡಿಸುವುದಾಗಿದೆ. ಮಾತುಕತೆಯ ಹಂತದಲ್ಲಿರುವ ವಿವಿಧ ಕ್ಷೇತ್ರಗಳಲ್ಲಿ ಏರ್‌ಕ್ರಾಫ್ಟ್ ಕ್ಯಾರಿಯರ್ ವಿನ್ಯಾಸ ಹಾಗೂ ಜೆಟ್ ಇಂಜಿನ್ನುಗಳ ಕ್ಷೇತ್ರಗಳೆರಡು ಪ್ರಮುಖವಾದವು. ಕೇವಲ ಅಮೆರಿಕದಲ್ಲಿ ಮಾತ್ರವಿರುವ ಏರ್‌ಕ್ರಾಫ್ಟ್ ಕ್ಯಾರಿಯರ್‌ಗಳಿಂದ ವಿಮಾನ ಹಾರಿಸುವ ಉಡಾವಣಾ ತಂತ್ರಜ್ಞಾನದಿಂದ ಸ್ಥಳಾನ್ವೇಷಣೆ ವಿಮಾನಗಳೂ ಒಳಗೊಂಡಂತೆ ಉನ್ನತ ಮಟ್ಟದ ಸಿಡಿತಲೆಗಳನ್ನು ಉಡಾಯಿಸಲು ಸಾಧ್ಯವಾಗುತ್ತದೆ. ವಿವಾದಿತ ದಕ್ಷಿಣ ಚೀನ ಸಮುದ್ರ ವ್ಯಾಪ್ತಿಯಲ್ಲಿ ತನ್ನ ಹಿಡಿತ ವಿಸ್ತರಿಸುವ ಹಾಗೂ ದ್ವೀಪ ಸ್ಥಾಪನೆಯ ಚೀನದ ಯತ್ನ ಅವಿರತವಾಗಿರುವದರಿಂದ ಇಷ್ಟು ವಿಶಾಲವಾದ ಕ್ಷೇತ್ರಗಳಲ್ಲಿ ಅಮೆರಿಕದೊಂದಿಗೆ ಹತ್ತಿರದಿಂದ ಕಾರ್ಯನಿರ್ವಹಿಸಲು ಸಾಕಷ್ಟು ಅನುಸರಣಾ ಕೆಲಸಗಳಾಗಬೇಕಿದೆ.

ಇಂಥ ಶಕ್ತಿ ಸಮತೋಲನದ ಪ್ರವೀಣನಾಗಿದ್ದವನೆಂದರೆ 1873–1890ರ ಅವಧಿಯಲ್ಲಿ ಜರ್ಮನಿಯ ಪ್ರಧಾನಿಯಾಗಿದ್ದ ಒಟ್ಟೋವಾನ್ ಬಿಸ್ಮಾರ್ಕ್. ಈತ ಮೊದಲ ಮಹಾಯುದ್ಧದ ಪೂರ್ವದಲ್ಲಿ ಐದು ಪ್ರಮುಖ ಶಕ್ತಿಗಳಾಗಿದ್ದ, ಅಂದರೆ ರಷ್ಯ, ಆಸ್ಟ್ರಿಯ, ಫ್ರಾನ್ಸ್, ಬ್ರಿಟನ್ ಮತ್ತು ಜರ್ಮನಿಗಳೊಂದಿಗೆ ತನ್ನ ದೇಶದ ಹಿತಾಸಕ್ತಿಗೆ ಅನುಗುಣವಾಗಿ ವರ್ತಿಸುತ್ತ ಜರ್ಮನಿಯನ್ನು ಮುಂದಕ್ಕೊಯ್ದಿದ್ದ. ಎರಡು ಅಥವಾ ಅದಕ್ಕಿಂತ ಕಡಿಮೆ ದೇಶಗಳ ಬದಲು ಮೂರು ಅಥವಾ ಹೆಚ್ಚು ದೇಶಗಳೊಂದಿಗೆ ಸಂಬಂಧ ಬೆಳೆಸಿಕೊಳ್ಳಬೇಕು ಎನ್ನುವ ಆತನ ಸಲಹೆ ಭಾರತಕ್ಕೆ ಇಂದು ಚೆನ್ನಾಗಿ ಹೊಂದಿಕೊಳ್ಳುತ್ತದೆ.

ಭಾರತ ಮತ್ತು ಅಮೆರಿಕಗಳು ಕಳೆದುಕೊಂಡಿರುವ ಬಹಳಷ್ಟು ಅವಕಾಶಗಳನ್ನು ಸರಿಪಡಿಸಿಕೊಳ್ಳ–ಬೇಕಿರುವುದರಿಂದ ಮುಂಬರುವ ದಶಕಗಳಲ್ಲಿ ಇದೊಂದು ಸವಾಲಾಗುತ್ತದೆ. ಎಲ್ಲ ದೇಶಗಳೂ ಮೊದಲು ಸ್ವಹಿತಾಸಕ್ತಿಯ ಈಡೇರಿಕೆಗೆ ತೊಡಗಿದ್ದರೆ ಚೀನ ಪ್ರಾಬಲ್ಯ ಹೊಂದುವುದು ಸಾಧ್ಯವಾಗುತ್ತಿರಲಿಲ್ಲ. ಅಮೆರಿಕ ತನ್ನ ಮಾರುಕಟ್ಟೆಯನ್ನು ಚೀನಕ್ಕೆ ತೆರೆದು ಹೂಡಿಕೆ ಮತ್ತು ತಂತ್ರಜ್ಞಾನ ವಿನಿಮಯಕ್ಕೆ ಅವಕಾಶ ಮಾಡಿಕೊಟ್ಟದ್ದು ಇದಕ್ಕೆ ಕಾರಣ. ತಂತ್ರಜ್ಞಾನ ನಿಷೇಧದಿಂದ ಭಾರತ ಸಂಕಷ್ಟ ಅನುಭವಿಸುತ್ತಿದ್ದ ಅವಧಿಯಲ್ಲಿ ಇದು ನಡೆಯಿತು. ಭಾರತ ಎದ್ದು ನಿಲ್ಲಲು ಅನುವಾಗುವಂತೆ ಅನಂತರದ ಸರ್ಕಾರಗಳು ಕಾರ್ಯನಿರ್ವಹಿಸಿವೆ. ಈಗ ಭಾರತವನ್ನು ಇನ್ಯಾರೂ ತಡೆಯಲಾರರು. ❑

Indo American
MARKET GATEWAY

# ಉತ್ತಮ ಆಡಳಿತ – ಶೈಲಿ ಮತ್ತು ಸತ್ವ

* ಡಾ. ಎ. ಸೂರ್ಯಪ್ರಕಾಶ
ಕನ್ನಡಕ್ಕೆ : ನಂದಕಿಶೋರ್ ಕೋಟೆ



ರಾಷ್ಟ್ರ ರಾಜಕಾರಣದಲ್ಲಿ, 1989ರ ಸುಮಾರಿಗೆ ಸಮ್ಮಿಶ್ರ ಸರ್ಕಾರಗಳ ಹೊಸ ಶಕೆಯೊಂದು ಆರಂಭವಾದಾಗ ದೇಶವು ಉದ್ದೇಶರಹಿತವಾಗುತ್ತ ತನ್ನ ಗಮನವನ್ನು ಕಳೆದುಕೊಳ್ಳುತ್ತಿದೆಯೇನೋ ಎಂಬ ಸಾಮಾನ್ಯ ಗ್ರಹಿಕೆಯೊಂದು ರೂಪುಗೊಂಡಿತ್ತು. ಬದುಕಿನ ಎಲ್ಲ ರಂಗಗಳಲ್ಲಿ ಈ ಭಾವನೆ ಆವರಿಸಿ, ಆಡಳಿತ, ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಿಗೂ ವ್ಯಾಪಿಸಿತು. ಇಂಥ ರಾಜಕೀಯ ಅನಿಶ್ಚಯತೆ, ಅದಕ್ಷತೆ ಮತ್ತು ಅಪಾರದರ್ಶಕತೆಗೆ ದಾರಿ ಮಾಡಿಕೊಟ್ಟಿತು. ದೇಶದ ಹೊರ ಜಗತ್ತಿನೊಂದಿಗಿನ ವ್ಯವಹಾರಗಳಲ್ಲಿ ಈ ಗೊಂದಲ ಮತ್ತು ಕಂದಕಗಳು ಎದ್ದು ಕಾಣುವಂತಿತ್ತು. ಅಂತಾರಾಷ್ಟ್ರೀಯ ಸಂಗತಿಗಳಿಗೆ ಅಪಕ್ವವಾಗಿ ಸ್ಪಂದಿಸುವುದು; ನೆರೆ ರಾಷ್ಟ್ರದ ನಿರ್ಲಜ್ಜ ವರ್ತನೆಗೆ ತಾತ್ಕಾಲಿಕ ಪ್ರತಿಕ್ರಿಯೆ ನೀಡುವುದು ದೇಶದ ಆತ್ಮವಿಶ್ವಾಸವನ್ನು ಭಂಗಗೊಳಿಸುವಂತಿದ್ದವು. ಈ ಕಾರಣವಾಗಿ ಭಾರತವು ಮುಂಚೂಣಿ ರಾಷ್ಟ್ರವಾದರೂ ನಾಯಕತ್ವವಿಲ್ಲದೆ ಸೊರಗಿದೆ ಎಂದು ಅಂತಾರಾಷ್ಟ್ರೀಯ ಸಮುದಾಯ ಯೋಚಿಸುವಂತೆ ಮಾಡಿತು. ದೇಶದ ಜನತೆ ಮೇ 2014ರಲ್ಲಿ ಜರುಗಿದ ಸಾರ್ವಜನಿಕ ಚುನಾವಣೆಯಲ್ಲಿ ಶ್ರೀ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ (ನ್ಯಾಶನಲ್ ಡೆಮಾಕ್ರಟಿಕ್ ಅಲೆಯನ್ಸ್) ಮಿತ್ರಕೂಟಕ್ಕೆ ಲೋಕಸಭೆಯಲ್ಲಿ ಸ್ಪಷ್ಟ ಬಹುಮತ ನೀಡುವ ಮೂಲಕ ಈ ಸನ್ನಿವೇಶವು ನಾಟಕೀಯವಾಗಿ ಬದಲಾವಣೆ ಹೊಂದಿತು. ಕಳೆದ ಹನ್ನೆರಡು ತಿಂಗಳುಗಳಿಂದ ಹೊಸ ಪ್ರಧಾನಿ ಕೆಲಸ ಮಾಡುವುದನ್ನು ಗಮನಿಸಿರುವವರು ಅವರ ದೃಢಚಿತ್ತ, ಮುಂಚೂಣಿಯಲ್ಲಿದ್ದು ಮುನ್ನಡೆಸುವ ಗುಣವನ್ನು ಮಾತ್ರವಲ್ಲ, ಆಧುನಿಕ ವಿಚಾರಗಳಡಿಯಲ್ಲಿ ದೇಶವನ್ನು ಕಟ್ಟಲು ಲಕ್ಷಾಂತರ ದೇಶವಾಸಿಗಳನ್ನು ಹುರಿದುಂಬಿಸುತ್ತಿದ್ದಾರೆ ಎಂಬ ಮಾತನ್ನು ಒಪ್ಪುತ್ತಾರೆ. ಕಳೆದ ವರ್ಷ ಜರುಗಿದ ಲೋಕಸಭಾ ಚುನಾವಣೆಯಲ್ಲಿ ಉತ್ತುಂಗದಲ್ಲಿದ್ದ ಜನರ ಆಶೋತ್ತರಗಳು ಮತ್ತು ಚುನಾವಣೆಯಲ್ಲಿ ನೀಡಿದ ಭರವಸೆ ಹಾಗೂ ಈಡೇರಿಕೆಗಳಿಗೆ ಹೋಲಿಸಿದರೆ ಎರಡರ ನಡುವೆ ಅಪಾರವಾದ ಕಂದಕವಿದೆ ಎಂದು ಸುಲಭವಾಗಿ ಚರ್ಚೆಗಿಳಿಯಬಹುದು. ಆದರೆ, ಈ ಹಿಂದಿದ್ದ ಭರವಸೆಯನ್ನೇ ಕಳೆದುಕೊಂಡ ಸ್ಥಿತಿಗೆ ಹೋಲಿಸಿದರೆ ಹೊಸ ಸರ್ಕಾರವು ನೀಡಿದ ಭರವಸೆಗಳನ್ನು ಗಮನಾರ್ಹವಾದ ಗತಿಯಲ್ಲಿ ಈಡೇರಿಸುತ್ತ ಗೋಚರ ಫಲಿತಾಂಶಗಳನ್ನು ನೀಡುತ್ತಿದೆ ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಈ ಕೇಂದ್ರ ವಿಚಾರ ಬಿಂದುವಿನಿಂದಲೇ ಇನ್ನುಳಿದ ಸಾಧನೆಗಳು ಕೂಡ ಹೊರಹೊಮ್ಮುತ್ತಿವೆ. ವಿವಿಧ ಕ್ಷೇತ್ರಗಳಲ್ಲಿ ಸರ್ಕಾರದ ಸಾಫಲ್ಯ-ವೈಫಲ್ಯಗಳನ್ನು ಅಳೆಯುವಾಗ, ಎನ್‌ಡಿಎ ಕೂಟದ ಬೇರೆ ಬೇರೆ ವಲಯದ ಸಾಧನೆಗಳನ್ನೂಗಮನಿಸಬೇಕು. ಆಮೇಲಷ್ಟೇ ಒಂದು ಸಮಗ್ರನೋಟದತ್ತ ಗಮನ ಹರಿಸಬಹುದು. ಸರ್ಕಾರವು ಈವರೆಗೆ ಸ್ಪರ್ಶಿಸಲಾರದ ವಿಷಯಗಳತ್ತ ತನ್ನ ಆಡಳಿತದ ಗಮನವನ್ನು ಹರಿಸಿದ್ದರಿಂದ ಮೊದಲ ವರ್ಷವು ಕೊಂಚ ಗೊಂದಲಮಯವಾಗಿಯೇ ಇತ್ತು. ಅತಿ ಹಳೆಯ ಸಮಸ್ಯೆಗಳಾದ ಲಿಂಗತಾರತಮ್ಯ, ಶೌಚ ಮತ್ತು ಸ್ವಚ್ಛತೆ, ಲಕ್ಷಾಂತರ ಜನರನ್ನು ಬ್ಯಾಂಕಿಂಗ್ ಪ್ರಕ್ರಿಯೆಗೆ ಒಳಪಡಿಸುವುದು ಈ ಬಗೆಯ ರಾಷ್ಟ್ರೀಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದನ್ನು ಈ ವರ್ಷದಲ್ಲಿ ಕಾಣಬಹುದು. ಮಾತ್ರವಲ್ಲ, ವಿದ್ಯುತ್ ಉತ್ಪಾದನೆಯೂ ಒಳಗೊಂಡಂತೆ, ರೇಲ್ವೆ, ಹೆದ್ದಾರಿ ನಿರ್ಮಾಣ ಇತ್ಯಾದಿಗಳಂಥ ಕಾಲನಿಗದಿತ ಮೂಲಸೌಕರ್ಯವಿಷಯಗಳಿಗೆ ಈ ವರ್ಷದಲ್ಲಿ ಒತ್ತು ನೀಡಲಾಯಿತು. ವಿದೇಶ ವ್ಯವಹಾರದಲ್ಲಿ ಉತ್ಸಾಹಿತ ಪ್ರಕ್ರಿಯೆಗಳು; ನೇರ ಕೇಂದ್ರ ಸಚಿವರೇ ನಿರ್ವಹಿಸಿದ, ಹಿಂದೆಂದೂ ಕಾಣದ ವಿಪತ್ತು ನಿರ್ವಹಣೆ ತಂತ್ರಗಳು ಕೂಡ ಈ ವರ್ಷದಲ್ಲಿಯೇ ಘಟಿಸಿದವು. ಪ್ರತಿ ಕ್ಷೇತ್ರದಲ್ಲಿಯೂ ಜರುಗಿದ ಬದಲಾವಣೆಗಳನ್ನು ಪರಿಶೀಲಿಸಿದಾಗ ಕೆಲಸ ಮಾಡುವ ಶೈಲಿಯಲ್ಲಿನ ಬದಲಾವಣೆಯನ್ನು ಗುರುತಿಸಬಹುದು. ಬಡವರ, ರೈತರ, ಹೂಡಿಕೆದಾರರ, ಉದ್ಯೋಗ ನಿರ್ಮಿತಿ ಪರವಿರುವ ನವೀನಮಾದರಿಯ ಸ್ಕೀಮ್‌ಗಳಿಗೆ ಚಾಲನೆ ನೀಡಿದ್ದು ಸ್ವಾತಂತ್ರ್ಯಾನಂತರದ ಭಾರತವು ಕಂಡ ಅಚ್ಚರಿಯಾಗಿದೆ.

### ಮಿಂಚಿನ ಸಂಚಾರದ ವಿದೇಶಿ ನೀತಿ


ಪ್ರಧಾನಮಂತ್ರಿಗಳ ವಿದೇಶ ವ್ಯವಹಾರಗಳಲ್ಲಿನ ಆಸಕ್ತಿಯು ಅಧಿಕಾರ ಸ್ವೀಕರಿಸಿದ ಮೊದಲ ದಿನದಿಂದಲೇ ಆರಂಭವಾಯಿತೆನ್ನಬಹುದು. ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಸಾರ್ಕ್ ದೇಶಗಳ ನಾಯಕರನ್ನು ಆಹ್ವಾನಿಸುವಲ್ಲಿ ಈ ಉತ್ಸಾಹವು ಸ್ಪಷ್ಟ ಗೋಚರವಿತ್ತು. ಆಗ ಆರಂಭಗೊಂಡ ಮಿಂಚಿನ ಮಳೆಯು ಅಮೆರಿಕದ ಅಧ್ಯಕ್ಷ ಶ್ರೀ ಬರಾಕ್ ಒಬಾಮ, ರಷ್ಯನ್ ಅಧ್ಯಕ್ಷ ಶ್ರೀ ವ್ಲದಿಮೀರ್ ಪುಟಿನ್,

* ಅಧ್ಯಕ್ಷರು, ಪ್ರಸಾರ ಭಾರತಿ ಹಾಗೂ ಹಿರಿಯ ಮಾಧ್ಯಮ ತಜ್ಞರು. Email : chairman@prasarbharati.gov.in

ಚೀನಾದ ಅಧ್ಯಕ್ಷ ಶ್ರೀ ಷಿ ಜಿನ್‌ಪಿಂಗ್, ಜರ್ಮನ್ ಚಾನ್ಸಲರ್ ಶ್ರೀ ಅಂಜೇಲ ಮೆರ್ಕಲ್, ಫ್ರೆಂಚ್ ಅಧ್ಯಕ್ಷ ಶ್ರೀ ಫ್ರಾಂಕೋಸ್ ಹಾಲೆಂಡ್, ಜಪಾನಿ ಪ್ರಧಾನಿ ಶ್ರೀ ಶಿಂಜೊ ಅಬೆ, ಕೆನಡ ಪ್ರಧಾನಿ ಶ್ರೀ ಸ್ಟಿಫನ್ ಹಾರ್ಪರ್‌ರಂಥ ಗಣ್ಯರನ್ನು ಅಧಿಕೃತವಾಗಿ ಭೇಟಿಯಾಗುವಂಥ ಕಾರ್ಯಕ್ರಮವನ್ನು ರೂಪಿಸಿತು. ನೆರೆಹೊರೆರಾಷ್ಟ್ರಗಳೊಂದಿಗಿನ ಸಂಬಂಧವನ್ನು ಇನ್ನಷ್ಟು ಬಲಪಡಿಸುವ ಶ್ರೀ ಮೋದಿಯವರ ಆಸಕ್ತಿಯು ವಿದೇಶಿ ಭೇಟಿಗಳು ಭೂತಾನ್‌ನಿಂದ ಆರಂಭವಾಗುವಂತೆ ಮಾಡಿದವು. ಭಾರತದ ವಿದೇಶಿ ಸೌಹಾರ್ದತೆಯನ್ನು ಹೆಚ್ಚಿಸಲು ಅವರು ಎರಡು ಬಾರಿ ನೇಪಾಳದ ಪ್ರವಾಸ ಕೈಗೊಂಡರು. ಒಂದು ವರ್ಷದ ಅತಿ ಕಡಿಮೆ ಅವಧಿಯಲ್ಲಿ ಪ್ರಧಾನಿಗಳು 19 ರಾಷ್ಟ್ರಗಳ ಪ್ರವಾಸವನ್ನು ಕೈಗೊಂಡಿದ್ದಾರೆ. ವಿಶ್ವ ನಾಯಕರೊಂದಿಗೆ ವೈಯಕ್ತಿಕ ನೆಲೆಯ ಪ್ರಭಾವವನ್ನು ಬೀರುವುದರೊಂದಿಗೆ ಶ್ರೀ ಮೋದಿ, ನ್ಯೂಯಾರ್ಕ್‌ನ ಮ್ಯಾಡಿಸನ್ ವೃತ್ತದಲ್ಲಿ ನಡೆದ ಸಾರ್ವಜನಿಕ ಸಭೆಗೆ ಸಾವಿರಾರು ಜನರನ್ನು ಕೂಡ ಆಕರ್ಷಿಸಿದರು. ಅದೇ ರೀತಿ, ಫ್ರಾನ್ಸ್, ಕೆನಡ, ಜರ್ಮನ್‌ಗಳಲ್ಲಿ ನಡೆದ ಸಭೆಗಳಿಗೂ ಜನ ಸಾಗರವೇ ಹರಿದು ಬಂದಿತು. ಭಾರತದ ಪ್ರಧಾನಿಯೊಬ್ಬರಿಗೆ ಅನಿವಾಸಿ ಭಾರತೀಯ ನಿವಾಸಿಗಳಿಂದ ಈ ಬಗೆಯ ಅಭೂತಪೂರ್ವ ಸ್ಪಂದಿಸುವಿಕೆ ದೊರಕಿದ್ದು ಇದೇ ಮೊದಲ ಬಾರಿ ಇರಬೇಕು.

**ವಿಭಿನ್ನ ಆಡಳಿತ**

ಪ್ರಸ್ತುತ ಸರ್ಕಾರದ ಗಮನಾರ್ಹವಾದ ಇನ್ನೊಂದು ಸಾಧನೆಯೆಂದರೆ ವಿಪತ್ತು ಮತ್ತು ಮಾನವ ಸಂಕಟಗಳ ನಿರ್ವಹಣೆ. ಈ ಕೆಲಸ ಆರಂಭವಾದುದು ಇರಾಕ್‌ನಲ್ಲಿನ ದಾದಿಯರನ್ನು ಭಾರತಕ್ಕೆ ಸ್ಥಳಾಂತರಿಸುವ ಮೂಲಕ. ಬಳಿಕ ಯೆಮೆನ್‌ನಲ್ಲಿ ಸಿಲುಕಿದ್ದ ಸಾವಿರಾರು ಭಾರತೀಯರನ್ನು ಮತ್ತು ವಿದೇಶಿಯರನ್ನು ಭಾರತೀಯ ವಾಯು ಮತ್ತು ನೌಕಾ ಸೇನೆ, ವಿದೇಶಾಂಗ ಕಚೇರಿಗಳು ಕಷ್ಟಕರ ಸನ್ನಿವೇಶದಲ್ಲಿ ಸ್ಥಳಾಂತರಿಸಿದ್ದು ಸಾಧನೆಯೇ. ಹೊಸ ಆಡಳಿತ ಶೈಲಿಯ ಭಾಗವಾಗಿ ಪ್ರಧಾನಮಂತ್ರಿಗಳು ಕಟ್ಟಕಡೆಯ ಭಾರತೀಯ ಸುರಕ್ಷಿತವಾಗಿ ದೇಶವನ್ನು ತಲುಪುವುದನ್ನು ಖಾತ್ರಿಪಡಿಸಲು ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ಜನರಲ್ ಶ್ರೀ ವಿ.ಕೆ.ಸಿಂಗ್ ಜಿಬೋಟಿಯಲ್ಲಿ ನೆಲೆ ನಿಲ್ಲುವಂತೆ ಮಾಡಿದರು. ಸಂಘರ್ಷದ ಪ್ರದೇಶದಿಂದ ಜನರನ್ನು ಸಂರಕ್ಷಿಸುವಲ್ಲಿ ಭಾರತ ವಹಿಸಿದ ಕಾಳಜಿಯನ್ನು ವಿಶ್ವವು ಮುಕ್ತಕಂಠದಿಂದ ಸ್ವಾಗತಿಸಿತು. ಈ ಕಾರ್ಯಾಚರಣೆಯಲ್ಲಿ 5600 ಭಾರತೀಯರನ್ನು, 41 ದೇಶಗಳ 960 ಪ್ರಜೆಗಳನ್ನು ರಕ್ಷಿಸಲಾಯಿತು. ನೇಪಾಳವನ್ನು ಮಾರಣಾಂತಿಕ ಭೂಕಂಪವು ಅಪ್ಪಳಿಸಿದಾಗ ಭಾರತವು ತಕ್ಷಣವೇ ದಕ್ಷತೆ ಮತ್ತು ಕ್ಷಿಪ್ರತೆಯಿಂದ ತನ್ನ ಸಹಾಯ ಹಸ್ತವನ್ನು ಚಾಚಿತು. ಈ ಬಗೆಯಸಹಾಯ ಈ ಹಿಂದೆ ಭಾರತೀಯರಾಗಲಿ, ವಿದೇಶಿಯರಾಗಲಿ ಕಂಡಿರಲಿಲ್ಲ. ದುರಂತ ಘಟನೆ ನಡೆದ ಗಂಟೆಗಳ ಒಳಗಾಗಿ ಪ್ರಧಾನಿಗಳ ನಿರ್ದಿಷ್ಟ ಮಾರ್ಗದರ್ಶನದಡಿ ರಾಷ್ಟ್ರೀಯ ವಿಪತ್ತು ನಿರ್ವಹಣೆ ಪಡೆಯು ಅಹರ್ನಿಶಿ ಸಂರಕ್ಷಣೆ ಮತ್ತು ಪರಿಹಾರ ಕಾರ್ಯವನ್ನು ಕೈಗೊಂಡಿತು. ಇದೇ ರೀತಿಯ ನೈಸರ್ಗಿಕ ವಿಕೋಪವು ದೇಶದ ಜಮ್ಮು-ಕಾಶ್ಮೀರ ಮತ್ತು ಬಿಹಾರ ರಾಜ್ಯಗಳಲ್ಲಿ ತಲೆದೋರಿದಾಗಲೂ ಯಶಸ್ವಿ ತಂತ್ರವನ್ನು ಬಳಸಲಾಯಿತು. ಅಕಾಲಿಕ ಮಳೆಯಿಂದಾಗಿ ಬೆಳೆ ಹಾನಿಯಾದಾಗ ಅನೇಕ ಕೇಂದ್ರ ಸಂಪುಟ ಸಚಿವರು ಉತ್ತರ ಪ್ರದೇಶ, ರಾಜಸ್ಥಾನ, ಹರಿಯಾಣ ಮತ್ತು ಪಂಜಾಬ್ ರಾಜ್ಯಗಳಲ್ಲಿ ಪ್ರವಾಸಮಾಡಿ ರೈತರ ಸಂಕಷ್ಟಗಳನ್ನು ಆಲಿಸಿದರು. ಪ್ರಧಾನಿಗಳ ಚೌಕಟ್ಟಿನಾಚೆಗಿನ ಇನ್ನೊಂದು ಉಪಕ್ರಮವೆಂದರೆ ನೇರವಾಗಿ ಜನರೊಂದಿಗೆ ಸಂವಾದ ನಡೆಸುವ "ಮನ್ ಕೀ ಬಾತ್" ಕಾರ್ಯಕ್ರಮ. ಆಕಾಶವಾಣಿಯ ಈ ಮಾಸಿಕ ಕಾರ್ಯಕ್ರಮವು ಮತ್ತೊಮ್ಮೆ ಜನರನ್ನು ರೇಡಿಯೋಗಳತ್ತ ಸೆಳೆಯಿತು. ಮಾತ್ರವಲ್ಲ, ಅನೇಕ ಟಿ.ವಿ ಚಾನೆಲ್‌ಗಳು ಈ ಕಾರ್ಯಕ್ರಮದ ನೇರಪ್ರಸಾರ ಮಾಡುತ್ತಿರುವುದರಿಂದ ಅತ್ಯಂತ ಜನಾನುರಾಗಿಯೂ ಆಗಿದೆ. ಹೊಸ ಆಡಳಿತ ಶೈಲಿಯ ಮಾದರಿಯ ಉತ್ತಮ ಉದಾಹರಣೆಯನ್ನು ತೋರಿಸಿಕೊಟ್ಟವರು ವಿದೇಶಾಂಗ ಸಚಿವೆ ಶ್ರೀಮತಿ ಸುಷ್ಮಾ ಸ್ವರಾಜ್. ಅನಿವಾಸಿ ಭಾರತೀಯರು ಮತ್ತು ವಿದೇಶ ಪ್ರವಾಸಮಾಡುವ ಭಾರತೀಯರು ಹೊರ ದೇಶಗಳಲ್ಲಿನ ಭಾರತೀಯ ರಾಯಭಾರಿ ಕಚೇರಿಗಳು ಹಾಗೂ ವಿದೇಶಾಂಗ ಸಚಿವಾಲಯಗಳ ಅಸೂಕ್ಷ್ಮತೆ ಕುರಿತು ನಿರಂತರವಾಗಿ ದೂರುತ್ತಲೇ ಇದ್ದರು. ಅದೀಗ ಗತಕ್ಕೆ ಸೇರಿದ ವಿಷಯವಾಗಿದೆ. ಭಾರತದ ವಿದೇಶಾಂಗ ಸಚಿವರು ವಿಶ್ವದೆಲ್ಲೆಡೆಯ ಭಾರತೀಯರೊಂದಿಗೆ ನಿರಂತರವಾಗಿ ಟ್ವೀಟ್




ಮಾಡುತ್ತಾರೆ. ಕೆಲವೊಮ್ಮೆ ರಾತ್ರಿ 2 ಗಂಟೆಯ ವೇಳೆಗೆ! ತಕ್ಷಣವೇ ಹತ್ತಿರದ ರಾಯಭಾರಿ ಕಚೇರಿಗೆ ತುರ್ತುಸಂದೇಶ ಕಳಿಸಿ ಸಹಾಯ ಪಡೆದದ್ದು ಖಾತ್ರಿಯಾಗುವವರೆಗೂ ಅದನ್ನು ಫಾಲೋಅಪ್ ಮಾಡುತ್ತಾರೆ. ಅದು ಸಂಕಷ್ಟದಲ್ಲಿರುವ ನಾಗರಿಕರ ಗುಂಪನ್ನು ಸ್ಥಳಾಂತರಿಸುವ ವಿಷಯವೇ ಇರಬಹುದು ಅಥವ ಕೌಟುಂಬಿಕ ಹಿಂಸೆಗೆ ಗುರಿಯಾದ ಮಹಿಳೆಯೇ ಆಗಿರಬಹುದು. ಇಲ್ಲವೇ, ಪಾಸ್‌ಪೋರ್ಟ್ ಕಳೆದುಕೊಂಡ ಪ್ರವಾಸಿಗರೇ ಆಗಿರಬಹುದು. ಅಂಥವರು ಮಾಡಬೇಕಿರುವುದು ಇಷ್ಟೇ. ವಿದೇಶಾಂಗ ಸಚಿವರೊಂದಿಗೆ ಸಹಾಯ ಕೇಳಿ ಟ್ವೀಟ್ ಮಾಡುವುದು. ಆ ಚಿಕ್ಕ ಟ್ವೀಟ್ ಸಂದೇಶವು ಬೃಹತ್ ಭಾರತೀಯ ಆಡಳಿತವನ್ನೇ ಎಚ್ಚರಿಸಿ ಬಿಡುತ್ತದೆ. ಶೀಘ್ರವೇ ಸಹಾಯ ಒದಗುತ್ತದೆ. ಶ್ರೀಮತಿ ಸುಷ್ಮಾ ಸ್ವರಾಜ್‌ರ ಈ ಉಪಕ್ರಮ ಪ್ರಜಾಸತ್ತೆಯ ಉಳಿದ ವಿದೇಶಾಂಗ ಸಚಿವರಿಗೆ ಪ್ರೇರಣೆಯಾಗಬಲ್ಲುದು.

**ಆರ್ಥಿಕತೆಗೆ ಉದ್ದೀಪನ**

ಸರಣಿ ಹಗರಣಗಳಿಂದ ಹಾಗೂ ಕುಸಿದ ಆಡಳಿತ ವ್ಯವಸ್ಥೆಯಿಂದಾಗಿ ವಿದೇಶಿ ಹೂಡಿಕೆದಾರರು ಕಳೆದುಕೊಂಡಿದ್ದ ಭರವಸೆಯ ಭದ್ರತೆ ಸರ್ಕಾರವನ್ನು ಕಾಡುತ್ತಿದ್ದ ಇನ್ನೊಂದು ಮಹತ್ವದ ವಿಷಯವಾಗಿತ್ತು. ಭಾರತವು ಹೂಡಿಕೆಗಾಗಿ ಪ್ರಶಸ್ತ ಸ್ಥಳವಾಗಿದೆ ಎಂದು ಮನವರಿಕೆ ಮಾಡಿಕೊಡುವುದು ಅತ್ಯಗತ್ಯವಾಗಿತ್ತು. ಫಲವಾಗಿ ಹಣಕಾಸು ಸಚಿವ ಶ್ರೀ ಅರುಣ್ ಜೇಟ್ಲಿ ಅವರು ಆಯವ್ಯಯ ಮಂಡಿಸುವ ಮೊದಲು ಅಪಾರ ಸಿದ್ಧತೆ ನಡೆಯಿತು. ಬಜೆಟ್‌ನಲ್ಲಿ ಹೂಡಿಕೆಯನ್ನು ಆಕರ್ಷಿಸುವ ಮತ್ತು ಆರ್ಥಿಕ ಚೇತರಿಕೆಯ ಅಂಶಗಳು ಪ್ರಬಲವಾಗಿ ಹಾಗೂ ಸ್ಪಷ್ಟವಾಗಿ ಸಂದೇಶದಂತೆ ಗೋಚರಿಸಿದ್ದರಿಂದ ವಾಣಿಜ್ಯ ವಲಯವು ಬಜೆಟ್ಟನ್ನು ಮುಕ್ತವಾಗಿ ಸ್ವೀಕರಿಸಿತು. ಜತೆಗೆ, ಹೂಡಿಕೆದಾರರಲ್ಲಿದ್ದ ಅಗೋಚರ ಭಯಗಳನ್ನು ನಿವಾರಿಸುವ ಕೆಲಸವನ್ನು ಸಚಿವಾಲಯವು ಮಾಡತೊಡಗಿತು.

ಸರ್ಕಾರದ ಉಪಕ್ರಮಗಳು ಹೂಡಿಕೆಯ ವಾತಾವರಣವನ್ನು ಗಣನೀಯ ಪ್ರಮಾಣದಲ್ಲಿ ಹೆಚ್ಚಿಸಿದವು. ಮಾತ್ರವಲ್ಲ, ಸದ್ಯದ ಪರಿಸರದಲ್ಲಿ ರಾಷ್ಟ್ರೀಯ ಉತ್ಪಾದನಾ ಸರಾಸರಿಯು ಚೀನಾವನ್ನು ಹಿಂದಿಕ್ಕಿ ಶೇ. 9ರಷ್ಟು ಸಾಧಿಸಲಾಗುವುದು ಎಂದು ಅಂದಾಜಿಸಲಾಗಿದೆ. ಜತೆಗೆ, ದೇಶದ ವಿದೇಶಿ ವಿನಿಮಯವು 350 ಶತಕೋಟಿ ಅಮೆರಿಕನ್ ಡಾಲರ್‌ಗಳಷ್ಟಿರುವುದು ಗಮನಾರ್ಹವೇ ಆಗಿದೆ. ಅಷ್ಟೇ ಮುಖ್ಯವಾದುದೆಂದರೆ ಭ್ರಷ್ಟಾಚಾರ ರಹಿತ ಸರ್ಕಾರವು ಅಸ್ತಿತ್ವದಲ್ಲಿರುವುದು ಮತ್ತು ಇತ್ತೀಚೆಗೆ ಯಾವುದೇ ರೀತಿಯ ಹಗರಣಗಳು ಇಲ್ಲದಿರುವುದು. ಇದೀಗ ಯೋಜನಾ ಆಯೋಗದ ಸ್ಥಾನವನ್ನು ನೀತಿ (ನ್ಯಾಶನಲ್ ಇನ್‌ಸ್ಟಿಟ್ಯೂಟ್ ಫಾರ್ ಟ್ರಾನ್ಸ್‌ಫಾರ್ಮಿಂಗ್ ಇಂಡಿಯ) ಆಯೋಗವು ಅಲಂಕರಿಸಿದೆ. ಆಧುನಿಕ ಭಾರತದ ಅಗತ್ಯಗಳನ್ನು ರಚಿಸುವ ಚಿಂತಕ ಚಾವಡಿಯಾಗಿ ಈ ನೀತಿ ಆಯೋಗವು ಕಾರ್ಯನಿರ್ವಹಿಸಲಿದೆ. ಆರ್ಥಿಕ ಮತ್ತು ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಧಾನಮಂತ್ರಿಗಳಿಗೆ ಸಲಹೆ ನೀಡುವುದಲ್ಲದೆ ನೀತಿ ನಿರೂಪಣೆಯಲ್ಲಿ ರಾಜ್ಯಗಳು ಒಳಗೊಳ್ಳುವಂತೆಯೂ ನೀತಿ ಆಯೋಗ ನೋಡಿಕೊಳ್ಳುತ್ತದೆ. ಕೇವಲ ಸಂಸ್ಥೆಯ ಹೆಸರಿನ ಬದಲಾವಣೆ ಮಾತ್ರವಲ್ಲದೆ ಮೂಲಭೂತ ಬದಲಾವಣೆಗಳನ್ನು ಈ ಸಂಸ್ಥೆಯು ಕಾಣಲಿದೆ. ಸಂಸ್ಥೆಯ ಉಪಾಧ್ಯಕ್ಷರನ್ನಾಗಿ ಸರ್ಕಾರವು ಕೊಲಂಬಿಯ ವಿಶ್ವವಿದ್ಯಾಲಯದ ಪ್ರೊಫೆಸರ್ ಡಾ. ಅರವಿಂದ ಪನಗರಿಯ ಅವರನ್ನು ಆಯ್ಕೆ ಮಾಡಿದೆ. ಉಳಿದ ಸದಸ್ಯರು ಆಯೋಗಕ್ಕೆ ಬೌದ್ಧಿಕ ಚೌಕಟ್ಟನ್ನು ಒದಗಿಸಲಿದ್ದಾರೆ. ಇದರೊಂದಿಗೆ ಒಕ್ಕೂಟ ವ್ಯವಸ್ಥೆ ಬಲಪಡಿಸಲು ರಾಜ್ಯ ಮತ್ತು ಕೇಂದ್ರದ ಸಂಬಂಧಗಳ ಸುಧಾರಣೆಗೂ ಆಯೋಗ ಕೆಲಸ ಮಾಡಲಿದೆ. 14ನೆ ಹಣಕಾಸು ಆಯೋಗವು ಕೇಂದ್ರ ಸಂಗ್ರಹಿಸುವ ತೆರಿಗೆಗಳಲ್ಲಿನ ರಾಜ್ಯಗಳ ಪಾಲನ್ನು ಶೇ.32 ರಿಂದ ಶೇ. 42ಕ್ಕೇರಿಸುವ ಕ್ರಾಂತಿಕಾರಿ ಶಿಫಾರಸ್ಸನ್ನು ಮಾಡಿದೆ. ತಕ್ಷಣವೇ ಪ್ರಧಾನಮಂತ್ರಿಗಳು ಹಾಗೂ ಹಣಕಾಸು ಸಚಿವರು ಈ ಶಿಫಾರಸ್ಸನ್ನು ಅಂಗೀಕರಿಸಿದ್ದು, ಅನುಗುಣವಾಗಿ ರಾಜ್ಯಗಳು 2015-16ನೆಯ ಸಾಲಿನಲ್ಲಿ ರೂ. 1.78 ಲಕ್ಷ ಕೋಟಿ ಪಾಲನ್ನು ತಮ್ಮದಾಗಿಸಿಕೊಳ್ಳಲಿವೆ. ರಾಜ್ಯಗಳಿಗೆ ನೀಡುವ ಪಾಲನ್ನು ಶೇ.42ಕ್ಕೆ ಏರಿಸಿರುವುದು "ಅತ್ಯಂತ ದೊಡ್ಡ ಮೊತ್ತದ ಬದಲಾವಣೆಯಾಗಿದೆ" ಎಂದು ಸಚಿವ ಶ್ರೀ ಜೇಟ್ಲಿ ನುಡಿದಿದ್ದಾರೆ. ಶಿಫಾರಸ್ಸಿಗೆ ಅಂಗೀಕಾರ ಸೂಚಿಸುವ ಮೂಲಕ ಸರ್ಕಾರವು ಒಕ್ಕೂಟ ವ್ಯವಸ್ಥೆಯ ಬಗೆಗಿನ ತನ್ನ ಬದ್ಧತೆಯನ್ನು ಮೆರೆದಿದೆ.

**ಮೂಲಭೂತ ಸೌಕರ್ಯ ಅಭಿವೃದ್ಧಿಗೆ ನಾಂದಿ**

ದೇಶದ ಮೂಲಸೌಕರ್ಯ ಕ್ಷೇತ್ರದಲ್ಲಿ ಅಭಿವೃದ್ಧಿ ಸಾಧಿಸದೆ, ಕ್ಷಿಪಣಿ ವೇಗದ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗದು. ಇದು ವಿದೇಶಿ ಹೂಡಿಕೆದಾರರ ಬಹುಮುಖ್ಯ ಕಾಳಜಿಯೂ ಆಗಿತ್ತು. ಅಂತೆಯೇ, ದೇಶದ ಮೂಲಸೌಕರ್ಯ ಅಭಿವೃದ್ಧಿಯು ತಮ್ಮ ಸರ್ಕಾರದ ಆದ್ಯತೆಯ ವಿಷಯವಾಗಿದೆ ಎಂದು ವಿದೇಶಿ ಉದ್ಯಮ ನಾಯಕರಿಗೆ ಪ್ರಧಾನಿ ಭರವಸೆಯನ್ನು ನೀಡಿದ್ದಾರೆ. ಹಾಗೆಂದೇ, ಅವರ ಸಚಿವಾಲಯವು ಮೂಲಸೌಕರ್ಯ ಕ್ಷೇತ್ರದ ಯೋಜನೆಗಳನ್ನು ಅತಿ ಹತ್ತಿರದಿಂದ ನಿಗಾ ವಹಿಸುತ್ತಿದೆ. ಕಲ್ಲಿದ್ದಲು, ಇಂಧನ, ಹೆದ್ದಾರಿ, ರೈಲ್ವೆ, ಬಂದರು ಹೀಗೆ ವಿವಿಧ ಸಚಿವರುಗಳಿಗೆ ಖಡಾಖಂಡಿತವಾದ ಕಾಲಾವಧಿಯನ್ನೂ ನಿಗದಿಪಡಿಸಲಾಗಿದೆ. ಇದೇ ರೀತಿ, ದೇಶದ ವಿದ್ಯುತ್ ಕೊರತೆಯನ್ನು ಶೇ. 10 ರಿಂದ ಶೇ.3.6ಕ್ಕೆ ತಗ್ಗಿಸಲು ವಿದ್ಯುತ್ ಉತ್ಪಾದನೆಯಲ್ಲಿಯೂ ಗುರಿಗಳನ್ನು ಪ್ರಧಾನಿ ಸಚಿವಾಲಯವು ನಿಗದಿಪಡಿಸಿದೆ. ದೇಶದ ರಾಜಧಾನಿಯಾದ ದೆಹಲಿಯನ್ನೂ ಸೇರಿಸಿಕೊಂಡಂತೆ, ರಾಜಸ್ಥಾನ, ಆಂಧ್ರಪ್ರದೇಶ ರಾಜ್ಯಗಳಿಗೆ ನಿರಂತರ ವಿದ್ಯುತ್ ಕಲ್ಪಿಸುವ ಗುರಿಯನ್ನು ಕೇಂದ್ರವು ಹೊಂದಿದೆ. ವಿದ್ಯುತ್ ಉತ್ಪಾದನೆಯಲ್ಲಿ 12ನೆಯ ಯೋಜನೆ ಅಂದಾಜನ್ನು ಮೀರುವ ಗುರಿಯನ್ನು ಇಂಧನ ಸಚಿವರು ಹೊಂದಿದ್ದಾರೆ. ಇಂಥದ್ದೇ ಗುರಿಗಳನ್ನು ರಾಷ್ಟ್ರೀಯ ಹೆದ್ದಾರಿ ನಿರ್ಮಾಣಕ್ಕೂ ನಿಗದಿಪಡಿಸಲಾಗಿದೆ. ಮುಖ್ಯವೆಂದರೆ ಎಲ್ಲ ಸಚಿವರು ಹಾಗೂ ಸಚಿವಾಲಯಗಳು ತಲುಪಬೇಕಾದ ಗುರಿಗಳಿಗೆ ನಿಗದಿತರಾಗಿರುವುದರಿಂದ ಹಿಂದೆ ಬೀಳುವ ವಿಲಾಸಿತನಕ್ಕೆ ಆಸ್ಪದವೇ ಇಲ್ಲ.


**ವಸ್ತುಸ್ಥಿತಿ ಬದಲಿಸಲು ಸ್ಫೂರ್ತಿದಾಯಕ ಕಾರ್ಯಚರಣೆ**

ದೇಶದಲ್ಲಿ, ಮಹಾತ್ಮ ಗಾಂಧಿಯವರ ಜನ್ಮದಿನಾಚರಣೆಯಂದು ಶುಚಿ ಮತ್ತು ಶೌಚಗಳನ್ನು ಗಮನದಲ್ಲಿರಿಸಿಕೊಂಡು ಸ್ವಚ್ಛ ಭಾರತದಂಥ ಅರಿವು ಮೂಡಿಸುವ ಆಂದೋಲನಗಳನ್ನು ಹಮ್ಮಿಕೊಳ್ಳಲಾಗಿದೆ. ದೇಶದ ಶೇ.70ರಷ್ಟು ಸಮುದಾಯಗಳು ಶೌಚಾಲಯಗಳನ್ನು ಹೊಂದಿಲ್ಲದಿರುವುದು ಮಹಿಳೆಯರ ಘನತೆ ಮತ್ತು ಸುರಕ್ಷತೆಗೆ ಧಕ್ಕೆಯಾಗಿದೆ ಎಂಬ ಅಪ್ರಿಯ ವಿಷಯವನ್ನು ಸಾರ್ವಜನಿಕವಾಗಿ ಪ್ರಸ್ತಾಪಿಸುವ ಧೈರ್ಯವನ್ನು ಪ್ರಧಾನಮಂತ್ರಿಗಳು ತೋರಿದ್ದಾರೆ. ಶೌಚಾಲಯಗಳನ್ನು ನಿರ್ಮಿಸುವ ಆಂದೋಲನವು ಸಮರೋಪಾದಿಯಲ್ಲಿ ನಡೆದಿದೆ. ಮಾತ್ರವಲ್ಲ, ಆರ್ಥಿಕವಾಗಿ ದುರ್ಬಲರಾದ ಕುಟುಂಬಗಳು ಶೌಚಾಲಯಗಳನ್ನು ನಿರ್ಮಿಸಿಕೊಳ್ಳಲು ಸರ್ಕಾರವು ಸಹಾಯಧನವನ್ನು ನೀಡುತ್ತಿದೆ. ಸರ್ಕಾರವು ಸುಮಾರು 60 ದಶಲಕ್ಷ ಶೌಚಾಲಯಗಳನ್ನು ನಿರ್ಮಿಸುವ ಗುರಿಯನ್ನು ನಿಗದಿಪಡಿಸಿಕೊಂಡಿದೆ. ಸರ್ಕಾರದ ಇನ್ನೊಂದು ಯೋಜನೆಯಾದ ಪ್ರಧಾನಮಂತ್ರಿ ಜನಧನ ಯೋಜನೆಯು ಅಭೂತಪೂರ್ವ ಯಶಸ್ಸನ್ನು ಪಡೆದುಕೊಂಡಿದೆ. ಈ ಯೋಜನೆಯು ಬಡವರು ಬ್ಯಾಂಕ್ ಖಾತೆಯನ್ನು ಹೊಂದುವ ಮೂಲಕ ಆರ್ಥಿಕ ಸೇವೆಯನ್ನು ಪಡೆಯುತ್ತ ಸಬಲರಾಗುವ ಅವಕಾಶವನ್ನು ಕಲ್ಪಿಸುತ್ತದೆ. ಈವರೆಗೂ ಬ್ಯಾಂಕಿಂಗ್ ವ್ಯವಸ್ಥೆಯೊಂದಿಗೆ ಭಾಗಿತ್ವ ಹೊಂದುವ ಅವಕಾಶ ಪಡೆದಿಲ್ಲದ ಬಡವರಿಗೆ ಇದು ಖುಷಿಯ ಸಂಗತಿಯೇ ಆಗಿದೆ. ಆಂದೋಲನ ಆರಂಭಿಸಿದಾಗಿನಿಂದ ಈ ವರೆಗೆ 150 ದಶಲಕ್ಷ ಖಾತೆಗಳು ತೆರೆದಿರುವುದು ಅತ್ಯಪೂರ್ವವೇ ಆಗಿದೆ. ಈ ಖಾತೆಗಳಲ್ಲಿ ಬಡ ಜನತೆ ಸುಮಾರು ರೂ. 15800 ಕೋಟಿಗಳನ್ನು ಹಣವನ್ನು ಜಮಾ ಮಾಡಿದ್ದಾರೆ. ಈ ಖಾತೆಗಳನ್ನು ಹೊಂದಿರುವವರು ಇದಕ್ಕೆ ಪೂರಕವಾಗಿ ಡೆಬಿಟ್ ಕಾರ್ಡ್ ಪಡೆಯುತ್ತಾರೆ. ಜತೆಗೆ, 1 ಲಕ್ಷ ರೂ.ಗಳ ಅಪಘಾತ ವಿಮೆ ಸೌಲಭ್ಯ ಪಡೆದು, ಐದು ಸಾವಿರ ರೂ.ಗಳ ವರೆಗೆ ಹುಂಡಿ ಸೌಲಭ್ಯವನ್ನೂ ದೊರಕಿಸಿಕೊಳ್ಳಲಿದ್ದಾರೆ. ಇದಕ್ಕೆ ಖಾತೆಯನ್ನು ಆರು ತಿಂಗಳವರೆಗೆ ಯಶಸ್ವಿಯಾಗಿ ನಿರ್ವಹಿಸಬೇಕಾಗಿರುತ್ತದೆ. ಜನಧನ ಯೋಜನೆಯ ಯಶಸ್ಸಿನ

**(23ನೇ ಪುಟಕ್ಕೆ)**

# ರಕ್ಷಣಾ ಕ್ಷೇತ್ರದ ಸಂಬಂಧ : ಹೊಸ ದಿಸೆ

* ಅಲೋಕ ಬನ್ಸಾಲ್
ಕನ್ನಡಕ್ಕೆ : ಕೆ.ಎ. ರಾಮಕೃಷ್ಣ ಮೂರ್ತಿ



ಕಳೆದ ಒಂದು ವರ್ಷದಿಂದ ಭಾರತ ಅಂತಾರಾಷ್ಟ್ರೀಯ ಸಂಬಂಧಗಳಲ್ಲಿ ಹೊಸ ಎತ್ತರವನ್ನು ಕಂಡಿದೆ. ಈ ಸಮಯದಲ್ಲಿ ಸರಿಸುಮಾರು ಎಲ್ಲ ಕ್ಷೇತ್ರಗಳಲ್ಲೂ ಭಾರತ ಸಮಗ್ರ ಅಭಿವೃದ್ಧಿಯನ್ನು ಸಾಧಿಸಿದೆ. ಅಂತಾರಾಷ್ಟ್ರೀಯ ಸಂಬಂಧಗಳ ವಲಯದಲ್ಲಿ ಸರ್ಕಾರ ಬಹುದೊಡ್ಡ ಯಶಸ್ಸನ್ನು ಪಡೆದಿದೆ ಎಂದರೆ ತಪ್ಪಾಗುವುದಿಲ್ಲ. ಎನ್‌ಡಿಎ ಸರ್ಕಾರ ಒಂದು ವರ್ಷದ ಅವಧಿಯಲ್ಲಿ ದೇಶ ದೇಶಗಳ ಸಾಮರಸ್ಯ ವಿಷಯದಲ್ಲಿ ಗಣನೀಯವಾದ ಘನತೆಯನ್ನು ಹೆಚ್ಚಿಸಿಕೊಂಡಿದೆ ಎಂಬುದು ಅತಿಶಯೋಕ್ತಿಯಲ್ಲ. ಭದ್ರತೆ ಮತ್ತು ವಿದೇಶಿ ನೀತಿಗಳು ಪರಸ್ಪರ ಸಂಬಂಧಿಸಿರುತ್ತವೆ ಮತ್ತು ಅದರ ಪರಿಣಾಮವಾಗಿ ದೇಶದ ಭದ್ರತೆ ಅಂತಾರಾಷ್ಟ್ರೀಯ ಸಂಬಂಧಗಳಿಂದ ಗೌರವಿಸಲ್ಪಡುತ್ತದೆ. ರಕ್ಷಣಾ ತಯಾರಿಗಳು ಭದ್ರತೆಯ ಒಂದು ಪ್ರಮುಖ ಅಂಶವಾಗಿರುತ್ತದೆ. ಎನ್‌ಡಿಎ ಸರ್ಕಾರದ ಅಂತಾರಾಷ್ಟ್ರೀಯ ಸಂಬಂಧಗಳು ಭದ್ರತೆಯ ವಿಷಯಕ್ಕೆ ಸಂಬಂಧಿಸಿರುತ್ತವೆ, ವಿಶೇಷವಾಗಿ ದೇಶದ ರಕ್ಷಣೆಗೆ ಯಾವ ರೀತಿ ತಯಾರಾಗಿರಬೇಕು ಎಂಬುದು ಈ ಲೇಖನದ ಮುಖ್ಯಾಂಶವಾಗಿರುತ್ತದೆ. ಹೆಚ್ಚು ಪ್ರಧಾನವಾದುದು, ಭಾರತ ಸೈನ್ಯಕ್ಕೆ ಬೇಕಾದ ಶಸ್ತ್ರಾಸ್ತ್ರಗಳ ಅತೀ ದೊಡ್ಡ ಅಮದುದಾರ ದೇಶವಾಗಿ ರಕ್ಷಣಾ ವಲಯದಲ್ಲಿ ಸಹಕಾರ ಬಯಸುತ್ತದೆ. ಈ ಹಿಂದೆ ಯುದ್ಧ ಸಮಯದಲ್ಲಿ ಯುದ್ಧ ಸಾಮಗ್ರಿಗಳ ಸರಬರಾಜಿನಲ್ಲಿ ವಂಚನೆಗೆ ಒಳಗಾಗಿತ್ತು ಮತ್ತು ಇತರ ಸಂದರ್ಭದಲ್ಲಿ ಒತ್ತಡದಿಂದಾಗಿ ಭಾರತ ಸರ್ಕಾರ ತನ್ನ ನೀತಿಗಳನ್ನೇ ಬದಲಾಯಿಸಿಕೊಳ್ಳಬೇಕಾಯಿತು. ಇದಕ್ಕೆ ಉತ್ತಮವಾದ ಉದಾಹರಣೆ; ಪೋಕ್ರಾನ್ 2 ರ ನಂತರ ಭಾರತದ ಮೇಲೆ ಹೇರಲಾಗಿದ್ದ ನಿರ್ಬಂಧ. ಈ ನಿರ್ಬಂಧಗಳಿಂದ ಭಾರತದ ರಕ್ಷಣಾ ಪಡೆಗಳು ದುರ್ಬಲಗೊಂಡವು. ಅವು ಪ್ರತಿಕೂಲ ಪರಿಣಾಮಗಳನ್ನು ಎದುರಿಸಬೇಕಾಯಿತು. ಮೇಕ್ ಇನ್ ಇಂಡಿಯಾ'ಕ್ಕೆ ವಿದೇಶಿ ಕಂಪೆನಿಗಳನ್ನು ಅಕರ್ಷಿಸಲು ಭಾರತ ಸರ್ಕಾರ ತನ್ನ ಪ್ರತಿಷ್ಠೆಯನ್ನು ರಕ್ಷಣಾ ವಸ್ತುಗಳ ಬೃಹತ್ ಅಮದುದಾರ ಎಂಬುದಕ್ಕೆ ಉಪಯೋಗ ಮಾಡಿಕೊಂಡಿತ್ತು, ಭಾರತ ಸರ್ಕಾರ ವಿದೇಶಿ ಕಂಪೆನಿಗಳಿಗೆ ಕಡಿಮೆ ಕೂಲಿ ಮತ್ತು ದೊಡ್ಡ ಮಟ್ಟದಲ್ಲಿ ಖರೀದಿ ಅದೇಶ ನೀಡುವ ಭರವಸೆ ನೀಡಿದ್ದರಿಂದಾಗಿ, ಭಾರತದ ರಕ್ಷಣಾ ಪಡೆಗಳು ಅಗತ್ಯ ಉಪಕರಣಗಳನ್ನು ಪಡೆಯುವುದು ಖಚಿತವಾಯಿತು. ಇದರಿಂದಾಗಿ ಇದೇ ಸಮಯದಲ್ಲಿ ಉದ್ಯೋಗ ಸೃಷ್ಟಿಸುವ ಸಾಮರ್ಥ್ಯ ಮತ್ತು ಭಾರತಕ್ಕೆ ಹಲವಾರು ತಂತ್ರಜ್ಞಾನ ಬಂದಂತಾಯಿತು. ಆದರೆ ರಕ್ಷಣಾ ತಂತ್ರಜ್ಞಾನಗಳಿಗೆ ಆಗಾಗ ಆಡಳಿತಗಾರರು ಹಲವಾರು ನಿರ್ಬಂಧಗಳನ್ನು ಹೇರುತ್ತಿದ್ದರು. ಆದ್ದರಿಂದ ಭಾರತಕ್ಕೆ ತಂತ್ರಜ್ಞಾನ ಬರಮಾಡಿಕೊಳ್ಳಲು ಮತ್ತು ಅಡೆತಡೆಗಳನ್ನು ತೊಡೆದುಹಾಕಲು ಭಾರತ ಸರ್ಕಾರ ವಿದೇಶಿ ಸರ್ಕಾರಗಳೊಂದಿಗೆ ಮಾತುಕತೆ ನಡೆಸುವ ಅಗತ್ಯವಿತ್ತು. ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ನೆರೆಯ ದೇಶಗಳ ಮುಖ್ಯಸ್ಥರನ್ನು ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಆಹ್ವಾನಿಸಿತು. ಭಾರತದ ಬೃಹತ್ ರಕ್ಷಣಾ ಪಡೆಗಳು ಅವರನ್ನು ಭಯ ಪಡಿಸಲಿಲ್ಲ. ಬದಲಿಗೆ ಭಾರತೀಯ ಸೇನೆ ಅವು ಸಂಕಷ್ಟ ಕಾಲದ ಸಂದರ್ಭದಲ್ಲಿ ಪ್ರಾಕೃತಿಕ ವಿಕೋಪ ಮತ್ತು ಇತರ ಅಂತಾರಾಷ್ಟ್ರೀಯ ವಿಪತ್ತುಗಳ ಸಮಯದಲ್ಲಿ ಸಹಾಯ ಮಾಡುತ್ತವೆ ಎಂಬ ಭರವಸೆ ನೀಡುವ ಪ್ರಯತ್ನ ಮಾಡಿತು. ಅದೇ ರೀತಿಯಲ್ಲಿ ಭಾರತೀಯ ಸೇನಾ ಪಡೆ ನೇಪಾಳದಲ್ಲಿ ನಡೆದ ಭೂಕಂಪದ ಸಂಕಷ್ಟ ಸಮಯದಲ್ಲಿ ಸಹಾಯ ಮಾಡಲು ಮುಂಚೂಣಿಯಲ್ಲಿತ್ತು. ಇದೇ ರೀತಿ ಇರಾಕ್ ಮತ್ತು ಯೆಮನ್‌ಗಳಲ್ಲಿ ನಡೆದ ಘರ್ಷಣೆಯ ಪ್ರದೇಶದಿಂದ ಸಿಕ್ಕಿಹಾಕಿಕೊಂಡಿದ್ದ ಜನತೆಯನ್ನು ಭಾರತೀಯ ರಕ್ಷಣಾ ಪಡೆ ತೆರವುಗೊಳಿಸಿತು. ಈ ವರ್ಷ ಭಾರತ ಇತರ ದೇಶಗಳೊಂದಿಗೆ ತಂತ್ರಕುಶಲತೆಯ ಪಾಲುಗಾರಿಕೆಗೆ ಪ್ರವೇಶ ಪಡೆದಿದೆ. ಪ್ರಸ್ತುತವಿರುವ ತಂತ್ರಕುಶಲತೆಯ ಪಾಲುಗಾರಿಕೆಯನ್ನು ಬಲ ಪಡಿಸುವ ಮೂಲಕ ಭಾರತದ ರಕ್ಷಣಾ ಪಡೆಯನ್ನು ಕೂಡಾ ಬಲಪಡಿಸಿದೆ. ಪ್ರಧಾನ ಮಂತ್ರಿಗಳು ದಕ್ಷಿಣ ಏಶಿಯಾದಿಂದ ಹೊರಗೆ ಜಪಾನ್‌ಗೆ ಪ್ರಥಮ ಬಾರಿಗೆ ಪ್ರಯಾಣ ಮಾಡಿದ ಸಂದರ್ಭದಲ್ಲಿ ಭಾರತ – ಜಪಾನ್ ದ್ವಿಪಕ್ಷೀಯ ಸಂಬಂಧಗಳನ್ನು ಬೆಳೆಸಲು ಅದನ್ನು 'ವಿಶೇಷ ತಂತ್ರಕುಶಲತೆಯ ಜಾಗತಿಕ ಪಾಲುದಾರಿಕೆ'ಯ ಮಟ್ಟಕ್ಕೆ ಎತ್ತರಿಸಿದರು. ಸಹಕಾರ ಮತ್ತು ರಕ್ಷಣಾ ವಲಯದಲ್ಲಿ ವಿನಿಮಯ ಒಪ್ಪಂದಕ್ಕೆ ಸಹಿ ಹಾಕಿದರು. ಭಾರತ ಮತ್ತು ಜಪಾನ್ ರಕ್ಷಣಾ ಸಹಕಾರವನ್ನು ಉನ್ನತೀಕರಿಸಲು ಮತ್ತು ಬಲ ಪಡಿಸಲು ನಿರ್ಧಾರ ಕೈಗೊಂಡವು. ಯುದ್ಧ ಉಪಕರಣಗಳು, ಸಮಾಲೋಚನೆ, ಪ್ರೋತ್ಸಾಹ ಮತ್ತು ಸಹಕಾರ ನೀಡಲು ಚರ್ಚೆಯನ್ನು ತೀವ್ರಗೊಳಿಸುವುದು ಹಾಗೂ ಜಪಾನ್ ಯುಎಸ್ – 2

* ನಿರ್ದೇಶಕರು, ಭಾರತ ಪ್ರತಿಷ್ಠಾನದ ಭದ್ರತೆ ಮತ್ತು ಯುದ್ಧಕೌಶಲ್ಯ ಕೇಂದ್ರ. Email : alokbansal_nda@yahoo.co.in

ಅಂಪಿಬಿಯನ್ ವಿಮಾನವನ್ನು ಖರೀದಿಸಲು ಕಾರ್ಯನಿರ್ವಹಣಾ ಪದ್ಧತಿಗಳ ಬಗ್ಗೆ ಚರ್ಚಿಸಲಾಯಿತು. ಈ ಜಂಟಿ ಪ್ರಕಟಣೆ ಎರಡು ದೇಶಗಳ ರಕ್ಷಣಾ ಪಡೆಗಳಿಗೆ ಹೊಸ ಒತ್ತು ನೀಡಲು ಮತ್ತು ಮಾರ್ಗವನ್ನು ಸೂಚಿಸುವ ಇಂಗಿತ ವ್ಯಕ್ತಪಡಿಸಿವೆ. ರಕ್ಷಣಾ ತಂತ್ರಜ್ಞಾನ, ಉಪಕರಣಗಳು ಮತ್ತು ಶಾಂತಿ ಮತ್ತು ಸ್ಥಿರತೆಯ ಹಾಗೂ ಸಮುದ್ರ ಭದ್ರತೆಯಲ್ಲಿ ತಮ್ಮ ಆಸಕ್ತಿ ಹಂಚಿಕೊಳ್ಳುವುದನ್ನು ಪುನರಾವರ್ತನೆ–ಗೊಳಿಸಲು ಸಹಾಯಕವಾಗಿವೆ. ಬಹುಮುಖ್ಯವಾಗಿ ಜಪಾನ್ ಹಿಂದೂಸ್ತಾನ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಮತ್ತು ಇತರ ಐದು ಭಾರತೀಯ ಘಟಕಗಳ ಮೇಲೆ ಹೇರಿದ್ದ ನಿಷೇಧವನ್ನು ಹಿಂಪಡೆದಿವೆ. (1998 ರಲ್ಲಿ ಅಣ್ವಸ್ತ್ರ ಪರೀಕ್ಷೆ ಮಾಡಿದ ನಂತರ ಜಪಾನ್ ನಿಷೇಧ ಹೇರಿತ್ತು). ಎರಡೂ ದೇಶಗಳು ನಿಯಮಿತವಾಗಿ ದ್ವಿಪಕ್ಷೀಯವಾಗಿ ಸಮುದ್ರ ವ್ಯಾಯಾಮದಲ್ಲಿ ಭಾಗವಹಿಸುವುದು ಮತ್ತು ಜಪಾನ್ ಇಂಡೋ – ಮಲಬಾರ್ ಸರಣಿ ನೌಕಾ ಅಭ್ಯಾಸದಲ್ಲಿ ಪಾಲ್ಗೊಳ್ಳುವುದು. ಪ್ರಧಾನ ಮಂತ್ರಿ ಶ್ರೀ ಮೋದಿಯವರು 'ಮೇಕ್ ಇನ್ ಇಂಡಿಯಾ' ಕಾರ್ಯಕ್ರಮದಡಿಯಲ್ಲಿ ಜಪಾನ್ ಕೈಗಾರಿಕೋದ್ಯಮ ಹೂಡಿಕೆ ಮಾಡಿ ಪ್ರೋತ್ಸಾಹ ನೀಡಲು ಕರೆ ನೀಡಿದ್ದಾರೆ. ಅವರಿಗೆ ಎಲ್ಲ ಬೆಂಬಲ ನೀಡುವ ಭರವಸೆ ನೀಡಿದ್ದಾರೆ. ಆ ಪ್ರವಾಸದ ನಂತರ, ಪ್ರತಿ ವಿದೇಶ ಪ್ರವಾಸದಲ್ಲಿ ಪ್ರಧಾನ ಮಂತ್ರಿ, ವಿದೇಶಾಂಗ ವ್ಯವಹಾರಗಳ ಸಚಿವರು, ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವರು ಹಾಗೂ ವಿದೇಶಿ ಗಣ್ಯರು ಭಾರತಕ್ಕೆ ಆಗಮಿಸಿದ ಫಲವಾಗಿ ರಕ್ಷಣಾ ಕ್ಷೇತ್ರದಲ್ಲಿ ಸಹಕಾರದ ಹಲವಾರು ವ್ಯವಹಾರಗಳು ನಡೆದವು. ರಕ್ಷಣಾ ಕ್ಷೇತ್ರದ ಸಹಕಾರದಲ್ಲಿ ಆದ ಕೆಲವು ಬೃಹತ್ ಅಭಿವೃದ್ಧಿಯನ್ನು ಮುಂದೆ ಕೂಲಂಕಷವಾಗಿ ವಿವರಿಸಲಾಗಿದೆ.

### ಇಂಡೊ – ಯುಎಸ್ ರಕ್ಷಣಾ ಸಹಕಾರ

ಅಮೆರಿಕ ಜಾಗತಿಕವಾಗಿ ಸೂಪರ್ ಪವರ್. ಅದು ವಿಶ್ವದ ವೆಚ್ಚದಲ್ಲಿ ಮೂರನೇ ಒಂದು ಭಾಗವನ್ನು ದೇಶ ರಕ್ಷಣೆಗಾಗಿ ವೆಚ್ಚ ಮಾಡುತ್ತಿದೆ. ಇದು ತಾಂತ್ರಿಕವಾಗಿ ರಕ್ಷಣಾ ವಲಯದ ಸಹಕಾರದಲ್ಲಿ ಅತ್ಯಂತ ಪ್ರಮುಖ್ಯವಾದ ದೇಶವಾಗಿದೆ. ಈ ವರ್ಷ ಭಾರತ ಮತ್ತು ಅಮೆರಿಕ ರಕ್ಷಣಾ ವಲಯದ ನಿಕಟ ಸಹಕಾರಕ್ಕಾಗಿ ಹೊಸ ಚೌಕಟ್ಟಿನಲ್ಲಿ ಒಪ್ಪಂದವೊಂದಕ್ಕೆ ಸಹಿ ಹಾಕಿದೆ. ಈ ರಕ್ಷಣಾ ಚೌಕಟ್ಟು ಒಪ್ಪಂದ ಭಾರತದ ರಕ್ಷಣಾ ಸಾಮರ್ಥ್ಯವನ್ನು ವೃದ್ಧಿಸಲು ಸೂಕ್ತವಾದ ಕ್ರಮಗಳನ್ನು ಕೈಗೊಳ್ಳುವಲ್ಲಿ ಒತ್ತು ನೀಡುತ್ತದೆ. 10 ವರ್ಷಗಳ ರಕ್ಷಣಾ ಚೌಕಟ್ಟು ಒಪ್ಪಂದವನ್ನು ಅಮೆರಿಕ ಅಧ್ಯಕ್ಷ ಶ್ರೀ ಬರಾಕ್ ಒಬಾಮ ಅವರು ಜನವರಿಯಲ್ಲಿ ಭಾರತಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ನವೀಕರಣಗೊಳಿಸಿದ್ದಾರೆ. ಅಮೆರಿಕ ರಕ್ಷಣಾ ಕಾರ್ಯದರ್ಶಿ ಶ್ರೀ ಆಶ್ ಕಾರ್ಟರ್ ಅವರು ಭಾರತಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅಧಿಕೃತವಾಗಿ ಸಹಿ ಹಾಕಿದ್ದಾರೆ. ಈ ಭೇಟಿ ಸಂದರ್ಭದಲ್ಲಿ ಜೈವಿಕ ಮತ್ತು ರಾಸಾಯನಿಕ ಯುದ್ಧ ಸಮಯದಲ್ಲಿ ಸೈನಿಕರಿಗೆ ರಕ್ಷಣೆ ನೀಡುವ ಜಂಟಿ ಅಭಿವೃದ್ಧಿ ವ್ಯಾಪಾರಕ್ಕೆ ಮತ್ತು ಇನ್ನೊಂದು ಜನರೇಟರ್ ನಿರ್ಮಾಣಕ್ಕೂ ಕೂಡಾ ಸಹಿ ಮಾಡಿದ್ದಾರೆ. ಎರಡು ದೇಶಗಳ ಮಧ್ಯೆ ಭದ್ರತೆಯನ್ನು ವಿಸ್ತರಣೆ ಮಾಡುವ ಯೋಜನೆಗಳಿಗೆ ಭಾರತೀಯ ನಾಯಕರು ನಡೆಸಿದ ಮಾತುಕತೆಯಂತೆ ಅನುಮತಿ ನೀಡಿದ್ದಾರೆ. ಭಾರತೀಯ ಸೈನ್ಯಕ್ಕೆ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡುವ ದೇಶಗಳ ಪೈಕಿ ಅಮೆರಿಕ ಅಗ್ರಸ್ಥಾನದಲ್ಲಿದೆ. ಇತ್ತೀಚಿನ ದಿನಗಳಲ್ಲಿ ರಷ್ಯಾ ಕೂಡಾ ಮೇಲುಸ್ತರದ ಸ್ಥಾನದಲ್ಲಿದೆ. ಸೈನ್ಯ ತಂತ್ರಜ್ಞಾನದ ಜಂಟಿ ಅಭಿವೃದ್ಧಿ ಮತ್ತು ಉತ್ಪಾದನೆಗೆ ಪ್ರಸ್ತಾವನೆ ನೀಡಿದೆ. ಈ ಎರಡೂ ಯೋಜನೆಗಳು ಯುದ್ಧಭೂಮಿಯಲ್ಲಿ ಸೈನಿಕರ ರಕ್ಷಣೆಗಾಗಿ ಬಟ್ಟೆ ಮತ್ತು ಮುಂದಿನ ವಿದ್ಯುತ್ ಮೂಲಗಳ ಅಭಿವೃದ್ಧಿಗೆ ತಲಾ ಒಂದು ದಶಲಕ್ಷ ಡಾಲರ್ ನಿಧಿಯನ್ನು ಎರಡೂ ಕಡೆಯಿಂದ ಸರಿಸಮಾನವಾಗಿ ಹಂಚಿಕೊಳ್ಳಲು ಕೂಡಾ ತೀರ್ಮಾನಿಸಲಾಗಿದೆ. ರಾವೆನ್ ಮಿನಿ ಯುಎವಿಗಳ ಮತ್ತು ರಕ್ಷಣಾ ಸಾರಿಗೆ ವಿಮಾನಗಳಲ್ಲಿ ಸಿ–130 ಜೆ ಕಣ್ಗಾವಲು ಈ ಎರಡು ಯೋಜನೆಗಳು ರಕ್ಷಣಾ ತಂತ್ರಜ್ಞಾನ ಮತ್ತು ವ್ಯವಹಾರ ಆರಂಭವನ್ನು ಡಾ.ಕಾರ್ಟರ್ ಅವರು ರಕ್ಷಣಾ ಕಾರ್ಯದರ್ಶಿಯಾಗುವ ಮೊದಲೇ ಪ್ರಾರಂಭಿಸಿದ್ದರು. ಭಾರತ ಕೂಡಾ ಅಮೆರಿಕ ವಿಮಾನಗಳನ್ನು ತಯಾರಿಸಲು ಬಳಸುವ ತಂತ್ರಜ್ಞಾನವನ್ನು ತನ್ನ ವಿಮಾನಗಳಲ್ಲಿ ಅಳವಡಿಸಿಕೊಳ್ಳಲು ಮತ್ತು ಕಳೆದ ಮೂರು ದಶಕಗಳಲ್ಲಿ ತಾನು ಬ್ರಿಟನ್ ನಿಂದ ತರಿಸಿಕೊಂಡು ಅವುಗಳಿಗೆ ಸಾಕಷ್ಟು ವರ್ಷಗಳು ಕಳೆದಿರುವುದರಿಂದ ಅವುಗಳನ್ನು ಬದಲಾಯಿಸಲು ಬಯಸಿದೆ. ಎರಡು ಕಡೆಗಳ



ಸಹಕಾರವನ್ನು ಪರಿಶೋಧಿಸಲು ಕಾರ್ಯ ಪಡೆಯನ್ನು ರಚಿಸಿದೆ. ಈ ಸಂಬಂಧದ ಸಭೆ ಅಮೆರಿಕದಲ್ಲಿ ನಡೆಸಲಿದೆ. ಪ್ರಧಾನ ಮಂತ್ರಿ ಶ್ರೀ ಮೋದಿಯವರು ರಕ್ಷಣಾ ಉತ್ಪಾದನಾ ವಲಯ ಸೇರಿದಂತೆ ಅಮೆರಿಕ ಕಂಪೆನಿಗಳು 'ಮೇಕ್ ಇನ್ ಇಂಡಿಯಾ' ಉಪಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತವೆ ಮತ್ತು ತಂತ್ರಜ್ಞಾನವನ್ನು ಭಾರತಕ್ಕೆ ವರ್ಗಾಯಿಸಲು ಉತ್ಪಾದನಾ ಘಟಕಗಳನ್ನು ರೂಪಿಸುತ್ತವೆ. ಜಾಗತಿಕವಾಗಿ ಸರಬರಾಜು ಮಾಡುವ ಸರಣಿಯ ಸಂಪರ್ಕ ಸಾಧಿಸಲಿವೆ ಎಂಬ ಆಶಾ ಭಾವನೆ ವ್ಯಕ್ತ ಪಡಿಸಿದ್ದಾರೆ.

### ಇಂಡೊ – ಫ್ರೆಂಚ್ ರಕ್ಷಣಾ ಸಹಕಾರ ಮತ್ತು ರಾಫೇಲ್ ವ್ಯವಹಾರ

ರಕ್ಷಣಾ ವ್ಯವಸ್ಥೆಯ ದೃಷ್ಟಿಯಿಂದ ಪ್ರಧಾನ ಮಂತ್ರಿಗಳು ಫ್ರಾನ್ಸ್ ದೇಶಕ್ಕೆ ನೀಡಿದ ಭೇಟಿ ಅತ್ಯಂತ ಮಹತ್ವದ ಸಂಗತಿ. ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಫ್ರೆಂಚ್ ಅಧ್ಯಕ್ಷ ಪ್ರಾಂಕೋಯಿಸ್ ಹಾಲೆಂಡ್ ಅವರೊಂದಿಗೆ ನಡೆಸಿದ ಸುದೀರ್ಘ ಮಾತುಕತೆಯ ನಂತರ ಮಹಾರಾಷ್ಟ್ರದ ಜೈಟ್‌ಪುರ್‌ನಲ್ಲಿ ನಿಂತುಹೋಗಿದ್ದ ಅಣು ಯೋಜನೆ ಸೇರಿದಂತೆ ರಕ್ಷಣಾ ಪಡೆ ಮತ್ತು ಭದ್ರತೆಯ ಬಗ್ಗೆ ಭಾರತ ಮತ್ತು ಫ್ರಾನ್ಸ್ ಹಲವಾರು ಒಪ್ಪಂದಗಳಿಗೆ ಸಹಿ ಮಾಡಿವೆ. ಜೈಟ್‌ಪುರ್ ಯೋಜನೆ ಆರ್ಥಿಕ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸುವ, ಸ್ಥಳೀಯರಿಗೆ ಹೆಚ್ಚಿನ ಆದ್ಯತೆ ನೀಡುವ ಮತ್ತು ವೆಚ್ಚ ಕಡಿಮೆ ಮಾಡುವ ಉದ್ದೇಶದಿಂದ ಲಾರ್ಸನ್ ಅಂಡ್ ಟುಬ್ರೊ ಮತ್ತು ಎಆರ್‌ಇವಿಎ ನಡುವೆ ಒಪ್ಪಂದವೊಂದಕ್ಕೆ ಸಹಿ ಮಾಡಿದ್ದಾರೆ. ಭಾರತದ ಅಣು ಇಂಧನ ಕೈಗಾರಿಕೆಯನ್ನು ದೇಶೀಯವಾಗಿ ಅಭಿವೃದ್ಧಿ ಪಡಿಸಲು ಮತ್ತು ತಂತ್ರಜ್ಞಾನವನ್ನು ವರ್ಗಾವಣೆಗೊಳಿಸಲು ಅನುವಾಗುವ ಒಪ್ಪಂದಕ್ಕೆ ಕೂಡಾ ಸಹಿ ಹಾಕಿದ್ದಾರೆ. ಅಣು ಘಟಕಗಳಲ್ಲಿ ತಾಂತ್ರಿಕ ವಿಷಯಗಳಲ್ಲಿ ಸ್ಪಷ್ಟತೆ ಮೂಡಿಸುವ ಉದ್ದೇಶದಿಂದ ಇಂಜಿನಿಯರಿಂಗ್ ಒಪ್ಪಂದಕ್ಕೆ ಪೂರ್ವಾಗಿ



ಎನ್‌ಪಿಸಿಐಎಲ್ ಮತ್ತು ಅರೇವಾ ಸಹಿ ಮಾಡಿವೆ, (ಅರೇವಾ, ಅಲಷ್ಟೋಮ್ ಮತ್ತು ಎನ್‌ಪಿಸಿಐಎಲ್) ಇವರು ದರಗಳನ್ನು ನಿಗದಿಪಡಿಸಿಕೊಳ್ಳಲು ಮತ್ತು ಯೋಜನಾ ವೆಚ್ಚದಲ್ಲಿ ಸೇರಿರುವ ಪ್ರಮಾದಗಳನ್ನು ಸರಿಪಡಿಸಿಕೊಳ್ಳುವ ಅವಕಾಶಗಳಿವೆ. ಈ ಒಪ್ಪಂದ ನಾಗರಿಕ ಅಣುಶಕ್ತಿಗೆ ಸಂಬಂಧಿಸಿದೆ. ಆದರೂ ಇದು ಬಹುಮುಖ್ಯವಾಗಿ ರಕ್ಷಣಾ ವಲಯಕ್ಕೆ ಉಪಯೋಗವಾಗಲಿದೆ. ಮತ್ತು ಪ್ರಧಾನಮಂತ್ರಿಯವರ 'ಮೇಕ್ ಇನ್ ಇಂಡಿಯಾ' ಪರಿಕಲ್ಪನೆಯ ಅಭಿವೃದ್ಧಿ ಪಡಿಸಲು ಸಹಕಾರಿಯಾಗಲಿದೆ. ಎರಡೂ ದೇಶಗಳ ನಾಯಕರು ಅಂತರಿಕ್ಷ ಕ್ಷೇತ್ರದಲ್ಲಿನ ಸಹಕಾರದ ಬಗ್ಗೆ ವ್ಯಾಪಕವಾದ ಮಾತುಕತೆ ನಡೆಸಿ, 2011 ರಲ್ಲಿ ಭಾರತದಿಂದ ಪಿಎಸ್‌ಎಲ್‌ವಿ ಅಂತರಿಕ್ಷಕ್ಕೆ ಹಾರಿಸಿದ್ದು, ಇಂಡೋ–ಫ್ರೆಂಚ್ ಮೇಘಾ ಟ್ರೋಪಿಕ್ಸ್ ಸ್ಯಾಟಲೈಟ್‌ನಿಂದ ಇನ್ನೂ ಎರಡೂ ವರ್ಷಗಳ ಕಾಲ ಮಾಹಿತಿ ಪಡೆದುಕೊಳ್ಳಲು ವಿಸ್ತರಿಸಿ ಭಾರತೀಯ ಅಂತರಿಕ್ಷ ಸಂಶೋಧನಾ ಸಂಸ್ಥೆ (ಐಎಸ್‌ಆರ್‌ಓ) ಮತ್ತು ಫ್ರೆಂಚ್ ನ್ಯಾಷನಲ್ ಸೆಂಟರ್ ಫಾರ್ ಸ್ಪೇಸ್ ಸ್ಟಡೀಸ್ (ಸಿಎನ್‌ಇಎಸ್) ನಡುವೆ ಒಪ್ಪಂದಕ್ಕೆ ಸಹಿ ಮಾಡಿವೆ. ಉಪಗ್ರಹ ರಿಮೋಟ್ ಸೆನ್ಸಿಂಗ್, ಉಪಗ್ರಹ ಸಂಪರ್ಕ ಮತ್ತು ಉಪಗ್ರಹ ಹವಾಮಾನ ಹಾಗೂ ಮತ್ತಿತರ ಕ್ಷೇತ್ರಗಳಲ್ಲಿ ಸಹಕಾರ ಪಡೆದುಕೊಳ್ಳಲು ಎರಡು ಅಂತರಿಕ್ಷ ಸಂಸ್ಥೆಗಳು ಬಹುಮುಖ್ಯವಾದ ಒಪ್ಪಂದಕ್ಕೆ ಸಹಿ ಹಾಕಿವೆ. ಸರ್ಕಾರ ಮತ್ತು ಸರ್ಕಾರಗಳ ನಡುವೆ ನಡೆದ ವ್ಯವಹಾರದಲ್ಲಿ ಆದಷ್ಟು ಶೀಘ್ರವಾಗಿ ಫ್ರಾನ್ಸ್ 36 ರಫಾಲ್ ಫೈಟರ್ ವಿಮಾನಗಳನ್ನು ಹಾರುವ ಸ್ಥಿತಿಯಲ್ಲಿ ಸರಬರಾಜು ಮಾಡಲು ಒಪ್ಪಿದೆ. ಇದೊಂದು ಮಹತ್ವದ ರಕ್ಷಣಾ ವ್ಯವಹಾರದ ಒಪ್ಪಂದದ ಸಹಿ ಮಾಡಿವೆ. ಭಾರತೀಯ ವಾಯು ಪಡೆ ತುಂಬಾ ಹಿಂದೆ ರಫಾಲ್ ಅನ್ನು ತನಗೆ ಅಗತ್ಯವಾದ 126 ಮಲ್ಟಿರೋಲ್ ವಿಮಾನಗಳಿಗಾಗಿ ಆಯ್ಕೆ ಮಾಡಿತ್ತು. ಪ್ರಾರಂಭದಲ್ಲಿ 18 ವಿಮಾನಗಳನ್ನು ಅಮದು ಮಾಡಿಕೊಂಡನಂತರ ಹೆಚ್ಚಿನ ಮಟ್ಟಿಗೆ ಇವುಗಳನ್ನು ಎಚ್‌ಎಎಲ್‌ನಲ್ಲಿ ಉತ್ಪಾದಿಸಲಾಗಿತ್ತು. ಆದರೆ ಈ ವ್ಯವಹಾರ ಗೊಂದಲಮಯವಾದ ಕಾರಣ ಫ್ರೆಂಚ್ ಕಂಪೆನಿ ಅತೃಪ್ತಗೊಂಡಿತು. ಮತ್ತು ಎಚ್‌ಎಎಲ್‌ನಿಂದ ಹೊರಬರುವ ವಿಮಾನಗಳಿಗೆ ಭರವಸೆ ನೀಡಲು ಇಷ್ಟವಿರಲಿಲ್ಲ. ಇದು ವ್ಯವಹಾರವನ್ನು ಕಾರ್ಯರೂಪಕ್ಕೆ ತರುವಲ್ಲಿ ತಡೆಯೊಡ್ಡಿತು. ಇದು ಭಾರತೀಯ ವಾಯುಪಡೆಯಲ್ಲಿ ಬೇಸರಕ್ಕೆ ಕಾರಣವಾಗಿತ್ತು. 36 ವಿಮಾನಗಳ ಸರಬರಾಜು ವ್ಯವಹಾರದಲ್ಲಿ ಮೊದಲಿನ ಆಕಾರದ ವಿಮಾನಗಳನ್ನು ಪರೀಕ್ಷಿಸಿ ಭಾರತೀಯ ವಾಯು ಪಡೆ ಒಪ್ಪಿಗೆ ನೀಡಿತು. ಮತ್ತು ದೀರ್ಘ ಕಾಲದವರೆಗೆ ಅವುಗಳ ನಿರ್ವಹಣೆಯ ಜವಾಬ್ದಾರಿಯನ್ನು ಫ್ರಾನ್ಸ್‌ಗೆ ನೀಡಿತು. ಭಾರತೀಯ ವಾಯು ಪಡೆಯ ನಿರ್ವಹಣೆಯ ಅಗತ್ಯಕ್ಕೆ ತಕ್ಕಂತೆ ಕಾಲಮಿತಿಯನ್ನು ಹಾಕಿದೆ. ಬಾಕಿ ಮೊತ್ತಕ್ಕೆ ಸರ್ಕಾರ ಯಾವುದೇ ನಿರ್ಧಾರ ತೆಗೆದುಕೊಳ್ಳಬಹುದಾಗಿದೆ ಮತ್ತು ಮೇಕ್ ಇನ್ ಇಂಡಿಯಾದ ನಿಬಂಧನಾ ಪೂರ್ವದ ಒಪ್ಪಂದದಂತೆ ಜಾಗತಿಕವಾಗಿ ಮಾರಾಟ ಮಾಡಬಹುದಾಗಿದೆ.

### ಇಂಡೊ–ರಷ್ಯಾ ರಕ್ಷಣಾ ಸಹಕಾರ

ಯುಎಸ್‌ಎಸ್‌ಆರ್ ಕಳೆದ ಐದು ದಶಕಗಳಲ್ಲಿ ಮತ್ತು ವಿಭಜನೆಯ ನಂತರ, ರಷ್ಯಾ ಭಾರತಕ್ಕೆ ರಕ್ಷಣಾ ಪಡೆಗಳಿಗೆ ಹಾರ್ಡ್‌ವೇರ್ ಸರಬರಾಜು ಮಾಡುವಲ್ಲಿ ಮುಖ್ಯ ಭಾಗವಾಗಿತ್ತು. ಇದರ ಪರಿಣಾಮವಾಗಿ ಭಾರತಕ್ಕೆ ರಷ್ಯಾ ರಕ್ಷಣಾ ಸಹಕಾರದಲ್ಲಿ ಸದಾ ತುಂಬಾ ಮಹತ್ವ ಪಡೆದುಕೊಂಡಿತ್ತು, ಹಲವಾರು ಪರೀಕ್ಷೆಗಳನ್ನು ಮತ್ತು ತೀವ್ರತರವಾದ ಯಾತನೆಯನ್ನು ತಡೆಕೊಂಡಿತ್ತು. ಪ್ರಧಾನ ಮಂತ್ರಿ ಶ್ರೀ ಮೋದಿ ಅಧಿಕಾರ ವಹಿಸಿಕೊಂಡ ನಂತರ ಪ್ರಪ್ರಥಮವಾಗಿ ಅಧ್ಯಕ್ಷ ಶ್ರೀ ಪುಟಿನ್ ಅವರು 2014 ರ ಡಿಸೆಂಬರ್ 11 ರಂದು ನವದೆಹಲಿಗೆ ವಾರ್ಷಿಕ ಶೃಂಗಸಭೆ ಭೇಟಿ ನೀಡಿದ್ದರು. ಈ ಶೃಂಗಸಭೆಯಲ್ಲಿ ಪ್ರಧಾನ ಮಂತ್ರಿ ರಷ್ಯಾ ನಿರ್ಮಿತ ವಿಮಾನವಾಹಕ ನೌಕೆ ಐಎನ್‌ಎಸ್ ವಿಕ್ರಮಾದಿತ್ಯದ ಬಗ್ಗೆ ಉದಾಹರಣೆ ನೀಡಿ ಬೆಳೆಯುತ್ತಿರುವ ಸೈನಿಕ ಸಹಕಾರವನ್ನು ತಿಳಿಸಿದರು. 'ಭಾರತದ ಆಯ್ಕೆಗಳು ಹೆಚ್ಚಾಗಿವೆ, ರಷ್ಯಾ ಅತೀ ದೊಡ್ಡ ರಕ್ಷಣಾ ಪಾಲುದಾರರು' ಎಂದು ಬಣ್ಣಿಸಿ ದೀರ್ಘ ಕಾಲದ ರಕ್ಷಣಾ ಸಂಬಂಧಗಳನ್ನು ಮುಂದುವರಿಸುವ ಸೂಚನೆಯನ್ನು ತಮ್ಮ ಅಭಿಪ್ರಾಯದಲ್ಲಿ ವ್ಯಕ್ತ ಪಡಿಸಿದರು. 'ಮೇಕ್ ಇನ್ ಇಂಡಿಯಾ' ಕಾರ್ಯಕ್ರಮಕ್ಕೆ ಅನುಗುಣವಾಗಿ ಭಾರತಕ್ಕೆ ಸರಿಹೊಂದುವ ರಷ್ಯಾ ತಂತ್ರಜ್ಞಾನವನ್ನು ಬಳಸಿಕೊಂಡು ಭಾರತದಲ್ಲಿ ಮಿಲ್ ಮಿ – 17 ಮತ್ತು ಕಾಮೋವ್ ಕಾ – 226 ಹೆಲಿಕಾಪ್ಟರ್‌ಗಳನ್ನು ಜಂಟಿಯಾಗಿ ಉತ್ಪಾದಿಸಲು ಮತ್ತು ದೀರ್ಘಕಾಲದಿಂದ ಬಾಕಿಯಿದ್ದ ಬೃಹತ್ ಯೋಜನೆಗಳಾದ ಜಂಟಿ ಅಭಿವೃದ್ಧಿ ಮತ್ತು ಲಘು ಸಾರಿಗೆ ವಿಮಾನಗಳ ಉತ್ಪಾದನೆಯನ್ನು ಶೀಘ್ರವಾಗಿ ಮುಂದುವರಿಸಲು ಎರಡು ಕಡೆಯ ಒಪ್ಪಿಗೆ ಪಡೆದರು. ಅದೇ ರೀತಿ ಸುಖೋಯ್ ಮತ್ತು ಎಚ್‌ಎಎಲ್‌ನ ಐದನೇ ತಲೆಮಾರಿನ ಜಂಟಿ ಫೈಟರ್ ಪ್ಲಾಟ್‌ಫಾರಂ ಅನ್ನು ಜಂಟಿಯಾಗಿ ಅಭಿವೃದ್ಧಿ ಪಡಿಸಲು ಮಾತುಕತೆ ನಡೆಯಿತು. ಸದ್ಯದಲ್ಲಿಯೇ ಅಂತಿಮ ವಿನ್ಯಾಸ ಗುತ್ತಿಗೆ ಸಹಿ ಹಾಕುವ ನಿರೀಕ್ಷೆಯಿದೆ. ಈಗಾಗಲೇ ಸೇವೆಯಲ್ಲಿರುವ ಐಎನ್‌ಎಸ್ ಚಕ್ರ ನಂತರ ಭಾರತಕ್ಕೆ ಇನ್ನೊಂದು ಅಣುಶಕ್ತಿಯ ಅಕುಲ್ ಕ್ಲಾಸ್ ಜಲಾಂತರ್ಗಾಮಿಯನ್ನು ಗುತ್ತಿಗೆ ನೀಡಲು ರಷ್ಯಾ ಒಪ್ಪಿಕೊಂಡಿದೆ. ಇತ್ತೀಚಿಗಿನ ವರದಿಯಂತೆ ರಕ್ಷಣಾ ಕ್ಷೇತ್ರದಲ್ಲಿ ಪಾಕಿಸ್ತಾನ ರಷ್ಯಾ ಸಹಭಾಗಿತ್ವದಲ್ಲಿ, ವಿಶೇಷವಾಗಿ ರಷ್ಯಾನ್ ಮಿ 35 ಅಟ್ಯಾಕ್ ಹೆಲಿಕಾಪ್ಟರ್ ಅನ್ನು ಪಾಕಿಸ್ತಾನಕ್ಕೆ ನೀಡುವ ಬಗ್ಗೆ ಭಾರತ ಅಪಾಯಕಾರಿ ಶಂಕೆ ವ್ಯಕ್ತ ಪಡಿಸಿದೆ. ಆದರೆ ಇಂತಹ ಅಪಾಯಕಾರಿ ಸೂಚನೆಯನ್ನು ಭಾರತದಲ್ಲಿರುವ ರಷ್ಯಾ ರಾಯಭಾರಿ ಶಮನಗೊಳಿಸಿದ್ದಾರೆ. ಅವರು ಮಾತನಾಡುತ್ತಾ ಭಾರತದ ಭದ್ರತೆಗೆ ಅಪಾಯಕರವಾದ ಯಾವುದನ್ನೂ ರಷ್ಯಾ ಮಾಡುವುದಿಲ್ಲ ಎಂದು ತಿಳಿಸಿದ್ದಾರೆ. ನಂತರ ಶ್ರೀ ಪುಟಿನ್ ಅವರೇ ಪಿಟಿಐ ಸುದ್ದಿ ಸಂಸ್ಥೆ ನೀಡಿದ ಸಂದರ್ಶನದಲ್ಲಿ 'ರಷ್ಯಾ – ಪಾಕಿಸ್ತಾನದ ಸಂಬಂಧ ಭಾರತದ ದೀರ್ಘಕಾಲಿಕ ಹಿತಾಸಕ್ತಿಯಲ್ಲೇ ಇದೆ.' ಎಂದು ಹೇಳಿದ್ದಾರೆ.

### ಇಂಡೊ – ಆಸ್ಟ್ರೇಲಿಯಾ ರಕ್ಷಣಾ ಸಹಕಾರ

ಇತರ ಸವಾಲುಗಳೊಂದಿಗೆ ರಕ್ಷಣಾ ಸಹೋದ್ಯಮದಲ್ಲಿ ಪ್ರಾದೇಶಿಕ ಶಾಂತಿ ಸ್ಥಾಪನೆ ಮುಂದುವರಿಸಲು ಮತ್ತು ಭಯೋತ್ಪಾದನೆ ವಿರುದ್ಧ ಹೋರಾಡಲು ಈ ವರ್ಷ ಭಾರತ ಆಸ್ಟ್ರೇಲಿಯಾ ಕೂಡಾ ದ್ವಿಪಕ್ಷೀಯ ಚೌಕಟ್ಟಿನಲ್ಲಿ

ಭದ್ರತಾ ಸಹಕಾರವನ್ನು ಸ್ಥಾಪಿಸಿವೆ. ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಮತ್ತು ಆಸ್ಟ್ರೇಲಿಯಾ ಪ್ರಧಾನಿ ಶ್ರೀ ಟೋನಿ ಅಬೋಟ್ ಮಾತುಕತೆ ನಡೆಸಿ ಭದ್ರತಾ ಸಹಕಾರವನ್ನು ಚೌಕಟ್ಟಿನಲ್ಲಿ ಆಳವಾದ, ವಿಸ್ತಾರವಾದ ಭದ್ರತೆ ಮತ್ತು ಎರಡು ದೇಶಗಳ ಮಧ್ಯೆ ರಕ್ಷಣಾ ಕಾರ್ಯಗಳಲ್ಲಿ ತೊಡಗಲು ಒಪ್ಪಿದರು. ಪರಸ್ಪರ ಆಸಕ್ತಿಯಲ್ಲಿ ಆಸ್ಟ್ರೇಲಿಯ ಮತ್ತು ಭಾರತ ಸಹಕಾರ ಮತ್ತು ಸಲಹೆಯನ್ನು ತೀವ್ರಗೊಳಿಸಲು ಚೌಕಟ್ಟನ್ನು ರೂಪಿಸಿವೆ. ಇದರ ಮುಖ್ಯ ಉದ್ದೇಶ ಕಡಲ ಭದ್ರತೆಯನ್ನು ಕಾಪಾಡುವ ಸಹಕಾರವಾಗಿದೆ. ಪ್ರಧಾನ ಮಂತ್ರಿಗಳು ತಮ್ಮ ಆಸ್ಟ್ರೇಲಿಯ ಪಾರ್ಲಿಮೆಂಟ್‌ನಲ್ಲಿ ಮಾಡಿದ ಭಾಷಣದಲ್ಲಿ ಪುನರಾವರ್ತಿಸಿದ್ದಾರೆ, ಅವರು ಮಾತನಾಡುತ್ತಾ ಕಡಲ ಭದ್ರತೆಯ ನಿರ್ವಹಣೆಯಲ್ಲಿ ಹೆಚ್ಚು ಸಹಭಾಗಿತ್ವ ಹೊಂದಬೇಕು. ಸಮುದ್ರಗಳ ವಿಷಯದಲ್ಲಿ ನಾವು ಒಟ್ಟಾಗಿ ಸೇರಿ ಕೆಲಸ ಮಾಡಬೇಕಾಗಿದೆ. ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಕೂಡಾ ಸಹಕಾರ ನೀಡಬೇಕು. ಅಂತಾರಾಷ್ಟ್ರೀಯ ಕಾನೂನು ಮತ್ತು ಜಾಗತೀಕ ನಿಯಮಗಳನ್ನು ವಿಶ್ವವ್ಯಾಪ್ತಿಯಾಗಿ ಗೌರವಿಸಲು ನಾವು ಕೆಲಸ ಮಾಡಬೇಕಾಗಿದೆ ಎಂದರು.

**ರಕ್ಷಣಾ ಸಹಕಾರ – ಇತರ ದೇಶಗಳೊಂದಿಗೆ**

ಈ ವರ್ಷ ಭಾರತ ಮತ್ತು ದಕ್ಷಿಣ ಕೊರಿಯಾ ರಕ್ಷಣಾ ಸಹಕಾರದ ಮುಂದಿನ ಹೆಜ್ಜೆಯಿರಿಸಲು ಇತ್ತೀಚೆಗೆ ಒಪ್ಪಂದ ಮಾಡಿಕೊಂಡಿದೆ. ಪ್ರಧಾನಮಂತ್ರಿಯವರು ದಕ್ಷಿಣ ಕೊರಿಯಾಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ನೀಡಿದ ಜಂಟಿ ಹೇಳಿಕೆಯಲ್ಲಿ ಹತ್ತರಲ್ಲಿ ಏಳು ಅಂಶಗಳು ರಕ್ಷಣಾ ಸಹಕಾರಕ್ಕೆ ಸಂಬಂಧಿಸಿವೆ. ಇವು ಮುಖ್ಯವಾಗಿ ದಕ್ಷಿಣ ಕೊರಿಯಾ ಮತ್ತು ಭಾರತದ ಹಡಗುಕಟ್ಟೆಗಳ ಮತ್ತು ಅವುಗಳ ನೌಕೆಗಳ ವಿನಿಮಯ. ಭಾರತೀಯ ನೌಕದಳದ ಯುದ್ಧ ನೌಕೆಗಳನ್ನು ಮೊದಲು ದಕ್ಷಿಣ ಕೊರಿಯಾದ ಹಡಗುಕಟ್ಟೆಗಳಲ್ಲಿ ನಿರ್ಮಾಣ ಮಾಡುವುದು ಮತ್ತು ಅನಂತರ ಅವರ ಸಹಕಾರದೊಂದಿಗೆ ಭಾರತದ ಹಡಗುಕಟ್ಟೆಗಳಲ್ಲಿ ಅವುಗಳನ್ನು ನಿರ್ಮಾಣ ಮಾಡುವುದು. ಅದೇ ರೀತಿ ಈ ವರ್ಷ ಕೆನಡಾ ಮತ್ತು ಭಾರತೀಯ ಕಂಪೆನಿಗಳ ಮಧ್ಯೆ ಅಣುಶಕ್ತಿ, ಅಂತರಿಕ್ಷ ವಾಯುಯಾನ ಮತ್ತು ರಕ್ಷಣಾ ಪಡೆಗಳ ಬಗ್ಗೆ ಹಲವಾರು ವಾಣಿಜ್ಯ ಒಪ್ಪಂದಗಳನ್ನು ಘೋಷಣೆ ಮಾಡಿವೆ. ಒಂದು ವಾಣಿಜ್ಯ ಒಪ್ಪಂದದಲ್ಲಿ ಸಸ್ಕ್ಯಚುವಾನ್ ಮೂಲದ ಕ್ಯಾಮೆಕೊ ಕಂಪೆನಿ ಭಾರತಕ್ಕೆ ಸುಮಾರು ಏಳು ದಶಲಕ್ಷ ಪೌಂಡ್ ಯುರೇನಿಯಂ ಅನ್ನು ಮುಂದಿನ ಐದು ವರ್ಷಗಳ ಕಾಲ ಸರಬರಾಜು ಮಾಡಲಿದೆ. ಈ ವ್ಯವಹಾರ ಸಾಧ್ಯವಾಗಿದ್ದು ಭಾರತ ಸರ್ಕಾರದ ಕರಾರಿನಂತೆ ಕೆನಡಾ – ಭಾರತ ಅಣುಶಕ್ತಿ ಸಹಕಾರ ಒಪ್ಪಂದದಿಂದಾಗಿ. ಅದೇ ರೀತಿ ಮಾರಿಷಿಯಸ್ ದೇಶದೊಂದಿಗೆ ರಕ್ಷಣಾ ಸಹಕಾರ, ಈ ದೇಶ ಸಂಪ್ರಾದಾಯಿಕವಾಗಿ ಭಾರತದ ರಕ್ಷಣಾ ಪಡೆಯೊಂದಿಗೆ ಹತ್ತಿರದ ಸಂಬಂಧವಿದೆ, ಇದನ್ನು ಈ ವರ್ಷ ವಿಸ್ತರಿಸಲಾಗಿದೆ. ವಿದೇಶಾಂಗ ಸಚಿವೆ ಶ್ರೀಮತಿ ಸುಷ್ಮಾ ಸ್ವರಾಜ್ ಅವರು ಮೊದಲ ಬಾರಿಗೆ 2014 ರ ನವೆಂಬರ್ 2 ರಂದು ಈ ದ್ವೀಪಕ್ಕೆ ಭೇಟಿ ಪ್ರವಾಸಿ ದಿನ ಆಚರಣೆಯಲ್ಲಿ ಪಾಲ್ಗೊಂಡಿದ್ದರು.

ಭಾರತೀಯ ನೌಕಾದಳ ಮತ್ತು ಮಾರಿಷಿಯಸ್ ಕೋಸ್ಟ್ ಗಾರ್ಡ್‌ಗಳು ಭಾರತೀಯ ಸಮುದ್ರ ಪ್ರದೇಶದ ಯುದ್ಧ ಕೌಶಲಯುತವಾದ ಮುಖ್ಯವಾದ ಸ್ಥಳಗಳ ರಕ್ಷಣೆ ಮತ್ತು ಭದ್ರತೆ ಅವರ ಕಾರ್ಯಸೂಚಿಯಲ್ಲಿ ಮೊದಲ ಸ್ಥಾನ ಪಡೆದಿದ್ದವು. ಭಾರತದ ಮೂರು ಬೃಹತ್ ಯುದ್ಧನೌಕೆಗಳು ಮಾರಿಷಿಯಸ್ ನೀರಿನಲ್ಲಿ ಹಡಗುಕಟ್ಟೆಯಲ್ಲಿವೆ. ಈ ಆಚರಣೆಯಲ್ಲಿ ಭಾರತೀಯ ನೌಕಾ ಪಡೆ ಮತ್ತು ಮಾರಿಷಿಯಸ್ ಕೋಸ್ಟ್ ಗಾರ್ಡ್‌ಗೆ ಸಹಕಾರಕ್ಕೆ ಹೆಚ್ಚಿನ ಬಲ ನೀಡಲಾಯಿತು. ಭಾರತ ಮತ್ತೊಂದು ನಿಕಟ ರಕ್ಷಣಾ ಸಹಕಾರ ಹೊಂದಿರುವುದು ಇಸ್ರೇಲ್‌ನೊಂದಿಗೆ. ಈ ಎರಡು ದೇಶಗಳು ಪ್ರತಿಭಯೋತ್ಪಾದನೆ ಕ್ಷೇತ್ರದಲ್ಲಿ ಜೊತೆಗೂಡಿ ಕೆಲಸ ಮಾಡುತ್ತಿವೆ ಮತ್ತು ಕ್ಷಿಪಣಿಗಳು ಮತ್ತು ಮಾನವರಹಿತ ವಾಯು ವಾಹನಗಳ ಸೇರಿದಂತೆ ಇಸ್ರೇಲ್ ಭಾರತಕ್ಕೆ ಆಧುನಿಕ ರಕ್ಷಣಾ ಹಾರ್ಡ್‌ವೇರ್‌ಗಳನ್ನು ಸರಬರಾಜು ಮಾಡುವುದರಲ್ಲಿ ಮುಂಚೂಣಿಯಲ್ಲಿವೆ. ಈ ಸಹಭಾಗಿತ್ವವನ್ನು ಈ ವರ್ಷ ವಿಸ್ತರಿಸಲಾಗಿದೆ.



**ಮುಕ್ತಾಯ**

ವಿಶ್ವದ ವಿವಿಧ ದೇಶಗಳೊಂದಿಗೆ ಭಾರತದ ರಕ್ಷಣಾ ಸಹಕಾರ ಗಣನೀಯವಾಗಿ ವೃದ್ಧಿಸಿದೆ. ಈ ಕಾರಣದಿಂದಾಗಿ ಭಾರತವನ್ನು ಅಂತಾರಾಷ್ಟ್ರೀಯ ಸಮುದಾಯ ಉಜ್ವಲ ಭವಿಷ್ಯ ಹೊಂದಿರುವ ರಾಷ್ಟವನ್ನಾಗಿ ಮನದಟ್ಟು ಮಾಡಿಕೊಂಡಿವೆ. ಭಾರತೀಯ ರಕ್ಷಣಾ ಪಡೆಗಳ ಬಗ್ಗೆ ವಿಶ್ವಾಸ ಬೆಳೆಯುತ್ತಿದೆ. ತಮ್ಮ ಭದ್ರತೆಯನ್ನು ಬಲಪಡಿಸುಕೊಳ್ಳುವ ಸಲುವಾಗಿ ಹೆಚ್ಚು ಹೆಚ್ಚು ರಾಷ್ಟ್ರಗಳ ಜನಪ್ರಿಯವಾಗಿರುವ ಭಾರತದೊಂದಿಗೆ ಕೈಜೋಡಿಸಲು ಮುಂದಾಗಿದ್ದಾರೆ. ಮುಂದಿನ ದಿನಗಳಲ್ಲಿ ಈ ಸಹಕಾರ ಇನ್ನು ವೃದ್ಧಿಸಲಿದೆ ಮತ್ತು 'ಮೇಕ್ ಇನ್ ಇಂಡಿಯಾ' ಕಾರ್ಯಕ್ರಮಕ್ಕೆ ಆಧಾರಶಿಲೆಯಾಗಲಿದೆ. ಇದು ಭಾರತ ಪರಿವರ್ತನೆಗೆ ಅವಕಾಶವಾಗಲಿದೆ. ❑


# ಯೋಜನಾ

## ಆಗಸ್ಟ್ 2015 ಸಂಚಿಕೆ ವಿಷಯ

# ಎಲ್ಲರನ್ನೂ ಒಳಗೊಂಡ ಬೆಳವಣಿಗೆ ಮತ್ತು ಸಾಮಾಜಿಕ ಬದಲಾವಣೆ

# ಆರ್ಥಿಕಾಭಿವೃದ್ಧಿಗೆ ರಾಜತಾಂತ್ರಿಕತೆ

* ಡಾ. ರಾಮ್ ಉಪೇಂದ್ರ ದಾಸ್
ಕನ್ನಡಕ್ಕೆ : ನಾಗರಾಜು ವಿ.



ವಿಶ್ವದ ಆರ್ಥಿಕ ನಕಾಶೆಯಲ್ಲಿ ಭಾರತ ನೂತನ ದಾಖಲೆಯನ್ನು ನಿರ್ಮಿಸುತ್ತಿದ್ದು ಮುಂಬರುವ ದಿನಗಳಲ್ಲಿ ಇನ್ನೂ ಎತ್ತರಕ್ಕೆ ಏರುವ ಸಾಧ್ಯಗಳು ಹೆಚ್ಚಾಗಿವೆ. ಈ ಬೆಳವಣಿಗೆಯನ್ನು ಅಂತಾರಾಷ್ಟ್ರೀಯ ಆರ್ಥಿಕ ಕ್ಷೇತ್ರದಲ್ಲಾಗುತ್ತಿರುವ ಹಲವು ವಿಧಗಳ ಸಂಕೀರ್ಣ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇವು ಭಾರತ ಅನುಸರಿಸಬೇಕಾಗಿರುವ ರಾಜಕೀಯ ತಂತ್ರಗಾರಿಕೆ ಮತ್ತು ಆರ್ಥಿಕ ರಾಜತಾಂತ್ರಿಕತೆಯ ಮೇಲೆ ಗುರುತರವಾದ ಪರಿಣಾಮಗಳನ್ನು ಬೀರುತ್ತವೆ.

### ಹೊಸ ಸನ್ನಿವೇಶ

ಸ್ವತಂತ್ರ ರಾಷ್ಟ್ರಗಳ ನಡುವೆ ಸಾರ್ವಭೌಮ ಸರ್ಕಾರವೊಂದು ಅಧಿಕೃತವಾಗಿ ಸುಮಧುರವಾದ ನೆರೆಹೊರೆ ಸಂಬಂಧಗಳನ್ನು ಹೇಗೆ ನಿರ್ವಹಿಸುತ್ತದೆ ಎಂಬುದರ ಮೇಲೆ ರಾಜತಾಂತ್ರಿಕತೆಯ ಯಶಸ್ಸು ನಿಂತಿದೆ. ಆದರೂ ಇತ್ತೀಚಿನ ಕೆಲವು ವರ್ಷಗಳಿಂದ ಇದರಲ್ಲಿ ಹೊಸ ಆಯಾಮಗಳು ಸೇರಿಕೊಂಡಿವೆ. ಮೊದಲನೆಯದಾಗಿ ಸರ್ಕಾರ-ಸರ್ಕಾರಗಳ ಅಧಿಕೃತ ಸಂಬಂಧಗಳ ನಡುವೆ ಎರಡೂ ದೇಶಗಳ ನಾಗರಿಕರ ನಡುವೆ ಉತ್ತಮವಾದ ಸಂಪರ್ಕ ಏರ್ಪಟ್ಟು, ಅವರು ಸಮರ್ಪಕವಾಗಿ ಎರಡೂ ಕಡೆ ಓಡಾಡಿಕೊಂಡು ಉತ್ತಮವಾದ ಬಾಂಧವ್ಯವನ್ನು ಹೇಗೆ ಮುಂದುವರೆಸಿಕೊಂಡು ಹೋಗಲಾಗುತ್ತಿದೆ ಎಂಬುದೂ ಮುಖ್ಯವಾಗುತ್ತದೆ. ಎರಡನೆಯದಾಗಿ ಆರ್ಥಿಕ ಉದಾರೀಕರಣ ಮತ್ತು ಜಾಗತೀಕರಣದ ಹಿನ್ನೆಲೆಯಲ್ಲಿ ಎರಡೂ ದೇಶಗಳ ನಡುವೆ ಆರ್ಥಿಕ ಕ್ಷೇತ್ರಗಳಲ್ಲಿ ಹೊಂದಾಣಿಕೆ ಮತ್ತು ಸಮನ್ವಯತೆಗಳನ್ನು ಸಾಧಿಸುವುದರ ಜೊತೆಗೆ ರಾಜಕೀಯ, ಮಿಲಿಟರಿ ಮತ್ತು ಯುದ್ಧ ತಂತ್ರಗಾರಿಕೆಯ ಹೊಂದಾಣಿಕೆಯೂ ಮಹತ್ವ ಪಡೆದುಕೊಂಡಿವೆ. ಈ ಎರಡೂ ಅಂಶಗಳು ಭಾರತದ ಆರ್ಥಿಕ ರಾಜತಾಂತ್ರಿಕತೆಯ ಜೊತೆಗೆ ಹೆಣೆದುಕೊಂಡಿವೆ.

ಬ್ರೆಟನ್‌ವುಡ್ ಸಂಸ್ಥೆಗಳು, ವಿಶ್ವಸಂಸ್ಥೆಯ ಆರ್ಥಿಕ ಒಪ್ಪಂದಗಳು, ದೋಹಾ ರೌಂಡ್‌ನ ಮಾತುಕತೆಗಳು ಸೇರಿದಂತೆ ಡಬ್ಲ್ಯುಟಿಓ ಮಾತುಕತೆಗಳು ಒಂದು ರೀತಿಯಲ್ಲಿ ನೆನೆಗುದಿಗೆ ಬಿದ್ದಿರುವ ಹಿನ್ನೆಲೆಯಲ್ಲಿ ಬಹುಪಕ್ಷೀಯ, ಪ್ರಾದೇಶಿಕ ಮತ್ತು ದ್ವಿಪಕ್ಷೀಯ ಒಪ್ಪಂದಗಳ ಹಿನ್ನೆಲೆಯಲ್ಲಿ ಆರ್ಥಿಕ ರಾಜತಾಂತ್ರಿಕತೆ ಈಗ ಹೆಚ್ಚಿನ ಮಹತ್ವ ಪಡೆದುಕೊಂಡಿದೆ. ಪ್ರಾದೇಶಿಕ ಮತ್ತು ದ್ವಿಪಕ್ಷೀಯ ಆರ್ಥಿಕ ಒಡಂಬಡಿಕೆಗಳು ಹಿಂದೆಂದಿಗಿಂತ ಈಗ ಹೆಚ್ಚು ಮಹತ್ವ ಪಡೆದುಕೊಳ್ಳುತ್ತಿವೆ. ಈ ಒಡಂಬಡಿಕೆಗಳು, ವ್ಯಾಪಾರ ಮತ್ತು ಸೇವೆಗಳು, ಸರಕು ಸಾಗಾಣೆಗಳು ಈ ಒಡಂಬಡಿಕೆಗಳಲ್ಲಿ ಮಹತ್ವ ಪಡೆದುಕೊಳ್ಳುತ್ತಿದ್ದು, ಇದಕ್ಕೆ ಭಾರತವೇನೂ ಹೊರತಾಗಿಲ್ಲ.

### ಸಮೃದ್ಧಿಯ ಕಡೆಗೆ

ದ್ವಿಪಕ್ಷೀಯ ಅಥವಾ ಪ್ರಾದೇಶಿಕ ಮಟ್ಟದಲ್ಲಿ ಶಾಂತಿಯನ್ನು ಪ್ರತಿಷ್ಠಾಪಿಸಿ ತನ್ಮೂಲಕ ಸಮೃದ್ಧಿಯನ್ನು ಸಾಧಿಸಲು ಆರ್ಥಿಕ ರಾಜತಾಂತ್ರಿಕತೆಯು ಹೆಚ್ಚು ಪರಿಣಾಮಕಾರಿಯಾಗಿ ಇರಬೇಕಾಗುತ್ತದೆ. ದ್ವಿಪಕ್ಷೀಯ ಅಥವಾ ಪ್ರಾದೇಶಿಕ ಮಟ್ಟದಲ್ಲಿ ಮೊದಲು ರಾಜತಾಂತ್ರಿಕ ಮಾರ್ಗಗಳ ಮುಖಾಂತರ ಶಾಂತಿ ಮತ್ತು ಸಮೃದ್ಧಿಯನ್ನು ಸ್ಥಾಪಿಸಲು ಪ್ರಯತ್ನಿಸುವ ಬದಲು ಆರ್ಥಿಕ ಸಂಬಂಧಗಳನ್ನು ಸುಧಾರಿಸಿ ವೃದ್ಧಿಸಲು ಅನುವು ಮಾಡಿಕೊಟ್ಟರೆ ತಾನಾಗಿ ಶಾಂತಿ ಸಮೃದ್ಧಿ ನೆಲೆಗೊಳ್ಳುತ್ತದೆ.

ಫ್ರೆಂಚ್ ತತ್ವಶಾಸ್ತ್ರಜ್ಞ ಮಾಂಟೆಸ್ಕೋನ (1748) ಪ್ರಕಾರ "ಶಾಂತಿ ಎಂಬುದು ವಾಣಿಜ್ಯದ ಸಹಜವಾದ ಪರಿಣಾಮ". ಸುಂಕದ ಸಂಘಗಳು ದೇಶಗಳ ನಡುವೆ ಶಾಂತಿ ನೆಲೆಸಲು ಸಹಾಯಕವಾಗುತ್ತವೆ ಎಂದು ಇಟಲಿಯ ಆರ್ಥಶಾಸ್ತ್ರಜ್ಞ ಪೆರೆಟೋ (1889) ಪ್ರತಿಪಾದಿಸುತ್ತಾನೆ, ಇವರ ಅನಿಸಿಕೆಗಳು ಪ್ರಾದೇಶಿಕ ಆರ್ಥಿಕ ಸಮನ್ವಯತೆ ಸದಸ್ಯ ರಾಷ್ಟ್ರಗಳ ನಡುವೆ ಶಾಂತಿಯನ್ನು ತಂದುಕೊಡುತ್ತವೆ ಎಂಬುದನ್ನು ಸಾರುತ್ತವೆ.

ತೀರಾ ಇತ್ತೀಚೆಗೆ ಬ್ರೌನ್ ಎಟಲ್ (2005) ಹೇಳಿದ ಪ್ರಕಾರ, ಪ್ರಾದೇಶಿಕ ವಾಣಿಜ್ಯ ಸಮನ್ವಯತೆ ಶಾಂತಿಯ ರೂಪವನ್ನು ತಳೆಯುತ್ತದೆ. ಆರ್ಥಿಕ ಸಮನ್ವಯತೆ ಘರ್ಷಣೆಗಳನ್ನು ಒಂದು ದೇಶಕ್ಕೆ ಹೆಚ್ಚು ಖರ್ಚಿನದಾಗಿಸುತ್ತದೆ. ಉದಾಹರಣೆಗೆ 1998 ರಲ್ಲಿ ಪಶ್ಚಿಮ ಆಫ್ರಿಕಾದ ರಾಷ್ಟ್ರಗಳ ಆರ್ಥಿಕ ಸಮುದಾಯ, ಸಣ್ಣ ಯುದ್ಧೋಪಕರಣಗಳು, ಇತರೆ ರಾಷ್ಟ್ರದ ಅನುಮತಿ ಇಲ್ಲದೆ ಹೊಸ ಆಯುಧಗಳ ಆಮದು ನಿಷೇಧ ಮತ್ತು ರಾಷ್ಟ್ರಗಳ ನಡುವೆ ಪ್ರಾದೇಶಿಕ ವಾಣಿಜ್ಯ ಒಪ್ಪಂದಗಳನ್ನು ಮಿಲಿಟರಿಗಳ ಘರ್ಷಣೆಗಳಿಲ್ಲದೆ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಬೇಕು ಎಂದು ಒಡಂಬಡಿಕೆ

* ಪ್ರೊಫೆಸರ್, ಥಿಂಕ್‌ಟ್ಯಾಂಕ್ ರಿಸರ್ಚ ಅಂಡ್ ಇನ್ಫರ್ಮೇಷನ್ ಸಿಸ್ಟಂ ಫಾರ್ ಡೆವೆಲಪಿಂಗ್ ಕಂಟ್ರೀಸ್, ದೆಹಲಿ. Email: upendra@ris.org.in

ಮಾಡಿಕೊಂಡವು. ಇದರಿಂದ ಘರ್ಷಣೆಗಳು ಕಡಿಮೆಯಾಗಿ ಶಾಂತಿ ನೆಲೆಸಲು ಸಹಾಯವಾಯಿತು.


ಇದರ ಅರ್ಥ ಏನೆಂದರೆ, ದ್ವಿಪಕ್ಷೀಯವಾಗಿ ಪರಸ್ಪರ ದೇಶಗಳ ಆರ್ಥಿಕ ಅವಲಂಬನೆ, ಮಿಲಿಟರಿ ಶಕ್ತಿಯ ಬಳಕೆಯನ್ನು ಕಡಿಮೆ ಮಾಡಿತು. ತನ್ನ ವಾಣಿಜ್ಯ ಸಹಭಾಗಿ ರಾಷ್ಟ್ರದ ಆಂತರಿಕ ಸಂಘರ್ಷದಲ್ಲಿ ಮಧ್ಯಪ್ರವೇಶಿಸಿದರೆ ಎರಡು ರಾಷ್ಟ್ರಗಳ ನಡುವೆ ಆಗಿರುವ ವಾಣಿಜ್ಯ ಒಪ್ಪಂದದಿಂದ ದೊರೆತ ಲಾಭಗಳಿಂದ ವಂಚಿತವಾಗಬೇಕಾಗುತ್ತದೆ. ಅಕ್ಕಪಕ್ಕದ ರಾಷ್ಟ್ರಗಳ ನಡುವಿನ ವಾಣಿಜ್ಯವು ಈ ರಾಷ್ಟ್ರಗಳ ನಡುವೆ ನಂಬಿಕೆಯನ್ನು ಹೆಚ್ಚಿಸಿ ಎರಡೂ ರಾಷ್ಟ್ರಗಳಲ್ಲಿ ಒಂದು ರೀತಿಯ ರಕ್ಷಣೆಯ ಮನೋಭಾವವನ್ನು ಸೃಷ್ಟಿಸುತ್ತದೆ. ಅನೇಕ ವಾಣಿಜ್ಯ ಒಪ್ಪಂದಗಳು ಪ್ರಾರಂಭದಲ್ಲಿ ಸದಸ್ಯ ರಾಷ್ಟ್ರಗಳಲ್ಲಿ ಶಾಂತಿಗೆ ಚಾಲನೆ ನೀಡಲು ರೂಪಿಸತವಾಗಿರುತ್ತವೆ. ಉದಾಹರಣೆಗೆ ಆಸಿಯಾನ್ (ASEAN) ಮತ್ತು (SAARC) ಪ್ರಾದೇಶಿಕ ತಂಡಗಳು ಪ್ರಾರಂಭದಲ್ಲಿ ಆರ್ಥಿಕೇತರ ವಿಷಯಗಳಲ್ಲಿ ಸಹಕರಿಸಲು ಒಪ್ಪಂದಗಳನ್ನು ಮಾಡಿಕೊಂಡು ನಂತರ ವಿಧಿವತ್ತಾಗಿ ವಾಣಿಜ್ಯ ಒಪ್ಪಂದಗಳನ್ನು ಮಾಡಿಕೊಂಡವು. ಅದೇ ರೀತಿ ಅರ್ಜೆಂಟೈನಾ ಮತ್ತು ಬ್ರೆಝಿಲ್‌ಗಳ ನಡುವಿನ ಸಂಘರ್ಷವನ್ನು ಕಡಿಮೆ ಮಾಡಲು (MERCOSUR) ರಚಿಸಲಾಯಿತು. 2000 ದಲ್ಲಿ ಯುದ್ಧದಿಂದ ತತ್ತರಿಸಿದ್ದ ಬಾಲ್ಕನ್ ಪ್ರದೇಶವನ್ನು ಒಂದುಗೂಡಿಸಿ ಆರ್ಥಿಕ ಪುನಶ್ಚೇತನಕ್ಕಾಗಿ ಆಗ್ನೇಯ ಯೂರೋಪ್ ವಾಣಿಜ್ಯ ಪ್ರದೇಶವನ್ನು ರೂಪಿಸಲಾಯಿತು. 2004ರಲ್ಲಿ ಇಸ್ರೇಲ್ ಮತ್ತು ಈಜಿಪ್ಟ್ ಅಮೆರಿಕದ ಜೊತೆ ವಾಣಿಜ್ಯ ಒಪ್ಪಂದಕ್ಕೆ ಸಹಿಹಾಕಿದವು. ಇದರಿಂದ ಈಜಿಪ್ಟ್‌ನಲ್ಲಿ ಐದು ವಿಶೇಷ ವಲಯಗಳನ್ನು ರಚಿಸಿ ಅಲ್ಲಿ ಅಮೆರಿಕದ ಮಾರುಕಟ್ಟೆಗೆ ಮುಕ್ತ ವಾಣಿಜ್ಯ ಅವಕಾಶ ಕಲ್ಪಿಸಲಾಯಿತು. ಈ ವಲಯಗಳಲ್ಲಿ ಇಸ್ರೇಲ್ ಮತ್ತು ಈಜಿಪ್ಟ್‌ಗಳು ಒಟ್ಟಿಗೆ ಉತ್ಪಾದನೆ ಮಾಡಲು ಅವಕಾಶ ಕಲ್ಪಿಸಿಕೊಡಲಾಯಿತು. ಇದೇ ರೀತಿ ಆಫ್ರಿಕಾದಲ್ಲಿ ನಡೆಯುತ್ತಿದ್ದ ತೀವ್ರತರವಾದ ಘರ್ಷಣೆಗಳನ್ನು ಪ್ರಾದೇಶಿಕ ವಾಣಿಜ್ಯ ಒಪ್ಪಂದಗಳಿಂದ ಕಡಿಮೆಗೊಳಿಸಲಾಯಿತು. 2000 ರಲ್ಲಿ ಆಫ್ರಿಕಾ ಅಭಿವೃದ್ಧಿ ಬ್ಯಾಂಕ್ ಸ್ಥಾಪಿಸುವುದರೊಂದಿಗೆ ಆಫ್ರಿಕಾದಲ್ಲಿ ನಡೆಯುತ್ತಿದ್ದ ಪ್ರಾದೇಶಿಕ ಸಂಘರ್ಷಗಳಿಗೆ ಕಡಿವಾಣ ಹಾಕಲಾಯಿತು.

**ಕಾರಣಗಳು**

ಆರ್ಥಿಕ ರಾಜತಾಂತ್ರಿಕತೆಗೆ ಆಂತರಿಕ ಆರ್ಥಿಕ ಒತ್ತಡಗಳು ಮತ್ತು ಬಾಹ್ಯ ಆರ್ಥಿಕ ಸನ್ನಿವೇಶಗಳು ಪ್ರಮುಖ ಕಾರಣಗಳಿರುತ್ತವೆ. ಇವುಗಳು ಎರಡು ದಿಕ್ಕುಗಳಿಂದ ಕೆಲಸ ಮಾಡುತ್ತವೆ. ಆರ್ಥಿಕ ರಾಜತಾಂತ್ರಿಕತೆ ಅಂತಾರಾಷ್ಟ್ರೀಯ ಆರ್ಥಿಕ ಮಾನದಂಡಗಳನ್ನು ಒಳಗೊಂಡಿರುತ್ತದೆ ಎಂಬುದು ಒಂದು ಸಾಮಾನ್ಯ ವ್ಯಾಖ್ಯಾನ. ಆದರೆ ಈ ತೊಡಕಿನಲ್ಲಿ ಯಾವುದು ಆಂತರಿಕ ಮತ್ತು ಯಾವುದು ಅಂತಾರಾಷ್ಟ್ರೀಯ ಎಂಬುದನ್ನು ಸ್ಪಷ್ಟವಾಗಿ ಗುರುತಿಸುವುದು ಬಹಳ ಕಷ್ಟದ ಕೆಲಸ. 1950 ರಿಂದ ಪ್ರಾರಂಭವಾದ ಪರಸ್ಪರ ಆರ್ಥಿಕಾವಲಂಬನೆ ಇತ್ತೀಚಿನ ವರ್ಷಗಳಲ್ಲಿ ವೇಗ ಪಡೆದುಕೊಂಡಿತು. ಇದಕ್ಕೆ ಉತ್ತಮ ಉದಾಹರಣೆ ಯೂರೋಪಿನ ಆರ್ಥಿಕ ಸ್ಥಿತಿಯ ಬೆಳವಣಿಗೆ. ಈ ಹಿನ್ನೆಲೆಯಲ್ಲಿ ಆಂತರಿಕ ಆರ್ಥಿಕ ಬೆಳವಣಿಗೆಯಲ್ಲಿ ಭಾರತ ತೆಗೆದುಕೊಂಡ ಕ್ರಮಗಳನ್ನು ಬಾಹ್ಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ನಿಷ್ಪಕ್ಷಪಾತವಾಗಿ ನೋಡಬೇಕಾಗುತ್ತದೆ.

**'ಮೇಕ್ ಇನ್ ಇಂಡಿಯಾ'ದ ಆಯಾಮಗಳು**

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರ 'ಮೇಕ್ ಇನ್ ಇಂಡಿಯಾ' ಘೋಷಣೆ ದೇಶದ ಬಹು ದಿನಗಳ ಅಗತ್ಯವನ್ನು ಪೂರೈಸುತ್ತದೆ. ಆದರೆ, ಈ ಘೋಷಣೆ ಉತ್ಪಾದನಾ ಕ್ಷೇತ್ರದ ಬೆಳವಣಿಗೆ ಮತ್ತು ಉದ್ಯೋಗ ಸೃಷ್ಟಿಗೆ ಹೆಚ್ಚು ಆದ್ಯತೆ ನೀಡುತ್ತದೆ ಮತ್ತು ಇದು ಭಾರತದೊಳಗಿನ ಆರ್ಥಿಕತೆಗೆ ಒತ್ತುಕೊಡುತ್ತದೆ ಎಂದು ತಪ್ಪಾಗಿ ವ್ಯಾಖ್ಯಾನಿಸಲಾಗುತ್ತದೆ. ಆದರೆ, ಅದು ಈಗಿರುವಂತೆ, ಘೋಷಣೆ ಬಾಹ್ಯ ಆಯಾಮವನ್ನೂ ಒಳಗೊಂಡಿದೆ. ಉತ್ಪಾದನಾ ಕ್ಷೇತ್ರವನ್ನು ಆರ್ಥಿಕತೆಯ ಇತರೆ ಕ್ಷೇತ್ರಗಳಿಂದ ಹೊರತಾಗಿ ನೋಡಬಾರದು. ಪ್ರಸಕ್ತ, ವಿದೇಶಿ ನೇರ ಬಂಡವಾಳ ಹೂಡಿಕೆ ಸೇರಿದಂತೆ ಸರಕು ಮತ್ತು ಸೇವೆಗಳ ಒಳ ಹರಿವು ಮತ್ತು ಹೊರ ಹರಿವುಗಳು ದೇಶದ ಜಿಡಿಪಿಯ ಅರ್ಧದಷ್ಟಾಗುತ್ತದೆ. 'ಮೇಕ್ ಇನ್ ಇಂಡಿಯಾ' ಘೋಷಣೆಯು ಬಾಹ್ಯ ವಲಯವು, ಉತ್ಪಾದನಾ ವಲಯ ಮತ್ತು




ಸೇವಾ ವಲಯಗಳ ಸ್ಪರ್ಧಾತ್ಮಕ ಶಕ್ತಿ, ಪ್ರಾದೇಶಿಕ ಮೌಲ್ಯ ವರ್ಧನೆಯ ಬೆಂಬಲ ಮತ್ತಿತರೆ ಅಂಶಗಳ ಮೇಲೆ ಅವಲಂಬಿತವಾಗಿದ್ದು, ಆರ್ಥಿಕ ರಾಜತಾಂತ್ರಿಕತೆ ಮತ್ತು ಅದರಿಂದ ಎದುರಾಗುವ ಸಮಸ್ಯೆಗಳನ್ನು ನಿಭಾಯಿಸಿಕೊಳ್ಳುವುದರ ಮೇಲೆ ಅವಲಂಬಿಸಿದೆ. ಉತ್ಪಾದನೆಯು ಬೆಳವಣಿಗೆಯ ಎಂಜಿನ್ ಇದ್ದಹಾಗೆ ಎಂಬುದು ಸುಲಭವಾಗಿ ಅರ್ಥವಾಗುತ್ತದೆ ಮತ್ತು ಅದು ಪೂರೈಕೆ ಮತ್ತು ಬೇಡಿಕೆಗಳಿಂದ ಕೂಡಿದ್ದು, ಉತ್ಪಾದಕತ್ವ ಮತ್ತು ಉದ್ಯೋಗ ಸೃಷ್ಟಿಯಿಂದ ಎಷ್ಟು ಪ್ರಮಾಣದಲ್ಲಿ ಆರ್ಥಿಕ ಚಟುವಟಿಕೆ ನಡೆಯುತ್ತದೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ಉತ್ಪಾದನಾ ಕ್ಷೇತ್ರವು ಉತ್ಪಾದನೆಯ ವಿಶೇಷ ನೈಪುಣ್ಯತೆ, ಹೊಸ ವಸ್ತುಗಳ ಸೃಷ್ಟಿ ಮತ್ತು ಉದ್ಯೋಗ ಸೃಷ್ಟಿಯ ವಿಶೇಷ ಬೆಳವಣಿಗೆಯ ಗುಣಗಳನ್ನು ಹೊಂದಿರುತ್ತದೆ. ಒಂದು ದೇಶದ ಉತ್ಪಾದನೆಯು ಆ ದೇಶದ ಆರ್ಥಿಕ ಬೆಳವಣಿಗೆಗೆ ಯಾವಾಗಲೂ ಇಂಬುಗೊಡುತ್ತದೆ ಎಂದು ಹೇಳಲಾಗದು. ಬೇಡಿಕೆಯ ತೊಡಕುಗಳು, ವಿಶೇಷ ಪ್ರಾವೀಣ್ಯತೆಯ ಮತ್ತು ತಾಂತ್ರಿಕತೆಯ ಕೊರತೆ ಮತ್ತು ಉತ್ಪಾದಕತ್ವದ ಕೊರತೆಗಳನ್ನು ದೇಶಗಳ ಪ್ರಾದೇಶಿಕ ಸಮೀಕರಣ ಮತ್ತು ವಿದೇಶಿ ಬಂಡವಾಳಗಳ ನೆರವಿನಿಂದ ಸರಿದೂಗಿಸಬಹುದಾಗಿದೆ. ಉತ್ಪಾದನೆಯು ಬೆಳವಣಿಗೆಯ ಚಾಲಕಶಕ್ತಿ ಆಗಬೇಕಿದ್ದರೆ, ಪ್ರಾದೇಶಿಕ ವಾಣಿಜ್ಯ ಮತ್ತು ಬಂಡವಾಳ ಹೂಡುವಿಕೆಗಳನ್ನು ಸಮನ್ವಯಗೊಳಿಸ ಬೇಕಾಗುತ್ತದೆ. ಇದು ಆರ್ಥಿಕಾಭಿವೃದ್ಧಿಗೆ ಅವಕಾಶ ಮಾಡಿಕೊಡುತ್ತದೆ. ಅದಕ್ಕಾಗಿ ಆರ್ಥಿಕ ರಾಜತಾಂತ್ರಿಕತೆಯು ಅಗತ್ಯವಾಗುತ್ತದೆ. ಸೇವೆಗಳ ಮಾರಾಟಕ್ಕೆ ಸಾಂಸ್ಥಿಕ ವ್ಯವಸ್ಥೆ ಇಲ್ಲದೆ ಇದ್ದರೆ ಉತ್ಪಾದನಾ ವಲಯದ ಉತ್ಪನ್ನಗಳ ಮಾರಾಟವನ್ನು ಹೆಚ್ಚಿಸಲು ಸಾಧ್ಯವಾಗದು. ಸರಕುಗಳ ಮಾರಾಟಕ್ಕೆ ಸಾಗಾಣಿಕೆ ಮಾಡಿದ ನಂತರದ ಸಾಲ ವ್ಯವಸ್ಥೆ, ಸರಕು ವಿಮೆ, ಬ್ಯಾಂಕ್

ಖಾತರಿ, ಸಾಗಣೆಯ ಇತರೆ ಸೇವೆಗಳ ಸೌಲಭ್ಯಗಳನ್ನು ಒದಗಿಸಿದರೆ ವ್ಯಾಪಾರಕ್ಕೆ ಹೆಚ್ಚಿನ ಅವಕಾಶ ಕಲ್ಪಿಸಿಕೊಡುವುದರ ಜೊತೆಗೆ ರಫ್ತಿಗೆ ಹೆಚ್ಚಿನ ಸ್ಪರ್ಧಾತ್ಮಕತೆಯನ್ನು ದೊರಕಿಸಿಕೊಟ್ಟಂತಾಗುತ್ತದೆ. ಇದರ ಜೊತೆಗೆ ವಾಣಿಜ್ಯಕ್ಕೆ ಬೇಕಾಗಿರುವ ಮೂಲ ಸೌಲಭ್ಯಗಳನ್ನು ಮೇಲ್ದರ್ಜೆಗೇರಿಸುವುದರಿಂದ ವ್ಯವಹಾರದ ಖರ್ಚನ್ನು ಕಡಿಮೆ ಮಾಡುವುದರ ಮೂಲಕ ಪ್ರಾದೇಶಿಕವಾಗಿ ವಸ್ತುಗಳು ಕಡಿಮೆ ಬೆಲೆಗೆ ದೊರೆಯುವಂತಾಗುತ್ತದೆ. ಪ್ರಾದೇಶಿಕ ಮಟ್ಟದಲ್ಲಿ ಮುಕ್ತ ವಾಣಿಜ್ಯ ಒಪ್ಪಂದ ಮಾಡಿಕೊಳ್ಳುವುದರ ಮುಖಾಂತರ ವಿದೇಶಿ ನೇರ ಬಂಡವಾಳವನ್ನು ಉತ್ಪಾದನೆ, ಸರಕುಗಳು ಮತ್ತು ಸೇವೆಗಳಿಗೆ ಆಕರ್ಷಿಸಬಹುದು. ಇದರಿಂದ ಪ್ರಾದೇಶಿಕ ಮಟ್ಟದಲ್ಲಿ ಸ್ಪರ್ಧೆ ಏರ್ಪಟ್ಟು ರಫ್ತಿಗೆ ಸ್ಪರ್ಧಾತ್ಮಕತೆಯನ್ನು ತಂದುಕೊಡಬಹುದು. ಇದರಿಂದ ಪ್ರಾದೇಶಿಕ ವಲಯದಲ್ಲಿ ಉತ್ಪಾದನೆಯ ಬೆಳವಣಿಗೆಗೆ ಚೈತನ್ಯ ಬಂದು ಹೆಚ್ಚಿನ ಉದ್ಯೋಗಾವಕಾಶ ದೊರೆಯುತ್ತದೆ. ಉತ್ಪಾದನೆಯ ಮೂಲ ಸ್ಥಳವನ್ನು ಗುರುತಿಸುವುದರಿಂದ ಉತ್ಪಾದನೆಗೆ, ಮೌಲ್ಯವರ್ಧನೆಗೆ ಹೆಚ್ಚು ಅವಕಾಶವಾಗುತ್ತದೆ. ಜೊತೆಗೆ ಉದ್ಯೋಗ ಸೃಷ್ಟಿಯೂ ಹೆಚ್ಚಾಗುತ್ತದೆ. ಕೆಲಸಗಾರರಿಗೆ ವೇತನ ಹೆಚ್ಚಾಗುತ್ತದೆ. ಬಂಡವಾಳ, ಭೂಮಿ, ಮೂಲಸೌಲಭ್ಯಗಳನ್ನು ದಕ್ಷತೆಯಿಂದ ದುಡಿಸಿಕೊಳ್ಳಲು ಅದರ ಮುಖಾಂತರ ಲಾಭಗಳನ್ನು ವೃದ್ಧಿಸಿಕೊಳ್ಳಲು ಸಾಧ್ಯವಾಗುತ್ತದೆ. ಆದ್ದರಿಂದ 'ಮೇಕ್ ಇನ್ ಇಂಡಿಯಾ' ಆಂದೋಳನದಿಂದ ಉತ್ಪಾದನೆಗೆ ದೊಡ್ಡ ಪ್ರಮಾಣದಲ್ಲಿ ಉತ್ತೇಜನ ದೊರೆತಂತಾಗುತ್ತದೆ. ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಯಾಗಿ ಬಡತನ ಕಡಿಮೆಯಾಗಿ ಜನರ ಜೀವನ ಮಟ್ಟ ಹೆಚ್ಚಲು ಸಹಾಯಕವಾಗುತ್ತದೆ.

### ಸಾರಾಂಶ

ಆರ್ಥಿಕ ರಾಜತಾಂತ್ರಿಕತೆ ದೊಡ್ಡ ಪ್ರಮಾಣದಲ್ಲಿ ಬದಲಾವಣೆಯಾಗಿದ್ದು, ಸಾಂಪ್ರದಾಯಿಕವಾಗಿ ಸರ್ಕಾರಗಳ ಮಟ್ಟದಲ್ಲಿ ಮಾತುಕತೆ ಮತ್ತು ರಾಜಕೀಯ ಹಾಗೂ ಮಿಲಿಟರಿ ಸಹಕಾರಗಳ ಜೊತೆಗೆ ದೇಶಗಳ ನಡುವೆ ನಾಗರಿಕರ ಸಂಪರ್ಕ ಮತ್ತು ಅವರನ್ನು ಆರ್ಥಿಕವಾಗಿ ದುಡಿಸಿಕೊಳ್ಳುವುದು ಸೇರಿದೆ. ಎರಡು ದೇಶಗಳ ನಡುವೆ ಮತ್ತು ಪ್ರಾದೇಶಿಕ ಮಟ್ಟದಲ್ಲಿ ಶಾಂತಿಯನ್ನು ಕಾಪಾಡಿಕೊಳ್ಳಬೇಕಾದರೆ, ಅರ್ಥಪೂರ್ಣವಾದ ಆರ್ಥಿಕ ರಾಜತಾಂತ್ರಿಕತೆಯನ್ನು ಆರ್ಥಿಕ ಸಂಬಂಧಗಳೊಂದಿಗೆ ಸಾಧಿಸಬಹುದಾಗಿದೆ. ಈ ಸಂಬಂಧಗಳು ಆಂತರಿಕವಾಗಿವೆಯೋ ಅಥವಾ ಅಂತಾರಾಷ್ಟ್ರೀಯವಾಗಿವೆಯೋ ಎಂದು ನಿರ್ದಿಷ್ಟವಾಗಿ ಗೆರೆ ಹಾಕಿ ಹೇಳುವುದು ಸುಲಭವಲ್ಲ, ಏಕೆಂದರೆ ಇವು ಎರಡೂ ದಿಕ್ಕಿನಲ್ಲಿ ಕೆಲಸ ಮಾಡುತ್ತವೆ.

"ಮೇಕ್ ಇನ್ ಇಂಡಿಯಾ"ಕ್ಕೆ ಅನ್ವಯಿಸುವುದಾದರೆ ಇದರಲ್ಲಿ ಅಂತಾರಾಷ್ಟ್ರೀಯವಾದುದು ಹೇಳಿಕೊಳ್ಳು-ವಂತಹದೇನಿಲ್ಲ. ಇರುವುದೆಲ್ಲಾ ಆಂತರಿಕವಾಗಿ ಎಂದು ಹೇಳಬಹುದು. ಉತ್ಪಾದನಾ ವಲಯದ ಬೆಳವಣಿಗೆಯನ್ನು ಹೆಚ್ಚಿಸಲು ಮತ್ತು ಉದ್ಯೋಗದ ಅವಕಾಶಗಳನ್ನು ಹೆಚ್ಚಿಸುವ ಗುರಿ ಇಟ್ಟುಕೊಂಡಿದ್ದರೆ ಇದು ಖಂಡಿತವಾಗಿ ಅಂತಾರಾಷ್ಟ್ರೀಯ ಗಮನವನ್ನು ಸೆಳೆಯುತ್ತದೆ. ಪ್ರಾದೇಶಿಕ ಮಟ್ಟದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಯನ್ನು ಹೆಚ್ಚು ಆಕರ್ಷಿಸುವ ರಾಷ್ಟ್ರಗಳಲ್ಲಿ ಭಾರತವೂ ಒಂದಾಗಿದೆ.

"ಮೇಕ್ ಇನ್ ಇಂಡಿಯಾ" ಕಾರ್ಯಕ್ರಮದಲ್ಲಿ ಭಾರತ ಆರ್ಥಿಕಾಭಿವೃದ್ಧಿಯಲ್ಲಿ ಇನ್ನೂ ಹೆಚ್ಚಿನ ಸಾಧನೆಗೆ ಅವಕಾಶ ಮಾಡಿಕೊಡುವ ಸಾಧ್ಯತೆಗಳು ಹೆಚ್ಚಾಗಿವೆ. ಈ ಗುರಿ ಸಾಧಿಸಬೇಕಾದರೆ, ಉತ್ಪಾದನಾ ವಲಯವನ್ನು ಆರ್ಥಿಕತೆಯ ಇತರೆ ವಲಯಗಳ ಜೊತೆ ಸಮನ್ವಯ ಸಾಧಿಸುವುದು ಮತ್ತು ಅದೇ ವೇಳೆಗೆ ಇದನ್ನು ಬಾಹ್ಯ ಜಗತ್ತಿನೊಂದಿಗೆ ಸಮೀಕರಿಸಲು ಸ್ಪಷ್ಟವಾದ ತಿಳಿವಳಿಕೆ ಹೊಂದಿರಬೇಕಾಗುತ್ತದೆ. ಆದ್ದರಿಂದ ಆರ್ಥಿಕ ವಿಚಾರಗಳು ಅಂತಾರಾಷ್ಟ್ರೀಯ ಒಡಂಬಡಿಕೆಗಳು ಮತ್ತು ವಿದೇಶಿ ನೀತಿಗಳ ಗುರಿಗಳು ಅರ್ಥಿಕ ರಾಜತಾಂತ್ರಿಕತೆಯ ಒಂದು ಭಾಗವಾಗಿರಬೇಕಾದುದು ಬಹಳ ಮುಖ್ಯ. ಈ ಹಿನ್ನೆಲೆಯಲ್ಲಿ ಆರ್ಥಿಕ ರಾಜತಾಂತ್ರಿಕತೆಯನ್ನು ದೇಶದ ವಿದೇಶಿ ನೀತಿಯ ಒಂದು ಅಗತ್ಯವಾದ ಅಯುಧವನ್ನಾಗಿ ಬಳಸಿಕೊಳ್ಳುವುದರ ಜೊತೆಗೆ ಆಂತರಿಕ ಆರ್ಥಿಕ ಬೆಳವಣಿಗೆಗೆ ಬಳಸಿಕೊಂಡು ವಿಶ್ವದ ಪ್ರಮುಖ ಆರ್ಥಿಕ ಶಕ್ತಿಯಾಗಿ ರೂಪುಗೊಳ್ಳಬೇಕಾದುದು ಮುಖ್ಯವಾಗುತ್ತದೆ. ❑

## ಇಂಧನ ದಕ್ಷತೆಯ ಎಲ್ಇಡಿ ಬಲ್ಬ್ ಬಳಕೆ

ಇಂಧನ ದಕ್ಷತೆಯ ದೀಪಗಳ ಬಳಕೆಯನ್ನು ಉತ್ತೇಜಿಸುವ ಕಾರ್ಯಕ್ರಮ (ಡಿಇಎಲ್‌ಪಿ) ಹಾಗೂ ಎಲ್ಇಡಿ ಆಧರಿತ ದಕ್ಷ ರಸ್ತೆ ದೀಪ ಕಾರ್ಯಕ್ರಮಗಳಿಗೆ ವಾರಾಣಾಸಿಯಲ್ಲಿ ಇತ್ತೀಚೆಗೆ ಚಾಲನೆ ನೀಡಲಾಗಿದೆ.

ದೇಶಾದ್ಯಂತ ಎಲ್ಇಡಿ ಆಧರಿತ ದೀಪಗಳನ್ನು ಉಪಯೋಗಿಸುವ ಮೂಲಕ ಪೀಕ್ ಅವಧಿಯ ವಿದ್ಯುತ್ ಬಳಕೆಯನ್ನು 10 ಸಾವಿರ ಮೆಗಾವ್ಯಾಟ್‌ಗಳಷ್ಟು ತಗ್ಗಿಸುವುದು ಉದ್ದೇಶಿತ ಗುರಿಯಾಗಿದೆ.

ವಾರಾಣಾಸಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಾರ್ವಜನಿಕ ಕ್ಷೇತ್ರದ ಎನರ್ಜಿ ಎಫಿಶಿಯನ್ಸಿ ಸರ್ವಿಸ್ ಲಿಮಿಟೆಡ್ ಸಂಸ್ಥೆಯ ಸಹಯೋಗದೊಂದಿಗೆ ಈ ಕಾರ್ಯಕ್ರಮವನ್ನು ಜಾರಿಗೊಳಿಸುತ್ತಿವೆ. ಕಾರ್ಯಕ್ರಮದಡಿ ವಾರಾಣಾಸಿಯಲ್ಲಿ 2,28, 496 ಗೃಹ ಬಳಕೆದಾರರಿಗೆ 13 ಲಕ್ಷ ಎಲ್ ಇಡಿ ಬಲ್ಬ್‌ಗಳನ್ನು ನೀಡಲಾಗುವುದು. 36, 077 ರಸ್ತೆ ದೀಪಗಳನ್ನು ಎಲ್ಇಡಿ ಬಲ್ಬ್‌ಗಳ ಮೂಲಕ ಬದಲಾಯಿಸಲಾಗುತ್ತಿದೆ. ವಾರಾಣಾಸಿಯಲ್ಲಿ ಈ ಕಾರ್ಯಕ್ರಮಗಳ ಮೂಲಕ 68 ಕೋಟಿ ರೂ. ಮೌಲ್ಯದ 45 ಮೆ. ವ್ಯಾ. ವಿದ್ಯುತ್ ಉಳಿತಾಯವಾಗಲಿದೆ.

ವಾರಾಣಾಸಿಯ ಗೃಹಬಳಕೆದಾರರು 2 ಕಿ. ವ್ಯಾ. ಲೋಡ್ ಸಂಪರ್ಕಕ್ಕೆ 7 ವ್ಯಾಟ್ ಸಾಮರ್ಥ್ಯದ ಐದು ಬಲ್ಬ್‌ಗಳನ್ನು ಆರಂಭಿಕವಾಗಿ ಬಲ್ಬಿಗೆ 10 ರೂ. ನೀಡಿ ಖರೀದಿಸಬೇಕಾಗುತ್ತದೆ. ನಂತರ 11 ತಿಂಗಳ ಅವಧಿಯಲ್ಲಿ ಪ್ರತಿ ಬಲ್ಬಿಗೆ ಉಳಿದ ರೂ. 110 ಹಣವನ್ನು ಕಂತಿನಲ್ಲಿ ಬಿಲ್ ಜತೆ ಕಟ್ಟಬಹುದಾಗಿದೆ. ಈ ಬಲ್ಬ್‌ಗಳ ಬಳಕೆ ಮೂಲಕ ಪ್ರತಿ ಮನೆ ವಾರ್ಷಿಕ ರೂ. 162 ರೂ. ವಿದ್ಯುತ್ ಬಿಲ್‌ನಲ್ಲಿ ಉಳಿತಾಯ ಮಾಡುವ ಜೊತೆಗೆ ವಿದ್ಯುತ್ ಅನ್ನೂ ಉಳಿಸಬಹುದಾಗಿದೆ. ❑

# ಹೆಣ್ಣು ಮಗುವಿನತ್ತ

* ಚಂದ್ರಾಣಿ ಬ್ಯಾನರ್ಜಿ
ಕನ್ನಡಕ್ಕೆ : ಬಿ.ಆರ್.ರವೀಂದ್ರನಾಥ್



ಒಟ್ಟಾರೆ ಕಲ್ಯಾಣಕ್ಕಾಗಿ ಸಮಗ್ರ ಯೋಜನೆಗಳನ್ನು ಅಳವಡಿಸಿದ ನಂತರ ಸಮಾಜದಲ್ಲಿ ಮಹಿಳೆಯರ ಅಭಿವೃದ್ಧಿಗೆ ಅಡ್ಡಿಪಡಿಸುತ್ತಿರುವ ಸಮಸ್ಯೆಗಳ ಬಗ್ಗೆ ಗಮನ ಹರಿಸಲು ಸರ್ಕಾರವು ಪ್ರಯತ್ನಿಸುತ್ತಿದೆ. ಈ ಕ್ರಮಗಳು ಈ ದಿಕ್ಕಿನಲ್ಲಿ ಸ್ವಾಗತಾರ್ಹ ಕಾರ್ಯಕ್ರಮವಾದರೂ ಇದರಿಂದ ನಿರ್ಮಾಣಗೊಂಡಿರುವ ಬಹಳಷ್ಟು ನಿರೀಕ್ಷೆಗಳನ್ನು ಭವಿಷ್ಯದಲ್ಲಿ ಎಷ್ಟರ ಮಟ್ಟಿಗೆ ಸಾಧಿಸಬಹುದು ಎಂಬುದರ ಬಗ್ಗೆ ಆತಂಕಗಳಿವೆ.

ಹೆಣ್ಣು ಮಗುವಿನ ಜನನ ಒಂದು ಕಳಂಕವಲ್ಲ ಎಂಬ ವಾತಾವರಣ ನಿರ್ಮಾಣ ಮಾಡಲು ಹಲವಾರು ಯೋಜನೆಗಳ ಮೂಲಕ ಪ್ರಯತ್ನಿಸಲಾಗುತ್ತಿದೆ. ಆದರೆ ಈ ಯೋಜನೆಗಳು ಕೇವಲ ಕಡತಗಳಲ್ಲಿ ಧೂಳು ಹಿಡಿದು ಇರುವುದರ ಬದಲಾಗಿ ಹಾಗೂ ಒಂದು ನಿಜವಾದ ಬದಲಾವಣೆಯನ್ನು ತರಲು ಸರ್ಕಾರವು ಸೂಕ್ತ ಹತೋಟಿ ಹಾಗೂ ಸಮತೋಲನಗಳನ್ನು ಅಳವಡಿಸಬೇಕಾಗುತ್ತದೆ. ಪ್ರಮುಖ ಕಾಳಜಿ ವಿಷಯಗಳೆಂದರೆ ಮನಸ್ಸಿನ ಪರಿವರ್ತನೆ. ಅತಿ ಹೆಚ್ಚು ಅಭಿವೃದ್ಧಿ ಹೊಂದುತ್ತಿರುವ ರಾಜ್ಯಗಳಾದ ಪಂಜಾಬ್, ಹರಿಯಾಣ ಮತ್ತು ಗುಜರಾತ್ ರಾಜ್ಯಗಳು ಹೆಣ್ಣು ಭ್ರೂಣ ಹತ್ಯೆಯ ಕಾರಣದಿಂದ ಉಂಟಾದ ವಕ್ರಗತಿಯ ಲಿಂಗ ಅನುಪಾತಗಳಂತಹ ಮೂಲ ಸಮಸ್ಯೆಗಳ ನಿವಾರಣೆಗೆ ಹೆಣಗುತ್ತಿವೆ. ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ಇನ್ನೂ ಉತ್ತಮವಾಗಿ ಪರಿಹರಿಸಲು ಏಕ ಗವಾಕ್ಷಿ ಕೇಂದ್ರವನ್ನು ಸ್ಥಾಪಿಸಲಾಗಿದೆ. ಎರಡನೇ ಹೆಜ್ಜೆ ಎಂದರೆ ನಿಗದಿತ ಗುಂಪುಗಳಿಗೆ ಈ ಯೋಜನೆಯನ್ನು ತಲುಪಿಸುವುದಾಗಿರುತ್ತದೆ. ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ಹೇಳಿರುವ “ಲಿಂಗಾಧಾರಿತ ಭೇದ ಭಾವನೆ ಮಾನಸಿಕ ಅಸ್ವಸ್ಥತೆಯನ್ನು ಸೂಚಿಸುತ್ತದೆ ಹಾಗೂ 18ನೇ ಶತಮಾನದಜನರಿಗಿಂತ ಕೀಳು ಮನೋಭಾವವನ್ನು ಸೂಚಿಸುತ್ತದೆ” ಎಂಬ ಮಾತುಗಳು ಸಕಾರಾತ್ಮಕ ಪರಿಣಾಮ ಬೀರಿರುತ್ತವೆ. ಈ ಯೋಜನೆಯು ಈಗ ಉತ್ತಮಗತಿಯಲ್ಲಿ ಅನುಷ್ಠಾನಗೊಳ್ಳುತ್ತಿದೆ. ಇಡೀ ಭಾರತದಲ್ಲಿ ಕನಿಷ್ಠ ಮಟ್ಟದ ಲಿಂಗ ಅನುಪಾತ ಇರುವ ಹರಿಯಾಣ ರಾಜ್ಯ ಅದರಲ್ಲೂ ಅತಿ ಕಡಿಮೆ ದರ್ಜೆಯಲ್ಲಿರುವ ಅಂದರೆ ಸಾವಿರ ಗಂಡುಮಕ್ಕಳಿಗೆ 775 ಹೆಣ್ಣು ಮಕ್ಕಳು ಇರುವಂತಹ ಇಂತಹ ರಾಜ್ಯ ಗಮನದಲ್ಲಿಟ್ಟು ಪ್ರಾರಂಭಿಸಿದ ಯೋಜನೆ ಇಡೀ ದೇಶದಲ್ಲಿ ಹೆಚ್ಚು ಫಲಿತಾಂಶ ನೀಡುತ್ತಿದೆ. ಮಗಳನ್ನು ರಕ್ಷಿಸಿ ಮಗಳಿಗೆ ಶಿಕ್ಷಣ ನೀಡಿ ಯೋಜನೆಯನ್ನು ಆರಂಭದಲ್ಲಿ ಹರಿಯಾಣದ 12 ಜಿಲ್ಲೆಗಳನ್ನು ಒಳಗೊಂಡಂತೆ ದೇಶದ 100 ಜಿಲ್ಲೆಗಳಲ್ಲಿ ಜಾರಿಗೊಳಿಸಲಾಗುತ್ತಿದೆ. ಇವುಗಳಲ್ಲಿ ರಾಷ್ಟ್ರೀಯ ಮಟ್ಟದ ಸರಾಸರಿಯ ಕೆಳಗಿನ ಮಟ್ಟದ ಲಿಂಗ ಅನುಪಾತ ಇರುವ 587 ಜಿಲ್ಲೆಗಳು, ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಿರುವ ಆದರೆ ಇಳಿಕೆಯಾಗುತ್ತಿರುವ ಸೂಚನೆ ತೋರಿಸುತ್ತಿರುವ 5 ಜಿಲ್ಲೆಗಳು ಹಾಗೂ ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಿದ್ದು ಸುಧಾರಿಸುತ್ತಿರುವ 5 ಜಿಲ್ಲೆಗಳು ಸೇರಿರುತ್ತವೆ. ಇದಲ್ಲದೆ ದೇಶಾದ್ಯಂತ ಮಹಿಳೆಯರಿಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ಸರ್ಕಾರವು ಸ್ಟೆಪ್ (step) (ಮಹಿಳೆಯರಿಗೆ ತರಬೇತಿ ಹಾಗೂ ಉದ್ಯೋಗ) ಕಾರ್ಯಕ್ರಮವನ್ನು ಪುನಶ್ಚೇತನಗೊಳಿಸಿರುತ್ತದೆ. ಮಹಿಳೆಯರನ್ನು ಸಣ್ಣ ಗುಂಪುಗಳಲ್ಲಿ ಒಂದುಗೂಡಿಸುವುದು ಹಾಗೂ ತರಬೇತಿ ಮತ್ತು ಸಾಲವನ್ನು ಲಭ್ಯಗೊಳಿಸುವ ಉದ್ದೇಶವನ್ನು ಈ ಯೋಜನೆ ಹೊಂದಿರುತ್ತದೆ. ಈ ಯೋಜನೆಯಡಿಯಲ್ಲಿ ಕೌಶಲ್ಯಗಳನ್ನು ಉತ್ತಮಗೊಳಿಸಲಾಗುವುದು ಹಾಗೂ ಹಿಂದಿನ ಹಾಗೂ ಮುಂದಿನ ಹಂತದ ಸಂಪರ್ಕಗಳನ್ನು ದೊರಕಿಸಿ ಮಹಿಳೆಯರಿಗೆ ಆದಾಯಗಳಿಸುವ ಉದ್ಯೋಗಗಳನ್ನು ಪಡೆಯಲು ಸಹಾಯಮಾಡುವುದು. ಹೆಚ್ಚಿನತರಬೇತಿ ಪಡೆಯಲು ಹಾಗೂ ಉದ್ಯೋಗ ಸ್ಥಿತಿಗಳನ್ನು ಉತ್ತಮಗೊಳಿಸಲು ಬೆಂಬಲ ಸೇವೆಗಳನ್ನು ನೀಡಲುಇದು ಉದ್ದೇಶಿಸಿರುತ್ತದೆ. ಸ್ಟೆಪ್ ಯೋಜನೆ ಅಡಿಯ ವ್ಯಾಪ್ತಿಯಲ್ಲಿ ಸೇರಿಕೊಳ್ಳುವುದರಲ್ಲಿ ಬಡತನದ ಅಂಚಿನಲ್ಲಿರುವ, ಆಸ್ತಿಗಳನ್ನು ಹೊಂದಿಲ್ಲದ ಗ್ರಾಮೀಣ ಮಹಿಳೆಯರು ಹಾಗೂ ನಗರ ಪ್ರದೇಶಗಳಲ್ಲಿನ ಬಡವರು, ಇದರಲ್ಲಿ ಕೂಲಿ ಕೆಲಸಗಾರರು, ಆದಾಯ ರಹಿತ ದಿನಗೂಲಿಗಳು, ಮಹಿಳೆಯರ ಯಾಜಮಾನ್ಯದ ಕುಟುಂಬಗಳು, ವಲಸೆ ಕೂಲಿಗಳು, ಬುಡಕಟ್ಟು ಹಾಗೂ ಹೊರಗುಳಿದ ಗುಂಪುಗಳು, ಅದರಲ್ಲೂ ವಿಶೇಷವಾಗಿ ಪರಿಶಿಷ್ಟ ಜಾತಿ/ಪಂಗಡ ಕುಟುಂಬಗಳು ಹಾಗೂ ಬಡತನರೇಖೆಯ ಕೆಳಗಿನ ಕುಟುಂಬಗಳನ್ನು ಒಳಗೊಂಡಿರುತ್ತದೆ. ಪೂರ್ಣ ಮೊತ್ತದ ಧನಸಹಾಯ ಲಭ್ಯವಿರುತ್ತದೆ. ಸಚಿವಾಲಯವು ರೈಲ್ವೇ ಸಚಿವಾಲಯದ ಜೊತೆಗೂಡಿ ವಿಶೇಷ ಕಾರ್ಯಾಚರಣೆ ಕಾರ್ಯವಿಧಾನ (SOPs- Special Operational Procedure) ರೂಪಿಸಿದೆ. ಮನೆಯಿಂದ ಓಡಿ ಬಂದಿರುವ, ಮನೆಯಿಂದ ಹೊರದೂಡಲಾದ, ಅಪಹರಣಕ್ಕೆ ಒಳಗಾದ.

* ಹಿರಿಯ ಪತ್ರಕರ್ತೆ. Email : ban.chandrani@gmail.com

ಮಾರಾಟಗೊಂಡಿರುವ ಮಕ್ಕಳನ್ನು ರೈಲ್ವೇ ನಿಲ್ದಾಣಗಳಲ್ಲಿ ಸರ್ಕಾರೇತರ ಸಂಸ್ಥೆಗಳು ಹಾಗೂ ಮಕ್ಕಳ ಸಹಾಯಗುಂಪುಗಳು ಜೊತೆಗೂಡಿ ಮಕ್ಕಳನ್ನು ಹೆತ್ತವರು ಅಥವಾ ಅವರು ಲಭ್ಯವಿಲ್ಲದಿದ್ದಲ್ಲಿ ಪೋಷಕರ ಸುಪರ್ದಿಗೆ ಒಪ್ಪಿಸುವ ಕೆಲಸವನ್ನು ಮಾಡುತ್ತವೆ. ಈ ಕಾರ್ಯವಿಧಾನಗಳನ್ನು ರೈಲ್ವೇ ನಿಲ್ದಾಣಗಳಲ್ಲಿ ಅನುಷ್ಠಾನಗೊಳಿಸುವ ಕೆಲಸ ಈಗಾಗಲೇ ಪ್ರಾರಂಭವಾಗಿರುತ್ತದೆ. ಮಕ್ಕಳ ಕಲ್ಯಾಣದ ಕೆಲಸದಲ್ಲಿ ಈ ವಿಶೇಷ ಕಾರ್ಯಾಚರಣೆ ಕಾರ್ಯವಿಧಾನಗಳನ್ನು ಅನುಷ್ಠಾನಗೊಳಿಸುತ್ತಿರುವುದು ಒಂದು ಚಾರಿತ್ರಿಕಘಟ್ಟ ಎಂದು ಕೇಂದ್ರ ಸಚಿವೆ ಶ್ರೀಮತಿ ಮನೇಕಾ ಗಾಂಧಿ ಅವರು ಬಣ್ಣಿಸಿದ್ದಾರೆ. ಇದರ ಬಗ್ಗೆ ಹೆಚ್ಚಿನ ವಿವರಗಳನ್ನು ನೀಡುತ್ತಾ ರೈಲ್ವೇ ನಿಲ್ದಾಣಗಳಲ್ಲಿ ಸರ್ಕಾರೇತರ ಸಂಸ್ಥೆಗಳು ಹಾಗೂ ಮಕ್ಕಳ ಸಹಾಯ ಗುಂಪುಗಳು ಮಕ್ಕಳನ್ನು ಪುನರ್ವಸತಿಗೊಳಿಸಲು ಹೆತ್ತವರು ಅಥವಾ ಪೋಷಕರ ಸುಪರ್ದಿಗೆ ಒಪ್ಪಿಸುವ ಕೆಲಸವನ್ನು ಮಾಡುತ್ತವೆ ಎಂದು ಸಚಿವೆ ತಿಳಿಸಿದ್ದಾರೆ. ಈ ನಿಲ್ದಾಣಗಳು ಮಕ್ಕಳ ಸಹಾಯಕೇಂದ್ರ, ದೂರವಾಣಿ ಇರುವ ಕಿಯೋಸ್ಕ್‌ಗಳು ಮತ್ತು ಬೂತ್‌ಗಳಲ್ಲಿ ಮಕ್ಕಳ ಸಹಾಯವಾಣಿ ಸಂಖ್ಯೆ 1098ಗೆ ಕರೆ ಮಾಡಲು ಸಹಾಯ ಮಾಡುತ್ತವೆ. ಈ ಹಿಂದೆ ಕಂಡಿರುವ ಉದಾಹರಣೆಗಳಂತೆ ಉನ್ನತ ಮಟ್ಟದ ಸಭೆಗಳಲ್ಲಿ ವಿಷಯ ಮಂಡನೆ ಮಾಡುವಾಗ ಹಾಗೂ ವರದಿಗಳಲ್ಲಿ ಎಲ್ಲವೂ ಚೆನ್ನಾಗಿ ಕಂಡರೂ ವಾಸ್ತವವಾಗಿ ಕ್ಷೇತ್ರದಲ್ಲಿ ಬಹಳ ಕಡಿಮೆ ಮಟ್ಟದ ಸಾಧನೆ ಕಾಣಿಸಿದ ರೀತಿಯ ಬದಲುಅಂತಿಮ ಫಲಾನುಭವಿಗೆ ಲಾಭಗಳನ್ನು ದೊರಕಿಸಿಕೊಡುವುದನ್ನು ಖಚಿತಪಡಿಸಿಕೊಳ್ಳಬೇಕಾಗಿದೆ. ಹಾಗೆಯೇ ತಪ್ಪುಗಳನ್ನು ಸರಿಪಡಿಸಿಕೊಳ್ಳಲು ಅವಕಾಶವಿರಬೇಕು. ರೂಪಿಸಿದ ನಕಾಶೆಯ ಪ್ರಕಾರ ಕಾರ್ಯಕ್ರಮ ನಡೆಯದಿದ್ದಲ್ಲಿ ಕಾರ್ಯಾಚರಣೆ ತಂಡಕ್ಕೆ ಹೊಸ ನಾವಿನ್ಯತೆಗಳನ್ನು ಸೇರಿಸಿಕೊಳ್ಳುವ ಅವಕಾಶವಿರಬೇಕು. ಭೌಗೋಳಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಬಹಳಷ್ಟು ವೈವಿಧ್ಯತೆಗಳಿರುವ ಭಾರತದಂತಹ ಬೃಹತ್ ದೇಶದಲ್ಲಿ ಅಸ್ಸಾಂ ರಾಜ್ಯದಲ್ಲಿ ಅನುಷ್ಠಾನಗೊಳಿಸಿದ ಮಾದರಿ ಕೇರಳ ರಾಜ್ಯದಲ್ಲಿ ಅಥವಾ ಉತ್ತರ ರಾಜ್ಯಗಳಲ್ಲಿ ಅಷ್ಟೇ ಪರಿಣಾಮಕಾರಿಯಾಗಿ ಫಲ ನೀಡದಿರಬಹುದು. ಇದರಲ್ಲಿ ಉತ್ತಮ ಅಂಶ ಎಂದರೆ ಒಳ್ಳೆಯ ಪ್ರಾರಂಭವನ್ನು ಮಾಡಲಾಗಿದೆ. ಈ ಪ್ರಾರಂಭವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವುದು ಒಂದು ಬೃಹತ್ ಸವಾಲು. ❑

(14ನೇ ಪುಟದಿಂದ)

## ಉತ್ತಮ ಆಡಳಿತ – ಶೈಲಿ ಮತ್ತು ಸತ್ವ

ಉತ್ಸಾಹದಿಂದ ಸರ್ಕಾರವು ಬಡವರ ಏಳಿಗೆಯನ್ನು ಗಮನದಲ್ಲಿರಿಸಿಕೊಂಡು ಇನ್ನೂ ಮೂರು ಸಾಮಾಜಿಕ ಸುರಕ್ಷೆಯ ಯೋಜನೆಗಳಿಗೆ ಚಾಲನೆ ನೀಡಿತು. ಆ ಮೂಲಕ ಸಾಮಾಜಿಕ ಸುರಕ್ಷೆಯನ್ನು ಹೊಸ ಎತ್ತರಕ್ಕೆ ಕೊಂಡೊಯ್ಯಿತು. ಯಾವುದೇ ವ್ಯಕ್ತಿ ವಾರ್ಷಿಕ ರೂ.12 ವಿಮಾ ಕಂತನ್ನುಕಟ್ಟುವ ಮೂಲಕ ರೂ. ಎರಡು ಲಕ್ಷಗಳ ಅಪಘಾತ ವಿಮೆಯನ್ನು ಪಡೆಯಬಹುದಾದ ಪ್ರಧಾನಮಂತ್ರಿ ಸುರಕ್ಷಾ ವಿಮಾ ಯೋಜನೆ; ವಾರ್ಷಿಕ ರೂ.330 ವಿಮೆ ಕಟ್ಟುವ ಮೂಲಕ ಜೀವವಿಮೆ ಪಡೆಯಬಹುದಾದ ಪ್ರಧಾನಮಂತ್ರಿ ಜೀವನಜ್ಯೋತಿ ವಿಮಾ ಯೋಜನೆ ಹಾಗೂ ಕಡಿಮೆ ವಿಮಾ ಕಂತುಗಳನ್ನು ಕಟ್ಟುವ ಮೂಲಕ ಹಿರಿಯ ನಾಗರಿಕರು 1000–5000ದವರೆಗೆ ಪಿಂಚಣಿ ಪಡೆಯುವ ಅಟಲ್ ವಿಮಾ ಯೋಜನೆಗಳೇ ಆ ಮೂರು ಸಾಮಾಜಿಕ ಸುರಕ್ಷತೆಯ ಯೋಜನೆಗಳಾಗಿವೆ. ಕೆಲಸದಲ್ಲಿ ನಿರತವಾದ ಅವಧಿ ಮತ್ತು ವಿಮಾಕಂತುಗಳು ಪಿಂಚಣಿ ಹಣದ ಪ್ರಮಾಣವನ್ನು ನಿರ್ಧರಿಸಲಿವೆ. ಕೌಶಲಪೂರ್ಣ ಭಾರತ ಮತ್ತು ಭಾರತದಲ್ಲಿಯೇ ಉತ್ಪಾದಿಸಿ ಎಂಬ ಸರ್ಕಾರದ ಎರಡು ಪರಿಕಲ್ಪನೆಗಳು ಅತ್ಯಂತ ವಿಶಿಷ್ಟಪೂರ್ಣವಾಗಿವೆ. ಇವು ಯುವಜನತೆಗೆ ಉದ್ಯೋಗಾವಕಾಶಗಳನ್ನು ವೃದ್ಧಿಸುವ ಪರಿಕಲ್ಪನೆಗಳಾಗಿವೆ. ಅಧಿಕ ಆಡಳಿತ ಅಲ್ಪ ಅಧಿಕಾರ ಎನ್ನವುದು ಪ್ರಧಾನಿಯವರ ಇನ್ನೊಂದು ವಿಚಾರವಾಗಿದೆ. ಸರ್ಕಾರದ ವಿಧಿವಿಧಾನಗಳನ್ನು ಸರಳಗೊಳಿಸುವುದು, ಯೋಜನೆಗಳ ಅನುಷ್ಠಾನದಲ್ಲಿ ಸಂಪೂರ್ಣ ಪಾರದರ್ಶಕತೆ ತರುವುದು, ಅಧಿಕಾರಶಾಹಿಯ ಹೊಣೆಗಾರಿಕೆ ಹೆಚ್ಚಿಸುವುದೇ ಇದರ ನಿಜವಾದ ಅರ್ಥವಾಗಿದೆ.

### ಉಪಸಂಹಾರ

ಈ ಹಂತದಲ್ಲಿ ವಿಶಾಲನೆಲೆಯಲ್ಲಿ ಕೆಲವು ನಿರ್ಣಯಗಳನ್ನು ಮಂಡಿಸಬಹುದು. ಮೊದಲನೆಯದಾಗಿ ಶ್ರೀ ಮೋದಿಯವರ ಆಡಳಿತವು ಅವರ ಬೆಂಬಲಿಗರನ್ನು ಮತ್ತು ಟೀಕಾಕಾರರನ್ನು ತಬ್ಬಿಬ್ಬುಗೊಳಿಸಿದೆ. ಹಿಂದಿನ ಸರ್ಕಾರದ ಎಲ್ಲವನ್ನೂ ಬುಡಮೇಲು ಮಾಡದಿರುವ ಅವರ ವಿಧಾನವು ಟೀಕಾಕಾರರು ದಿಗ್ಭ್ರಮೆಗೊಳ್ಳಲು ಕಾರಣವಾಗಿದೆ. ಇದರರ್ಥ ಆಡಳಿತ ನಿರ್ವಹಣೆಗೆ ಸಮತೂಕದ, ಹೊಣೆಗಾರಿಕೆಯ ವಿಧಾನವನ್ನು ಅನುಸರಿಸಲಾಗುತ್ತಿದೆ ಎಂದು. ಸಂಪೂರ್ಣವಾಗಿ ಪುನಾರಚಿತ ಆಡಳಿತ ವಿಧಾನವು ಈಗಾಗಲೇ ಫಲವನ್ನು ನೀಡುತ್ತಿದ್ದು ದೇಶದ ಭದ್ರತೆ ಮತ್ತು ವಿದೇಶಾಂಗ ನೀತಿಯಲ್ಲಿ ಕಾಣಬಹುದಾಗಿದೆ. ಆದರೆ ವಿಮರ್ಶಕರಿಗೆ ಇಷ್ಟೇ ಸಾಕಾಗುವುದಿಲ್ಲ. ಮೊದಲ ವರ್ಷಾಂತ್ಯದ ವೇಳೆಗೆ ಸರ್ಕಾರದ ಸಾಧನಾ ಪಟ್ಟಿಯು ತೃಪ್ತಿಕರವಾಗಿಲ್ಲವೆಂಬುದು ಅವರ ಭಾವನೆ. ಇದೊಂದು ಟಿ–ಟ್ವೆಂಟಿ ಮ್ಯಾಚ್ ಅಲ್ಲವೆಂಬುದನ್ನು ಅಂಥವರು ಮರೆತಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ಸಂಪೂರ್ಣ ಬಹುಮತದಿಂದ ಆಯ್ಕೆಯಾಗಿ ಬಂದಿರುವ ಪ್ರಧಾನಿಯೋರ್ವರು ಐದು ದಿನಗಳ ಟೆಸ್ಟ್ ಮ್ಯಾಚ್ ಆಡುವ ನಾಯಕನ ಅರ್ಹತೆಯನ್ನು ಪಡೆದಿರುತ್ತಾರೆಂಬುದನ್ನು ಇವರು ಮರೆತಿದ್ದಾರೆ. ಮೊದಲ ದಿನದ ಪಂದ್ಯವೆಂದರೆ ಮುಂದಿನ ದಿನಗಳಲ್ಲಿ ಆಡುವ ಆಟಕ್ಕೆ ಮೈದಾನವನ್ನು ಸಜ್ಜುಗೊಳಿಸುವುದೇ ಎಂದರ್ಥ. ಇದೇರೀತಿ, ತಮ್ಮ ಭರವಸೆಗಳನ್ನು ಪೂರೈಸಲು ಶ್ರೀ ಮೋದಿಯವರು ಐದುವರ್ಷಗಳ ಅವಧಿಯನ್ನು ಪಡೆದಿದ್ದಾರೆ. ಎಲ್ಲಕ್ಕಿಂತಲೂ ಹೆಚ್ಚಿನ ಮಾತೆಂದರೆ, ದೇಶವು ಭರವಸೆಯನ್ನು ಮತ್ತೆ ಸ್ಥಾಪಿಸಿದ, ಯುವ ಜನತೆಯನ್ನು ಹುರಿದುಂಬಿಸುವ ಹಾಗೂ ಭಾರತವನ್ನು ಆಮೂಲಾಗ್ರ ಬದಲಿಸಬಲ್ಲ ಉಪಕ್ರಮಗಳನ್ನು ಕೈಗೊಳ್ಳುತ್ತಿರುವ ನಾಯಕನನ್ನು ಪಡೆದಿದೆ ಎಂಬುದೇ ಆಗಿದೆ. ಒಂದು ವರ್ಷದ ಅವಧಿಯ ಸಾಧನೆಯ ಪಟ್ಟಿಯಲ್ಲಿ ಇಂಥ ಬಹುದೊಡ್ಡ ಜಮೆಯ ಅಂಶವಿರುವಾಗ ಸಣ್ಣಪುಟ್ಟ ವಜಾಬಾಕಿಗಳು ನಿಜಕ್ಕೂ ವಿಷಯಗಳೇ ಅಲ್ಲ! ❑

# ಭಾರತ – ಚೀನಾ ಬಾಂಧವ್ಯ

* ಮನೀಷ ಚಂದ
ಕನ್ನಡಕ್ಕೆ : ಪಿ. ಎಸ್. ಪರ್ವತಿ



ಹೊಸ ಶಕ್ತಿ, ಕ್ರಿಯಾಶೀಲತೆ ಮತ್ತು ಸೃಜನಶೀಲತೆಯೊಂದಿಗೆ ಎರಡು ನೆರೆಹೊರೆಯ ರಾಷ್ಟ್ರಗಳು ಪರಸ್ಪರ ತೊಡಗಿಕೊಂಡಿರುವುದು ಭಾರತ ಮತ್ತು ಚೀನಾ ರಾಷ್ಟ್ರಗಳ ಇತಿಹಾಸದಲ್ಲಿ ಪರಿವರ್ತನೆಯ ಕ್ಷಣವಾಗಿದೆ. ಏಶಿಯಾದ ಇಬ್ಬರು ಬಲಿಷ್ಠ ನಾಯಕರು ಕೇವಲ ಒಂಬತ್ತು ತಿಂಗಳ ಅವಧಿಯಲ್ಲಿ ಒಗ್ಗಟ್ಟಾಗಿ ಸಾರ್ಥಕ ಸಹಕಾರಕ್ಕಾಗಿ ಕೈಗೊಂಡಿರುವ ನಿರ್ಧಾರ ಮುಂಬರುವ ಏಶಿಯಾ ಶತಮಾನಕ್ಕೆ ದಿಕ್ಸೂಚಿಯಾಗಿದೆ. ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಕಳೆದ ಮೇ ತಿಂಗಳ 14 ರಿಂದ 16 ರವರೆಗೆ ಚೈನಾದ ಶಿಯಾನ್, ಬೀಜಿಂಗ್ ಹಾಗೂ ಶಾಂಘೈ ನಗರಗಳಿಗೆ ಭೇಟಿ ನೀಡಿರುವದು ಹಲವು ದೃಷ್ಟಿಯಿಂದ ಅನನ್ಯವಾದುದು. ವಿಶ್ವದ ಶೇ. 33ರಷ್ಟು ಜನಸಂಖ್ಯೆ ಹೊಂದಿರುವ ಹಾಗೂ 12 ಟ್ರೈಮಿಲಿಯನ್ ಡಾಲರ್‌ಗಿಂತಲೂ ಅಧಿಕವಾದ ಒಗ್ಗೂಡಿದ ಜಿಡಿಪಿ ಪಡೆದಿರುವ ಹೆಗ್ಗಳಿಕೆ ಏಶಿಯಾದ ಈ ಎರಡು ದೊಡ್ಡ ರಾಷ್ಟ್ರಗಳ ವೈವಿಧ್ಯತೆಯ ಬಾಂಧವ್ಯದ ಹಿನ್ನೆಲೆಯಲ್ಲೂ ಸಹ ಈ ಭೇಟಿ ಅದ್ವಿತೀಯವಾದದ್ದು. ಚೈನಾ ಅಧ್ಯಕ್ಷ ಶ್ರೀ ಕ್ಷಿ ಜಿನ್‌ಪಿಂಗ್ ಅವರು ಭಾರತಕ್ಕೆ ಸೆಪ್ಟಂಬರ್ 2014 ರಲ್ಲಿ ನೀಡಿದ ಮೊದಲ ಭೇಟಿಯ ಕ್ರೋಢೀಕರಣದ ಪರಿಣಾಮವೇ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಚೈನಾ ಭೇಟಿ ಸಾಧ್ಯವಾಗಿಸಿದೆ. ಈ ಪರಸ್ಪರ ಭೇಟಿಗಳ ಫಲಶ್ರುತಿ ಹಾಗೂ ಈ ಹಿಂದಿನ ಸರ್ಕಾರ ದಿಲ್ಲಿಯಲ್ಲಿ ಕೈಗೊಂಡ ಭಾರತ ಹಾಗೂ ಚೀನಾ ಬಾಂಧವ್ಯದ ಎ.ಬಿ.ಸಿ.ಡಿ ವರ್ಣಮಾಲೆಯ ಉಪಕ್ರಮಗಳಾದ ಎ – ಏಶಿಯಾ, ಬಿ – ಬಿಸನೆಸ್ (ವ್ಯಾಪಾರ), ಸಿ – ಕಲ್ಚರ್ (ಸಂಸ್ಕೃತಿ ) ಮತ್ತು ಡಿ – ಡಿಪ್ಲೊಮಸಿ – ಡೆವಲಪ್‌ಮೆಂಟ್ (ಅಂತರ ರಾಷ್ಟ್ರೀಯ ವ್ಯವಹಾರ ನಿರ್ವಹಣಾ ಕೌಶಲ್ಯ ಹಾಗೂ ಅಭಿವೃದ್ಧಿ) ಸಂಗತಿಗಳು ಈ ಬಾಂಧವ್ಯದ ಬೆಸುಗೆಗೆ ಕೊಂಡಿಯಾಗಿವೆ. ಏಶಿಯಾದ ಗೋಲಾರ್ಧದಲ್ಲಿ ಸದಾಕಾಲ ಶತ್ರುಗಳು ಹಾಗೂ ಸ್ಪರ್ಧಿಗಳು ಎಂದೇ ಬಿಂಬಿತವಾದ ಈ ದೇಶಗಳ ಮಟ್ಟಿಗೆ ಈ ವರ್ಣಮಾಲೆಯ ಶಬ್ದ ಹಾಗೂ ಅರ್ಥ ಈ ರಾಷ್ಟ್ರಗಳ ಸಹಕಾರಕ್ಕೆ ಹೊಸ ಮಾರ್ಗಗಳು ತೆರೆದುಕೊಳ್ಳುವಂತಾಗಿದೆ.

### ಏಶಿಯಾ ಶತಮಾನ : ಪ್ರಮುಖ ಶಕ್ತಿಗಳ ಹೊಸ ಭರವಸೆ

ರಾಜನೀತಿಯಲ್ಲಿ ಸದಾಶಯದ ನಡೆ ಮಹತ್ವದ್ದಾಗಿದೆ. ಆದರೆ ಇದು ಸಂಬಂಧದ ತಿರುಳಿಗೆ ಪರ್ಯಾಯವಾಗಲಾರದು. ಆದ್ದರಿಂದ ಭಾರತ ಚೀನಾ ಸಂಬಂಧದಲ್ಲಿನ ಚತುರ ಸಂಯೋಜನೆಗಳ ಸಂಕೇತ , ಇಂಗಿತ ಹಾಗೂ ವಾಸ್ತವಾಂಶಗಳ ದೃಷ್ಟಿಕೋನ ಈ ಸಂದಿಗ್ಧ ಬಾಂಧವ್ಯಗಳ ಮುಂದುವರಿಕೆ ಸಂದರ್ಭದಲ್ಲಿ ಎರಡೂ ರಾಷ್ಟ್ರಗಳ 2.6 ಬಿಲಿಯನ್ ಜನರ ಭವಿಷ್ಯದ ಮೇಲೆ ನೇರ ಪರಿಣಾಮವನ್ನುಂಟು ಮಾಡುತ್ತವೆ. ಭಾರತ ಮತ್ತು ಚೀನಾಗಳು ಈ ಪ್ರದೇಶದ ಎರಡು ಬಲಾಢ್ಯ ರಾಷ್ಟ್ರಗಳಾಗಿವೆ. ಅವು ಏಶಿಯಾ ಶತಮಾನಕ್ಕೆ ಹಾಗೂ 21 ನೇ ಶತಮಾನದ ಭೂ ರಾಜಕೀಯ, ಆರ್ಥಿಕತೆಗೆ ಸ್ಪಷ್ಟರೂಪ ನೀಡುವ ಮಹತ್ವದ ಸೈದ್ಧಾಂತಿಕ ರಚನೆ ಕುರಿತಂತೆ ಮೇ 15 ರಂದು ಜಂಟಿ ಹೇಳಿಕೆ ನೀಡಿವೆ. ಈ ಎರಡು ಪ್ರಬಲ ಶಕ್ತಿಗಳ ಏಕಕಾಲದ ಪುರುತ್ಥಾನದಿಂದಾಗಿ ವಿಶ್ವವ್ಯಾಪಿಯಾಗಿ ಮಹತ್ವಪೂರ್ಣ ಅವಕಾಶಗಳು ಏಶಿಯಾ ಶತಮಾನದ ಸಾಫಲ್ಯಕ್ಕೆ ದೊರೆಕಿಸುವುದಕ್ಕಾಗಿ ನಾಯಕರು ಒಪ್ಪಿರುವದಾಗಿ ಹೇಳಿಕೆಯಲ್ಲಿ ತಿಳಿಸಲಾಗಿದೆ. ಭಾರತ ಮತ್ತು ಚೀನಾ ದ್ವಿಪಕ್ಷೀಯ ಸಂಬಂಧಗಳು 21 ನೇ ಶತಮಾನದಲ್ಲಿ ಏಶಿಯಾ ಅಲ್ಲದೇ ಜಾಗತಿಕವಾಗಿ ನಿರ್ಣಾಯಕ ಪಾತ್ರ ವಹಿಸಲಿವೆ ಎಂಬುದನ್ನು ರಾಷ್ಟ್ರ ನಾಯಕರುಗಳು ಗಮನಿಸಿದ್ದಾರೆ. ಜಗತ್ತಿನ ಎರಡು ರಾಷ್ಟ್ರಗಳ ನಡುವಿನ ಬಾಂಧವ್ಯ ವಿಶ್ವದ ಬೃಹತ್ ಅರ್ಥಿಕತೆಯ ಎರಡು ರಾಷ್ಟ್ರಗಳ ನಡುವೆ ಹಾಗೂ ಆಯಾ ದೇಶಗಳಲ್ಲಿನ ರಾಜ್ಯಗಳ – ಸಂಬಂಧಗಳೊಂದಿಗಿನ ಈ ಹೊಸ ಅಡಿಪಾಯವು ಅಂತಾರಾಷ್ಟ್ರೀಯ ವ್ಯವಸ್ಥೆಯನ್ನು ಬಲಗೊಳಿಸಲಿದೆ ಎಂದು ಜಂಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ.

### ಬಾಧಿತ ಅಂಶಗಳು

ಸಂಬಂಧ ಸುಧಾರಣೆಯ ಈ ಬೃಹತ್ ನಿರ್ಮಾಣ ಕಾರ್ಯ ಹಲವು ಹತ್ತು ಅಡಚಣೆಗಳಿಂದ ಬಾಧಿತವಾಗಿದೆ. ಇಂಡೋ ಚೈನಾ ಸಂಬಂಧಗಳ ಸಂರಚನೆ ಮತ್ತು ಏಶಿಯಾದ ಶತಮಾನದ ಬಗ್ಗೆ ಪರಸ್ಪರ ಒಗ್ಗೂಡಿ ನೀಡಬಯಸಿದ ವಾಗ್ದಾನವು ಈ ಎರಡೂ ದೇಶಗಳ ಪರಸ್ಪರ ಗೌರವ ಹಾಗೂ ಆಯಾ ದೇಶಗಳ ಆತಂಕಗಳ ಬಗ್ಗೆ ಸೂಕ್ಷ್ಮ ಗ್ರಹಿಕೆ, ಹಿತಾಸಕ್ತಿ ಹಾಗೂ ಆಕಾಂಕ್ಷೆಗಳು ಕೈಗೂಡಿದಲ್ಲಿ ಮಾತ್ರ ಸಾಕಾರಗೊಳ್ಳಬಲ್ಲವು.

* ಇಂಡಿಯಾ ರೈಟ್ಸ್ ನೆಟ್‌ವರ್ಕ್‌ನ ಸಂಸ್ಥಾಪಕರು. Email : manish.mchand@gmail.com

ಈ ಅಂಶಗಳು ಸಂಬಂಧ ಸುಧಾರಣೆಯಲ್ಲಿ ಕೆಂಪು ಗೆರೆಗಳಾಗಿದ್ದು ತಕ್ಷಣವೇ ಈ ಎರಡೂ ದೇಶಗಳು ಜಾಗತಿಕ ಮಟ್ಟದಲ್ಲಿ ಪರಸ್ಪರ ಪುನರುತ್ಥಾನ ಬಯಸಿದ್ದಲ್ಲಿ ಅವಿಶ್ವಾಸ ಮತ್ತು ಪೈಪೋಟಿಯ ಗ್ರಹಿಕೆ ತೊರೆದು ಇವುಗಳನ್ನು ನಿವಾರಿಸಿಕೊಳ್ಳಬೇಕಿದೆ. ಇತ್ತೀಚಿನ ಮೇ ತಿಂಗಳ ಭೇಟಿಯಲ್ಲಿ ಪ್ರಧಾನಿ ಅವರು ಈ ಬಾಧಿತ ಅಂಶಗಳ ಬಗ್ಗೆ ನೆನಪಿಸಿ, ಎರಡೂ ದೇಶಗಳ ಬಾಂಧವ್ಯದ ಸಂಪೂರ್ಣ ಸಾಮರ್ಥ್ಯವನ್ನು ಹಿಂದಿಕ್ಕುವಂತಹ ಈ ವಿಷಯಗಳ ಕುರಿತು ತಮ್ಮ ನಿಲುವನ್ನು ಪುನರಾವಲೋಕನ ಮಾಡಲು ಒತ್ತಾಯಿಸಿದರು.

ಚೀನಾ ಪ್ರಧಾನಿ ಲೀ ಅವರೊಂದಿಗಿನ ಜಂಟಿ ಮಾಧ್ಯಮ ಹೇಳಿಕೆಯಲ್ಲಿ ಪ್ರಧಾನಿ ಶ್ರೀ ಮೋದಿ ಅವರು, ಕೆಲವು ವಿಷಯಗಳಲ್ಲಿನ ಚೀನಾದ ಧೋರಣೆಯು ನಮ್ಮ ಸಹಭಾಗಿತ್ವದ ಸಂಪೂರ್ಣ ಸದ್ಬಳಕೆಗೆ ಹಿನ್ನಡೆಯುಂಟು ಮಾಡುವಂತಹವುಗಳಾಗಿವೆ. ಅದನ್ನು ಪುನರ್ ಪರಿಶೀಲಿಸುವ ಅಗತ್ಯತೆ ಇದೆಯೆಂದು ಪ್ರತಿಪಾದಿಸಿದ್ದಾರೆ.

ಬೀಜಿಂಗ್‌ನಲ್ಲಿ ಚೀನಾ ಪ್ರಧಾನಿ ಸಮ್ಮುಖದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ ಪ್ರಧಾನಿ ಅವರು, ಬೀಜಿಂಗ್‌ನಲ್ಲಿ ಕೆಲವು ಕೃತ್ಯಗಳು ಹಾಗೂ ಕಾರ್ಯಾಚರಣೆಗಳು ದೆಹಲಿಯ ಸ್ವೀಕಾರಕ್ಕೆ ಅರ್ಹವಿಲ್ಲವೆಂದು ತಿಳಿಸಿ, ಈ ಬಗ್ಗೆ ಭಾರತದ ತೀವ್ರ ಆಕ್ಷೇಪಣೆಯನ್ನು ವ್ಯಕ್ತಪಡಿಸಿದರು. ಇದರಲ್ಲಿ ಜಮ್ಮು ಮತ್ತು ಕಾಶ್ಮೀರ ಹಾಗೂ ಅರುಣಾಚಲ ಪ್ರದೇಶದ ನಿವಾಸಿಗಳಿಗೆ ಅಂಟಿಸಿದ ವೀಸಾ (ಸ್ಟಾಪಲ್ಡ್ ವೀಸಾ) ನೀಡಿಕೆ, ಚೀನಾ ಪಡೆಗಳು ಭಾರತದ ಗಡಿ ಪ್ರದೇಶದಲ್ಲಿ ಪದೇ ಪದೇ ದಾಳಿ ಮಾಡುವುದು, ಕಾಶ್ಮೀರದ ವಿವಾದಾತ್ಮಕ ಪ್ರದೇಶದಲ್ಲಿ ಚೀನಾ – ಪಾಕಿಸ್ತಾನ ಆರ್ಥಿಕ ಕಾರಿಡಾರ್ ನಿರ್ಮಾಣದ ಸಂಗತಿಗಳು ಸೇರಿವೆ.

ಈ ವಿಷಯಗಳು ಭಾರತ – ಚೀನಾ ಬಾಂಧವ್ಯದಲ್ಲಿ ದೀರ್ಘಕಾಲಿಕ ಪೀಡನೆಗಳಾಗಿವೆ. ಹಾಗೂ ಇದರಿಂದಾಗಿ ಭಾರತೀಯರ ಮನೋಭೂಮಿಕೆಯಲ್ಲಿ ಚೀನಾದ ಚಿತ್ರಣದ ಬಗ್ಗೆ ವ್ಯತಿರಿಕ್ತ ಪರಿಣಾಮ ಬೀರುವುದಲ್ಲದೇ ಬೀಜಿಂಗ್‌ನ ಉದ್ದೇಶ ಮತ್ತು ಧೋರಣೆಗಳ ಬಗ್ಗೆ ದಿಲ್ಲಿಯಲ್ಲಿ ಅಪನಂಬಿಕೆ ವೃದ್ಧಿಗೊಳ್ಳುವದು ಎಂದರು.

## ಸಾಂಸ್ಕೃತಿಕ ರಾಯಭಾರತ್ವ

ಭಾರತ – ಚೀನಾದ ಬಾಂಧವ್ಯ, ಮುಂಬರುವ ದಿನಗಳಲ್ಲಿ ಅಭಿವೃದ್ಧಿಯ ಹೊಸ ಪಥದಲ್ಲಿ ಸಾಗಲು ಸಾಂಸ್ಕೃತಿಕ ರಾಯಭಾರತ್ವ ಹಾಗೂ ಜನರೊಂದಿಗಿನ ಸಂಪರ್ಕ ಹಾಗೂ ಅನುರಣನೆಯನ್ನು ಅರಿಯುವ ಮಹತ್ವದ ಜವಾಬ್ದಾರಿಯನ್ನು ನಿಭಾಯಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಪ್ರಧಾನಿ ಶ್ರೀ ಮೋದಿ ಅವರ ಇತ್ತೀಚಿನ ಚೀನಾ ಭೇಟಿ ಸಂಪರ್ಕ ಸಾಧನೆಯಲ್ಲಿ ಮಹತ್ವದ ಮೈಲಿಗಲ್ಲಾಗಿದೆ. ಇದು ಭಾರತ – ಚೀನಾ ಪಾಲುದಾರಿಕೆಯ ವಿಸ್ತರಣೆ ಹಾಗೂ ಜನರ ಹೃದಯ ಗೆಲ್ಲುವ ಕೈಂಕರ್ಯದಲ್ಲಿ ಯಶಸ್ವಿಯಾಗಿದೆ. ಎರಡೂ ದೇಶಗಳ ಸಾಂಸ್ಕೃತಿಕ ಕೊಂಡಿಗಳು ದ್ವಿಪಕ್ಷೀಯ ಸಂಬಂಧಗಳಿಗೆ ಹೆಚ್ಚಿನ ಸ್ವಾತಂತ್ರ್ಯ ದೊರಕಿಸಬಲ್ಲವು ಎಂಬುದಕ್ಕೆ ಬೀಜಿಂಗ್‌ದಲ್ಲಿ ಜರುಗಿದ ಯೋಗ ಹಾಗೂ ತೈಚಿ ಕಲೆಗಳ ಜಂಟಿ ಪ್ರದರ್ಶನ ಸಾಕ್ಷಿಯಾಯಿತು. ಮೇ 15 ರಂದು ಬೀಜಿಂಗ್‌ದ ಟೆಂಪಲ್ ಆಫ್ ಹೆವೆನ್‌ದಲ್ಲಿ ಮಿಂಚಿನ ವಾತಾವರಣ ಸೃಷ್ಟಿಯಾಯಿತು. ಭಾರತದ ಮಕ್ಕಳು ಚೀನಾ ದೇಶದ ಸಮರ ಕಲೆ ತೈಚಿ ಪ್ರದರ್ಶಿಸಿದರೆ, ಚೀನಾದ ಮಕ್ಕಳು ಭಾರತೀಯ ಯೋಗ ಪ್ರದರ್ಶನವನ್ನು ಭಾರತದ ಪ್ರಧಾನಿ ಶ್ರೀ ಮೋದಿ ಹಾಗೂ ಚೀನಾದ ಪ್ರಧಾನಿಯ ಸಮ್ಮುಖದಲ್ಲಿ ಪ್ರದರ್ಶಿಸಿದರು. ಈ ಸಂದರ್ಭದಲ್ಲಿ ಪ್ರಧಾನಿ ಶ್ರೀ ಮೋದಿ ಅವರು ಮಾತನಾಡಿ, ಟೆಂಪಲ್ ಆಫ್ ಹೆವೆನ್‌ದಲ್ಲಿ ಈ ಕಾರ್ಯಕ್ರಮ ಆಯ್ಕೆ ಮಾಡಿದ್ದಕ್ಕೆ ಚೀನಾದ ಪ್ರಧಾನಿಗಳನ್ನು ಪ್ರಶಂಸಿಸಿದರು. ಸ್ವರ್ಗಕ್ಕಾಗಿ ದೇಹ ಮತ್ತು ಮನಸ್ಸುಗಳ ಸಮತೋಲನ ಅಗತ್ಯ. ಯೋಗ ಇಂತಹ ಅಪರೂಪದ ಕಲೆಯಾಗಿದೆ ಎಂದರು. ಜಗತ್ತಿನ ಪ್ರತಿಯೊಂದು ಭಾಗದಲ್ಲಿ ಈಗ ಹತಾಶೆಯ ಭಾವನೆ ಸಂಚರಿಸುತ್ತಿದ್ದು ಈ ಸಮಸ್ಯೆ ಪರಿಹಾರಕ್ಕೆ "ಯೋಗ" ವೇ ಮದ್ದು ಎಂದು ತಿಳಿಸಿದರು.

### ಆರ್ಥಿಕತೆ : ಮೊದಲ ದೃಷ್ಟಿಕೋನ

ಈ ವಿಷಯಗಳ ಬಗೆಗಿನ ಭಿನ್ನಾಭಿಪ್ರಾಯ ಕುರಿತು ಬಹಿರಂಗವಾಗಿ ಮಾತನಾಡಿದ್ದಲ್ಲಿ ಪರಸ್ಪರ ಬಾಂಧವ್ಯವು ಅಳಿವಿನಂಚಿಗೆ ಸೇರಿ ಹಳಸಬಹುದಾಗಿತ್ತು. ಆದರೆ ಇದು ಭಾರತ – ಚೀನಾ ಒಪ್ಪಂದದಲ್ಲಿಯ ಭಿನ್ನತೆ ಹಾಗೂ ವೈಮನಸ್ಸುಗಳ ಹೊರತಾಗಿಯೂ ಧನಾತ್ಮಕ ಹಾಗೂ ಕೈ ಬಿಡದ ಆರ್ಥಿಕ ಅವಕಾಶಗಳನ್ನು ಹೊಸ ಪ್ರಬುದ್ಧತೆ ಮತ್ತು ಯಥಾರ್ಥತೆಯ ಪ್ರತೀಕವಾಗಿ 'ನಮ್ಮದೇ ಗೆಲುವು' ಎಂಬ ಸಹಕಾರಿ ಪಾಲುದಾರಿಕೆಯ ವ್ಯಾಪ್ತಿಯನ್ನು ವಿಶಾಲವಾಗಿಸಲು ಆಯ್ಕೆ ಮಾಡಿಕೊಂಡಿವೆ. ಇದು ಸಂಪನ್ಮೂಲ ಕ್ಷೇತ್ರದಿಂದ ಹಿಡಿದು ಸ್ಮಾರ್ಟಸಿಟಿ, ರೇಲ್ವೆ, ಸಂಸ್ಕೃತಿ, ಕೌಶಲ್ಯ ಅಭಿವೃದ್ಧಿ, ಬಾಹ್ಯಾಕಾಶ ಹಾಗೂ ಹವಾಮಾನ ಬದಲಾವಣೆಯಂತಹ 24 ಒಪ್ಪಂದಗಳ ಸಹಿಯಲ್ಲಿ ಪ್ರತಿಬಿಂಬತವಾಗಿದೆ.

### ಮೇಕ್ ಇನ್ ಇಂಡಿಯಾ ಅಭಿಯಾನ

"ನಮ್ಮ ಆರ್ಥಿಕ ಪಾಲುದಾರರೊಂದಿಗೆ ನಾವು ಉನ್ನತ ಮಟ್ಟದ ಮಹತ್ವಾಕಾಂಕ್ಷೆ ಇಟ್ಟುಕೊಂಡಿದ್ದೇವೆ. ಅದೇ ರೀತಿಯಾಗಿ ಸಾಕಷ್ಟು ದ್ವಿಪಕ್ಷೀಯ ಅವಕಾಶಗಳು ಹಾಗೂ ನಗರೀಕರಣದಂತಹ ಸವಾಲುಗಳನ್ನು ಸಹ ಕಾಣುತ್ತಿದ್ದೇವೆ" ಎಂದು ಪ್ರಧಾನಿ ಅವರು ಮೇಕ್ ಇನ್ ಇಂಡಿಯಾ ಅಭಿಯಾನದ ಹಿನ್ನೆಲೆಯಲ್ಲಿ ಈ ಮಾತುಗಳನ್ನು ಬೀಜಿಂಗ್‌ನಲ್ಲಿ ಹೇಳಿದ್ದಾರೆ. ಚೀನಾ ಅಧ್ಯಕ್ಷ ಶ್ರೀ ಕ್ಸಿ ಹಾಗೂ ಪ್ರಧಾನಿ ಶ್ರೀ ಲೀ ಅವರೊಂದಿಗಿನ ಈ ಮಾತುಕತೆ ಸಂದರ್ಭದಲ್ಲಿ, ಸಂಪನ್ಮೂಲ ಕ್ಷೇತ್ರದಲ್ಲಿ ಚೀನಾದ ಹೆಚ್ಚಿನ ಪಾಲ್ಗೊಳ್ಳುವಿಕೆಯಿಂದ ಈ ಇಬ್ಬರೂ ನಾಯಕರು ಈ ಅಭಿಯಾನಕ್ಕೆ ಹೆಚ್ಚಿನ ಬೆಂಬಲ ತೋರಿದ್ದನ್ನು ಪ್ರಧಾನಿ ಶ್ರೀ ಮೋದಿ ಪ್ರಸ್ತಾಪಿಸಿದರು. ಆರ್ಥಿಕ ರಂಗದಲ್ಲಿಯ ಪರಿಣಾಮಗಳು ಗಮನಾರ್ಹವಾಗಿದ್ದು, ಕಾರ್ಯಗಳು ಇನ್ನೂ ಪ್ರಗತಿಯಲ್ಲಿವೆ. ಸೆಪ್ಟಂಬರ್ 2014 ರಲ್ಲಿ ಚೀನಾ ಅಧ್ಯಕ್ಷರು ಭಾರತಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಮುಂಬರುವ 5 ವರ್ಷಗಳಲ್ಲಿ ಚೀನಾವು ಭಾರತದಲ್ಲಿ 20 ಬಿಲಿಯನ್ ಡಾಲರ್ ಬಂಡವಾಳ ಹೂಡುವದೆಂದು ಮಾಡಿದ ವಾಗ್ದಾನ ಈಗ ಸಾಕಾರಗೊಂಡಿದೆ, ಶಾಂಘೈನಲ್ಲಿ ಮೇ 16 ರಂದು ಎರಡೂ ಕಡೆಗಳಲ್ಲಿಯ ಉದ್ದಿಮೆದಾರರು 22 ಬಿಲಿಯನ್ ಡಾಲರ್ ಮೌಲ್ಯದ ವ್ಯಾಪಾರ ವಹಿವಾಟು ಒಪ್ಪಂದಗಳಿಗೆ ಅಂಕಿತ ಹಾಕಿದ್ದಾರೆ. ಶಾಂಘೈನಲ್ಲಿ ನಡೆದ ಭಾರತ ಚೀನಾ ಸಿಇಓಗಳ ವೇದಿಕೆಯಲ್ಲಿ ಪ್ರಧಾನಿ ಅವರು ಮಾತನಾಡಿ, ಎರಡೂ ದೇಶಗಳಲ್ಲಿ ಹೆಚ್ಚಿನ ವ್ಯಾಪಾರ – ಉದ್ದಿಮೆಗಳಲ್ಲಿ ಬಂಡವಾಳ ಹೂಡುವಿಕೆಗೆ ಒತ್ತಾಸೆ ವ್ಯಕ್ತಪಡಿಸಿದಾಗ ಅದಕ್ಕೆ ಚೀನಾ ಉದ್ದಿಮೆ ಸಮುದಾಯದಿಂದ ಸಾಕಷ್ಟು ಸಕಾರಾತ್ಮಕ



ಪ್ರತಿಕ್ರಿಯೆ ದೊರೆಯಿತು. ಇದು ಚೀನಾದಲ್ಲಿ ಭಾರತದ ಚಿತ್ರಣ ಬದಲಾಗುತ್ತಿರುವದರ ದ್ಯೋತಕವಾಗಿದೆ. ಶ್ರೀ ಮೋದಿ ಅವರ ಚೀನಾ ಭೇಟಿಯ ವಾರಗಳ ಅವಧಿಯ ನಂತರ ಭಾರತದಲ್ಲಿರುವ ಚೀನಾ ರಾಯಭಾರಿ ಲೀ ಯುಚೆಂಗ್ ಅವರು 'ಮೇಕ್ ಇನ್ ಇಂಡಿಯಾ' ಹಾಗೂ "ಮೇಕ್ ಇನ್ ಚೈನಾ" ಸಂಯೋಜನೆಯಿಂದ 'ಮೇಕ್ ಇನ್ ಚಿಂಡಿಯಾ' ಎಂಬ ಹೊಸ ವ್ಯಾಖ್ಯೆಯನ್ನು ಉಲ್ಲೇಖಿಸುವ ಮೂಲಕ ಏಶಿಯಾದ ಎರಡು ಪ್ರಬಲ ಶಕ್ತಿಗಳಾದ ಭಾರತ ಮತ್ತು ಚೀನಾ ದೇಶದ ಉತ್ಪಾದನೆ ಹಾಗೂ ವ್ಯವಹಾರಗಳಲ್ಲಿ ಪರಸ್ಪರರ ಸಾಮಿಪ್ಯ ಹಾಗೂ ಸಹಯೋಗದ ಚಿಂತನೆ ಮಂಡಿಸಿದ್ದಾರೆ. ನವದೆಹಲಿಯಲ್ಲಿ ಜೂನ್ 10 ರಂದು ಏರ್ಪಡಿಸಲಾಗಿದ್ದ ಚೀನಾ – ಭಾರತ ಔದ್ಯಮಿಕ ಸಹಕಾರ ಎಂಬ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡು ಮಾತನಾಡಿದ ಲೀ ಅವರು ಚೀನಾ ದೇಶವು ಇತ್ತೀಚೆಗೆ ಇನ್ನಿತರರಿಗಾಗಿ ನಾವಿನ್ಯತೆ ಮತ್ತು ಅತ್ಯಾಧುನಿಕ ಗುಣಲಕ್ಷಣ ಹೊಂದಿರುವ "ಮೇಡ್ ಇನ್ ಚೈನಾ –2025" ಎಂಬ ಆಂದೋಲವನ್ನು ಜಾರಿಗೊಳಿಸಿರುವದಾಗಿ ತಿಳಿಸಿದರು. ಇದು ಭಾರತ ಪ್ರಧಾನಿ ಶ್ರೀ ಮೋದಿ ಅವರ ನೇತೃತ್ವದ "ಮೇಕ್ ಇನ್ ಇಂಡಿಯಾ" ಅಭಿಯಾನಕ್ಕೆ ಅನುರೂಪ ಹಾಗೂ ಗೌರವ ಸೂಚಕವಾದದ್ದಾಗಿದೆ ಎಂದರು.

### ಅಭಿವೃದ್ಧಿಯ ಸಹಭಾಗಿತ್ವ

ಅಭಿವೃದ್ಧಿಯ ವಿಷಯದಲ್ಲಿ ಪರಸ್ಪರ ನಿಕಟ ಬಾಂಧವ್ಯ ಹೊಂದುವುದು ಮತ್ತು ಸಹಕಾರಿ ಕ್ಷೇತ್ರದಲ್ಲಿ ಹೊಸ ದಾರಿ ಕಂಡುಕೊಳ್ಳುವುದು ಏಶಿಯಾದ ಈ ಎರಡೂ ದೇಶಗಳ ಬದ್ಧತೆಯಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸಕ್ತ ಮೋದಿ ಸರ್ಕಾರ ಹಿಂದಿನ ಸರ್ಕಾರ ಕೈಗೊಂಡ ಕೆಲಸಗಳನ್ನು ಯಶಸ್ವಿಯಾಗಿ ಮುಂದುವರಿಸಿದೆ. ಈ ದಿಶೆಯಲ್ಲಿ ಮೇ ದಲ್ಲಿ ಜರುಗಿದ ಎರಡೂ ದೇಶಗಳ ಶೃಂಗ ಸಭೆ ಈ ದಿಕ್ಕಿನಲ್ಲಿ ಹೊಸ ಹೆಜ್ಜೆ ಇರಿಸಿದೆ. ಇದರಲ್ಲಿ 1. ಗುಜರಾತ್ ಹಾಗೂ ಮಹಾರಾಷ್ಟ್ರದಲ್ಲಿ ಕೈಗಾರಿಕೆ ಪಾರ್ಕ ನಿರ್ಮಾಣ, 2. ಚೆನ್ನೈ – ಬೆಂಗಳೂರು – ಮೈಸೂರ ರೇಲ್ವೆ ಮಾರ್ಗದ ವೇಗವರ್ಧನೆ ಸೇರಿದಂತೆ, ದಿಲ್ಲಿ – ನಾಗಪೂರ ವಿಭಾಗಲ್ಲಿ ಅತೀವೇಗದ ರೈಲು ಸಂಪರ್ಕದ ಸಾಧ್ಯತೆ ಕುರಿತು ಅಧ್ಯಯನ, ರೇಲ್ವೆ ವಿಶ್ವವಿದ್ಯಾಲಯ ಸ್ಥಾಪನೆಯ ಕುರಿತಂತೆ ಸಹಕಾರ ಪಡೆಯುವುದು 3. ಚೀನಾದ ಗುವಾಂಝೊ ಪ್ರಾಂತ್ಯ ಮತ್ತು ಗುಜರಾತ ರಾಜ್ಯದ ನಡುವೆ ಸ್ನೇಹ ಸೇತುವೆ ಹಾಗೂ ಗುವಾಂಝೊ ಮತ್ತು ಅಹ್ಮದಾಬಾದ್ ಸೋದರಿ ನಗರ ಬಾಂಧವ್ಯ 4. ಭಾರತದ ಗಿಫ್ಟ ಸಿಟಿ ಹಾಗೂ ಚೀನಾದ ಶೆನ್‌ಝೆನ್ ಮಧ್ಯ ಸ್ಮಾರ್ಟ್ ಸಿಟಿ ಯೋಜನೆ 5. ಮುಂಬಯಿ ಶಾಂಘೈ ಹಾಗೂ ಅಹ್ಮದಾಬಾದ್ ಗುವಾಂಝೊ ಮತ್ತು, ಹೈದರಾವಾದ್ ಕಿಂಗ್ದಾವೊ, ಔರಾಂಗಾಬಾದ್ ಡುನ್ಹುವಾಂಗ್, ಚೆನ್ನೈ ಹಾಗೂ ಚೀನಾದ ಚಾಂಗ್‌ಕಿಂಗ್ ನಡುವೆ ಸೋದರಿ ನಗರಿ ಮತ್ತು ಗುಜರಾತ್ ಹಾಗೂ ಚೀನಾದ ಗೌಂಗಡಾಂಗ್ ಮತ್ತು ಕರ್ನಾಟಕ ಹಾಗೂ ಸಿಚುವಾನ್ ಸೋದರಿ ಪ್ರಾಂತ್ಯ ರಾಜ್ಯ ಸಂಬಂಧ ಬೆಸೆಯಲು ಒಪ್ಪಂದ ಮಾಡಿಕೊಳ್ಳಲಾಗಿದೆ.

### ಜಾಗತಿಕ ಸಹಕಾರ : ವಿಸ್ತೃತ ನೋಟ

ಭಾರತ ಹಾಗೂ ಚೀನಾಗಳೆರಡೂ ತಮ್ಮ ಸಂಬಂಧಗಳ ಜಾಗತಿಕ ದೃಷ್ಟಿಕೋನದ ಹಿನ್ನೆಲೆಯಲ್ಲಿ ಜಗತ್ತನ್ನು ಬಾಧಿಸುತ್ತಿರುವ ವಾತಾವರಣದಲ್ಲಿನ ಬದಲಾವಣೆ ಮತ್ತು ಭಯೋತ್ಪಾದನೆ ಸಂಬಂಧಿ ವಿಚಾರಗಳಲ್ಲಿ ತೊಡಗಿಸಿಕೊಂಡಿವೆ. ಬಾಹ್ಯಕಾಶ ಸಹಕಾರ – 2015 – 2020 ಒಪ್ಪಂದಕ್ಕೆ ಭಾರತ – ಚೀನಾಗಳು ಸಹಿ ಹಾಕಿದ್ದು, ಈ ಕ್ಷೇತ್ರದಲ್ಲಿ ಏಶಿಯಾದ ಈ ಬೃಹತ್ ರಾಷ್ಟ್ರಗಳು ಹೊಸ ಸಾಧ್ಯತೆಗಳನ್ನು ತೆರೆದಂತಾಗಿದೆ. ಮಹತ್ವದ ಬೆಳವಣಿಗೆಯೊಂದರಲ್ಲಿ ಭಾರತವು ಅಣು ಪೂರೈಕೆದಾರರ ದೇಶಗಳ ಗುಂಪಿಗೆ ಸೇರ್ಪಡುವ ಸಂಬಂಧದ ಆಸಕ್ತಿಯನ್ನು ಚೀನಾ ಮೊದಲಬಾರಿಗೆ ಸಕಾರಾತ್ಮಕವಾಗಿ ಗಮನಿಸಿದೆ. ವಿಶ್ವಮಟ್ಟದಲ್ಲಿ ಭಾರತ ಹೊಂದಿರುವ ಹಲವಾರು ಆಸಕ್ತಿ ಪರ ವಿಷಯಗಳ ಬಗ್ಗೆ ಚೀನಾ ತನ್ನ ಬೆಂಬಲವನ್ನು ವ್ಯಕ್ತಪಡಿಸಿದೆಯಾದರೂ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಖಾಯಂ ಸ್ಥಾನದ ಆಕಾಂಕ್ಷೆಗೆ ಮುಕ್ತ ಬೆಂಬಲ ನೀಡುವಲ್ಲಿ ಬದ್ಧವಾಗಿಲ್ಲ. ಹಾಗೊಂದು ವೇಳೆ ಈ ವಿಷಯದಲ್ಲಿ ಚೀನಾ ಭಾರತದ ಬೆಂಬಲಕ್ಕೆ ನಿಂತರೆ ಈ ಎರಡೂ ದೇಶಗಳ ಪರಸ್ಪರ ಸಂಬಂಧಗಳಲ್ಲಿ ಭಾರೀ ಸುಧಾರಣೆಯಾಗಲಿದ್ದು, ಇದರಿಂದ ಎರಡೂ ದೇಶಗಳ ಮಧ್ಯ ಇರುವ ನಂಬಿಕೆಯ ಕೊರತೆ ನೀಗಿ, ಇನ್ನೂ ಹೆಚ್ಚು ಒಡನಾಟ ಸಾಧ್ಯವಾಗಲಿದೆ. ಪ್ರಾದೇಶಿಕ ಹಾಗೂ ಜಾಗತಿಕ ಮಟ್ಟದಲ್ಲಿ ಶಾಂತಿ, ಭದ್ರತೆ ಹಾಗೂ ಪ್ರಗತಿಯ ವಿಚಾರದಲ್ಲಿ ಏಶಿಯಾದ ಈ ದೊಡ್ಡ ರಾಷ್ಟ್ರಗಳು ಪರಸ್ಪರ ಸಹಯೋಗವನ್ನು ಬಲಗೊಳಿಸಿ ಸಕಾರಾತ್ಮಕ ಮಾತುಕತೆಗೆ ಮುಂದಾದರೆ, ವಿಶ್ವಮಟ್ಟದಲ್ಲಿ ಬಹಳಷ್ಟು ಗುಣಾತ್ಮಕ ಬೆಳವಣಿಗೆಗಳು ಸಾಧ್ಯವಾಗಲಿದೆ. ಪ್ರಧಾನಿ ಅವರು ಚೀನಾಕ್ಕೆ ಭೇಟಿ ನೀಡಿದ ವೇಳೆ ಈ ಎರಡೂ ದೇಶಗಳ ಸಹಭಾಗಿತ್ವವನ್ನು ಅವುಗಳ ಆರ್ಥಿಕ ಬೆಳವಣಿಗೆ ಹಾಗೂ ಅಂತಾರಾಷ್ಟ್ರೀಯ ಸ್ಥಾನಮಾನದ ಹಿನ್ನೆಲೆಯಲ್ಲಿ "ಬೃಹತ್ ಶಕ್ತ ರಾಷ್ಟ್ರ"ಗಳೆಂದು ಬಣ್ಣಿಸಲಾಗಿದ್ದು, ಏಶಿಯಾದ ರಾಷ್ಟ್ರಗಳ ಆಶೋತ್ತರಗಳನ್ನು ಈಡೇರಿಸಬಲ್ಲವುಗಳೆಂದು ಬಿಂಬಿಸಲಾಗಿದೆ.

ಆದಾಗ್ಯೂ ಈ ದೇಶಗಳ ಸಂಬಂಧ ವೃದ್ಧಿಯಲ್ಲಿ ಹಲವು ಸಮಸ್ಯೆಗಳು ತೊಡರುಗಾಲಾಗಿವೆ. ಭಾರತ ಚೀನಾ ಮಧ್ಯದ ಗಡಿ ತಂಟೆ ಆ ವಲಯದಲ್ಲಿ ಕಾಲಕಾಲಕ್ಕೆ ಆತಂಕ ಸೃಷ್ಟಿಸಿ ಪರಸ್ಪರ ವಿಶ್ವಾಸಾರ್ಹತೆಯ ಕೊರತೆ ಕಂಡುಬರುತ್ತಿದೆ. ಎರಡೂ ದೇಶಗಳ ಸ್ಥೂಲತೆಯನ್ನು ದೃಷ್ಟಿಯಲ್ಲಿರಿಸಿ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಾದುದು ಅಗತ್ಯವಾಗಿದೆ. ಚೀನಾದ ಒಂದು ಗಾದೆ ಹೀಗಿದೆ– "ಸಾವಿರ ಮೈಲುಗಳ ಪ್ರಯಾಣ ಒಂದು ಪುಟ್ಟ ಹೆಜ್ಜೆಯೊಂದಿಗೆ ಆರಂಭಗೊಳ್ಳುತ್ತದೆ". ಈ ಎರಡೂ ದೇಶಗಳ ಸಂಬಂಧದ ವಿಚಾರದಲ್ಲಿ ಬಹಳಷ್ಟು ಸಣ್ಣ ಹೆಜ್ಜೆಗಳನ್ನು ಇಡಲಾಗಿದೆ. ಈ ಎರಡೂ ದೇಶಗಳ ನಾಯಕರು ಸಂಬಂಧ ಸುಧಾರಣೆಗೆ ಇರುವ ಅಡೆತಡೆಗಳನ್ನು ನಿವಾರಿಸಿ, ಪರಿಹಾರಕ್ಕೆ ಅಗತ್ಯವಾದ ಸರಳತೆ ಹಾಗೂ ಕಲ್ಪನೆಯನ್ನು ಪ್ರದರ್ಶಿಸಬೇಕು. ಈ ಕ್ರಮ, ಭಾರತ – ಚೀನಾ ಸಂಬಂಧಗಳು ಮತ್ತೊಂದು ಆಯಾಮ ಪಡೆದುಕೊಂಡು ಏಶಿಯಾ ಉಪಖಂಡದಲ್ಲಿ ಬೆಳವಣಿಗೆಗೆ ಬೇಕಾದ ಸ್ಪರ್ಧಾತ್ಮಕ ಗುರಿ ಹಾಗೂ ಪ್ರಾದೇಶಿಕ ರಾಜನೀತಿಗೆ ವಿಶ್ವಾಸಾರ್ಹತೆ ತುಂಬಲು ಸಾಧ್ಯವಾಗುತ್ತದೆ. ❑

# ಬಹುರಾಷ್ಟ್ರೀಯತೆಗೆ ಸವಾಲು

* ದಿಲೀಪ್ ಸಿನ್ಹಾ
ಕನ್ನಡಕ್ಕೆ : ಶಶಿಧರ ಡೋಂಗ್ರೆ



ಅವಿಚ್ಛಿನ್ನವಾಗಿ ಮುಂದುವರಿಯುತ್ತಿರುವ ವಿಶ್ವ ಹಣಕಾಸಿನ ಮುಗ್ಗಟ್ಟು ಮತ್ತು ಪೂರ್ವ ಮತ್ತು ಪಶ್ಚಿಮಗಳ ನಡುವೆ ಮತ್ತೆ ಎದ್ದಿರುವ ಬಿಕ್ಕಟ್ಟು ಬಹುರಾಷ್ಟ್ರೀಯ ಸಂಸ್ಥೆಗಳು ಉಸಿರುಗಟ್ಟುವಂತೆ ಮಾಡಿವೆ. ಪ್ರಜಾತಂತ್ರ ಮತ್ತು ವಿಶ್ವವನ್ನು ಒಂದು ಹಳ್ಳಿಯನ್ನಾಗಿ ನೋಡುವ ಜಾಗತೀಕರಣದ ಬಗ್ಗೆ ಇದ್ದ ಉತ್ಸಾಹ ಕುಂಠಿತವಾಗಿದೆ. ಹೆಚ್ಚುತ್ತಿರುವ ನಿರುದ್ಯೋಗ, ಅಸಮಾನತೆ ಮತ್ತು ಅಂತರ್ಧರ್ಮೀಯ ಘರ್ಷಣೆಗಳು, ಜಾಗತೀಕರಣದ ಪ್ರಖರ ಸಮರ್ಥಕರ ಹುರುಪನ್ನೂ ತಣ್ಣಗಾಗಿಸಿದೆ. ಅಂತಾರಾಷ್ಟ್ರೀಯ ಸಂಸ್ಥೆಗಳು ರೂಪಿಸಿದ ಪರ್ಯಾಯ ದಾರಿಗಳು ಮತ್ತು ಅವುಗಳನ್ನು ಕಾರ್ಯಗತಗೊಳಿಸುವ ಯೋಜನೆಗಳು, ಅಫ್ಘಾನಿಸ್ತಾನ, ಇರಾಕ್, ಲಿಬಿಯಾ ಮತ್ತು ದಕ್ಷಿಣ ಸೂಡಾನ್‌ಗಳಂತಹ ದೇಶಗಳಲ್ಲಿನ ಬಿಕ್ಕಟ್ಟನ್ನು ನಿವಾರಿಸಲು ಮತ್ತು ಒಂದು ಮಟ್ಟದ ಸ್ಥಿರತೆಯನ್ನು ತರಲು, ಅಸಮರ್ಥವಾಗಿವೆ. ಆ ದೇಶಗಳಲ್ಲಿನ ಗೊಂದಲ, ಅರಾಜಕತೆ ಇತ್ಯಾದಿಗಳೆಲ್ಲ ಸೇರಿಕೊಂಡು, ನಿರಾಶ್ರಿತರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಇವೆಲ್ಲದರಿಂದ, ಪಾಶ್ಚಿಮಾತ್ಯ ದೇಶಗಳು ಇಂಥ ಪ್ರದೇಶಗಳಲ್ಲಿ ತೊಡಗಿಕೊಳ್ಳುವುದನ್ನು ಹುನ್ನಾರವೆಂದೇ ಬಹಳಷ್ಟು ದೇಶಗಳು ತಿಳಿಯಲಾರಂಬಿಸಿವೆ. ಇಂತಹ ತಿಳಿವಳಿಕೆ ಅಭಿವೃದ್ಧಿ ಹೊಂದುತ್ತಿರುವ ವಲಯಗಳಲ್ಲೇ ಹೆಚ್ಚು ಮೂಡುತ್ತಿದ್ದಂತೆ ಕಾಣುತ್ತದೆ. ಕೆಲವು ಅಂತಾರಾಷ್ಟ್ರೀಯ ಭಯೋತ್ಪಾದಕ ಸಂಸ್ಥೆಗಳು ತೋರುವ ಸಂಘಟನಾ ಚಾತುರ್ಯ ಮತ್ತು ಯೋಜನಾ ಸಾಮರ್ಥ್ಯ – ಕಾರ್ಯಕರ್ತರನ್ನು ನೇಮಿಸಿಕೊಳ್ಳುವ, ಖಂಡಾಂತರ ಹಣಕಾಸಿನ ನಿರ್ವಹಣೆ ಇತ್ಯಾದಿಗಳು – ನಿಜಕ್ಕೂ ಭಯ ಹುಟ್ಟಿಸುವಂತಿದ್ದು, ಈಗಿರುವ ವಿಶ್ವ ವ್ಯವಸ್ಥೆಗೆ ಒಂದು ದೊಡ್ಡ ಸವಾಲಾಗಿದೆ. ಎರಡನೇ ಮಹಾಯುದ್ಧದ ಬಳಿಕ ಉಂಟಾದ ವಿಶ್ವ ವ್ಯವಸ್ಥೆಯ ಒಂದು ಅಂಗವಾಗಿ ಕೆಲವು ಬಹುರಾಷ್ಟ್ರೀಯ ಸಂಸ್ಥೆಗಳನ್ನು ಪ್ರಾರಂಭಿಸಲಾಯಿತು. ಶೀತಲಯುದ್ಧದ ಕಾಲದಲ್ಲೂ, ತಮ್ಮ ತಮ್ಮ ಪ್ರಾಬಲ್ಯಕ್ಕಾಗಿ ಸೆಣಸಾಡುವ ಆರ್ಥಿಕ ಸಂಘಟನೆಗಳ ಮತ್ತು ರಕ್ಷಣಾ ಸಂಸ್ಥೆಗಳ ನಡುವೆಯೂ, ಈ ಬಹುರಾಷ್ಟ್ರೀಯ ಸಂಸ್ಥೆಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡವು. ಮುಂದೆಯೂ ಅವು ಹೀಗೆಯೇ ಇರುತ್ತದೆಯೇ ಎಂಬ ಅನುಮಾನಗಳು ಹೆಚ್ಚಾಗುತ್ತಿವೆ. ಪೂರ್ವ ಮತ್ತು ಪಶ್ಚಿಮಗಳ ನಡುವಿನ ಬಿರುಕು ಈ ಸಂಸ್ಥೆಗಳಿಗೆ ನಡುಕ ಹುಟ್ಟಿಸಿದೆ. ಇದೆಲ್ಲದರ ನಡುವೆಯೂ, ಮುಂಬರುವ ಸವಾಲುಗಳನ್ನು ಎದುರಿಸಲು ಈ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಸಾಧ್ಯವೇ?

### ಪೂರ್ವ–ಪಶ್ಚಿಮ ತಿಣುಕಾಟ

ಪೂರ್ವ–ಪಶ್ಚಿಮದ ಈ ಹೊಸ ತಿಣುಕಾಟವು ಹಿಂದೆಂದೊ ನಡೆದಿದ್ದಿರಬಹುದೆಂಬ ನಿಗೂಢ ಭಯಪಡಿಸುವ ಪೂರ್ವಾನುಭವದ ಭಾವವನ್ನು ಉಂಟು ಮಾಡುತ್ತಿದೆ. ಶೀತಲ ಯುದ್ಧ ಮುಗಿದುದು ಒಂದು ಅಲ್ಪ ವಿರಾಮವಾಗಿ ತೋರುತ್ತಿದೆ. ಇದೇ ಜೂನ್ 7 ಮತ್ತು 8 ರಂದು ಜರ್ಮನಿಯ ಸ್ಕಾಲ್ ಎಲ್ಮೌ ನಲ್ಲಿ ಸೇರಿದ್ದ ಜಿ–7 ನ ಏಳು ಪಾಶ್ಚಿಮಾತ್ಯ ದೇಶಗಳ ನಾಯಕರು, ಉಕ್ರೇನ್ ನ ಬಗ್ಗೆ ರಷ್ಯಾಗೆ ಒಂದು ನಿಷ್ಠುರ ಎಚ್ಚರಿಕೆ ಕೊಟ್ಟರು. "ಜಿ–7 ದೇಶಗಳು ಕ್ರಿಮಿಯಾವನ್ನು ರಷ್ಯಾದೊಳಗೆ ಸೇರಿಸಿಕೊಳ್ಳುವುದನ್ನು ಸಹಿಸುವುದಿಲ್ಲ ಮತ್ತು ಅವರು 'ಇಂಥ ನಡತೆಯನ್ನು ಪ್ರದರ್ಶಿಸಿದ ರಷ್ಯಾ ದೇಶ ದಂಡ ತೆರಬೇಕಾದೀತೆಂದೂ" ಹೇಳಿದರು.ಆದರೆ, ಅಧ್ಯಕ್ಷ ಶ್ರೀ ಪುಟಿನ್, ಕ್ರಿಮಿಯಾ ವನ್ನು ಬಿಟ್ಟುಕೊಡಲು ತಯಾರಿಲ್ಲ. ಕ್ರಿಮಿಯಾದಲ್ಲಿ ಅಧಿಕ ಸಂಖ್ಯೆಯಲ್ಲಿರುವ ರಷ್ಯನ್ ಸಂಜಾತರು ಉಕ್ರೇನ್ ನಿಂದ ಬೇರ್ಪಡಲು ಬಯಸುತ್ತಿದ್ದಾರೆ ಮತ್ತು ಉಕ್ರೇನ್‌ನಲ್ಲಿ ಮಾರ್ಚ್ 2014 ರಲ್ಲಿ ನಡೆದ ಮತದಾನದಲ್ಲಿ ಸಂಯುಕ್ತ ರಷ್ಯಾಗೆ ಸೇರಲು ತಮ್ಮ ಇಂಗಿತವನ್ನು ವ್ಯಕ್ತಪಡಿಸಿದ್ದರು. ಪೂರ್ವ ಉಕ್ರೇನ್ ನಲ್ಲಿರುವ, ಈ ರಷ್ಯನ್ ಸಂಜಾತರಿಗೆ ಸಹಾಯ ಹಸ್ತ ಚಾಚುವುದನ್ನು ನಿಲ್ಲಿಸಲು ಶ್ರೀ ಪುಟಿನ್ ಅವರಿಗೆ ಯಾವುದೇ ಕಾರಣಗಳಿದ್ದಂತಿಲ್ಲ. ನ್ಯಾಟೊ ರಕ್ಷಣಾ ವ್ಯವಸ್ಥೆಯು ತನ್ನ ಕಾಲ ಬಳಿಗೇ ನುಸುಳುವುದನ್ನು ಕಂಡು ರಷ್ಯಾ ಕ್ಷೋಭೆಗೊಂಡಿದೆ ಮತ್ತು ಪಾಶ್ಚಿಮಾತ್ಯ ದೇಶಗಳೊಂದಿಗೆ ತನ್ನ ಅಸಮಾಧಾನ ಸೂಚಿಸಿದೆ. ಎರಡನೇ ಮಹಾಯುದ್ಧದ ಕಾಲದಲ್ಲಿ ವಾರ್ಸಾ ಒಪ್ಪಂದಕ್ಕೆ ಸಹಿ ಹಾಕಿದ್ದ, ಹತ್ತು ದೇಶಗಳು ಈಗ ನ್ಯಾಟೊ ಸದಸ್ಯ ರಾಷ್ಟ್ರಗಳಾಗಿವೆ. ಇದೆಲ್ಲದರಿಂದಾಗಿ ರಷ್ಯಾ ಚೀನಾದೊಂದಿಗೆ ತನ್ನ ರಾಜತಾಂತ್ರಿಕ ಸಂಬಂಧಗಳನ್ನು ಬಲಪಡಿಸುತ್ತಿದೆ ಮತ್ತು ವಿಮಾನಯಾನ ಕ್ಷೇತ್ರದಲ್ಲೂ ಸಹಕರಿಸುತ್ತಿದೆ. ರಷ್ಯಾದ ಮೇಲೆ ವಿಧಿಸಿರುವ ಈ ನಿರ್ಬಂಧಗಳು ಯೂರೋಪಿಯನ್ ದೇಶದ ಮೇಲೂ ಪರಿಣಾಮ ಬೀರಿದೆ. ಸಂಯುಕ್ತ

* ವಿಶ್ವಸಂಸ್ಥೆಗೆ ರಾಯಭಾರಿಯಾಗಿದ್ದರು. Email : dilipsinha@hotmail.com



ಯೂರೋಪ್ ತನ್ನ ತೈಲ, ಗ್ಯಾಸ್ ಇತ್ಯಾದಿ ಶಕ್ತಿ ಉತ್ಪನ್ನಗಳಿಗೆ ರಷ್ಯಾ ದೇಶದ ಮೇಲೆ ಅವಲಂಬಿಸಿದೆ ಮತ್ತು ಅದರೊಂದಿಗಿನ ವ್ಯಾಪಾರ, ಒಟ್ಟು ವ್ಯಾಪಾರದಲ್ಲಿ ಮೂರನೇ ಸ್ಥಾನ ಗಳಿಸಿಕೊಳ್ಳುವಷ್ಟು ದೊಡ್ಡದು. ಪ್ರಕ್ಷುಬ್ಧ ಮಧ್ಯಪ್ರಾಚ್ಯದೊಂದಿಗಿನ ತನ್ನ ತೈಲ ಸಂಬಂಧಿತ ಅವಲಂಬನೆಯನ್ನು ಆದಷ್ಟು ಕಡಿಮೆ ಮಾಡಿಕೊಳ್ಳುವ ಉದ್ದೇಶದಿಂದ ಸಂಯುಕ್ತ ಯೂರೂಪ್ ರಷ್ಯಾದಿಂದ ಆಯಾತಗೊಳ್ಳುವ ತೈಲ ಮತ್ತು ಗ್ಯಾಸ್ ನ ಪರಿಮಾಣವನ್ನು ಹೆಚ್ಚಿಸಿದೆ. ಇದಲ್ಲದೆ ಸಂಯುಕ್ತ ಯೂರೋಪ್ ಬೆಳೆಯುತ್ತಿರುವ ರಷ್ಯಾದ ಶ್ರೀಮಂತಿಕೆಯ ಸದುಪಯೋಗವನ್ನು ಪಡೆದುಕೊಳ್ಳಲು ಹವಣಿಸುತ್ತಿದೆ.

### ವಿಶ್ವಸಂಸ್ಥೆ ಭದ್ರತಾ ಮಂಡಳಿ

ಶೀತಲ ಯುದ್ಧ ಮುಗಿದ ಮೇಲೆ ವಿಶ್ವ ಸಂಸ್ಥೆಯ ಭದ್ರತಾ ಮಂಡಲಿ ವಿಶ್ವದ ಅನೇಕ ಸಮಸ್ಯೆಗಳಿಗೆ ಮುಂದಾಳತ್ವವನ್ನು ವಹಿಸುವ ಆಸ್ಥೆ ತೋರಿಸಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಆ ಹುರುಪು ಕ್ಷೀಣಿಸಿದಂತೆ ಕಾಣುತ್ತದೆ. ವಿಶ್ವದ ಅನೇಕ ಕಡೆಗಳಲ್ಲಿ ಹಿಂಸೆ, ಪ್ರಕ್ಷುಬ್ದತೆಗಳು ಹರಡುತ್ತಿರುವಾಗ, ಭದ್ರತಾ ಮಂಡಲಿಯು ಮಾನವೀಯ ನೆಲೆಯಲ್ಲಿ ಕೊಡುತ್ತಿರುವ ಹೇಳಿಕೆಗಳು ಡಾಂಭಿಕ ಸ್ವರೂಪವನ್ನು ಪಡೆದುಕೊಂಡಿವೆ. 2011ರ ದಕ್ಷಿಣ ಸೂಡಾನ್‌ಗೆ ಕಳಿಸಿದ ಶಾಂತಿಪಡೆಯೇ ಕೊನೆಯದು. ಪ್ರಶ್ನೆಯಾಗಿಯೇ ಉಳಿದ ಲಿಬಿಯಾದ ಮೇಲೆ ಮಿಲಿಟರಿ ಆಕ್ರಮಣಕ್ಕೆ ಕೊಟ್ಟ ಅನುಮತಿಯೂ 2011 ರಲ್ಲಿ ನಡೆದಿದ್ದು. ಭದ್ರತಾ ಮಂಡಲಿಯ ಸ್ಥಿರ ಸದಸ್ಯರ ನಡುವೆ ಎರಡು ದಶಕಗಳಿಂದ ಇದ್ದ ಬಾಂಧವ್ಯ, ಪಶ್ಚಿಮ ದೇಶಗಳ ಮುಂದಾಳತ್ವದಲ್ಲಿ ನಡೆದ ಲಿಬಿಯಾ ಬಾಂಬ್ ದಾಳಿಯೊಂದಿಗೆ ಹಳಸಿತು. ಅದಾದ ಮೇಲೆ ರಷ್ಯಾ ಮತ್ತು ಚೀನಾ ಇಂಥ ಯಾವುದೇ ನಿರ್ಣಯದ ಅಂಗೀಕಾರಕ್ಕೆ ಸಮ್ಮತಿ ಸೂಚಿಸಲಿಲ್ಲ. ಸಿರಿಯಾ ವಿರುದ್ದ ಮಾಡಲಾದ ಠರಾವೊಂದನ್ನು ಅವು ವೀಟೊ ಮೂಲಕ ವಿರೋಧಿಸಿದವು ಮತ್ತು ಅದರ ವಿರುದ್ಧ ಮಿಲಿಟರಿ ಕಾರ್ಯಾಚರಣೆ ನಡೆಸುವುದಕ್ಕೆ ಅನುಮತಿ ಕೊಡಲಿಲ್ಲ. ಭದ್ರತಾ ಮಂಡಲಿಯ ಸುಧಾರಣೆಯೂ ಮುಖ್ಯವಾಹಿನಿಯಿಂದ ಹಿಂದೆ ಸರಿದಂತೆ ಕಾಣುತ್ತದೆ.

### ಜಿ–7 ನ ಮರುಪ್ರವೇಶ

1975 ರಲ್ಲಿ ಪಾಶ್ಚಿಮಾತ್ಯ ದೇಶಗಳು ತಮ್ಮ ನಡುವೆ ಆಂತರಿಕ ಸಮಾಲೋಚನೆಗಳಿಗಾಗಿ ಜಿ–7 ಎಂಬ ಸಂಸ್ಥೆಯನ್ನು ಪ್ರಾರಂಭಿಸಿದವು. ರಷ್ಯಾ ದೇಶವನ್ನು ಸೇರಿಸಿಕೊಂಡು ಜಿ–8 ಎಂದು ಮರುನಾಮಕರಣ ಮಾಡುವ ಪ್ರಯೋಗವನ್ನು ಈಗ ಕೈ ಬಿಡಲಾಗಿದೆ. ರಷ್ಯಾ ಇದ್ದಿದ್ದರಿಂದ ಈ ಗುಂಪು ಉಪಯೋಗಿಸುತ್ತಿದ್ದ ಭಾಷಾ ನಿಯಂತ್ರಣ, ಈಗ ರಷ್ಯಾ ತೆರವಿನಿಂದ ಇಲ್ಲವಾದ ಹಾಗೆ ಕಾಣುತ್ತದೆ. ಜಿ–7 ಈಗ ರಷ್ಯಾ ಮತ್ತು ಚೀನಾ ವಿರುದ್ಧ ಪ್ರಣಾಳಿಕೆಗಳನ್ನು ಹೊರಡಿಸುವುದನ್ನು ಮತ್ತೆ ಪ್ರಾರಂಭಿಸಿದೆ ಮತ್ತು ಅಭಿವೃದ್ಧಿಶೀಲ ದೇಶಗಳ ಕೋರಿಕೆಗಳ ಬಗ್ಗೆ ಉದಾಸೀನತೆಯನ್ನು ತೋರಿಸುತ್ತಿದೆ. ಎಲ್ಮೌದಲ್ಲಿ ನಡೆದ ಜಿ–7 ಸಭೆಯು ಹೊರಡಿಸಿದ ಪ್ರಣಾಳಿಕೆಯು ಪಶ್ಚಿಮ ದೇಶಗಳ ಕಾರ್ಯಸೂಚಿಯನ್ನು ಒಳಗೊಂಡಿತ್ತಾದರೂ, ಅದನ್ನು ಊರ್ಜಿತಗೊಳಿಸುವುದು ಅನುಮಾನ. ವ್ಯಾಪಾರ ಸಂಬಂಧೀ ಮಾತುಕತೆಗಳು ಇದಕ್ಕೆ ಒಂದು ಉದಾಹರಣೆ. ದೋಹಾ ಅಭಿವೃದ್ಧಿ ಸುತ್ತು ಎಂದೇ ಪ್ರಖ್ಯಾತವಾದ, ವಿಶ್ವ ವ್ಯಾಪಾರ ಸಂಸ್ಥೆಯು 15 ವರ್ಷದಿಂದ ಮುನ್ನಡೆಸುತ್ತಿದ್ದ ವ್ಯಾಪಾರದ ಬಗೆಗಿನ ಚರ್ಚೆಗಳು ಈಗ ಎಡವುತ್ತಿವೆ. ಇದಕ್ಕೆ ಮುಖ್ಯ ಕಾರಣ, ಪಶ್ಚಿಮ ದೇಶಗಳು, ಈ ಸುತ್ತಿನಿಂದ 'ವ್ಯಾಪಾರ ಸೌಲಭ್ಯ ಒಪ್ಪಂದ' ವನ್ನು ಹೊರಗಿರಿಸಿದ್ದೇ ಆಗಿದೆ. ನೈರೋಬಿಯಲ್ಲಿ ಡಿಸೆಂಬರ್‌ನಲ್ಲಿ ನಡೆಯುತ್ತಿರುವ ಡಬ್ಲ್ಯುಟಿಓ ಮಂತ್ರಿ ಸಮುಚ್ಚಯ ಸಭೆಯಲ್ಲಿ ಈ ಒಪ್ಪಂದವನ್ನು ಜಾರಿಗೆ ತರುವ ಸಂಬಂಧ ಪಾಶ್ಚಿಮಾತ್ಯ ದೇಶಗಳು, ಬದಲಾದ ಈ ಪ್ರಣಾಳಿಕೆಯನ್ನು ಎಲ್ಲರೂ ಒಪ್ಪಬೇಕೆಂದು ಬಯಸಿದ್ದವು. ಆದರೆ, ಆ ಸುತ್ತಿನಲ್ಲಿ ಇದ್ದ ಬೇರೆ ಪ್ರಣಾಳಿಕೆಗಳ ಬಗ್ಗೆ ಅವರಿಗೆ ಹೆಚ್ಚು ಕಾಳಜಿಯಿದ್ದಂತಿಲ್ಲ. ಕೆಲವೊಂದನ್ನು ಬಿಟ್ಟು, ತಮಗೆ ಅನುಕೂಲಕರವಾದದ್ದನ್ನು ಇಟ್ಟುಕೊಂಡು, ಬೇರೆಯದರ ಬಗ್ಗೆ ಕಾಳಜಿ ತೋರದಿದ್ದರೆ, 'ಅಭಿವೃದ್ಧಿ ಸುತ್ತು' ಎಂದು ಕರೆಯುವುದಾದರೂ ಹೇಗೆ?

### ಬ್ರಿಕ್ಸ್

ಬ್ರಿಕ್ಸ್ ಸಂಸ್ಥೆಯನ್ನು ಕಟ್ಟುವಲ್ಲಿ ಮತ್ತು ಅದನ್ನು ಸಕ್ರಿಯವಾಗಿಡುವಲ್ಲಿ ಭಾರತ ಮಹತ್ತರ ಪಾತ್ರ ವಹಿಸುತ್ತಿದೆ. ಬ್ರಿಕ್ಸ್ ಅಭಿವೃದ್ಧಿ ಬ್ಯಾಂಕ್ ಒಂದನ್ನು ಸ್ಥಾಪಿಸಬೇಕೆಂಬ ಭಾರತದ ಸಲಹೆಯನ್ನು ಸಂಸ್ಥೆ ಒಪ್ಪಿದೆ ಮತ್ತು ಅದನ್ನು "ಹೊಸ ಅಭಿವೃದ್ಧಿ ಬ್ಯಾಂಕ್" ಎಂದು ಹೆಸರಿಡಲಾಗಿದೆ ಮತ್ತು ಅದು ಮುಂದಿನ ವರ್ಷದಿಂದ ಕಾರ್ಯಾರಂಭ ಮಾಡುವ ನಿರೀಕ್ಷೆ ಇದೆ. ಮೊದಲೇ ಒಪ್ಪಿತವಾದಂತೆ, ಅದರ ಮೊದಲ ಅಧ್ಯಕ್ಷರು ಭಾರತದವರೇ ಆಗಿರುತ್ತಾರೆ. ಆ ಬ್ಯಾಂಕ್ 50 ಬಿಲಿಯನ್ ಡಾಲರುಗಳ ಮೂಲ ಬಂಡವಾಳ ಹೊಂದಿ, ಅಭಿವೃದ್ಧಿ ಯೋಜನೆಗಳಿಗೆ ವಿತ್ತೀಯ ಸಹಾಯ ನೀಡುತ್ತದೆ. ಸದಸ್ಯ ದೇಶಗಳ 'ಪಾವತಿ ಸಮತೋಲನ' ದ ಅವಶ್ಯಕತೆಗಳನ್ನು ಪೂರೈಸಲು ಒಂದು ಮೀಸಲು ನಿಧಿಯನ್ನೂ ಇಡಲಾಗುತ್ತದೆ. ವಿಶ್ವದ ಬಹುರಾಷ್ಟ್ರೀಯ ಸಂಸ್ಥೆಗಳಲ್ಲಿ, ಆಯಾ ದೇಶಗಳ ಆರ್ಥಿಕತೆಗೆ ಅನುಗುಣವಾಗಿ, ತಮ್ಮ ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ಹಂಚಿಕೊಳ್ಳುವ ಮತ್ತು ಕಾರ್ಯಕ್ರಮಗಳನ್ನು ನಿರೂಪಿಸಲು ಅಸಾಧ್ಯವಾದ ಕಾರಣ, ಬ್ರಿಕ್ಸ್ ನಂತಹ ಸಂಸ್ಥೆಗಳು ಹುಟ್ಟಿಕೊಳ್ಳಬೇಕಾಯಿತು. ಪರಿಸರ ಮತ್ತು ಮಾನವ ಹಕ್ಕುಗಳ ಮೂಲಕ ಪ್ರೇರಿತವಾದ ಹಲವು ಕಠಿಣ ನಿಯಮಗಳು, ಅಭಿವೃದ್ಧಿ ದೇಶಗಳನ್ನು ಹಲವಾರು ವರ್ಷಗಳಿಂದ ಸಿಟ್ಟಿಗೆಬ್ಬಿಸುತ್ತಿವೆ. ಈ ನಿಟ್ಟಿನಲ್ಲಿ ಬ್ರಿಕ್ಸ್ ನಂತಹ ಸಂಸ್ಥೆಗಳು ಒಳ್ಳೆಯ ಪರ್ಯಾಯಗಳಾಗಿವೆ. ಪ್ರಾದೇಶಿಕ ಸಹಯೋಗವನ್ನು ಹೆಚ್ಚಿಸುವ ಯೋಜನೆಗಳನ್ನು ಭಾರತ ಮಾತ್ರ ಕೈಕೊಂಡಿಲ್ಲ. 100 ಬಿಲಿಯನ್ ಡಾಲರುಗಳ ಮೂಲ ಬಂಡವಾಳದೊಡನೆ "ಏಶಿಯನ್ ಮೂಲಸೌಕರ್ಯ ಬಂಡವಾಳ ಬ್ಯಾಂಕ್" ಎನ್ನುವ ಹೆಸರಿನೊಂದಿಗೆ, ಚೀನಾ ತನ್ನದೇ ಆದ ಅಭಿವೃದ್ಧಿ ಬ್ಯಾಂಕನ್ನು ಸ್ಥಾಪಿಸಿದೆ. ಭಾರತ ಒಳಗೊಂಡಂತೆ 57 ದೇಶಗಳು ಆ ಬ್ಯಾಂಕಿನ ಸದಸ್ಯರಾಗಿವೆ. ವಿಶ್ವ ವ್ಯಾಪಾರ ಸಂಘಟನೆಯನ್ನು ಬದಿಗಿಟ್ಟು, ಅಮೆರಿಕ ದೇಶವೂ, ಅಮೆರಿಕ ಖಂಡ, ಏಶಿಯಾ ಮತ್ತು ಓಷಾನಿಯಾ ಖಂಡಗಳ ಕೆಲವು ದೇಶಗಳನ್ನು ಗಮನದಲ್ಲಿಟ್ಟು "ಟ್ರಾನ್ಸ್ ಪೆಸಿಫಿಕ್ ಸಹಭಾಗಿತ್ವ" ಎಂಬ ವ್ಯಾಪಾರ ಮತ್ತು ಬಂಡವಾಳ ಹೂಡಿಕೆಯ ಒಡಂಬಡಿಕೆಯನ್ನು ಜಾರಿಗೆ ತರಲು ಪ್ರಯತ್ನಿಸುತ್ತಿದೆ. ❑

# ವಿದೇಶಾಂಗ ನೀತಿ; ಹೊಸ ಯುಗ

* ಕೃಷ್ಣ ವಟ್ಟಂ



ಒಂದು ರಾಷ್ಟ್ರದ ವಿದೇಶಾಂಗ ನೀತಿ, ಆ ರಾಷ್ಟ್ರದ ಹಿತಾಸಕ್ತಿ, ಭದ್ರತೆ, ರಾಷ್ಟ್ರಗಳ ನಡುವಿನ ಸಂಬಂಧ, ಸಾಂಸ್ಕೃತಿಕ, ನೆಂಟಸ್ಥಿಕೆ, ಆರ್ಥಿಕ, ಇತ್ಯಾದಿ ವಿಷಯಗಳ ಬಗ್ಗೆ ಅವಲಂಬಿಸಿರುತ್ತದೆ. ಆದರೆ ಈ ನೀತಿ, ನಿಂತ ನೀರಂತಲ್ಲ. ಆಯಾ ರಾಷ್ಟ್ರಗಳ ಬದಲಾದ ನಿಲುವು, ಧೋರಣೆಗೆ ತಕ್ಕಂತೆ ನೀತಿ ಬದಲಾಗುತ್ತಾ ಹೋಗುತ್ತದೆ. ಯಾವ ರಾಷ್ಟ್ರಕ್ಕೂ ಖಾಯಂ ಶತ್ರು, ಖಾಯಂ ಮಿತ್ರ ಇರುವುದಿಲ್ಲ. ಇಂತಹ ಬೆಳವಣಿಗೆಗಳನ್ನು ರಾಷ್ಟ್ರ ರಾಷ್ಟ್ರಕ್ಕೆ ಸಂಬಂಧಪಟ್ಟ ವಿದೇಶಾಂಗ ನೀತಿಯಲ್ಲಿ ನಾವು ಕಾಣಬಹುದು. ಸಮಾಜವಾದ ನೀತಿಯಿಂದ ಪ್ರಭಾವಕ್ಕೆ ಒಳಗಾದ, ಭಾರತದ ಮೊದಲನೇ ಪ್ರಧಾನಿ ಪಂಡಿತ್ ಜವಹರಲಾಲ್ ನೆಹರು, ಸೋವಿಯತ್ ಒಕ್ಕೂಟದತ್ತ ಒಲವಿತ್ತು. ಹಾಗಾಗಿ ಅಮೆರಿಕ ಜೊತೆ ಸಂಬಂಧ ಅಷ್ಟಕಷ್ಟೆ. ಇದನ್ನೇ ಬಂಡವಾಳ ಮಾಡಿಕೊಂಡ ನಮ್ಮ ನೆರೆ ರಾಷ್ಟ್ರ ಪಾಕಿಸ್ತಾನ ಅಮೆರಿಕಕ್ಕೆ ಹತ್ತಿರವಾಯಿತು.

ಹಾಗೆಯೇ ಚೀನಾ ಮತ್ತು ಪಾಕಿಸ್ತಾನ ನಡುವಿನ ಬಾಂಧವ್ಯ ಗಟ್ಟಿಯಾಗುತ್ತಾ ಹೋಯಿತು. "ಸೂಪರ್ ಪವರ್" ಎಂದೇ ಕರೆಯಲಾಗುತ್ತಾ, ಅಮೆರಿಕ ಹಾಗೂ ಸೋವಿಯತ್ ನಡುವಿನ ಒಕ್ಕೂಟ, ಶೀತಲ ಸಮರ ಮುಂದುವರೆಯುತ್ತಾ ಬಂತು. ಅಮೆರಿಕಾ ಆಶ್ರಯಿಸುತ್ತಾ ಬಂದ ರಾಷ್ಟ್ರಗಳು ಹಾಗೂ ಅದೇ ರೀತಿಯ ಸೋವಿಯತ್ ಒಕ್ಕೂಟಕ್ಕೆ ಅಂಟಿಕೊಂಡ ರಾಷ್ಟ್ರಗಳ ನಡುವೆ ಪರಸ್ಪರ ಮಿಲಿಟರಿ ಒಪ್ಪಂದಗಳಾಯಿತು. ಅಮೆರಿಕಾ ನೇತೃತ್ವದ "ನಾರ್ತ್ ಅಟ್ಲಾಂಟಿಕ್ ಟ್ರೀಟಿ" ಎಂಬ ಸಂಸ್ಥೆ ಹುಟ್ಟುಹಾಕಿದರೆ, ಇತ್ತ ಸೋವಿಯತ್ ಒಕ್ಕೂಟಕ್ಕೆ ಸೇರಿದ "ವಾರ್‌ಸಾ ಪ್ಯಾಕ್ಟ್" ಎಂಬ ಸಂಸ್ಥೆ ಅಸ್ತಿತ್ವಕ್ಕೆ ಬಂದಿತು. ಈ ಎರಡೂ ಬಣಗಳಿಂದ ದೂರ ಇದ್ದು, ನಾನ್ ಅಲೈಂಡ್ ರಾಷ್ಟ್ರಗಳು, ಅಂದರೆ ಅಲಿಪ್ತ ರಾಷ್ಟ್ರಗಳ ಉದಯವಾಯಿತು.

ಆದರೆ, 1990ರ ದಶಕದಲ್ಲಿ ವಿಶ್ವದಲ್ಲೇ ಒಂದು ಹೊಸ ಮನ್ವಂತರ ಪ್ರಾರಂಭವಾಯಿತು. ಸೋವಿಯತ್ ಒಕ್ಕೂಟದ ಧುರೀಣ ಗೊರ್ಬಚೇವ್, ಶೀತಲ ಸಮರವನ್ನು ಅಂತ್ಯಗೊಳಿಸುವ ನಿಟ್ಟಿನಲ್ಲಿ ಒಂದು ಚಾರಿತ್ರ್ಯಾತ್ಮಕ ಮುಂದಿನ ಹೆಜ್ಜೆಯನ್ನು ಇಟ್ಟರು. ಜಾಗತೀಕರಣ, ಉದಾರೀಕರಣ ಎಂಬ ಮಂತ್ರವನ್ನು ಜಪಿಸಿದರು. ಹೀಗಾಗಿ ಸೋವಿಯತ್ ಒಕ್ಕೂಟದಲ್ಲಿ ಬಿರುಕುಬಿಟ್ಟು, ಕೆಲ ರಾಷ್ಟ್ರಗಳ ಉದಯಕ್ಕೆ ಕಾರಣವಾಯಿತು.

ಅನೇಕ ದಶಕಗಳಿಂದ ಬಿಳೀ ಜನಾಂಗದ ಆಡಳಿತದಲ್ಲಿದ್ದ ಸೌತ್ ಆಫ್ರಿಕಾ, ಮಂಡೇಲಾ ನೇತೃತ್ವದಲ್ಲಿ ಒಂದು ಹೊಸ ಯುಗವನ್ನೇ ಸ್ಥಾಪಿಸಲಾಯಿತು. ಅಪಾರ್‌ಥೀಡ್, ಅಸ್ಪೃಶತೆ, ಮನೋಭಾವನೆ ತ್ಯಜಿಸಲಾಯಿತು. ಅನೇಕ ರಾಷ್ಟ್ರಗಳು ದಕ್ಷಿಣಾ ಆಫ್ರಿಕಾ ಜೊತೆ ಬಾಂಧವ್ಯವನ್ನು ಬೆಳೆಸಿಕೊಂಡು ಬಂದವು. 1991ರಲ್ಲಿ ಅಂದಿನ ಪ್ರಧಾನಿ, ಪಿ.ವಿ.ನರಸಿಂಹರಾಯರು, ಇಸ್ರೇಲ್‌ಗೆ ಭೇಟಿ ಇತ್ತರು. ಆ ರಾಷ್ಟ್ರಕ್ಕೆ ಭೇಟಿ ಇತ್ತ ಮೊದಲ ಭಾರತದ ಪ್ರಧಾನಿ ಎಂದೇ ಗುರುತಿಸಲಾಯಿತು. ಕಾಲಕ್ಕೇ ತಕ್ಕಂತೆ, ತಮ್ಮ ನಿಲುವನ್ನು ಬದಲಾಯಿಸಿಕೊಳ್ಳದೇ ಹೋದ ವಾಮ ಪಕ್ಷಗಳು ನೆಲಕಚ್ಚಿದವು. ಹೀಗೆ, ಭಾರತದ ನೀತಿ ಕೂಡ ಕಾಲಕ್ಕೆ ತಕ್ಕಂತೆ, ಸನ್ನಿವೇಶಕ್ಕೆ ತಕ್ಕಂತೆ, ಬದಲಾಯಿಸಿಕೊಳ್ಳಲಾಗಿದೆ. ದೊಡ್ಡಣ್ಣ ಎಂದೇ ಕರೆಯಲಾಗುತ್ತಾ ಅಮೆರಿಕ ಹಾಗೂ ಇರಾನ್‌ನ ಸಂಬಂಧ ಇದೇ ಏಪ್ರಿಲ್ ತಿಂಗಳಿನಲ್ಲಿ ಮತ್ತೆ ಪುನಶ್ಚೇತನಗೊಂಡಿತು, ಹಾಗೆಯೇ ಅದೇ ಏಪ್ರಿಲ್ ತಿಂಗಳಿನಲ್ಲಿ ಅಮೆರಿಕ ಹಾಗೂ ಕ್ಯೂಬಾ ನಡುವೆ ಒಂದು ಹೊಸ ಯುಗ ಪ್ರಾರಂಭವಾಯಿತು.

ಶ್ರೀ ನರೇಂದ್ರ ಮೋದಿ ನೇತೃತ್ವದ ಎನ್.ಡಿ.ಎ. ಸರ್ಕಾರ ಕಳೆದ ವರ್ಷ ಅಧಿಕಾರಕ್ಕೆ ಬಂದ ನಂತರ ಅಂತರಾಷ್ಟ್ರೀಯ ಬಾಂಧವ್ಯ ಪ್ರಬಲಗೊಳ್ಳುವ ನಿಟ್ಟಿನಲ್ಲಿ ಅವರು ಮಹತ್ತರ ಹೆಜ್ಜೆಯನ್ನು ಇಟ್ಟಿದ್ದಾರೆ. ತಮ್ಮ ಒಂದು ವರ್ಷದ ಅವಧಿಯಲ್ಲಿ ಅಮೆರಿಕಾ, ರಷ್ಯಾ, ಜಪಾನ್, ಚೈನಾ, ಇಂಡೋನೇಷಿಯಾ ಹೀಗೆ, ಅನೇಕ ರಾಷ್ಟ್ರಗಳಿಗೆ ಭೇಟಿಯಿತ್ತಿದ್ದಾರೆ. ಐವತ್ತು ವರ್ಷಗಳ ಕಾಲ ಬಗೆಹರಿಯಲಾಗದ, ಭಾರತ ಹಾಗೂ ಬಾಂಗ್ಲಾದೇಶ ಗಡಿಭಾಗದಲ್ಲಿ ವಾಸಿಸುತ್ತಿರುವ ಭವಿಷ್ಯದ ಸಮಸ್ಯೆಯನ್ನು ಬಗೆಹರಿಸಲಾಗಿದೆ. ವಿದೇಶಾಂಗ ನೀತಿ ಕುರಿತಂತೆ ಭಾರತ ಹೊಸ ಚಿಂತನೆಗಳನ್ನು ಹೊಂದಿದೆ. ಈ ವಿದೇಶಾಂಗ ನೀತಿಯನ್ನು ನಿರೂಪಿಸುವಲ್ಲಿ ಮಾಧ್ಯಮ ಪ್ರಮುಖಪಾತ್ರವನ್ನು ವಹಿಸಿಕೊಂಡು ಬಂದಿದೆ, ಭಾಗಿಯಾಗಿದೆ. ಸಮಾಜವಾದ ನೀತಿ ಆಧಾರದ ಮೇಲೆ ಪ್ರಧಾನಿ ನೆಹರೂ ನಂತರ ಬಂದ ಇಂದಿರಾಗಾಂಧಿಯವರ ಅವಧಿಯಲ್ಲಿ ಆ ನೀತಿ ಅಂದು ಅಪ್ರಸ್ತುತ ಎಂದು ವಾದಿಸಿ, ಸೂಕ್ತ ಮಾರ್ಗದರ್ಶನವನ್ನು ನೀಡಿದ್ದೇ, ಮಾಧ್ಯಮ. ❑

* ಹಿರಿಯ ಪತ್ರಕರ್ತರು.

# ಆಧುನಿಕ ದೃಶ್ಯ ಸಂಸ್ಕೃತಿ – ಅಂತಾರಾಷ್ಟ್ರೀಯ ಸಂಬಂಧ

* ಎನ್. ವಿದ್ಯಾಶಂಕರ




ಕಳೆದ ನೂರು ವರ್ಷಗಳು ಮನುಷ್ಯನ ಸಾಂಸ್ಕೃತಿಕ ಅಗತ್ಯಗಳನ್ನು ನಿರ್ಣಾಯಕವಾಗಿ ಬದಲಿಸಿದ್ದೇ ಅಲ್ಲದೆ, ಅದರ ಹಿಂದಿದ್ದ ಸಾಂಪ್ರದಾಯಿಕ ಚಿಂತನೆಗಳನ್ನು, ಶಾಸ್ತ್ರಗಳನ್ನು ಮರು ವ್ಯಾಖ್ಯಾನಿಸಲು ಒತ್ತಾಯಿಸಿವೆ. ಈ ಬದಲಾವಣೆಯ ಸಾಧನಗಳೆಂದರೆ ಹೊಸ ದೃಶ್ಯ ಮಾಧ್ಯಮಗಳು. ಈ ಮಾಧ್ಯಮಗಳ ಕೇಂದ್ರದಲ್ಲಿರುವುದು ಮನುಷ್ಯನ ಅಂತರಂಗದ ಕ್ಷೋಭೆ ಸಂತೋಷಗಳಲ್ಲ. ಸುಖ ದುಃಖದ ಅನುಭವಗಳಲ್ಲ. ಅವನ ಆಧ್ಯಾತ್ಮದ ಹುಡುಕಾಟವಲ್ಲ. ಆದರೆ ಅವನ ಬಾಹ್ಯ ಜಗತ್ತಿನ ಜೀವನ ಶೈಲಿ ಮತ್ತು ಅದಕ್ಕಾಗಿ ಅವನನ್ನು ಮಾನಸಿಕವಾಗಿ ಪ್ರಚೋದಿಸುತ್ತಿರುವ ದೃಶ್ಯ ಪ್ರತೀಕಗಳು. ವಾಸ್ತವತೆಯನ್ನು ಪ್ರತಿಬಿಂಬಿಸುವ ಮತ್ತು ವ್ಯಾಖ್ಯಾನಿಸುವ ಪಾರಂಪರಿಕ ಮೌಲ್ಯಗಳನ್ನು ಮೀರಿ ವಸ್ತು ಸ್ಥಿತಿಯನ್ನು ರಾಜಕೀಯ ಅಧಿಕಾರಕ್ಕೆ ತಕ್ಕಂತೆ ಬದಲಿಸುವ ಮತ್ತು ಅದನ್ನೇ ವಾಸ್ತವವೆಂದು ಭ್ರಮಿಸುವಂತೆ ಈ ಪ್ರತೀಕಗಳು ನಮ್ಮ ಮುಂದೆ ಪುನರಾವೃತ್ತವಾಗುತ್ತಿರುತ್ತವೆ.

ಈ ಪ್ರತೀಕಗಳಿಗೆ ರೂಪ ಕೊಡುತ್ತಿರುವುದು ಆಧುನಿಕ ತಂತ್ರಜ್ಞಾನ ಮತ್ತು ಅದರ ಅಸ್ತಿತ್ವಕ್ಕೆ ಅನಿವಾರ್ಯವಾಗಿರುವ ಮಾರುಕಟ್ಟೆ ಸಂಸ್ಕೃತಿ. ಈ ಮಾಧ್ಯಮಗಳ ಹಿಂದಿರುವ ತಾತ್ವಿಕ ಪ್ರೇರಣೆ ವೈಜ್ಞಾನಿಕ ಮತ್ತು ಆರ್ಥಿಕ ಮೂಲದ್ದು. ಅದಕ್ಕೆ ಬೇಕಾದ ನೈತಿಕ ಜವಾಬ್ದಾರಿ ವೈಯಕ್ತಿಕ ನೆಲೆಯದ್ದಾಗಿರುತ್ತದೆಯೇ ಹೊರತು ಸಾಮಾಜಿಕ ವಸ್ತುನಿಷ್ಠ ಸಮುದಾಯ ಒಳಿತಿನ ಸ್ವರೂಪದ್ದಾಗಿರುವುದಿಲ್ಲ. ಇದಕ್ಕೆ ಹೋಲಿಸಿದರೆ ಪಾರಂಪರಿಕ ದೃಶ್ಯ ಮಾಧ್ಯಮಗಳಾದ ನಾಟಕ, ಬಯಲಾಟ, ಯಕ್ಷಗಾನಗಳ ಹಿಂದಿರುವ ತಾತ್ವಿಕತೆಗಳೇ ಬೇರೆ ಸ್ವರೂಪದವು. ಸಮುದಾಯ ಕೇಂದ್ರಿತ ಸಾಂಸ್ಕೃತಿಕ ಚಟುವಟಿಕೆಗಳಾದ ಈ ಮಾಧ್ಯಮಗಳಿಗೆ ದೇಶೀಯ ಭಾಷೆ, ಜೀವನಕ್ರಮ, ಸೌಂದರ್ಯ ಮೀಮಾಂಸೆಗಳು, ಬಹುತ್ವದ ಆಯಾಮಗಳು ಬೆನ್ನೆಲುಬಾಗಿದ್ದರೆ ಆಧುನಿಕ ದೃಶ್ಯ ಸಂಸ್ಕೃತಿಗಳಿಗೆ ಜಾಗತಿಕ ಸಾಮಾನ್ಯೀಕರಣ, ಏಕತ್ವದ ಅಭಿವ್ಯಕ್ತಿ ರೂಪಗಳು, ಈ ಹೊತ್ತಿನ ಭೌತಿಕ ವಸ್ತುಗಳ ಅಗತ್ಯಗಳನ್ನು ಸಾರ್ವಕಾಲಿಕ ಸತ್ಯಗಳೆಂಬಂತೆ ಬಿಂಬಿಸುವುದೇ ಆಗಿರುತ್ತದೆ.

ಈ ಆಧುನಿಕ ದೃಶ್ಯ ಸಂಸ್ಕೃತಿಯ ಮುಖ್ಯ ಅನ್ವೇಷಣೆಯೆಂದರೆ ಸಿನಿಮಾ ಮಾಧ್ಯಮ. ಅದು ಕಲಾಚರಿತ್ರೆಯ ವಿಕಾಸದ ಹಂತದಲ್ಲಿ ರೂಪಗೊಂಡ ಮಾಧ್ಯಮವಲ್ಲ. ವೈಜ್ಞಾನಿಕ ಸಂಶೋಧನೆಗಳ ದಾರಿಯಲ್ಲಿ ಕಂಡುಕೊಂಡ, ವಾಸ್ತವವನ್ನೂ ನಕಲುಗೊಳಿಸುವ, ಭೌತಿಕ ಜಗತ್ತನ್ನು ವಿವರಿಸುವ ಸಾಧನ. ಹಾಗಾಗಿ ಕಲಾತ್ಮಕ ಅಭಿವ್ಯಕ್ತಿ ಅದರ ಸಾಧ್ಯತೆ ಮಾತ್ರವೇ ಹೊರತು ಅದರ ಮೂಲ ಉದ್ದೇಶವಲ್ಲ. ಇವತ್ತಿನ ತಂತ್ರಜ್ಞಾನದ ವಿರಾಟ್ ಬೆಳವಣಿಗೆಯನ್ನು ಗಮನಿಸಿದರೆ ಈ ಮಾತಿನ ಅರ್ಥ ಹೆಚ್ಚು ಸ್ಪಷ್ಟವಾದೀತು. ಇಂತಹ ವೇಗವಾದ ಬೆಳವಣಿಗೆಯಲ್ಲಿ ಅದರ ಕಲಾತ್ಮಕ ಸಾಧ್ಯತೆಗಳ ಆಮೂಲಾಗ್ರವಾಗಿ, ಅಭಿಜಾತ, ನೆಲೆಯಲ್ಲಿ ಕಲಾಚರಿತ್ರೆಯ ಮುಂದುವರಿಕೆಯಾಗಿ ನೋಡುವ ಕ್ರಮ ಭಾರತದಲ್ಲಂತೂ ಇನ್ನೂ ಪ್ರಾರಂಭವಾಗಿಲ್ಲ. ದೃಶ್ಯ ಸಂಸ್ಕೃತಿ ಈ ಹೊತ್ತು ಅದರ ಪರಿಣಾಮಗಳಲ್ಲಿ ಕಾಣಿಸಿಕೊಳ್ಳುತ್ತಿದೆಯೇ ಹೊರತು, ಇತರ ಮಾಧ್ಯಮಗಳಂತೆ ಅದರ ಸೃಷ್ಟಿಯ ಪ್ರೇರಣೆಗಳಲ್ಲಾಗಲೀ ಅದರ ತಾತ್ವಿಕತೆಯ ಬಗೆಗಿನ ಚಿಂತನೆಯಲ್ಲಾಗಲೀ, ಬೌದ್ಧಿಕತೆಯ ನೆಲೆಯಲ್ಲಾಗಲೀ ಪ್ರೌಢತೆಯನ್ನು ತೋರಿಸುತ್ತಿಲ್ಲ.

ಆಧುನಿಕ ದೃಶ್ಯ ಸಂಸ್ಕೃತಿಯ ಮುಖ್ಯ ಪರಿಣಾಮಗಳಲ್ಲಿ ಒಂದಾದ್ದು ಅದರ ರಾಜಕೀಯ ಶಕ್ತಿ ಮತ್ತು ಅದರ ಮೂಲಕ ಅದು ಪಡೆದುಕೊಂಡಿರುವ ಆರ್ಥಿಕ ಬಲ. ಈ ಕಾರಣಕ್ಕಾಗಿಯೇ ರಾಷ್ಟ್ರೀಯ ಸರಹದ್ದುಗಳನ್ನು ಮೀರಿ ಅಂತಾರಾಷ್ಟ್ರೀಯ ಸಂಬಂಧಗಳ ಮೇಲೆ ನಿರ್ಣಾಯಕವಾಗಿ ಪ್ರಭಾವ ಬೀರಬಲ್ಲ ಶಕ್ತಿಯನ್ನು ಈ ಮಾಧ್ಯಮಗಳು ಪಡೆದುಕೊಂಡಿವೆ.

ಹಾಲಿವುಡ್, ಬಾಲಿವುಡ್ ಮುಂತಾದ ಪ್ರಭಾವಶಾಲಿ ಸಿನಿಮಾ ನಿರ್ಮಾಣ ಕೇಂದ್ರಗಳಿಂದ ದಿನಬಳಕೆಯ ವಸ್ತುವಿನಂತೆ ನಿರ್ಮಾಣವಾಗುತ್ತಿರುವ ಚಿತ್ರಗಳು, ಕಾರ್ಪೊರೇಟ್‌ಗಳ ಹಿಡಿತದಲ್ಲಿರುವ ಸುದ್ದಿ ಸಂಸ್ಥೆಗಳಿಂದ ಏಕರೂಪದಲ್ಲಿ ಮಂಡಿಸಲಾಗುತ್ತಿರುವ ಈ ಹೊತ್ತಿನ ಜಗತ್ತಿನ ಆಗು ಹೋಗುಗಳು, ಪ್ರಜಾತಂತ್ರದ ಹೆಸರಿನಲ್ಲಿ ನಡೆಯುವ, ಆದರೆ ಮಾರುಕಟ್ಟೆಯಿಂದ ಪ್ರಾಯೋಜಿತವಾದ ಚರ್ಚೆಗಳು, ವಾಗ್ವಾದಗಳು, ಸಂದರ್ಶನಗಳು ಜಾಹೀರಾತುಗಳು, ಸಾಂಸ್ಕೃತಿಕ ಚಟುವಟಿಕೆಗಳು, ಕ್ರೀಡೆ ಎಲ್ಲವೂ ಮನುಷ್ಯ ಸಂಬಂಧಗಳಿಗಿಂತ ಹೆಚ್ಚಾಗಿ ಅಂತಾರಾಷ್ಟ್ರೀಯ ಸಂಬಂಧಗಳಿಗೇ ಹೆಚ್ಚು ಒತ್ತು ಕೊಡುವಂತೆ

* ಚಿತ್ರ ವಿಮರ್ಶಕರು.




ಕಾಣುತ್ತಿವೆ. ರಾಷ್ಟ್ರೀಯತೆಯ ಕೂಗಿನ ಹಿಂದಿರುವ ಅಂತಾರಾಷ್ಟ್ರೀಯ ಸಾಂಸ್ಕೃತಿಕ ವಸಾಹತುವಿನ ಹುನ್ನಾರ ಮಾತಿನ ಗದ್ದಲದಲ್ಲಿ ಮರೆಮಾಚಿಕೊಂಡಿರುತ್ತದೆ. ದೇಶೀ ಮತ್ತು ವಿದೇಶಿ ಬಂಡವಾಳಗಳಿಗೆ ಮನ ನೋಯಿಸದಂತೆ ಸರ್ಕಾರಗಳನ್ನು ತೂಗಿಸಿಕೊಂಡು ಹೋಗುವುದೇ ಇಂದಿನ ಎಲ್ಲ ರಾಜಕೀಯ ಪಕ್ಷಗಳ ತಾತ್ವಿಕ ನೆಲೆಯಾಗಿರುವ ಹಿನ್ನೆಲೆಯಿರುವುದು ಈ ಆಧುನಿಕ ದೃಶ್ಯ ಸಂಸ್ಕೃತಿಗಳ ಅಂತಾರಾಷ್ಟ್ರೀಯ ಪ್ರಭಾವದ ವಲಯದಲ್ಲಿ.

* * *

ಆಧುನಿಕ ದೃಶ್ಯ ಮಾಧ್ಯಮಗಳಿಗೆ ನಾಲ್ಕು ಪ್ರಮುಖ ಆಯಾಮಗಳಿವೆ. ಅವೆಂದರೆ ತಂತ್ರಜ್ಞಾನ, ಆರ್ಥಿಕ ಬಂಡವಾಳ, ಸಾಂಸ್ಕೃತಿಕ ಚಟುವಟಿಕೆ ಮತ್ತು ಕಲಾತ್ಮಕ ಸಾಧ್ಯತೆ. ಅಂತಾರಾಷ್ಟ್ರೀಯ ಸಂಬಂಧಗಳಿಗೆ ಮೊದಲೆರಡು ಆಯಾಮಗಳು ಬಹಳ ನಿರ್ಣಾಯಕವಾದವು. ದೃಶ್ಯ ಮಾಧ್ಯಮಗಳಿಗೆ ಅಗತ್ಯವಾದ ತಂತ್ರಜ್ಞಾನವನ್ನೂ ಕ್ಷಿಪ್ರ ವೇಗದಲ್ಲಿ ರೂಪಿಸುವ ಬದಲಿಸುವ ಮತ್ತು ಅದಕ್ಕಾಗಿ ಪೂರಕವಾಗಿ ಒದಗಬೇಕಾದ ಯಂತ್ರಗಳನ್ನು ಸಾಧನಗಳನ್ನು ಉತ್ಪಾದಿಸುವ ಉದ್ಯೋಗದಲ್ಲಿ ಹೆಚ್ಚು ನಿರತವಾಗಿರುವುವು. ಪೂರ್ವ ಏಶಿಯಾದ ಪ್ರಬಲ ರಾಷ್ಟ್ರಗಳಾದ ಜಪಾನ್, ಕೊರಿಯಾ, ತೈವಾನ್ ಮತ್ತು ಚೀನಾದಂತಹ ದೇಶಗಳು. ಅದನ್ನು ಭಾರತದಂತಹ ಜನನಿಬಿಡ ದೇಶಗಳ ಮಾರುಕಟ್ಟೆಗೆ ತಲುಪಿಸುವುದು ಅಮೆರಿಕದಂತಹ ಪ್ರಬಲ ಪಾಶ್ಚಾತ್ಯ ದೇಶಗಳು. ಆದ್ದರಿಂದಲೇ ಇಂದಿನ ದೃಶ್ಯ ಸಂಸ್ಕೃತಿ ಒಂದಲ್ಲ ಒಂದು ರೀತಿಯ ಅಂತಾರಾಷ್ಟ್ರೀಯ ಸಂಬಂಧಗಳೊಡನೆ ತಳುಕು ಹಾಕಿಕೊಂಡಿರುತ್ತದೆ. ತಂತ್ರಜ್ಞಾನದ ವಿಷಯದಲ್ಲಿ ಅದು ಮೊದಲಿಗೆ ಮಾಹಿತಿ ವಿನಿಮಯದ ನೆಲೆಯಲ್ಲಿ ಪ್ರಾರಂಭವಾದರೂ ಅದರ ಅಂತಿಮ ಉದ್ದೇಶ ಆರ್ಥಿಕ ಸಂಬಂಧಗಳ ವಿಸ್ತರಣೆಯಾಗಿರುತ್ತದೆ. ಏಕೆಂದರೆ ಹೊಸ ತಂತ್ರಜ್ಞಾನಗಳಿಗೆ ಬೇಕಾದ ಮೂಲಸಂಪನ್ಮೂಲಗಳಾದ ಬಂಡವಾಳ ಮತ್ತು ಕುಶಲಕರ್ಮಿಗಳ ಒಟ್ಟಾಗುವಿಕೆ ವಿವಿಧ ರಾಷ್ಟ್ರಗಳ ಸಹಯೋಗದಿಂದ ಮಾತ್ರ ಸಾಧ್ಯವಾಗುವಂತಹದು.

ಹೆಸರಿಗೆ 'ಮನೋ'ರಂಜನೆಯಾದರೂ, ಅದನ್ನು ಗ್ರಹಿಸುವ ಕ್ರಮ ಆರ್ಥಿಕ ಮೂಲದ್ದು. ಹಿಂದಿ ಚಿತ್ರರಂಗದ ಖ್ಯಾತ ನಿರ್ದೇಶಕ ಮತ್ತು ವಾಣಿಜ್ಯ ಚಿತ್ರಗಳಿಗಾಗಿ ಹೆಸರಾದ ಶ್ರೀ ಕರಣ್‌ಜೋಹರ್ ನಂತಹವರೂ ಕೂಡ ಇತ್ತೀಚಿನ ದಿನಗಳಲ್ಲಿ ಚಲನಚಿತ್ರ ರಂಗದಲ್ಲಿ ಹಣ ಗಳಿಕೆಯೇ ಪ್ರಾಮುಖ್ಯತೆ ಪಡೆದಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ. ಈಗ ಮನರಂಜನೆಯನ್ನು ಉದ್ಯಮವನ್ನಾಗಿಯೇ ನೋಡುವುದರಿಂದ ಅದರಿಂದ ಪಡೆಯಬಹುದಾಗಿದ್ದ ಮಾನಸಿಕ ಪ್ರೌಢತೆಗೆ ಬದಲಾಗಿ ಅದು ಸೃಷ್ಟಿಸುತ್ತಿರುವ ಅತೀವ ಹಿಂಸೆ ಮತ್ತು ಲೈಂಗಿಕತೆಯ ಅನಾರೋಗ್ಯಕರ ಪ್ರತಿಮೆಗಳಿಗೆ ಹೆಚ್ಚು ಪ್ರತಿಕ್ರಿಯೆಗಳು ಮತ್ತು ಪ್ರಭಾವಗಳು ದಕ್ಕುತ್ತಿವೆ. ಸಾಂಸ್ಕೃತಿಕ ಕ್ಷೇತ್ರವನ್ನು ವಾಣಿಜ್ಯೋದ್ಯಮವಾಗಿ ನೋಡುವುದರಿಂದ ಸ್ವಾಭಾವಿಕವಾಗಿ ಅದಕ್ಕೆ ಅಂತಾರಾಷ್ಟ್ರೀಯ ಆರ್ಥಿಕ ಆಯಾಮಗಳು ವಿಸ್ತಾರಗೊಳ್ಳುತ್ತಾ ಹೋಗುತ್ತವೆ. ಆದ್ದರಿಂದಲೇ ಈ ಹೊತ್ತು ಎಲ್ಲ ಮನರಂಜನಾ ಮಾಧ್ಯಮಗಳಿಗೆ ಸಂಬಂಧಿಸಿದಂತೆ ಇರುವ ಹಕ್ಕು ಸ್ವಾಮ್ಯಗಳ ವಿಷಯದಲ್ಲಿ ವಿಶ್ವವ್ಯಾಪಾರ ಸಂಘಟನೆ (World Trade Organisation) ಯಲ್ಲಿ ಕೂಡ ವ್ಯಾಜ್ಯಗಳು ಹೆಚ್ಚಾಗುತ್ತಿವೆ. ಅಲ್ಲದೆ ಮನರಂಜನಾ ಸಾಧನಗಳು, ಬಿಡಿಬಿಡಿ ಪ್ರಯೋಗಗಳು ಕೂಡ ಅಂತಾರಾಷ್ಟ್ರೀಯ ಆರ್ಥಿಕ ಸಹಯೋಗದಲ್ಲಿ ನಿರ್ಮಾಣಗೊಳ್ಳುವುದು ಜಾಸ್ತಿಯಾಗಿದೆ. ಸೃಜನಶೀಲತೆಯ ಸ್ವಾಯತ್ತತೆಯಲ್ಲಿ ಇದರಿಂದ ಅನಗತ್ಯ ಮೂಗುತೂರಿಸುವಿಕೆಯು ಹೆಚ್ಚಾಗುತ್ತಿದೆ. ಒಟ್ಟಿನಲ್ಲಿ ಹೇಳುವುದಾದರೆ ಆಧುನಿಕ ದೃಶ್ಯ ಸಂಸ್ಕೃತಿಯ ಚಲನಶೀಲತೆಯ ಮೂಲ ಪ್ರೇರಣೆ ಅಂತಾರಾಷ್ಟ್ರೀಯ ಆರ್ಥಿಕ ಬಂಡವಾಳದ ಚಲನಶೀಲತೆಗೆ ತಳುಕುಹಾಕಿಕೊಂಡಿದೆ.

ಇನ್ನು ಸಾಂಸ್ಕೃತಿಕ ನೆಲೆಯಲ್ಲಿಯೂ ಸಹ ಮನುಷ್ಯನ ಸಾರ್ವತ್ರಿಕ ಮತ್ತು ಸಾರ್ವಕಾಲಿಕ ಆಶಯಗಳ ವಿರುದ್ಧವಾಗಿ ಇಂದಿನ ಮಾಧ್ಯಮಗಳು ಕಾರ್ಯಪ್ರವೃತ್ತವಾಗಿವೆ. ಒಂದು ಕಾಲಕ್ಕೆ ಸಂಸ್ಕೃತಿ ಪದದ ಅರ್ಥ ವ್ಯಾಪಕವಾಗಿತ್ತು ಮತ್ತು ಅದು ಮನುಷ್ಯನ ಸಂಸ್ಕಾರ, ನಡವಳಿಕೆ ಮತ್ತು ಸೃಜನಶೀಲ ಸಾಧ್ಯತೆಗಳ ಸಮಗ್ರ ಆಶಯಗಳನ್ನು ಸೂಚಿಸುವುದಾಗಿತ್ತು. ಅದೊಂದು ಜೀವನಾನ್ವೇಷಣೆಯ ಮಾರ್ಗವಾಗಿತ್ತು. ಇಂದಿಗೂ ಸಾಹಿತ್ಯ,ಸಂಗೀತ, ಲಲಿತಕಲೆಗಳಲ್ಲಿ ತೊಡಗಿರುವ ಅನೇಕ ಅನ್ವೇಷಕರನ್ನು ಗುರುತಿಸಬಹುದು. ಆದರೆ ದೃಶ್ಯ ಮಾಧ್ಯಮ ಒಂದು ವೃತ್ತಿಯಾಗಿ, ಆರ್ಥಿಕ ಚಟುವಟಿಕೆಯಾಗಿಯೇ ಹೆಚ್ಚು ಪ್ರಸಿದ್ಧ. ಕಲೆ ಮತ್ತು ಸಂಸ್ಕೃತಿ ಮನುಷ್ಯನನ್ನು ವಿಶ್ವಜೀವಿಯಾಗಿ ಗುರುತಿಸಿದರೆ ಇಂದಿನ ಸಮೂಹ ದೃಶ್ಯ ಸಂಸ್ಕೃತಿಗಳು ಅವನನ್ನು ಪರಸ್ಪರ ವಿರುದ್ಧವೆಂಬಂತೆ ಪ್ರಾದೇಶಿಕ ಮತ್ತು ಅಂತಾರಾಷ್ಟ್ರೀಯವಾಗಿ ನೋಡುವುದೇ ಸಾಮಾನ್ಯವಾದ ಕ್ರಮ. ಹಾಗಿದ್ದರೂ ಈ ಮಾಧ್ಯಮಗಳು ಪ್ರದೇಶ ಭಾಷೆ, ಜೀವನಕ್ರಮ, ಪರಂಪರೆಗಳನ್ನು ಉಪಯೋಗಿಸಿಕೊಳ್ಳುತ್ತಲೆ ಅದರ ಹಂಗಿಲ್ಲದಂತೆ ಸೃಷ್ಟಿಯಾಗಬಲ್ಲುದು ಎಂಬುದು ವಿಪರ್ಯಾಸವೇ ಸರಿ. ಅಂತಾರಾಷ್ಟ್ರೀಯ ಸಂಬಂಧದಲ್ಲೂ ಕೂಡ ಮನುಷ್ಯ ಮನುಷ್ಯರ ಸಂಬಂಧಕ್ಕಿಂತ ಹೆಚ್ಚಾಗಿ, ಸಂಸ್ಕೃತಿಗಳ ಮಾಹಿತಿ ವಿನಿಮಯವೇ ಹೆಚ್ಚು ಚಾಲ್ತಿಯಲ್ಲಿದೆ. ಜಾಗತಿಕವಾಗಿ ಏಕಭಾಷೆ, ಏಕರೂಪದ ಅಭಿವ್ಯಕ್ತಿ ಕ್ರಮ, ಏಕರೂಪ ಜೀವನಶೈಲಿಯನ್ನು ಪ್ರಚೋದಿಸುವುದರಿಂದ ಈ ಅಂತಾರಾಷ್ಟ್ರೀಯ ಸಂಬಂಧ ಸಾಂಸ್ಕೃತಿಕವಾಗಿ ಅಷ್ಟೇನೂ ಸ್ವಾಗತಾರ್ಹವಲ್ಲ. ಅದರಂತೆಯೇ ಸಾಂಸ್ಕೃತಿಕವಾಗಿ ಆಕ್ಷೇಪಾರ್ಹ ಅಂತಾರಾಷ್ಟ್ರೀಯತೆಯೆಂದರೆ ರಾಷ್ಟ್ರ ರಾಜಕೀಯಗಳನ್ನು ಜಾಗತಿಕವಾಗಿ ಒಪ್ಪಿತವಾಗುವಂತೆ ಮಾಡುವಂತಹ ಒಂದು ಕ್ರಮ. ಇದನ್ನು ಕಮ್ಯುನಿಷ್ಟರು ಪ್ರಾರಂಭಿಸಿದರು, ನಂತರದಲ್ಲಿ ನಾಜಿಗಳು ಹೆಚ್ಚು ದುರುಪಯೋಗ ಪಡಿಸಿಕೊಂಡರು ಮತ್ತು ಮಹಾಯುದ್ಧಾನಂತರದಲ್ಲಿ ಅಮೆರಿಕನ್ ಬಂಡವಾಳಶಾಯಿಗಳು ಅದರಲ್ಲಿ ನಿಷ್ಣಾತರಾದರು. ದೃಶ್ಯ ಸಂಸ್ಕೃತಿಯ ಮಾದರಿಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅದರಲ್ಲೂ ಮುಖ್ಯವಾಗಿ ಹಾಲಿವುಡ್ ಚಿತ್ರಗಳು ಅಮೆರಿಕದ ವಿದೇಶಾಂಗ ನೀತಿಯನ್ನು ಪ್ರಸ್ತುತಪಡಿಸುವ ರೀತಿಯನ್ನು ಅವಲೋಕಿಸಿದಾಗ ಅಂತಾರಾಷ್ಟ್ರೀಯ ಸಂಬಂಧಗಳನ್ನು ಮಾಧ್ಯಮಗಳು ಎಷ್ಟು ಶಕ್ತಿಶಾಲಿಯಾಗಿ ಪ್ರತಿನಿಧಿಸಬಹುದೆಂಬುದು ಮನವರಿಕೆಯಾಗುತ್ತದೆ. ಯುದ್ಧಗಳನ್ನು ಹಿನ್ನೆಲೆಯಾಗುಳ್ಳ ಚಿತ್ರಗಳು, ಅದರಲ್ಲೂ ಮುಖ್ಯವಾಗಿ ಎರಡನೇ ಮಹಾಯುದ್ಧ,



ಇರಾಕ್ ಯುದ್ಧ ಆಫ್ಘಾನಿಸ್ತಾನ ಯುದ್ಧದ ಹಿನ್ನೆಲೆಯಲ್ಲಿ ತಯಾರಾದ ಚಿತ್ರಗಳನ್ನು ಇದಕ್ಕೆ ಉದಾಹರಣೆಯಾಗಿ ನೋಡಬಹುದು. ರಷ್ಯಾದ ಜತೆಗಿನ ಶೀತಲ ಸಮರ, ಕಮ್ಯೂನಿಷ್ಟ್ ರಾಷ್ಟ್ರಗಳಾದ ಚೀನ ಮತ್ತು ಉತ್ತರ ಕೊರಿಯಗಳನ್ನು ಚಿತ್ರದಲ್ಲಿ ತೋರಿಸುವಲ್ಲಿಯೂ ಸಹ ಇಂತಹ ಸಾಂಸ್ಕೃತಿಕ ರಾಜಕಾರಣ ಕಾಣಬರುತ್ತದೆ. ಆಫ್ರಿಕಾ ಮತ್ತು ಏಶಿಯಾದ ಹಿಂದುಳಿದ ರಾಷ್ಟ್ರಗಳು ಎಷ್ಟೇ ಮುಖ್ಯವಾದರೂ, ಜನಸಂಖ್ಯೆಯ ದೃಷ್ಟಿಯಿಂದ ದೊಡ್ಡ ಸಮುದಾಯವಾದರೂ ಅಮೆರಿಕನ್ ಚಿತ್ರಗಳು ಆ ಸಂಸ್ಕೃತಿಗಳನ್ನು ಸಂಪೂರ್ಣವಾಗಿ ಉದಾಸೀನ ಮಾಡುವುದು ಮತ್ತು ತೋರಿಸಿದಾಗಲೂ ಸಹ ಕೇವಲ ಒಂದು ಜನಾಂಗೀಯ ಮಾದರಿಯಾಗಿ ಚಿತ್ರಿಸುವುದು ಸಾಮಾನ್ಯವಾಗಿ ರೂಢಿಯಲ್ಲಿರುವುದು ಈ ಅಂತಾರಾಷ್ಟ್ರೀಯ ಸಾಂಸ್ಕೃತಿಕ ರಾಜಕಾರಣದ ಮತ್ತೊಂದು ಕರಾಳಮುಖ. ಮಾಧ್ಯಮಗಳ ಉಗಮ ಕಲಾತ್ಮಕ ನೆಲೆಯಿಂದ ರೂಪುಗೊಂಡವಲ್ಲ. ಆದರೆ ಮನುಷ್ಯನ ಸೃಜನಶೀಲತೆಯ ಅಗಾಧ ಪ್ರತಿಭೆಯಲ್ಲಿ ಈ ಮಾಧ್ಯಮಗಳು ಕೂಡ ಕಲಾತ್ಮಕ ಸಾಧ್ಯತೆಗಳನ್ನು ಪಡೆದುಕೊಂಡಿವೆ. ಪಾರಂಪರಿಕ ಕಲೆಗಳಂತೆ ಈ ಮಾಧ್ಯಮಗಳಲ್ಲಿಯೂ ಮಾನವ ಸಂವೇದನೆಯನ್ನು ವಿಸ್ತರಿಸುವ ಪ್ರಯತ್ನ ನಿರಂತರವಾಗಿ ನಡೆದುಬಂದಿದೆ. ಇಲ್ಲಿ ವಿಶ್ವಮಾನವ ಕಲ್ಪನೆ ಅಭಿವ್ಯಕ್ತವಾಗುವ ಕ್ರಮ ವಿಶೇಷವಾದದ್ದು. ದೃಶ್ಯ ಮಾಧ್ಯಮಗಳು ಅದರಲ್ಲೂ ವಿಶೇಷವಾಗಿ ಆಧುನಿಕ ಮಾಧ್ಯಮಗಳು ಸಹಜವಾಗಿ ತಮ್ಮ ಹುಟ್ಟಿನಲ್ಲೇ ಜಾಗತಿಕವಾದದ್ದು. ಅದರ ಸಂವಹನಶಕ್ತಿಗೆ ಮಾತು ಸಹಕಾರಿಯಾಗಬಲ್ಲದಾದರೂ, ಅದಿಲ್ಲದೆಯೂ ಅರ್ಥಗಳನ್ನು ಹೊಮ್ಮಿಸಬಲ್ಲವು. ಚಾರ್ಲಿಚಾಪ್ಲಿನ್ ನಂತಹವರು ಅದಕ್ಕೆ ವಿಶೇಷ ಉದಾಹರಣೆಯಾಗಬಲ್ಲರು. ಸಿನಿಮಾ ಮಾಧ್ಯಮವನ್ನೇ ನಿರಾಕರಿಸಿದ್ದ ಗಾಂಧೀಜಿ ಮತ್ತು ಚಾಪ್ಲಿನ್ ಭೇಟಿ ಒಂದು ವಿಶೇಷ ಚಾರಿತ್ರಿಕ ಘಟನೆಯಾಗಿ ಬಿಂಬಿತವಾಗಿರುವುದು ದೃಶ್ಯಮಾಧ್ಯಮದ ಅಂತಾರಾಷ್ಟ್ರೀಯತೆಯ ಆಯಾಮಗಳ ಒಂದು ರುಜುವಾತು. ಇದು ಏಕಕಾಲಕ್ಕೆ ಪ್ರಾದೇಶಿಕವಾದದ್ದು, ಅಂತಾರಾಷ್ಟ್ರೀಯವಾದದ್ದು, ಸಾರ್ವತ್ರಿಕವಾದದ್ದು ಮತ್ತು ಸಾರ್ವಕಾಲಿಕವಾದದ್ದು. ಅದೂ ಸಹ ಆರ್ಥಿಕ ಮತ್ತು ತಾಂತ್ರಿಕ ಆಯಾಮಗಳನ್ನು ಅನಿವಾರ್ಯವಾಗಿ ಉಳ್ಳದ್ದಾದ್ದರಿಂದ ಅಂತಾರಾಷ್ಟ್ರೀಯ ಸಂಬಂಧಗಳು ಕೂಡ ಅನಿವಾರ್ಯವೇ. ಅಲ್ಲದೆ ಈ ಪ್ರಯೋಗಗಳು ಅಲ್ಪಸಂಖ್ಯಾತ ಪ್ರೇಕ್ಷಕರನ್ನು ಹೊಂದಿರುವ ಕಾರಣವಾಗಿ, ಬೇರೆ ಬೇರೆ ದೇಶಗಳಲ್ಲಿ ಹಂಚಿಹೋಗಿರುವ ಈ ಚಿಕ್ಕ ಸಮುದಾಯಗಳು ಅಂತಾರಾಷ್ಟ್ರೀಯ ವೇದಿಕೆಗಳನ್ನು ಸೃಷ್ಟಿಸುವ ಕಾರ್ಯದಲ್ಲಿ ಕಾರ್ಯಪ್ರವೃತ್ತವಾಗಿವೆ.

ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಗಳು, ವಿಶ್ವವಿದ್ಯಾನಿಲಯಗಳು, ಚಿತ್ರ ಸಮಾಜಗಳು ಈ ನಿಟ್ಟಿನಲ್ಲಿ ಸಾಕಷ್ಟು ಶ್ರಮವಹಿಸಿ ದುಡಿಯುತ್ತಿವೆ. ನಿರ್ಮಾಣದ ಹಂತದಲ್ಲೂ ಸಹ ಅಂತಾರಾಷ್ಟ್ರೀಯ ಸಹಯೋಗಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿವೆ. ಅಮೆರಿಕ ತಂತ್ರಜ್ಞಾನ ಮತ್ತು ಬೃಹತ್ ಆರ್ಥಿಕ ಸಹಯೋಗದಲ್ಲಿ ತೊಡಗಿ ಜಾಗತಿಕ ವ್ಯಾಪಕವಾಗಿ ದೃಶ್ಯ ಮಾಧ್ಯಮಗಳನ್ನು ಬೆಳೆಸಿದರೆ ಯೂರೋಪಿನ ರಾಷ್ಟ್ರಗಳು, ಅದರಲ್ಲೂ ಮುಖ್ಯವಾಗಿ ಫ್ರಾನ್ಸ್ ಮತ್ತು ಜರ್ಮನಿ ದೇಶಗಳು ಮಾಧ್ಯಮದ ಸೃಜನಶೀಲ ಅಭಿವ್ಯಕ್ತಿಗಳತ್ತ ತಮ್ಮ ಸಹಾಯಹಸ್ತವನ್ನು ಚಾಚುತ್ತಿರುವುದು ಅಂತಾರಾಷ್ಟ್ರೀಯ ಸಂಬಂಧಗಳ ಒಂದು ಇತ್ಯಾತ್ಮಕ ಬೆಳವಣಿಗೆ. ಏಶಿಯಾ ಮತ್ತು ಆಫ್ರಿಕಾದ ಹಿಂದುಳಿದ ಪ್ರದೇಶಗಳ ಅನೇಕ ಸೃಜನಶೀಲ ಚಿತ್ರ ನಿರ್ದೇಶಕರು ಜಾಗತಿಕ ವೇದಿಕೆಗಳಲ್ಲಿ ಗುರುತಿಸಲ್ಪಡುತ್ತಿರುವುದು ಇಂತಹ ಅಂತಾರಾಷ್ಟ್ರೀಯ ಸಂಬಂಧಗಳ ವಿಸ್ತರಣೆಯಾಗಿ ಅನ್ನುವುದು ವಾಸ್ತವ. ಇದರಲ್ಲಿ ಎಷ್ಟರ ಮಟ್ಟಿಗೆ ಸಾಂಸ್ಕೃತಿಕ ವಸಾಹತುವಿನ ಅಂಶ ಇರಬಹುದು ಎನ್ನುವುದನ್ನು ಚರಿತ್ರೆ ಮಾತ್ರ ನಿರ್ಧರಿಸಬಲ್ಲುದು. ಒಟ್ಟಾರೆಯಾಗಿ ಹೇಳಬಹುದಾದರೆ ಆಧುನಿಕ ದೃಶ್ಯಸಂಸ್ಕೃತಿ ಮತ್ತು ಅಂತಾರಾಷ್ಟ್ರೀಯ ಸಂಬಂಧಗಳ ವಿನ್ಯಾಸ ಗೋಜಲಾದುದು. ಮನುಷ್ಯನ ತಿಳಿವಳಿಕೆಯ ವಿಸ್ತೃತ ರೂಪಗಳಾಗಿ ಕೆಲವೊಮ್ಮೆ ಕಂಡರೂ ಅವನನ್ನು ಮಾನಸಿಕವಾಗಿ ಅಂತಿಮ ಸ್ಥಿತಿಗೆ ತಳ್ಳುತ್ತಿದೆಯೇನೋ ಎಂಬ ಅನುಮಾನ ಉಂಟಾಗುತ್ತದೆ. ತಾಂತ್ರಿಕವಾಗಿ ಮತ್ತು ಆರ್ಥಿಕ ನೆಲೆಯಲ್ಲಿ ಮಾತ್ರ ಅಂತಾರಾಷ್ಟ್ರೀಯತೆಯನ್ನು ಬೆಳೆಸುತ್ತಿರಬಹುದೇನೋ ಎಂಬ ಗುಮಾನಿ ಒಂದುಕಡೆಯಾದರೆ ಪ್ರಾದೇಶಿಕವಾಗಿದ್ದ ಆದರೆ ಕಲ್ಪನೆಯಲ್ಲಿ ವಿಶ್ವರೂಪಿಯಾಗಿದ್ದ ಆಚಾರವಿಚಾರಗಳನ್ನು ವಿರೂಪಗೊಳಿಸುತ್ತಿರಬಹುದೇನೋ ಎಂಬ ಆತಂಕದಲ್ಲಿ ಸಂಸ್ಕೃತಿಗಳು ಇವೆ. ❑

## ವ್ಯಾಕ್ಸಿನ್ ಅಭಿವೃದ್ಧಿ

ರೋಗ ನಿರೋಧಕ ಉದ್ದೇಶದ ವ್ಯಾಕ್ಸಿನ್ ಅಭಿವೃದ್ಧಿಪಡಿಸುವ ಒಪ್ಪಂದವೊಂದಕ್ಕೆ ಭಾರತ – ನೆದರ್ ಲ್ಯಾಂಡ್ ಸಹಿ ಹಾಕಿವೆ.

ಮೇಕ್ ಇನ್ ಇಂಡಿಯಾ ಉಪಕ್ರಮದಡಿ ಕೇಂದ್ರ ಸರ್ಕಾರಿ ಸ್ವಾಮ್ಯದ ಭಾರತ್ ಇಮ್ಯುನೊಲಾಜಿಕಲ್ಸ್ ಆ್ಯಂಡ್ ಬಯೋಲಾಜಿಕಲ್ಸ್ ಕಾರ್ಪೊರೇಶನ್ ಲಿ., ಮಿಸಿಲ್ – ರೂಬೆಲ್ಲಾ ಲಸಿಕೆಗಳನ್ನು ಉತ್ತರ ಪ್ರದೇಶದ ಚೋಳ ಘಟಕದಲ್ಲಿ ತಯಾರಿಸಲಿದೆ.

ನೆದರ್‌ಲ್ಯಾಂಡಿನ ಸರ್ಕಾರಿ ಸ್ವಾಮ್ಯದ ಅಂತಾರಾಷ್ಟ್ರೀಯ ಖ್ಯಾತಿಯ ಇಂಟ್ರಾವ್ಯಾಕ್ ಕಂಪನಿ ತಂತ್ರಜ್ಞಾನ ವರ್ಗಾವಣೆ ಮೂಲಕ ಸಹಕಾರ ನೀಡಲಿದೆ. ಇದಲ್ಲದೆ, ಇನ್ನಿತರ ವ್ಯಾಕ್ಸಿನ್‌ಗಳನ್ನು ತಯಾರಿಸುವ ಸಾಧ್ಯತೆಗಳನ್ನು ಪರಿಶೀಲಿಸಲಾಗುವುದು. ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ, ಭೂಮಿ ವಿಜ್ಞಾನ ಖಾತೆ ಸಚಿವ ಡಾ. ಹರ್ಷವರ್ಧನ್‌ರವರು ಉನ್ನತ ಗುಣಮಟ್ಟದ ಈ ವ್ಯಾಕ್ಸಿನ್‌ಗಳ ತಯಾರಿಕೆಯಿಂದ ದೇಶದ ಸಾವಿರಾರು ಮಕ್ಕಳನ್ನು ಮಾರಣಾಂತಿಕ ರೋಗಗಳಿಂದ ರಕ್ಷಿಸಬಹುದಾಗಿದೆ. ಪೋಲಿಯೊ ನಿವಾರಣೆಯ ಕ್ರಮಗಳ ನಂತರ ಇದೀಗ ಮಿಸಿಲ್ – ರೂಬೆಲ್ಲಾ ಲಸಿಕೆಗಳನ್ನು ದೇಶೀಯವಾಗಿ ತಯಾರಿಸಿ ಮಕ್ಕಳನ್ನು ಈ ರೋಗಗಳಿಂದ ಮುಕ್ತರನ್ನಾಗಿಸಲು ಗಮನ ಕೇಂದ್ರೀಕರಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ. ❑

# ದೇಶ-ದೇಶಗಳ ಬೆಸುಗೆ : ಹೊಸ ಹೊಳಹು

* ಸುಧಾ ಹೆಗಡೆ



ಅಂತಾರಾಷ್ಟ್ರೀಯ ಸಂಬಂಧ ಕುರಿತಂತೆ ಭಾರತದ ನೀತಿ ಬದಲಾಗಿದೆಯೇ? ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತದ ಇಮೇಜ್‌ಗೆ ಇನ್ನಷ್ಟು ಗರಿ ಸೇರಿಕೊಂಡಿದೆಯೇ? ಸಾರ್ಕ್‌ನ ಇತರ ರಾಷ್ಟ್ರಗಳ ಜೊತೆ ಸಂಬಂಧ ಸುಧಾರಿಸುವತ್ತ ಹೊಸ ಹೆಜ್ಜೆ ಇಡುವ ಮೂಲಕ ಜಾಗತಿಕವಾಗಿ ಮಹತ್ವದ ಸ್ಥಾನವನ್ನು ಭದ್ರಪಡಿಸಿಕೊಳ್ಳುತ್ತಿದೆಯೇ?

ಇತ್ತೀಚಿನ ಬೆಳವಣಿಗೆಗಳನ್ನು ನೋಡಿದರೆ ಈ ಪ್ರಶ್ನೆಗಳಿಗೆಲ್ಲ ಸಕಾರಾತ್ಮಕ ಉತ್ತರವೇ ಸಿಗುತ್ತದೆ. ಅವಶ್ಯಕತೆ ಇದ್ದ ಕಡೆ ಏಕಪಕ್ಷೀಯವಾಗಿ, ಅಗತ್ಯವಿದ್ದ ಕಡೆ ದ್ವಿಪಕ್ಷೀಯವಾಗಿ, ಸಂಬಂಧಪಟ್ಟ ಕಡೆ ಬಹುಪಕ್ಷೀಯವಾಗಿ ತನ್ನ ಛಾಪನ್ನು ಮೂಡಿಸುತ್ತಲೇ ಇದೆ. ಇಡೀ ವಿಶ್ವವೇ ಭಾರತದತ್ತ, ಭಾರತದ ನಾಯಕತ್ವದತ್ತ ತಿರುಗಿ ನೋಡುವಂತೆ ಮಾಡಿದ್ದು ಕೇವಲ ರಾಜತಾಂತ್ರಿಕ ಮಟ್ಟದಲ್ಲಿ ಸಂಬಂಧ ಸುಧಾರಣೆಯಿಂದಲ್ಲ ಅಥವಾ ಬಂಡವಾಳ ಹೂಡಿಕೆಗೆ ಅವಕಾಶಗಳ ಬಾಗಿಲನ್ನು ಸಂಪೂರ್ಣವಾಗಿ ತೆರೆದಿದ್ದರಿಂದ ಮಾತ್ರವಲ್ಲ; ತೀರಾ ಕೆಳಮಟ್ಟದಿಂದಲೇ ಈ ಸಂಬಂಧಗಳಿಗೆ ಭದ್ರ ಬುನಾದಿಯನ್ನು ಹಾಕಿ ಅದನ್ನು ಬಲಪಡಿಸುತ್ತಲೇ ಸಾಗಿರುವ ಮುಂದಾಲೋಚನೆ. ಉದಾಹರಣೆಗೆ ಭಾರತದ ಆರೋಗ್ಯ ಪ್ರವಾಸೋದ್ಯಮ (ಮೆಡಿಕಲ್ ಟೂರಿಸಮ್) ಕ್ಷೇತ್ರವನ್ನೇ ತೆಗೆದುಕೊಳ್ಳಿ. ಒಂದು ವರದಿಯ ಪ್ರಕಾರ ಭಾರತದ ಈ ಆರೋಗ್ಯ ಪ್ರವಾಸೋದ್ಯಮದ ಒಟ್ಟು ವಹಿವಾಟು ಒಂದು ಶತಕೋಟಿ ಡಾಲರ್ ಅನ್ನೂ ಮೀರಿದೆ. ಹಾಗೆ ನೋಡಿದರೆ ಈ ಕ್ಷೇತ್ರಕ್ಕೆ ಭಾರತದ ಪ್ರವೇಶವಾಗಿದ್ದು ತಡವಾಗಿಯೇ. ದೇಶೀ ರೋಗಿಗಳಿಗೆ ಉತ್ತಮ ವೈದ್ಯಕೀಯ ಸೌಲಭ್ಯ ನೀಡಲು ಭಾರತದ ಆಸ್ಪತ್ರೆಗಳು ಒಂದು ಕಾಲದಲ್ಲಿ ಪರದಾಡುತ್ತಿದ್ದವು. ಉಳ್ಳವರು ವಿದೇಶಗಳಿಗೆ ಹೋಗಿ ಆಧುನಿಕ ಚಿಕಿತ್ಸೆಗಳನ್ನು ದುಬಾರಿ ವೆಚ್ಚದಲ್ಲಿ ಪಡೆದು ಬರುತ್ತಿದ್ದರು. ಸಿಂಗಪುರ, ಮಲೇಶಿಯ, ಜೋರ್ಡಾನ್, ಗ್ರೀಸ್, ಫಿಲಿಪ್ಪೀನ್ಸ್, ದಕ್ಷಿಣ ಆಫ್ರಿಕಾ ದೇಶಗಳಲ್ಲಿ ಈ ಆರೋಗ್ಯ ಪ್ರವಾಸೋದ್ಯಮವೆಂಬುದು ಜನಪ್ರಿಯವಾಗಿತ್ತು. ಪಾಶ್ಚಿಮಾತ್ಯ ರಾಷ್ಟ್ರಗಳ ಜನ ತಮ್ಮ ದೇಶಗಳ ದುಬಾರಿ ಚಿಕಿತ್ಸಾ ವೆಚ್ಚ ಭರಿಸಲಾಗದೇ ಇಂತಹ ದೇಶಗಳಿಗೆ ಭೇಟಿ ನೀಡಿ ಕಡಿಮೆ ಖರ್ಚಿನಲ್ಲಿ ಆರೋಗ್ಯ ಮರಳಿ ಪಡೆದು ಬರುತ್ತಿದ್ದರು.

ಆ ಸಂದರ್ಭದಲ್ಲಿ ಭಾರತದಲ್ಲಿ ಹೈಟೆಕ್ ಆಸ್ಪತ್ರೆಗಳು ತಲೆ ಎತ್ತಿದವು. ಪಾಶ್ಚಿಮಾತ್ಯ ದೇಶಗಳ ಕಣ್ಣು ಇತ್ತ ತಿರುಗಿತು. ದುಡ್ಡಿದ್ದವರು ಆರೋಗ್ಯ ವೃದ್ಧಿಗೆ ಭಾರತದ ಆಸ್ಪತ್ರೆಗಳತ್ತ ಮುಖ ಮಾಡಿದರು. ಆದರೆ ಕೇವಲ ಹಣದ ದೃಷ್ಟಿಯಿಂದ ಮಾತ್ರ ಈ ಕ್ಷೇತ್ರವು ಸುದ್ದಿ ಮಾಡಲಿಲ್ಲ; ಮಾನವೀಯತೆ ದೃಷ್ಟಿಯಿಂದಲೂ ಅಂತಾರಾಷ್ಟ್ರೀಯವಾಗಿ ಸುದ್ದಿ ಮಾಡಿತು. ಪಾಕಿಸ್ತಾನದ ಪುಟ್ಟ ಬಾಲಕ ಸಾಹಿಲ್‌ನ ಪುಟ್ಟ ಹೃದಯದ ರಂಧ್ರವನ್ನು ಮುಚ್ಚುವ ಶಸ್ತ್ರಚಿಕಿತ್ಸೆಯನ್ನು ಉಚಿತವಾಗಿ ಮಾಡಿದ್ದು ಬೆಂಗಳೂರಿನ ಆಸ್ಪತ್ರೆ. ಲಾಹೋರ್‌ನ ಅಬ್ದುಲ್‌ನ ಕ್ಯಾನ್ಸರ್‌ಗೆ ಯಶಸ್ವಿ ಚಿಕಿತ್ಸೆಯನ್ನು ಕಡಿಮೆ ವೆಚ್ಚದಲ್ಲಿ ನೀಡಿದ್ದು ಮುಂಬೈನ ಆಸ್ಪತ್ರೆ. ಅದರಂತೆ ಎರಡು ವರ್ಷಗಳ ಹಸುಳೆ ರುಖಿಯಾ, 13 ವರ್ಷದ ಬಾಲಕ ಮೊಹ್ಮದ್.. ಹೇಳುತ್ತ ಹೋದರೆ ನೂರಾರು ಮಂದಿ ಪಾಕಿಸ್ತಾನದಿಂದ ಬೆಂಗಳೂರು, ಚೆನ್ನೈ, ಮುಂಬೈ ಮೊದಲಾದ ಆಸ್ಪತ್ರೆಗಳಿಗೆ ಬಂದು ಕಡಿಮೆ ವೆಚ್ಚದಲ್ಲಿ, ಕೆಲವರು ಉಚಿತವಾಗಿ ಚಿಕಿತ್ಸೆ ಪಡೆದು ಹಿಂದಿರುಗಿದ್ದಾರೆ.

ಇದೇ ರೀತಿ ಅಫ್ಘಾನಿಸ್ತಾನ, ಬಾಂಗ್ಲಾದೇಶ, ಇರಾನ್ ಮೊದಲಾದ ದೇಶಗಳಿಂದಲೂ ರೋಗಿಗಳು ಬಂದು ಭಾರತದ ಆಸ್ಪತ್ರೆಗಳ ಕದ ತಟ್ಟಿದರು. ಯಶಸ್ವಿಯಾಗಿ ಚಿಕಿತ್ಸೆ ಪಡೆದು ಇಲ್ಲಿಯ ಆತಿಥ್ಯ, ಸಹೃದಯತೆ, ಮಾನವೀಯತೆಯ ಸವಿನೆನಪುಗಳ ಮೂಟೆ ಕಟ್ಟಿಕೊಂಡು ಮರಳಿದ್ದಾರೆ. ಇಂತಹ ರೋಗಿಗಳಿಗೆ ಭಾರತಕ್ಕೆ ಬರಲು ನಿಯಮಗಳನ್ನು ಕೂಡಾ ಸರಳೀಕರಿಸಲಾಗಿದೆ. ತುರ್ತು ಸನ್ನಿವೇಶಗಳಲ್ಲಿ ತುರ್ತು ವೈದ್ಯಕೀಯ ವೀಸಾ ನೀಡುವ ವ್ಯವಸ್ಥೆಯನ್ನೂ ಭಾರತ ಕಲ್ಪಿಸಿದೆ. ಚಿಕಿತ್ಸೆ ನೀಡುವಾಗ ಆ ದೇಶ, ಈ ದೇಶ ಎಂದು ಮುಖ ನೋಡಿ ಮಣೆ ಹಾಕುವ ನೀತಿಯನ್ನು ಭಾರತ ಎಂದಿಗೂ ಅನುಸರಿಸಿಲ್ಲ. 'ವಸುಧೈವ ಕುಟುಂಬಕಂ' ಎಂಬ ತನ್ನ ಧ್ಯೇಯವನ್ನು ಪರಿಪಾಲಿಸುತ್ತ ಬಂದಿದೆ. ಭಾರತದ ಈ ಮಾನವೀಯ ನೀತಿಯೇ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಿಂಚುವಂತೆ ಮಾಡಿದೆ ಎಂಬುದು ಸುಳ್ಳಲ್ಲ.

* ಹಿರಿಯ ಪತ್ರಕರ್ತೆ.

ಈ ಆರೋಗ್ಯ ಪ್ರವಾಸೋದ್ಯಮ ದಿಂದಲೇ ಭಾರತ ಹಲವು ದೇಶಗಳ ಜೊತೆ ಸಂಬಂಧವನ್ನು ಜೋಡಿಸಿಕೊಂಡಿದೆ. ನೆರೆಯ ಪಾಕಿಸ್ತಾನದ ಜೊತೆ ರಾಜತಾಂತ್ರಿಕ ಸಂಬಂಧದಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಅಲ್ಲಿಯ ಜನಸಾಮಾನ್ಯರ ಜೊತೆ ಮಾನವೀಯ ಸಂಬಂಧಗಳ ಮೂಲಕ ಭಾರತ ಹತ್ತಿರವಾಗಿದೆ. ಅಫ್ಘಾನಿಸ್ತಾನದ ಜೊತೆ ಕೂಡಾ ಭಾರತದ ಸಂಬಂಧ ಹೊಸ ಬೆಳಕು ಕಂಡಿದ್ದು ಈ ಆರೋಗ್ಯ ಪ್ರವಾಸೋದ್ಯಮದಿಂದಲೇ. ಅಲ್ಲಿಯ ರಾಜಕೀಯ ಅಸ್ಥಿರತೆ, ಆರ್ಥಿಕ ಅಭದ್ರತೆ, ಉತ್ತಮ ವೈದ್ಯಕೀಯ ಸೌಲಭ್ಯದ ಕೊರತೆಯಿಂದಾಗಿ ವರ್ಷಕ್ಕೆ ಸಾವಿರಾರು ಮಂದಿ ಆಫ್ಘನ್ನರು ಚಿಕಿತ್ಸೆಗಾಗಿ ಭಾರತದತ್ತ ಮುಖ ಮಾಡುತ್ತಿದ್ದಾರೆ. ಕಳೆದ ವರ್ಷವೊಂದೇ 15 ಸಾವಿರಕ್ಕೂ ಅಧಿಕ ವೈದ್ಯಕೀಯ ವೀಸಾಗಳನ್ನು ಭಾರತದ ರಾಯಭಾರ ಕಚೇರಿ ಕೊಡಮಾಡಿದೆ. ಬೆಂಗಳೂರಿನ ಆಸ್ಪತ್ರೆಯ ವೈದ್ಯರು ಹೇಳುವ ಪ್ರಕಾರ, 'ಈ ರೀತಿಯ ವೈದ್ಯಕೀಯ ಚಿಕಿತ್ಸೆಯಲ್ಲಿ ಅಂತಹ ದೊಡ್ಡ ಮೊತ್ತದ ವೆಚ್ಚವನ್ನೇನೂ ಮಾಡಬೇಕಾಗಿಲ್ಲ. ಆದರೆ ಪರಸ್ಪರ ಭಾವನಾತ್ಮಕ ಸಂಬಂಧ ಬೆಸೆಯುವ ವಾತಾವರಣ ಇಲ್ಲಿದೆ. ಅವರಲ್ಲಿ ಒಂದು ರೀತಿಯ ಸುರಕ್ಷಿತ ಭಾವನೆ ಮೂಡುವುದಂತೂ ನಿಜ. ಪಾಶ್ಚಿಮಾತ್ಯ ರಾಷ್ಟ್ರಗಳ ಆಸ್ಪತ್ರೆಗಳಲ್ಲಿ ಹಣ ಕೊಟ್ಟರೆ ಚಿಕಿತ್ಸೆ ಸಿಗಬಹುದು. ಆದರೆ ಈ ರೀತಿಯ ಭದ್ರತೆಯ ಭಾವನೆ ಅಲ್ಲಂತೂ ಸಿಗುವುದಿಲ್ಲ'.

ಇದೇ ರೀತಿ ಬೇರೆ ಬೇರೆ ದೇಶಗಳಿಂದ ಬರುವ ರೋಗಿಗಳಿಗೆ ಭಾರತದ ಮಾನವೀಯ ಮುಖ, ಕ್ಷಿಪ್ರವಾಗಿ ಸ್ಪಂದಿಸುವ ರೀತಿಯ ಪರಿಚಯವಾಗಿದ್ದು, ಇದು ಆ ದೇಶಗಳ ಜೊತೆ ಭಾರತದ ಬಾಂಧವ್ಯ ಬೆಸೆಯಲು ಕಾರಣವಾಗಿದೆ. ಭಾರತ ಒಂದು ಬ್ರ್ಯಾಂಡ್ ಆಗಿ ಜಗತ್ತಿನಲ್ಲೆಡೆ ಪರಿಚಯ ಮಾಡಿಕೊಡುವುದರಲ್ಲಿ ಕೂಡಾ ಈ ಕ್ಷೇತ್ರದ ಕೊಡುಗೆ ಮಹತ್ತರವಾಗಿದೆ ಎಂಬುದನ್ನು ಮರೆಯುವಂತಿಲ್ಲ.

## ನೆರವಿನ ಹಸ್ತ

ಹಿಂದೆ ಭಾರತ ನೆರವಿಗಾಗಿ ಇತರ ದೇಶಗಳತ್ತ ಮುಖ ಮಾಡುವ ಕಾಲವೊಂದಿತ್ತು. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಂದ ಆರ್ಥಿಕ, ತಂತ್ರಜ್ಞಾನದ ನೆರವಲ್ಲದೇ, ನೈಸರ್ಗಿಕ ವಿಕೋಪ, ವಿದೇಶಗಳಲ್ಲಿ ರಾಜಕೀಯ ಅರಾಜಕತೆ, ಬಿಕ್ಕಟ್ಟು ತಲೆದೋರಿದಾಗ ಅಲ್ಲಿರುವ ಅನಿವಾಸಿ ಭಾರತೀಯರ ರಕ್ಷಣೆಗೆ ಬಲಾಢ್ಯ ರಾಷ್ಟ್ರಗಳ ಮೊರೆ ಹೋಗುವಂತಹ ಪರಿಸ್ಥಿತಿ ಇತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಇಂತಹ ಬಿಕ್ಕಟ್ಟು ತಲೆದೋರಿದಾಗ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತವೇ ಮುಂಚೂಣಿಯಲ್ಲಿ ನಿಂತು ಯಶಸ್ವಿ ಕಾರ್ಯಾಚರಣೆಯನ್ನು ನಡೆಸುತ್ತಿದೆ.

ಇದಕ್ಕೊಂದು ಅಪ್ಪಟ ಉದಾಹರಣೆ ಕಳೆದ ಏಪ್ರಿಲ್‌ನಲ್ಲಿ ಯೆಮೆನ್‌ನಲ್ಲಿ ನಡೆದ ಅಭೂತಪೂರ್ವ ಕಾರ್ಯಾಚರಣೆ. ಅಲ್ಲಿಯ ಹೌತಿ ಬಂಡುಕೋರರು ಹಾಗೂ ಪದಚ್ಯುತ ಅಧ್ಯಕ್ಷರಿಗೆ ನಿಷ್ಠರಾಗಿರುವ ಪಡೆಗಳ ಮಧ್ಯೆ ನಡೆಯುತ್ತಿದ್ದ ಕದನ ತೀವ್ರವಾದಾಗ ಬಹುತೇಕ ಎಲ್ಲಾ ವೈಮಾನಿಕ ಸಂಸ್ಥೆಗಳು ತಮ್ಮ ಚಟುಕವಟಿಕೆಯನ್ನು ಯೆಮೆನ್‌ನಲ್ಲಿ ಸ್ಥಗಿತಗೊಳಿಸಿದವು. ಸೌದಿ ಅರೇಬಿಯ ಪಡೆಗಳು ದಾಳಿ ಆರಂಭಿಸಿದ್ದವು. ಸಾವಿರಾರು ಮಂದಿ ಭಾರತೀಯರೂ ಸೇರಿದಂತೆ 26ಕ್ಕೂ ಅಧಿಕ ದೇಶಗಳ ನಾಗರಿಕರು ಅಲ್ಲಿಂದ ಪಾರಾಗಲಾಗದೇ ಬವಣೆ ಪಡುತ್ತಿರುವಾಗ ಅಮೆರಿಕ ಕೂಡಾ ಅಸಹಾಯಕತೆಯಿಂದ ಕೈಕಟ್ಟಿ ಕುಳಿತಿತ್ತು. ಆಗ ಭಾರತ ಸರ್ಕಾರ ತನ್ನ ನಾಲ್ಕು ಸಾವಿರಕ್ಕೂ ಅಧಿಕ ಮಂದಿ ನಾಗರಿಕರನ್ನು ವಾಪಸ್ಸು ಕರೆತರಲು ಕಾರ್ಯಾಚರಣೆ ಆರಂಭಿಸಿತು.

ಭಾರತದ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ಖುದ್ದಾಗಿ ಸೌದಿಯ ದೊರೆಯೊಂದಿಗೆ ಮಾತನಾಡಿದ್ದರಿಂದ ಭಾರತದ ರಕ್ಷಣಾ ತಂಡಕ್ಕೆ ಯೆಮೆನ್‌ಗೆ ತೆರಳಲು ಅವಕಾಶ ದೊರಕಿತು. ಆದರೆ ಭಾರತ ತನ್ನ ನಾಗರಿಕರನ್ನು ಮಾತ್ರವಲ್ಲ, ಅಮೆರಿಕ, ಫ್ರಾನ್ಸ್, ಬ್ರಿಟನ್, ಜರ್ಮನಿ, ಪಾಕಿಸ್ತಾನ, ಸಿಂಗಪುರ, ಶ್ರೀಲಂಕಾ, ಈಜಿಪ್ಟ್ ಸೇರಿದಂತೆ 26 ದೇಶಗಳ ಸುಮಾರು 900 ನಾಗರಿಕರನ್ನೂ ಮರಳಿ ಕರೆ ತಂದಿದ್ದು ವಿಶೇಷ. ಭಾರತದ ವಿದೇಶಾಂಗ ಇಲಾಖೆಯ ಮಾರ್ಗದರ್ಶನದ ಅಡಿಯಲ್ಲಿ ನಡೆದ 'ರಾಹತ್' ಕಾರ್ಯಾಚರಣೆಯನ್ನು ಇಡೀ ವಿಶ್ವವೇ ನಿಬ್ಬೆರಗಾಗಿ ನೋಡಿತು. ಭಾರತದ ನೌಕಾಪಡೆ, ವೈಮಾನಿಕ ಪಡೆ, ಭಾರತೀಯ ವಿಮಾನಯಾನ ಸಂಸ್ಥೆಗಳು ಇತಿಹಾಸದಲ್ಲೇ ಅತ್ಯಂತ ದೊಡ್ಡದಾದ ವೈಮಾನಿಕ ತೆರವಿನ ಕಾರ್ಯಚಾರಣೆ ನಡೆಸಿದ್ದಕ್ಕೆ ಜಗತ್ತಿನ ಎಲ್ಲೆಡೆಯಿಂದ ಮೆಚ್ಚುಗೆಯ ಮಹಾಪೂರವೇ ಹರಿದುಬಂತು.

ಇಲ್ಲೊಂದು ಪ್ರಮುಖ ಸಂಗತಿಯನ್ನು ಗಮನಿಸಬಹುದು. ಪಾಕಿಸ್ತಾನದಿಂದ ಸಹಾಯಕ್ಕಾಗಿ ಯಾವುದೇ ಮನವಿ ಬರದಿದ್ದರೂ ಮಾನವೀಯತೆ ನೆಲೆಯಲ್ಲಿ ಆ ದೇಶದ ನಾಗರಿಕರನ್ನೂ ಭಾರತ ಯೆಮೆನ್‌ನಿಂದ ಕರೆ ತಂದಿತ್ತು. ಇದಕ್ಕೆ ಪ್ರತಿಯಾಗಿ ಪಾಕಿಸ್ತಾನವೂ ಭಾರತದ 11 ಮಂದಿ ನಾಗರಿಕರನ್ನು ಯೆಮೆನ್‌ನಿಂದ ಕರೆತಂದಿದ್ದು, ಮಾನವೀಯತೆ ವಿಷಯ ಬಂದಾಗ ಬೇರೆಲ್ಲ ಭಿನ್ನಾಭಿಪ್ರಾಯಗಳೂ ತೆರೆಮರೆಗೆ ಸರಿಯುತ್ತವೆ ಎಂಬುದಕ್ಕೆ ಸಾಕ್ಷಿ. ಕೊಲ್ಲಿ ಯುದ್ಧವಾದಾಗಲೂ ಭಾರತ ಇದೇ ನಡೆಯಿಂದ ಮೆಚ್ಚುಗೆ ಗಳಿಸಿತ್ತು.

ಭಾರತ ಇತರ ದೇಶಗಳೊಂದಿಗಿನ ಸೌಹಾರ್ದ ಸಂಬಂಧವನ್ನು ಬಲಗೊಳಿಸಲು ಇದೊಂದು ಪ್ರಮುಖ ಹೆಜ್ಜೆ ಎನ್ನಬಹುದು. ಯಾವುದೇ ರಾಜತಾಂತ್ರಿಕ ಕೆಂಪು ಪಟ್ಟಿಯ ನೆವ ಒಡ್ಡದೇ ಮಾನವೀಯತೆಯಿಂದ ಮುಖ ನೋಡಿ ಸಹಾಯ ಮಾಡಿದ್ದು ಪ್ರಶಂಸನಾರ್ಹ.

ಕಳೆದ ಜುಲೈನಲ್ಲಿ ಇರಾಕ್‌ನ ಆಸ್ಪತ್ರೆಯಿಂದ ಐಸಿಎಸ್ ಉಗ್ರರು ಅಪಹರಿಸಿದ್ದ 46 ಭಾರತೀಯ ದಾದಿಯರನ್ನು ಮುಕ್ತಗೊಳಿಸುವಲ್ಲಿಯೂ ಭಾರತದ ರಾಜತಾಂತ್ರಿಕ ಯತ್ನಕ್ಕೆ ವಿಶ್ವದೆಲ್ಲೆಡೆ ಶ್ಲಾಘನೆ ವ್ಯಕ್ತವಾಗಿದೆ. ಇರಾಕ್ ಉತ್ತರ ಭಾಗದ ತಿಕ್ರಿಟ್‌ನ ಆಸ್ಪತ್ರೆಯಿಂದ ಈ ದಾದಿಯರನ್ನು ಅಪಹರಿಸಲಾಗಿತ್ತು. ಭಾರತದ ಹೊಸ ಸರ್ಕಾರಕ್ಕೆ ಇದೊಂದು ಹೊಸ ಸವಾಲಾಗಿ ಪರಿಣಮಿಸಿತ್ತು. ಪ್ರಧಾನಿ ಶ್ರೀ ಮೋದಿಯವರ ಸರ್ಕಾರ ಈ ಬಿಕ್ಕಟ್ಟನ್ನು ಹೇಗೆ ಪರಿಹರಿಸುತ್ತದೆ ಎಂದು ಇತರ ದೇಶಗಳು ಕುತೂಹಲದಿಂದ ನೋಡುತ್ತಿದ್ದವು. ವಿದೇಶಾಂಗ ಇಲಾಖೆ ತನ್ನೆಲ್ಲಾ ಸಂಪರ್ಕವನ್ನು ಬಳಸಿ ಇರಾಕ್‌ನ ಒಳಗೆ ಹಾಗೂ ಹೊರಗಿನಿಂದ ಒತ್ತಡ ಹೇರಿ ದಾದಿಯರನ್ನು ಸುರಕ್ಷಿತವಾಗಿ ಭಾರತಕ್ಕೆ ಕರೆತಂದಾಗ ಭಾರತ ಅಂತಾರಾಷ್ಟ್ರೀಯವಾಗಿ ಕಾಯ್ದುಕೊಂಡ ಸಂಬಂಧಗಳ ಅರಿವು ಆಗಿದ್ದಂತೂ ನಿಜ. ಜಮ್ಮು ಮತ್ತು ಕಾಶ್ಮೀರದಲ್ಲಿ ಭೀಕರ ಪ್ರವಾಹ ಪರಿಸ್ಥಿತಿ

ತಲೆದೋರಿದಾಗಲೂ ಭಾರತವು ಪಾಕಿಸ್ತಾನ ಆಕ್ರಮಿತ ಕಾಶ್ಮೀರ ಭಾಗದಲ್ಲೂ ನೆರವಿಗೆ ಧಾವಿಸಿತ್ತು. ಕಳೆದ ಡಿಸೆಂಬರ್‌ನಲ್ಲಿ ದ್ವೀಪ ರಾಷ್ಟ್ರ ಮಾಲ್ಡೀವ್ಸ್‌ನಲ್ಲಿ ಕುಡಿಯುವ ನೀರಿನ ಭಾರಿ ಕೊರತೆ ತಲೆದೋರಿ ಅಲ್ಲಿಯ ನಾಗರಿಕರಲ್ಲಿ ಹಾಹಾಕಾರ ಪರಿಸ್ಥಿತಿ ಉಂಟಾದಾಗ ತಕ್ಷಣ ಒಂದು ಸಾವಿರ ಟನ್ ಕುಡಿಯುವ ನೀರನ್ನು ವಿಮಾನದ ಮೂಲಕ ಕಳಿಸಿಕೊಟ್ಟ ಭಾರತ, ಅಲ್ಲಿಯ ಕುಡಿಯುವ ನೀರಿನ ಸಂಸ್ಕರಣ ಘಟಕ ದುರಸ್ತಿಯಾಗುವವರೆಗೆ ಇ–ಸಂಸ್ಕರಣ ಸೌಲಭ್ಯವುಳ್ಳ ಐಎನ್‌ಎಸ್ ಸುಕನ್ಯ ಎಂಬ ಹಡಗನ್ನು ಮಾಲೆಯ ಬಳಿಯೇ ಇರಿಸಿತು. ನೆರವಿನ ವಿಷಯ ಬಂದಾಗ, ಅಂತಾರಾಷ್ಟ್ರೀಯ ಬಾಂಧವ್ಯ ವೃದ್ಧಿಯ ವಿಷಯ ಬಂದಾಗ ಭಾರತ ಯಾವತ್ತೂ ತನ್ನ ನೆರೆಯ ರಾಷ್ಟ್ರಗಳನ್ನು ಬಿಟ್ಟುಕೊಡುವುದಿಲ್ಲ ಎಂಬುದಕ್ಕೆ ಕಳೆದ ಏಪ್ರಿಲ್‌ನಲ್ಲಿ ನೇಪಾಳದಲ್ಲಿ ಸಂಭವಿಸಿದ ಭೂಕಂಪದ ಸಂದರ್ಭದಲ್ಲಿ ಇನ್ನೊಮ್ಮೆ ಸಾಬೀತಾಗಿದೆ. ಭೂಕಂಪ ಸಂಭವಿಸಿದ ಸುದ್ದಿ ತಿಳಿದ ಕೆಲವು ಗಂಟೆಗಳಲ್ಲೇ ಭಾರತದ ಪ್ರಧಾನಿ ಹಿಮಾಲಯ ತಪ್ಪಲಿನ ಈ ಬಡ ದೇಶದ ನೆರವಿಗೆ ಧಾವಿಸಿದ್ದಕ್ಕೆ ವಿಶ್ವದ ಎಲ್ಲೆಡೆಯಿಂದ ಪ್ರಶಂಸೆ ವ್ಯಕ್ತವಾಗಿದೆ. 3–4 ಗಂಟೆಗಳ ಒಳಗೆ ಮಿಲಿಟರಿ ವಿಮಾನ, ನೈಸರ್ಗಿಕ ವಿಕೋಪ ನಿರ್ವಹಣಾ ಸಿಬ್ಬಂದಿಯನ್ನು ಭಾರತ ಕಳುಹಿಸಿತು. ವಿಮಾನ, ಹೆಲಿಕಾಪ್ಟರ್‌ಗಳು, ಆಹಾರ ಪೊಟ್ಟಣ, ಕುಡಿಯುವ ನೀರು, ಔಷಧಿ, ಹೊದಿಕೆಗಳನ್ನು ಕಳುಹಿಸಿ ಮಾನವೀಯತೆ ಮೆರೆಯಿತು. ಜೊತೆಗೆ ವೈದ್ಯರು, ಇನ್ನಿತರ ಸಿಬ್ಬಂದಿ ನೇಪಾಳದ ನೆರವಿಗೆ ನಿಂತರು. ಅಲ್ಲಿ ಸಿಲುಕಿಕೊಂಡಿದ್ದ ಭಾರತೀಯ ಪ್ರವಾಸಿಗರನ್ನು ಸುರಕ್ಷಿತವಾಗಿ ಕರೆ ತರುವ ಕೆಲಸವನ್ನೂ ಯಶಸ್ವಿಯಾಗಿ ಮಾಡಿತು ಭಾರತದ ಪಡೆ. ರಿಕ್ಟರ್ ಮಾಪಕದಲ್ಲಿ 7.8ರಷ್ಟಿದ್ದ ಭೂಕಂಪದಿಂದ 8,800ಕ್ಕೂ ಅಧಿಕ ಮಂದಿ ಮೃತಪಟ್ಟಿದ್ದು, 22 ಸಾವಿರಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. 5 ಲಕ್ಷ ಮನೆಗಳು ಕುಸಿದಿವೆ. ಇನ್ನಷ್ಟು ಮಂದಿ ಬಡತನ ರೇಖೆಯ ಕೆಳಗೆ ಸರಿದಿದ್ದಾರೆ. ಆಸ್ತಿ ನಷ್ಟವನ್ನು ಸರಿದೂಗಿಸಿ ದೇಶವನ್ನು ಮತ್ತೆ ಕಟ್ಟಲು 6.5 ಶತಕೋಟಿ ಡಾಲರ್ ಅಗತ್ಯವಿರುವ ದೇಶಕ್ಕೆ ಭಾರತ ಒಂದು ಶತಕೋಟಿ ಡಾಲರ್ ನೆರವು ನೀಡುವುದಾಗಿ ಘೋಷಿಸಿದೆ. ಈ ಪುಟ್ಟ ದೇಶದ ಜೊತೆಗಿರುವ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳನ್ನು ಅಲಕ್ಷಿಸಿದರೆ ಚೀನಾ ಅದರ ಲಾಭವನ್ನು ಪಡೆಯಬಹುದೆಂಬ ಭಯವೂ ಭಾರತಕ್ಕಿದೆ. ನೇಪಾಳ ಮತ್ತು ಭಾರತದ ಸಂಬಂಧ ತೀರಾ ಹಳೆಯದು.

## ಪ್ರವಾಸೋದ್ಯಮಕ್ಕೆ ಒತ್ತು

ಭಾರತ ಸರ್ಕಾರವು 43 ದೇಶಗಳ ಪ್ರವಾಸಿಗಳಿಗೆ 'ವೀಸಾ ಆನ್ ಅರೈವಲ್' (ಭಾರತಕ್ಕೆ ಆಗಮಿಸಿದ ಮೇಲೆ ವೀಸಾ ಅಥವಾ ಇ–ವೀಸಾ) ನೀಡುವ ಮಹತ್ವದ ನಿರ್ಧಾರ ಕೈಗೊಂಡಿದ್ದು, ಇದರಿಂದ ಪ್ರವಾಸೋದ್ಯಮ ಕ್ಷೇತ್ರಕ್ಕೆ ಒತ್ತು ಸಿಗುವುದಲ್ಲದೇ ಆ ಮೂಲಕ ಇಷ್ಟೂ ದೇಶಗಳ ಜೊತೆ ಬಾಂಧವ್ಯ ಕೂಡಾ ವೃದ್ಧಿಯಾಗಲಿದೆ ಎಂಬ ಆಶಾಭಾವನೆ ವ್ಯಕ್ತವಾಗಿದೆ. ಅಮೆರಿಕ, ಆಸ್ಟ್ರೇಲಿಯ, ಜರ್ಮನಿ, ಜಪಾನ್, ಸಿಂಗಪುರ ಮೊದಲಾದ 43 ದೇಶಗಳಿಗೆ ಇ– ವೀಸಾ ಸೌಲಭ್ಯ ವಿಸ್ತರಿಸಲಾಗಿದ್ದು, ಭಾರತದ 9 ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಈ ಸವಲತ್ತಿಗೆ ಅನುಮತಿ ನೀಡಲಾಗಿದೆ. ಈ ಸೌಲಭ್ಯ ಸಿಕ್ಕಿದ ನಂತರ ಭಾರತಕ್ಕೆ ಆಗಮಿಸುವ ಪ್ರವಾಸಿಗಳ ಸಂಖ್ಯೆ ಗಣನೀಯವಾಗಿ ಏರಿದೆ ಎನ್ನುತ್ತದೆ ಅಂಕಿ–ಸಂಖ್ಯೆ. ಭಾರತದ ಈ ನಡೆ ಬೇರೆ ದೇಶಗಳಿಗೂ ಮೇಲ್ಪಂಕ್ತಿಯಾಗಲಿದ್ದು, ಅವೂ ಕೂಡಾ ಇ–ವೀಸಾ ಅವಕಾಶವನ್ನು ಹೆಚ್ಚು ದೇಶಗಳಿಗೆ ವಿಸ್ತರಿಸುವ ನಿರೀಕ್ಷೆಯಿದೆ.

## ಬದಲಾದ ವಿದೇಶಾಂಗ ನೀತಿ

ಭಾರತದ ವಿದೇಶಾಂಗ ನೀತಿಗೆ ಯಾವುದೇ ಗುರಿಯಿಲ್ಲ, ಭಾರತದ ಆರ್ಥಿಕ ಸ್ಥಿತಿ ತೀರಾ ಹದಗೆಟ್ಟಿದೆ, ಸರ್ಕಾರದಲ್ಲಿ ಭ್ರಷ್ಟಾಚಾರ ಮಿತಿ ಮೀರಿದೆ ಎಂಬಂತಹ ಮಾತುಗಳು ಹಲವು ವರ್ಷಗಳಿಂದ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೇಳಿಬರುತ್ತಿದ್ದವು. ಆದರೆ ಶ್ರೀ ನರೇಂದ್ರ ಮೋದಿ ಅವರು ಪ್ರಧಾನಿಯಾದ ಕೂಡಲೇ ಒಂದಂತೂ ಸ್ಪಷ್ಟವಾಗಿತ್ತು, ಅದು ಭಾರತದ ವಿದೇಶಾಂಗ ನೀತಿಯ ಸಮಗ್ರ ಬದಲಾವಣೆ, ಆರ್ಥಿಕ ಪುನಃಶ್ಚೇತನ, ರಾಜಕೀಯ ಸ್ಥಿರತೆ.

ಭಾರತದ ಪ್ರಧಾನಿ ಜಾಗತಿಕ ಮುಖಂಡರ ಜೊತೆ ಹೊಂದಿರುವ ಸೌಹಾರ್ದ ಸಂಬಂಧ ಅಂತರರಾಷ್ಟ್ರೀಯ ಬಾಂಧವ್ಯ ಬಲಪಡಿಸಲು ಬುನಾದಿ ಹಾಕಿದೆ ಎನ್ನಬಹುದು. ವಿದೇಶಗಳಿಗೆ ಭೇಟಿ ನೀಡಿದಾಗ ಅಥವಾ ವಿದೇಶಿ ಗಣ್ಯರು ಭಾರತಕ್ಕೆ




ಆಗಮಿಸಿದಾಗ ಅವರ ಜೊತೆ ಆತ್ಮೀಯವಾಗಿ ನಡೆದುಕೊಳ್ಳುವ ರೀತಿ, ಮೈತ್ರಿಯನ್ನು ವ್ಯಕ್ತಪಡಿಸುವ ನಡವಳಿಕೆಗಳು, ಶಿಷ್ಟಾಚಾರ ಬದಿಗಿಟ್ಟು ಅವರನ್ನು ಭೇಟಿ ಮಾಡಿದ ಸಂದರ್ಭಗಳನ್ನು ಕಡೆಗಣಿಸುವಂತಿಲ್ಲ. ಪ್ರಧಾನಿ ಅವರ 'ಮೇಕ್ ಇನ್ ಇಂಡಿಯಾ' ಪ್ರಚಾರ ರಾಜತಾಂತ್ರಿಕತೆಯಲ್ಲಿ ಆರ್ಥಿಕ ನೀತಿಯನ್ನು ಹದವಾಗಿ ಬೆರೆಸುವ ವಿಧಾನವಾಗಿದ್ದು, ಈ ವೈಖರಿಗೆ ವಿದೇಶಿ ಮುಖಂಡರು ಮಾರು ಹೋಗಿದ್ದಾರೆ. ಅಮೆರಿಕ, ಆಸ್ಟ್ರೇಲಿಯ, ಜರ್ಮನಿ, ಜಪಾನ್, ಚೀನಾ ಮೊದಲಾದ ದೇಶಗಳಿಂದ ಹೂಡಿಕೆ ಬೃಹತ್ ಮೊತ್ತದಲ್ಲಿ ಹರಿದು ಬಂದಿದೆ. ಶ್ರೀ ಮೋದಿ ಅವರಲ್ಲಿರುವ ಪ್ರಬಲ ನಾಯಕತ್ವ ಗುಣ ಗುರುತಿಸಿ, ಭಾರತದ ಮೇಲೆ ಹೆಚ್ಚು ವಿಶ್ವಾಸವಿಡಲು ವಿದೇಶಿ ನಾಯಕರಿಗೆ 'ಮೇಕ್ ಇನ್ ಇಂಡಿಯಾ' ನೆರವಾಗಿದೆ ಎನ್ನಬಹುದು. ವಿದೇಶಗಳಿಗೆ ಭೇಟಿ ನೀಡಿದಾಗ ಅಲ್ಲಿಯ ಅನಿವಾಸಿ ಭಾರತೀಯರ ಜೊತೆ ನೇರವಾಗಿ ಮಾತನಾಡುವ ಪ್ರಧಾನಿಯವರ ಕ್ರಮವೂ ಭಾರತದ ಜನಪ್ರಿಯತೆಗೆ ಹೊಸ ಹೊಳಪನ್ನು ನೀಡಿದೆ. ಭಾರತ ಸಾಧಿಸಿದ ಇನ್ನೊಂದು ಮಹತ್ವದ ಸಂಗತಿಯೆಂದರೆ ಅತಿ ಕಡಿಮೆ ಅವಧಿಯಲ್ಲಿ ವಿಶ್ವಸಂಸ್ಥೆಯನ್ನು ವಿಶ್ವ ಯೋಗದ ದಿನ ಆಚರಣೆ ನಿರ್ಧಾರಕ್ಕೆ ಒಪ್ಪಿಸಿದ್ದು. ಅತ್ಯಂತ ಹೆಚ್ಚು ಅಂದರೆ 177 ದೇಶಗಳು ಈ ಪ್ರಸ್ತಾವಕ್ಕೆ ತಮ್ಮ ಒಪ್ಪಿಗೆ ಸೂಚಿಸಿ ಯೋಗ ದಿನಾಚರಣೆ ಮೂಲಕ ಇಡೀ ವಿಶ್ವವೇ ಭಾರತದತ್ತ ತಿರುಗಿ ನೋಡುವಂತೆ ಮಾಡಿದ್ದು ಸಾಧನೆಯೇ ಸರಿ.

ಈ ಎಲ್ಲ ವಿದ್ಯಮಾನಗಳನ್ನು ಗಮನಿಸಿದಾಗ ಭಾರತ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮುಂಚೂಣಿಯಲ್ಲಿ ನಿಲ್ಲುವ ತಾಕತ್ತು ತೋರಿಸುತ್ತಿದೆ. ಆರ್ಥಿಕ ಚೇತರಿಕೆ ಕಂಡು ಬಂದಿದ್ದು, ಚೀನಾವನ್ನು ಹಿಂದಿಕ್ಕಲು ಪ್ರಬಲ ಪೈಪೋಟಿ ನೀಡುತ್ತಿದೆ. ಒಂದಂತೂ ನಿಜ, ವಿದೇಶಗಳಲ್ಲಿ ಭಾರತದ ಚಿತ್ರಣ ಈಗ ಬದಲಾಗಿದ್ದು, ಹೊಸ ಭರವಸೆ ಮೂಡಿದೆ. ❑

# ಜಾಗತಿಕ ಸಂಬಂಧದಲ್ಲಿ ಸಾಂಸ್ಕೃತಿಕ ರಂಗ

* ನಾ. ದಾಮೋದರ ಶೆಟ್ಟಿ



ಒಂದು ಕಾಲದಲ್ಲಿ ಭಾರತವನ್ನು ಹಾವಾಡಿಗರ ನಾಡು ಎಂದು ಶ್ರೀಮಂತ ರಾಷ್ಟ್ರಗಳು ಗೇಲಿಮಾಡುತ್ತಿದ್ದವು. ನಾವೂ ಹೆಚ್ಚುಕಮ್ಮಿ ಅದನ್ನು ನಂಬಿದ್ದೆವು ಕೂಡ. ನಮ್ಮಲ್ಲಿರುವ ಸಾಂಸ್ಕೃತಿಕ ಸಿರಿವಂತಿಕೆ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಅವರ್‍ಯಾರೂ ಗಮನಿಸಿದಂತಿಲ್ಲ. ಮನೆಮನೆಗಳಲ್ಲಿರುವ ಸಾಂಸ್ಕೃತಿಕ ಸಿರಿವಂತಿಕೆಯನ್ನು ಜಗಜ್ಜಾಹೀರು ಮಾಡಬೇಕು ಎಂಬುದರ ಬಗ್ಗೆ ನಮ್ಮವರು ಹಿಂದೆ ಅಷ್ಟೊಂದು ತಲೆಕೆಡಿಸಿಕೊಂಡಿರಲಿಲ್ಲ. ಅಪರಿಮಿತ ಜನಸಂಖ್ಯೆಯಿರುವ ಈ ನಾಡಿನಲ್ಲಿ ಹೊಟ್ಟೆಯ ಚಿಂತೆಯೂ ಮುಖ್ಯವಾಗಿತ್ತು. ಯುರೋಪಿನ ಮನೆಗಳಿಗೆ ಭೇಟಿಯಿತ್ತು ನೋಡಿ; ಪ್ರತಿ ಕೊಠಡಿಗಳಲ್ಲಿ ಒಂದಲ್ಲ ಒಂದು ಬಗೆಯ ವಾದ್ಯವಾದನಗಳು ಕಾಣಸಿಗುತ್ತವೆ. ಕಲೆ, ಸಂಗೀತಾದಿಗಳ ಪ್ರಾಥಮಿಕ ಜ್ಞಾನವಾದರೂ ಆ ಮನ ಮನೆಗಳಲ್ಲಿ ಮನೆಮಾಡಿವೆ ಎಂಬುದು ಅದರ ಅರ್ಥ. ಹೇಳಿ ಕೇಳಿ ಬಡರಾಷ್ಟ್ರ ಎನ್ನಿಸಿಕೊಂಡಿರುವ ಭಾರತದಲ್ಲಿ ಅಷ್ಟೊಂದು ಸವಲತ್ತುಗಳೂ ಇರಲಿಲ್ಲ. ಹಾಗೆಂದು ನಮ್ಮ ದೇಶ ಖಂಡಿತವಾಗಿಯೂ ಪಾರಂಪರಿಕ ಕಲೆ, ಸಂಗೀತ, ನೃತ್ಯ, ಶಿಲ್ಪಾದಿಗಳಲ್ಲಿ ಯಾವತ್ತೂ ಹಿಂದೆ ಬಿದ್ದಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಸುವರ್ಣ ಸಾಮ್ರಾಜ್ಯ ಕಟ್ಟಿದ ಅನೇಕ ರಾಜರು ಮುತ್ತುರತ್ನಾದಿಗಳನ್ನು ಬೀದಿಬದಿಯಲ್ಲಿಟ್ಟು ಮಾರಾಟ ಮಾಡುತ್ತಿದ್ದರೆಂಬ ಪ್ರತೀತಿಯಿದೆ. ನಮ್ಮ ದೇಶದ ಐಶ್ವರ್ಯವನ್ನೆಲ್ಲ ಬ್ರಿಟಿಷರು ಕಿತ್ತೊಯ್ದು ಬಳಿಕ ರಾಷ್ಟ್ರವನ್ನು ಮರಳಿ ಕಟ್ಟುವ ಕಾಯಕದೆಡೆಯಲ್ಲಿ ಮಂದಿಯನ್ನು ಸುಸಂಸ್ಕೃತರೆಂದು ಜಾಹೀರು ಪಡಿಸುವುದು ಪ್ರಯಾಸದ ಕೆಲಸವಾಗಿತ್ತು. ಆದ್ದರಿಂದಲೇ ಬಹುಕಾಲದವರೆಗೆ ಜಗತ್ತಿನ ಮುಂದುವರಿದ ದೇಶಗಳ ಜೊತೆ ನಮ್ಮನ್ನು ತುಲನೆ ಮಾಡಿದಾಗ ನಾವು ತುಂಬಾ ಕೆಳಮಟ್ಟದಲ್ಲಿದ್ದೇವೆಂದು ತೋರಿಹೋಗುತ್ತಿದ್ದುದು. ಭಾರತೀಯ ಸಂಸ್ಕೃತಿಗಿರುವ ಇತಿಹಾಸವನ್ನು ಕೆದಕಿ ನೋಡುವ ಕೆಲಸವನ್ನು ಸರಿಯಾದ ನಿಟ್ಟಿನಲ್ಲಿ ಮಾಡದೇ ಹೋದಾಗಲೂ ಇಂತಹ ಅಪಕೀರ್ತಿಗಳು ನಮ್ಮನ್ನಾವರಿಸಿದ್ದುವು. ಮೊಹೆಂಜೊದಾರೋ ಹರಪ್ಪಾಗಳು ಕೂಡ ನಮ್ಮ ಸಂಸ್ಕೃತಿಯನ್ನು ಬಹಳವಾಗಿ ಸಮರ್ಥಿಲು ಸಹಕರಿಸಿದುವಾದರೂ ಹೆಚ್ಚಿನ ಪ್ರಯೋಜನವಾಗಲಿಲ್ಲ. ಸ್ವಾತಂತ್ರ್ಯೋತ್ತರದಲ್ಲಿ ಕೂಡ ನಮ್ಮ ಸಾಂಸ್ಕೃತಿಕ ಶಕ್ತಿಯ ಬಗ್ಗೆ ನಮಗೇ ಸಾಕಷ್ಟು ಮಾಹಿತಿ ಇರಲಿಲ್ಲ. ನಮ್ಮ ಚಿತ್ರ, ಶಿಲ್ಪಾದಿಗಳ ಸಂಗ್ರಹಾಲಯಗಳನ್ನು ಜಾಗತಿಕ ಮಟ್ಟದಲ್ಲಿ ಪ್ರದರ್ಶನಕ್ಕಿಡಬೇಕೆಂಬುದಾಗಲೀ ಆ ಮೂಲಕ ದೇಶಕ್ಕೆ ಖ್ಯಾತಿ ತರಬೇಕೆಂಬುದಾಗಲೀ ನಮಗೆ ತಡವಾಗಿ ಹೊಳೆದಿರಬೇಕು. ನಮ್ಮ ದೇಶದ ವಿವಿಧ ಕ್ಷೇತ್ರಗಳನ್ನು, ವಿವಿಧ ತಾಣಗಳನ್ನು ಪ್ರವಾಸೀ ಕೇಂದ್ರಗಳನ್ನಾಗಿ ಪರಿವರ್ತಿಸುತ್ತಿದ್ದಲ್ಲಿ ಅದಾಗಲೇ ಜಗತ್ತಿನ ಪ್ರಮುಖ ಸಾಂಸ್ಕೃತಿಕ ರಾಷ್ಟ್ರಗಳಲ್ಲಿ ಭಾರತಕ್ಕೂ ಗೌರವಾನ್ವಿತ ಸ್ಥಾನ ಲಭಿಸುತ್ತಿತ್ತು. ನಿಜವೆಂದರೆ ನಮ್ಮ ಮಹಾಕಾವ್ಯಗಳಾಗಲೀ ಪುರಾತನ ಕಲೆಗಳಾಗಲೀ ಅರಸರ ಆಳ್ವಿಕೆಯ ವೈಭವವಾಗಲೀ ಗುಡಿಗೋಪುರಗಳಾಗಲೀ ಸರೋವರಗಳಾಗಲೀ ಸಂಗೀತವಾಗಲೀ ಯಕ್ಷಗಾನವಾಗಲೀ ಕಥಕ್ಕಳಿಯಾಗಲೀ ಶಾಸ್ತ್ರೀಯ ನೃತ್ಯಗಳಾಗಲೀ ಜಾನಪದ ನೃತ್ಯಗಳಾಗಲೀ ಜಾನಪದ ಕಾವ್ಯಗಳಾಗಲೀ ವಿದೇಶೀಯರಿಗೆ ಊಹಿಸಲಸದಳವಾಗುವಷ್ಟು ವೈಭವೋಪೇತವಾಗಿವೆ. ಸಾಂಸ್ಕೃತಿಕ ವಿನಿಮಯದ ಹೆಸರಿನಲ್ಲಿ ಅಮೆರಿಕ, ಇಂಗ್ಲಂಡ್, ರಷ್ಯಾ, ಶ್ರೀಲಂಕಾ, ಚೀನಾ, ಜಪಾನ್, ಆಸ್ಟ್ರೇಲಿಯಾ, ಫ್ರಾನ್ಸ್, ಜರ್ಮನಿ, ಸ್ಪೇನ್, ಗಲ್ಫ್ ಇತ್ಯಾದಿ ರಾಷ್ಟ್ರಗಳ ಕಡೆಗೆ ಇತ್ತೀಚೆಗಿನ ದಿನಗಳಲ್ಲಿ ಭಾರತದ ಕಲಾತಂಡ ಸತತವಾಗಿ ಸಂಚರಿಸುತ್ತಿದೆ. ಅಂತೆಯೇ ಅಂಥ ರಾಷ್ಟ್ರಗಳಿಂದ ನಮ್ಮ ದೇಶಕ್ಕೂ ನಿರಂತರವಾಗಿ ತಂಡಗಳು ಬರತೊಡಗಿವೆ. ಕರ್ನಾಟಕವನ್ನಷ್ಟೇ ತೆಗೆದುಕೊಂಡು ನೋಡಿದಲ್ಲಿ ಜಗತ್ತು ಮತ್ತೆ ಮತ್ತೆ ತಿರುಗಿ ನಮ್ಮತ್ತ ನೋಡುವಂತೆ ಮಾಡಬಲ್ಲ ಆಕರ್ಷಕ ಶಕ್ತಿ ನಮ್ಮಲ್ಲಿದೆ. ಕರ್ನಾಟಕದ ಜಾನಪದ ಕಲೆಗಳು ವಿದೇಶದ ಹಲವು ರಾಷ್ಟ್ರಗಳಲ್ಲಿ ಸಂಚರಿಸಿವೆ. ಡೊಳ್ಳು ಕುಣಿತ, ಬೀಸು ಕಂಸಾಳೆ, ಜೋಗೇರಾಟ, ಯಕ್ಷಗಾನ, ಮುಂತಾದ ಜನಪದ ಕಲಾತಂಡಗಳು ರಷ್ಯಾ, ಚೀನಾ, ಫ್ರಾನ್ಸ್, ಸ್ವೀಡನ್ ಮುಂತಾದ ಹಲವು ರಾಷ್ಟ್ರಗಳಲ್ಲಿ ನಡೆದ ಅಂತಾರಾಷ್ಟ್ರೀಯ ಕಲೋತ್ಸವಗಳಲ್ಲಿ ಭಾಗವಹಿಸಿವೆ. ಡಾ.ಶಿವರಾಮ ಕಾರಂತ, ಕು.ಶಿ ಹರಿದಾಸ ಭಟ್ಟರೇ ಮೊದಲಾದವರಿಂದ ತೊಡಗಿ ಶ್ರೀ ಶ್ರೀನಿವಾಸ್ ಜಿ. ಕಪ್ಪಣ್ಣರಂಥವರ ವರೆಗೆ ಹಲವರು ಕಲಾ ತಂಡಗಳಿಗೆ ನಾಯಕತ್ವ ಒದಗಿಸಿ ಕರ್ನಾಟಕದ ಕಲೆಗಳಿಗೆ ವಿದೇಶದಲ್ಲಿ ಮಾರುಕಟ್ಟೆ ಕುದುರಿಸಿ ಕೊಟ್ಟಿದ್ದಾರೆ.

### ಯಕ್ಷಗಾನ

ಕರ್ನಾಟಕದ ಪರಿಪೂರ್ಣ ಕಲೆಯಾದ ಯಕ್ಷಗಾನದ ತೆಂಕುತಿಟ್ಟು ಹಾಗೂ ಬಡಗುತಿಟ್ಟು

* ಸಾಂಸ್ಕೃತಿಕ ವಕ್ತಾರರು.

ತಮ್ಮದೇ ಆದ ವೈವಿಧ್ಯದಿಂದ ಕೂಡಿದ ಒಂದೇ ಕಲಾ ಪ್ರಕಾರದ ಎರಡು ಪ್ರಭೇದಗಳು. ಬಡಗು ತಿಟ್ಟು ಯಕ್ಷಗಾನವನ್ನು ಡಾ. ಕೆ. ಶಿವರಾಮ ಕಾರಂತರು ಜಾಗತಿಕ ಮಟ್ಟದ ಶ್ರೇಷ್ಠ ಪ್ರದರ್ಶಕ ಕಲೆ ಎನ್ನುವಂತೆ ಬಿಂಬಿಸಿದರು. ಕಳೆದ ಶತಮಾನದ ಸುಮಾರು ನಾಲ್ಕೈದು ದಶಕಗಳ ತನಕ ಉಡುಪಿ ಎಂ.ಜಿ.ಎಂ. ಕಾಲೇಜಿನ ಆಶ್ರಯದಲ್ಲಿ ಶಿವರಾಮ ಕಾರಂತರು ಹಾಗೂ ಕು.ಶಿ. ಹರಿದಾಸ ಭಟ್ಟರು ಸೇರಿಕೊಂಡು ವಿದೇಶಿಯರಿಗಾಗಿಯೆ ಯಕ್ಷಗಾನವನ್ನು ಸಿದ್ಧಗೊಳಿಸಿದ್ದರು: ಕಥಕ್ಕಳಿಯಂತೆ ಮಾತನ್ನು ಸ್ಥಗಿತಗೊಳಿಸಿದರು. ಮುದ್ರೆಗಳನ್ನು ಹೆಚ್ಚು ಬಳಸಿದರು. ವಿದೇಶೀ ವಾದ್ಯಗಳನ್ನು ಹಿಮ್ಮೇಳದಲ್ಲಿ ಸೇರಿಸಿಕೊಂಡರು. ಪೌರಾಣಿಕ ಪ್ರಸಂಗಗಳನ್ನು ಸಿದ್ಧಪಡಿಸಿ ಜಗತ್ತಿನ ಪ್ರಮುಖ ರಾಷ್ಟ್ರಗಳೊಂದಿಗೆ ಮುಖಾಮುಖಿಯಾದರು. ಅಂತೆಯೇ ಉದ್ಯೋಗ ನಿಮಿತ್ತವಾಗಿ ದುಬಾಯಿ, ಬೆಹ್ರೈನ್‌ಮುಂತಾದ ಕೊಲ್ಲಿ ರಾಷ್ಟ್ರಗಳಿಗೆ ಹೋಗಿ ನೆಲೆಸಿದ ಕರಾವಳಿಯ ಕನ್ನಡಿಗರು ತೆಂಕುತಿಟ್ಟು ಯಕ್ಷಗಾನವನ್ನು ಜೊತೆಗೇ ಕೊಂಡೊಯ್ದರು. ಅಗತ್ಯಕ್ಕೆ ಹೊಂದಿಕೊಂಡು ಪರಿಣತ ಕಲಾವಿದರನ್ನು ಕರಾವಳಿ ಪ್ರದೇಶದಿಂದ ಕರೆಯಿಸಿಕೊಂಡರು. ಇದೀಗ ಕೊಲ್ಲಿರಾಷ್ಟ್ರಗಳಲ್ಲಿ ಯಕ್ಷಗಾನ ಪ್ರದರ್ಶನ ನೀಡುವ ಸಾಮರ್ಥ್ಯ ಅಲ್ಲಿ ನೆಲೆಸಿದ ಕನ್ನಡಿಗರಿಗೇ ಇದೆ. 1988 ಹಾಗೂ 1992ರಲ್ಲಿ ನಾ.ದಾ. ಶೆಟ್ಟಿಯವರು ಮಂಗಳೂರಿನ ಸೈಂಟ್ ಎಲೋಶಿಯಸ್ ಕಾಲೇಜಿನ ವಿದ್ಯಾರ್ಥಿಗಳ ತೆಂಕುತಿಟ್ಟು ಯಕ್ಷಗಾನ ಸಿದ್ಧಪಡಿಸಿ ಇಂಗ್ಲೆಂಡಿಗೆ ಕೊಂಡೊಯ್ದು ವಿವಿಧ ಶಾಲಾ ಕಾಲೇಜು ಹಾಗೂ ಇತರ ಕೇಂದ್ರಗಳಲ್ಲಿ ತಲಾ ಹದಿನೈದರಂತೆ ಪ್ರದರ್ಶನ ಕೊಡಿಸಿದ್ದರು. ಚಿಚೆಸ್ಟರ್‌ನ ಸ್ಕೂಲ್ ಆಫ್ ಡ್ರಾಮಾದ ಜೊತೆಗಿನ ವಿನಿಮಯ ಕಾರ್ಯಕ್ರಮದಡಿ ಇದು ನಡೆಯಿತು. ಐಸಿಸಿಆರ್ ಮೊದಲ ಬಾರಿಗೆ ದೆಹಲಿಯ ವಿದ್ಯಾ ಕೋಳ್ಯೂರು ಅವರ ನಾಯಕತ್ವದ ತೆಂಕುತಿಟ್ಟು ಯಕ್ಷಗಾನ ತಂಡವನ್ನು ವಿದೇಶಕ್ಕೆ ಕಳುಹಿಸಿದೆ ಎಂಬುದು ದೆಹಲಿಯ ಕನ್ನಡಿಗರಿಗೆ ಸಂದ ಗೌರವ. ಉಡುಪಿ ಜಿಲ್ಲೆಯ ಭಾಸ್ಕರ ಕೊಗ್ಗ ಕಾಮತರ ಯಕ್ಷಗಾನ ಬೊಂಬೆಯಾಟ ವಿದೇಶೀಯರನ್ನು ಬಲುವಾಗಿ ಆಕರ್ಷಿಸಿದೆ. ಇಂತೆಯೇ ಕಾಸರಗೋಡಿನ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಗೊಂಬೆಯಾಟ ತಂಡವೂ ನಿರಂತರವಾಗಿ ವಿದೇಶಗಳಲ್ಲಿ ಪ್ರದರ್ಶನ ನೀಡಿ ಮೆಚ್ಚುಗೆ ಗಳಿಸಿದೆ. ಭಾಷೆಯ ತೊಡಕಿಲ್ಲದಂತೆ ಮಾಡಲು ಗೊಂಬೆಯಾಟದವರು ಕಥಾವಸ್ತುವನ್ನು ಆಯಾ ಭಾಷೆಯಲ್ಲಿ ಪ್ರೇಕ್ಷಕರಿಗೆ ಮುಂಚಿತವಾಗಿ ತಿಳಿಸುವುದರಿಂದ ಅವುಗಳನ್ನು ಅರ್ಥೈಸುವುದು ಸುಲಭ. ಸುಮಾರು ನಾಲ್ಕು ದಶಕಗಳಿಂದ ಭಾರತದ ಯಕ್ಷಗಾನ ಗೊಂಬೆಯಾಟಕ್ಕೆ ವಿದೇಶಗಳಲ್ಲಿ ಬೇಡಿಕೆಯಿದೆ.

### ರಂಗಭೂಮಿ

ಅರವತ್ತರ ದಶಕದ ಆರಂಭದಲ್ಲಿ ದೆಹಲಿಯಲ್ಲಿ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದ ಮೂಲಕ ಅದರ ನಿರ್ದೇಶಕರಾಗಿದ್ದ ಅಲ್ಕಾಜಿಯವರು ರಾಷ್ಟ್ರೀಯ ರಂಗಭೂಮಿಯ ಪರಿಕಲ್ಪನೆಯನ್ನು ನಮ್ಮ ನಡುವೆ ಬಿತ್ತಿದಲ್ಲಿಂದ ಮೊದಲ್ಗೊಂಡು ಭಾರತೀಯ ಪ್ರಾದೇಶಿಕ ರಂಗಭೂಮಿಯ ಗತಿಯಲ್ಲಿ ಬದಲಾವಣೆ ಕಾಣಿಸಿಕೊಂಡಿತು. ಅದರ ಹೊರತಾಗಿಯೂ ಭಾರತೀಯ ಪ್ರಾದೇಶಿಕ ರಂಗಭೂಮಿ ತನ್ನತನವನ್ನು ಉಳಿಸಿಕೊಂಡು ವಿದೇಶಗಳಲ್ಲೂ ಖ್ಯಾತವಾಗಿರುವುದನ್ನು ಅಲ್ಲಗಳೆಯಲಾಗದು. ಅಂತೆಯೇ ವಿದೇಶಿ ಕಲಾವಿದರೂ ಅವರ ಕಲಾಸಾಮರ್ಥ್ಯವನ್ನು ನಮ್ಮ ದೇಶದ ವಿವಿಧ ಭಾಗಗಳಲ್ಲಿ ಪ್ರದರ್ಶಿಸುವುದೂ ನಮ್ಮ ಜಾನಪದ ಕಲೆಗಳನ್ನು ಅವರು ಕಲಿತುಕೊಂಡು ಹೋಗುವುದೂ ನಡೆದಿದೆ. ರಷ್ಯನ್ ರಂಗಭೂಮಿಯ ಖ್ಯಾತ ರಂಗನಿರ್ದೇಶಕ ಗ್ರೊಟೊವ್‌ಸ್ಕಿ ಅಲ್ಲಿನ ರಂಗಭೂಮಿ ತಾಂತ್ರಿಕವಾಗಿ ಮೇಲ್ಮಟ್ಟದಲ್ಲಿರುವುದರಿಂದ ಸಂತುಷ್ಟನಾಗಲಿಲ್ಲ. ರಂಗಭೂಮಿ ನಟನ ಅಭಿನಯವನ್ನು ಬಂಡವಾಳವಾಗಿಸಿ ಬೆಳೆಯಬೇಕಾದದ್ದು ಮುಖ್ಯ ಎಂಬ ಕಾರಣಕ್ಕೆ ದೇಹವನ್ನು ದುಡಿಯಿಸುವ ರಂಗಭೂಮಿಗೆ ಶರಣಾದ. ಪರಿಣಾಮವಾಗಿ ಸುಮಾರು ಆರು ದಶಕಕ್ಕೆ ಮೊದಲು ಆತ ಕೇರಳಕ್ಕೆ ಬಂದು ಮೂರು ವರ್ಷಗಳ ಕಾಲ ಕಳರಿಯನ್ನು ಅಭ್ಯಾಸ ಮಾಡಿದ. 'ಬಡರಂಗಭೂಮಿ'ಯೆಂಬ ರಂಗಪ್ರಕಾರವನ್ನೇ ಹುಟ್ಟುಹಾಕಿದ. ಆ ಬಡರಂಗಭೂಮಿ ಕರ್ನಾಟಕದಲ್ಲಿ ಅಂದಿನಿಂದ ಮೊದಲ್ಗೊಂಡು ಬಹುಕಾಲ ತನ್ನ ಮಿತಿಯೊಳಗೆ ಕೆಲಸಮಾಡಿದೆ. ನಮ್ಮ ಬೀದಿನಾಟಕದ ಅಂತಃಸತ್ವ ಅದೇ ಆಗಿದೆ. ಕಲ್ಚರಲ್ ಎಕ್ಸ್‌ಚೇಂಜ್ ಪ್ರೋಗ್ರಾಮ್ ಎಂಬುದು ಇತ್ತೀಚೆಗಿನ ದಿವಸಗಳಲ್ಲಿ ದೇಶ ದೇಶಗಳ ಮಧ್ಯೆ ಅಥವಾ ಸಂಸ್ಥೆಗಳ ನಡುವೆ ಇರುವ ಒಂದು ಸಾಂಸ್ಕೃತಿಕ ಕೊಂಡಿ. ಇತ್ತೀಚೆಗಂತೂ ಭಾರತದಿಂದ ವಿದೇಶಗಳಿಗೂ ಅಲ್ಲಿಂದ ಭಾರತಕ್ಕೂ ಸಾಕಷ್ಟು ಪ್ರಮಾಣದಲ್ಲಿ ರಂಗತಂಡಗಳು ಬರುತ್ತಾ ಹೋಗುತ್ತಾ



ಇವೆ. ಹಲವು ಎನ್.ಜಿ.ಓ. ಗಳೂ ಆ ಕೆಲಸ ಮಾಡುತ್ತಿವೆ. ವಿದೇಶದಲ್ಲಿ ಅನೇಕ ಕಡೆ ನಡೆಯುವ ಭಾರತ ಉತ್ಸವಗಳಲ್ಲಿ ಕರ್ನಾಟಕದ ನಾಟಕ, ಸಂಗೀತಾದಿಗಳು ಅವಕಾಶ ಪಡೆದುಕೊಳ್ಳುತ್ತವೆ. ಕನ್ನಡ ನಾಟಕಗಳು ಭಾಷೆಯ ತೊಡಕು ನಿಮಿತ್ತವಾಗಿ ಹೆಚ್ಚಿನ ಸಂಖ್ಯೆಯಲ್ಲಿ ವಿದೇಶಕ್ಕೆ ಹೋಗುವುದಿಲ್ಲವಾದರೂ ಬೆಂಗಳೂರಿನ ರಂಗಶಂಕರ ಹಾಗೂ ಇತರ ರಂಗತಂಡಗಳು ಸಿದ್ಧಪಡಿಸುವ ಇಂಗ್ಲಿಷ್ ಹಾಗೂ ಹಿಂದಿ ಭಾಷೆಯ ಕನಿಷ್ಠ ನಾಲ್ಕೈದು ನಾಟಕಗಳಾದರೂ ವಿದೇಶ ಸಂಚಾರ ಮಾಡಿ ಬರುತ್ತವೆ. ಖ್ಯಾತ ರಂಗಕರ್ಮಿ ಶ್ರೀಮತಿ ಬಿ. ಜಯಶ್ರೀ ಅವರು ತಮ್ಮ ಸ್ಪಂದನ ತಂಡಕ್ಕಾಗಿ ನಿರ್ದೇಶಿಸಿದ 'ಲಕ್ಷಾಪತಿ ರಾಜನ ಕಥೆ' ನಾಟಕವು 1989 ರಲ್ಲಿ 'ಕೈರೋ' ಮತ್ತು 'ತಾಷ್ಕೆಂಟ್'ಗಳಲ್ಲಿ ನಡೆದ ಅಂತಾರಾಷ್ಟ್ರೀಯ ನಾಟಕೋತ್ಸವದಲ್ಲಿ ಪಾಲ್ಗೊಂಡು ಅಪಾರ ಮೆಚ್ಚುಗೆ ಗಳಿಸಿದೆ. ಅದರಲ್ಲಿ ಬಳಕೆಯಾದ ವರ್ಣರಂಜಿತ ವೇಷಭೂಷಣ, ನೃತ್ಯಮಯ ಚಲನೆ ಹಾಗೂ ಸಂಗೀತ ಹಾಗೂ ಜಾನಪದ ಕಥಾವಸ್ತುವನ್ನೊಳಗೊಂಡ ಕಾರಣಕ್ಕೆ ಅದು ವಿದೇಶೀ ಪ್ರೇಕ್ಷಕರನ್ನು ಬಹುಬೇಗ ತಲುಪಿಬಿಡುತ್ತದೆ. 'ಸ್ವೀಡನ್' ನಲ್ಲಿ ನಡೆದ 'ಫೆಸ್ಟಿವಲ್ ಆಫ್ ಇಂಡಿಯಾದ' ಕಾರ್ಯಕ್ರಮದಲ್ಲಿ ನೃತ್ಯ ಸಂಯೋಜನೆ ಮಾಡಿದ ಹೆಗ್ಗಳಿಕೆ ಬಿ. ಜಯಶ್ರೀಯವರದು. ಭಾರತದ 50 ನೇ ಸ್ವಾತಂತ್ರ್ಯೋತ್ಸವದ ಗುರುತಿಗಾಗಿ ಎಡಿನ್‌ಬರೋ–ಸ್ಕಾಟ್ಲೆಂಡ್ ನಲ್ಲಿ ಸ್ಪಂದನ ತಂಡದೊದಿಗೆ ಕಾರ್ಯಕ್ರಮ ನೀಡಿರುವುದು ಹೆಮ್ಮೆಯ ಸಂಗತಿ. ಇವರ ಎಲ್ಲಾ ಸಾಧನೆಗಳಿಗೆ ಮನ್ನಣೆಯಾಗಿ ಅನೇಕ ಪ್ರಶಸ್ತಿ, ಸಮ್ಮಾನ, ಪುರಸ್ಕಾರಗಳು ಕಾರ್ನಾಡರ ಪ್ರಸಿದ್ಧ ನಾಟಕ 'ತುಘಲಕ್' ಬಗ್ಗೆ ಭಾರತೀಯರು ತಾಳಿದಷ್ಟು ಆಸಕ್ತಿಯನ್ನು ವಿದೇಶೀಯರು ತಾಳಿಲ್ಲ. ಆದರೆ 'ಹಯವದನ'ವಾಗಲೀ 'ನಾಗಮಂಡಲ'ವಾಗಲೀ ಅವರಿಗೆ ಬಲು ಪ್ರಿಯ. ಕಾರಣವಿಷ್ಟೇ; ಮುಖ್ಯವಾಗಿ ಅವುಗಳ ಕಥಾವಸ್ತು ಜನಪದ ರೂಪದ್ದು. ವಿದೇಶೀ

ಪ್ರೇಕ್ಷಕರು ಜನಪದರ ಸಂಸ್ಕೃತಿಯ ಸತ್ವವುಳ್ಳ ನಾಟಕಗಳನ್ನು ಬಹಳವಾಗಿ ಮೆಚ್ಚಿಕೊಳ್ಳುತ್ತಾರೆ ಎಂಬುದಕ್ಕೆ ರಂಗಾಯಣದಲ್ಲಿ ಶ್ರೀ ಬಸವಲಿಂಗಯ್ಯ ನಿರ್ದೇಶಿಸಿದ ಶ್ರೀ ದೇವನೂರ ಮಹಾದೇವ ಅವರ 'ಕುಸುಮಬಾಲೆ'ಯೇ ಸಾಕ್ಷಿ. ಬೆಂಗಳೂರನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ವರ್ಷದಲ್ಲಿ ಸುಮಾರು ಹತ್ತು –ಹನ್ನೆರಡು ವಿದೇಶೀ ನಾಟಕಗಳು ಅಲ್ಲಿನ ರಂಗಶಂಕರಕ್ಕೆ ಪ್ರತಿವರ್ಷ ನಿರಂತರವಾಗಿ ಬರುತ್ತಿವೆ. ಕನ್ನಡದ ಪ್ರೇಕ್ಷಕರು ವಿದೇಶೀ ನಾಟಕಗಳಿಗೆ ವಿಶೇಷ ಪ್ರೋತ್ಸಾಹ ನೀಡುತ್ತಾರೆ. ಆದ್ದರಿಂದಲೇ ಹಾಗೆ ಬಂದ ಪ್ರತಿ ರಂಗತಂಡವೂ ಹತ್ತಾರು ಪ್ರದರ್ಶನಗಳನ್ನು ದೇಶದ ಉದ್ದಗಲಗಳಲ್ಲಿ ನೀಡಿಯೇ ಮರಳುವುದು ಪದ್ಧತಿ. ಹಾಗೇನೆ ಬೆನ್‌ವಿಟ್ಸ್‌ರಂಥ ಎಷ್ಟೋ ವಿದೇಶೀ ರಂಗ ನಿರ್ದೇಶಕರು ಭಾರತಕ್ಕೆ ಬಂದು ನಾಟಕ ನಿರ್ದೇಶಿಸಿ ಮರಳಿದ್ದಾರೆ. ಸ್ವೀಡನ್‌ನಂಥ ದೇಶಗಳಾಗಲೀ ಫೋರ್ಡ್ ಫೌಂಡೇಷನ್‌ನಂಥ ಸಂಸ್ಥೆಗಳಾಗಲೀ ಭಾರತದ ರಂಗಭೂಮಿಯ ಉದ್ದೀಪನಕ್ಕೆ ಸಾಕಷ್ಟು ಆರ್ಥಿಕ ಸಹಾಯವಿತ್ತಿವೆ. ಶೇಕ್ಸ್‌ಪಿಯರ್ ಕನ್ನಡದ ಪ್ರೇಕ್ಷಕರಿಗೆ ಬಹಳ ಪ್ರಿಯವಾದ ನಾಟಕಕಾರ ಕೇರಳದವರಿಗೆ ಇಬ್ಸನ್ ಇದ್ದ ಹಾಗೆ ಕನ್ನಡದವರಿಗೆ ಶೇಕ್ಸ್‌ಪಿಯರ್. ಆತನ ಅನೇಕ ನಾಟಕಗಳನ್ನು ಬಹು ಹಿಂದಿನಿಂದಲೇ ಕನ್ನಡಕ್ಕೆ ಭಾಷಾಂತರ, ರೂಪಾಂತರ ಹಾಗೂ ಇನ್ನಿತರ ರೂಪಗಳಲ್ಲಿ ಕನ್ನಡಕ್ಕೆ ತರಲಾಗಿದೆ. ಅವುಗಳ ಪ್ರಯೋಗಗಳನ್ನು ನಾವು ಇಂಗ್ಲೆಂಡಿನ ರಂಗಭೂಮಿಗೆ ತೋರಿಸುವ ಅಗತ್ಯವಿದೆ. ಮೈಸೂರಿನಲ್ಲಿ ನೆಲೆಗೊಂಡಿರುವ ಕರ್ನಾಟಕ ಸರ್ಕಾರದ ರಂಗಾಯಣವು ಹಿಪೋಲಿಟಸ್, ಮಿಡ್ ಸಮ್ಮರ್ ನೈಟ್ಸ್ ಡ್ರೀಮ್ ಮುಂತಾದ ವಿದೇಶೀ ಮೂಲದ ನಾಟಕಗಳನ್ನು ಭಾರತೀಯ ದೇಸೀ ನೆಲೆಗಟ್ಟಿನಲ್ಲಿ ಸಿದ್ಧಪಡಿಸಿ ಅಮೇರಿಕಾದ ಲಾಮಾಮಾ ಥಿಯೇಟರಿನಲ್ಲಿ ಸತತ ಪ್ರದರ್ಶನವಿತ್ತು ಅವರ ಮೆಚ್ಚುಗೆಗೆ ಪಾತ್ರವಾದುದು ನಮ್ಮ ಹೆಮ್ಮೆ. ನಾಟಕಗಳ ಕೊಡುಕೊಳೆಯ ಕುರಿತು ಅಂದಿನ ರಂಗಾಯಣದ ನಿರ್ದೇಶಕರಾಗಿದ್ದ ಬಿ.ವಿ.ಕಾರಂತರು ಮೊದಲಿನಿಂದಲೇ ಕನಸು ಕಂಡಿದ್ದರು. ಹಲವು ವಿದೇಶೀ ರಂಗ ನಿರ್ದೇಶಕರು ರಂಗಾಯಣದಲ್ಲಿ ನಾಟಕ ನಿರ್ದೇಶಿಸುವುದಕ್ಕೂ ಬರುತ್ತಿದ್ದರು. ಸಿ. ಬಸವಲಿಂಗಯ್ಯನವರು ರಂಗಾಯಣದ ನಿರ್ದೇಶಕರಾಗಿದ್ದ ಕಾಲದಲ್ಲೂ ಈ ಬಗೆಯ ಕೊಡುಕೊಳೆ ಮುಂದುವರಿದಿತ್ತು. ಸರ್ವಶ್ರೀ ಪ್ರಸನ್ನ, ಚಿದಂಬರರಾವ್ ಜಂಬೆ ಮೊದಲಾದವರು ರಂಗಾಯಣದ ನಿರ್ದೇಶಕರಾಗಿದ್ದಲ್ಲಿಯವರೆಗೆ ಅದಕ್ಕೆ ಸ್ವೀಡನ್ನಿನಿಂದ ಮಕ್ಕಳ ನಾಟಕಕ್ಕಾಗಿ ವಿಶೇಷ ಆರ್ಥಿಕ ನೆರವೂ ಲಭಿಸುತ್ತಿತ್ತು. ಹೆಗ್ಗೋಡಿನ ನೀನಾಸಮ್ ತಂಡ ಕೂಡ ಅನೇಕ ವಿದೇಶೀ ರಂಗ ನಿರ್ದೇಶಕರನ್ನು ಕರೆಸಿ ತಮ್ಮ ತಿರುಗಾಟದ ತಂಡಕ್ಕೂ ರಂಗಶಿಕ್ಷಣ ಕೇಂದ್ರಕ್ಕೂ ನಾಟಕ ನಿರ್ದೇಶಿಸುವ ವ್ಯವಸ್ಥೆ ಮಾಡಿದ್ದಿದೆ. ಬೆಂಗಳೂರಿನ ಕಲಾಗಂಗೋತ್ರಿ, ರಂಗಶಂಕರವೇ ಮೊದಲಾದ ರಂಗತಂಡಗಳು ಇಂಗ್ಲೆಂಡ್, ಅಮೇರಿಕ ಮುಂತಾದ ದೇಶಗಳಲ್ಲಿ ನಾಟಕ ಪ್ರದರ್ಶಿಸಿವೆ. ಅಂತೆಯೇ ಕಳೆದ ದಶಕದಿಂದ ಪ್ರಾರಂಭಗೊಂಡ ಹಾಸ್ಯೋತ್ಸವ ಎಂಬ ಪರಿಕಲ್ಪನೆಗೆ ವಿದೇಶದಲ್ಲಿ ಬೇಡಿಕೆಯಿದೆ. ಸರ್ವಶ್ರೀ ರಿಚರ್ಡ್‌ಲೂವಿಸ್, ನರಸಿಂಹ ಮೂರ್ತಿ, ಕೃಷ್ಣೇಗೌಡ, ಮೈಸೂರು ಆನಂದ್, ಶ್ರೀಮತಿ ಸುಧಾ ಬರಗೂರು ಮೊದಲಾದವರು ಹಲವಾರು ದೇಶಗಳನ್ನು ಹಲವಾರು ಬಾರಿ ಸುತ್ತಿ ಹಾಸ್ಯದ ಹೊನಲನ್ನು ಹರಿಸಿದ್ದಾರೆ.

ಅರಳು ಹುರಿದಂತೆ ಮಾತನಾಡಬಲ್ಲ ಸರ್ವಶ್ರೀ ಅರಳು ಮಲ್ಲಿಗೆ ಪಾರ್ಥಸಾರಥಿ, ಹಂಪನಾ ಮುಂತಾದ ಪ್ರಸಿದ್ಧ ವಾಗ್ಮಿಗಳು ವಿದೇಶದಲ್ಲಿ ತಮ್ಮ ಮಾತಿನ ಚಾಲಾಕು ತೋರಿಸಿದ್ದಾರೆ. ಸಮಸ್ಯೆ ಎಂದರೆ ಇವರಲ್ಲಿ ಹೆಚ್ಚಿನ ಕಲಾವಿದರು, ತಂಡಗಳು ತಲುಪುವಂಥಾದ್ದು ಅಲ್ಲಿ ನೆಲೆಸಿರುವ ಕನ್ನಡದ ಪ್ರೇಕ್ಷಕರನ್ನು ಮಾತ್ರ. ವಿದೇಶಿಯರನ್ನು ತಮ್ಮೆಡೆಗೆ ಸೆಳೆಯಬಲ್ಲ ತಂತ್ರಗಾರಿಕೆ ಅವರ ಕನ್ನಡದ ಮಾತುಗಾರಿಕೆಯಲ್ಲಿ ಅಂತರ್ಗತವಾಗಿರುವುದಿಲ್ಲ.

ಕರಾವಳಿ ಕರ್ನಾಟಕದಲ್ಲಿ ಹಲವು ತುಳು ನಾಟಕವಾಡುವ ತಂಡಗಳಿವೆ. ಅವುಗಳಲ್ಲಿ ಗಂಟೇತಾಂಡ್, ಕಲಾಸಂಗಮ, ಲಕುಮಿ ಮುಂತಾದ ದಕ್ಷಣ ಕನ್ನಡದ ರಂಗತಂಡಗಳು ಮುಖ್ಯವಾಗಿ ಕೊಲ್ಲಿರಾಷ್ಟ್ರಗಳಿಗೆ ಪ್ರತಿವರ್ಷ ಹೋಗಿ ನಾಟಕವಾಡಿ ಜಯಭೇರಿ ಭಾರಿಸಿ ಬರುವುದು ವಾಡಿಕೆ. ಕೊಲ್ಲಿ ರಾಷ್ಟ್ರಗಳಲ್ಲಿ ದಕ್ಷಿಣ ಕನ್ನಡದ ಸಹಸ್ರಾರು ಮಂದಿ ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದಾರೆ. ತುಳು ನಾಟಕ ಅಲ್ಲಿಗೆ ಕಾಲಿಟ್ಟರೆ ಸಾಕು; ಭಾಷೆ, ಮತಗಳ ಭೇದವಿಲ್ಲದೆ ಎಲ್ಲರೂ ನಾಟಕ ನೋಡುವವರೆ. ತುಳುವರ ಈ ಬಗೆಯ ಮುತುವರ್ಜಿಯು ಇತರ ಭಾರತೀಯರನ್ನೂ ಜೊತೆಗೆ ವಿದೇಶೀಯರನ್ನೂ ಅಂತಹ ನಾಟಕಗಳ ಕಡೆಗೆ ಆಕರ್ಷಿಸುತ್ತದೆ ಎಂಬುದು ವಿಶೇಷ.

**ಸುಗಮ ಸಂಗೀತ**

ಕರ್ನಾಟಕ ಸುಗಮ ಸಂಗೀತ ಕ್ಷೇತ್ರದ ಜನಪ್ರಿಯ ಗಾಯಕರಾದ ಸರ್ವಶ್ರೀ ವೈಕೆ ಮುದ್ದುಕೃಷ್ಣ, ಶಿವಮೊಗ್ಗ ಸುಬ್ಬಣ್ಣ, ಅಪ್ಪಗೆರೆ ತಿಮ್ಮರಾಜು, ಶ್ರೀಮತಿಯರಾದ ರತ್ನಮಾಲಾ ಪ್ರಕಾಶ್, ಮಾಲತಿ ಶರ್ಮಾ ಮೊದಲಾದವರು 1998ರಲ್ಲಿ ಅಮೇರಿಕಾದ ಗ್ರಾಂಡ್ ಕ್ಯಾನಿಯನ್‌ಗೆ ಹೋಗಿ ಅಲ್ಲಿನ ವಿದೇಶೀಯರ ಮುಂದೆ ಹಾಡಿದಾಗ ಅವರು ಕುಣಿದು ಕುಪ್ಪಳಿಸಿದ್ದು ಕರ್ನಾಟಕದ ಗಾಯಕರಿಗೆ ಹಿಡಿಸಲಾರದಷ್ಟು ಸಂತಸಕೊಟ್ಟಿತ್ತು. ಅದೇ ವರ್ಷ ಲಾಸ್ ಏಂಜಲೀಸ್‌ನಲ್ಲಿ ಪ್ರಸಿದ್ಧ ಜಾನಪದ ಗಾಯಕ ಶ್ರೀ ಅಪ್ಪಗೆರೆ ತಿಮ್ಮರಾಜು ಜೊತೆ ವಿದೇಶೀ ಪ್ರೇಕ್ಷಕರು ನರ್ತಿಸಿದ್ದು, ಅವರ ಹಾಡು ಮಾರನೆಯ ದಿನದ ಲಾಸ್‌ಏಂಜಲೀಸ್ ಟೈಮ್ಸ್ ಪತ್ರಿಕೆಗೆ ಗ್ರಾಸವಾದದ್ದು ಖುಷಿ ಕೊಡುವ ಸಂಗತಿಗಳು. ಸಿ.ಅಶ್ವತ್ಥ್ ಕನ್ನಡ ಗಾಯನದ ವಿಶಿಷ್ಟ ಪ್ರಕಾರವಾದ ಸುಗಮ ಸಂಗೀತಕ್ಕೆ ದೇಶವಿದೇಶಗಳಲ್ಲಿ ಭದ್ರ ನೆಲೆ ಒದಗಿಸಿದವರು. ಒಮ್ಮೆ ಅವರು ತಂಡಕಟ್ಟಿಕೊಂಡು ಆಸ್ಟ್ರೇಲಿಯಾಕ್ಕೆ ಹೋಗಿದ್ದಾಗ ಅಲ್ಲಿನ ಪ್ರಧಾನ ಮಂತ್ರಿಗಳು ಅವರ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರಂತೆ. ಗಾಯನ ಮುಗಿದ ಮೇಲೆ ಪ್ರಧಾನ ಮಂತ್ರಿ ಮಾತು ಪ್ರಾರಂಭಿಸಿ, 'ರೆ ರೇ ರೇ ರೆ' ಎಂಬುದಾಗಿ ಕೊನೆಯಲ್ಲಿ ಹೇಳಿ, 'ಎಲ್ಲರಿಗೂ ನಮಸ್ಕಾರ' ಹೇಳಿ ಮಾತು ಮುಗಿಸಿದರಂತೆ! ಸಿ.ಅಶ್ವತ್ಥರ ರೆ ರೇ ರೇ ರೆ ವಿದೇಶೀಯರ ಮೇಲೂ ಎಷ್ಟು ಪರಿಣಾಮ ಬೀರಿದೆ ಎಂಬುದಕ್ಕೆ ಇದೊಂದು ಉತ್ತಮ ನಿದರ್ಶನ. ಶ್ರೀಮತಿಯರಾದ ಇಂದೂ ವಿಶ್ವನಾಥ್, ರತ್ನಮಾಲಾ ಹಾಗೂ ರೋಹಿಣಿ ಮೊದಲಾದ ಕಲಾವಿದೆಯರು ಜಪಾನಿಗೆ ಹೋಗಿ ಅಲ್ಲಿನ ಜನಗಳಿಗೆ ತಮ್ಮ ಸುಗಮ ಗಾಯನದ ಮೋಡಿಯೆರಚಿದ್ದು ಕೂಡ ಗಮನೀಯ ವಿಷಯವೆ.

**ಸಾಹಿತ್ಯ**

ಇಂಗ್ಲಂಡ್ ಹಾಗೂ ಯುರೋಪಿನಿಂದ ಬಂದ ಇಂಗ್ಲಿಷ್ ಸಾಹಿತ್ಯವನ್ನು ನವೋದಯ ಕಾಲದಿಂದಲೇ ನಮ್ಮವರು ಅಭ್ಯಸಿಸುತ್ತ ಬಂದಿದ್ದು ಕನ್ನಡಿಗರ ಸಾಹಿತ್ಯವನ್ನು ಅವರು ಮನವರಿಕೆ ಮಾಡಿಕೊಳ್ಳತೊಡಗಿದ್ದು ಇತ್ತೀಚೆಗೆ. ವಿದೇಶೀ ನಾಟಕಗಳು ಕನ್ನಡಕ್ಕೆ ಅನುವಾದ ಆದ ಹಾಗೆ ಕನ್ನಡದ ನಾಟಕಗಳು ವಿದೇಶೀ ಭಾಷೆಗಳಿಗೆ ಅನುವಾದವಾಗಿಲ್ಲ. ಪ್ರಸಿದ್ಧ ನಾಟಕಕಾರರಾದ ಸರ್ವಶ್ರೀ ಚಂದ್ರಶೇಖರ ಕಂಬಾರ, ಗಿರೀಶ್ ಕಾರ್ನಾಡರಂಥವರ

ನಾಟಕಗಳು ಅದಾಗಲೇ ಇಂಗ್ಲಿಷ್, ಫ್ರೆಂಚ್ ಇತ್ಯಾದಿ ಭಾಷೆಗಳಿಗೂ ಭಾಷಾಂತರಗೊಂಡು ಪ್ರಸಿದ್ಧವಾಗಿದ್ದುವು. ಸಾಗರ ಸಮೀಪದ ಪುಟ್ಟ ಗ್ರಾಮ ಹೆಗ್ಗೋಡಿನಲ್ಲಿ 'ನೀನಾಸಂ' ನಾಟಕ ತಂಡ ಕಟ್ಟಿ ಬೆಳೆಸಿ, ವಿಶ್ವದ ನಾಟಕಾಸಕ್ತರನ್ನೆಲ್ಲ ತನ್ನೆಡೆಗೆ ಸೆಳೆದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿದ ದಿ॥ ಕೆ.ವಿ. ಸುಬ್ಬಣ್ಣನವರನ್ನು ಮ್ಯಾಗ್ಸೆಸೆ ಪ್ರಶಸ್ತಿಯು ಅರಸಿ ಬಂತು. ನಮ್ಮ ಪ್ರಸಿದ್ಧ ಕವಿಗಳಾದ ಗೋಪಾಲಕೃಷ್ಣ ಅಡಿಗರಿಂದ ಮೊದಲ್ಗೊಂಡು ಈಚೆಗಿನ ಸರ್ವಶ್ರೀ ಹೆಚ್. ಎಸ್. ಶಿವಪ್ರಕಾಶ್, ಮೂಡ್ನಾಕೋಡು ಚಿನ್ನಸ್ವಾಮಿಯವರ ವರೆಗಿನ ಹಲವರ ಕನ್ನಡ ಕವನಗಳು ಇಂಗ್ಲೆಂಡ್, ಸ್ಪೈನ್, ಜರ್ಮನಿ ಮೊದಲಾದ ಕಡೆ ಪ್ರಸಿದ್ಧಿ ಪಡೆದಿವೆ. ನಮ್ಮ ಪ್ರಸಿದ್ಧ ಸಾಹಿತಿಗಳಾದ ಯು. ಆರ್. ಅನಂತಮೂರ್ತಿ, ಎ.ಕೆ. ರಾಮಾನುಜನ್, ಕೈವಾರ ರಾಜಾರಾವ್, ಆರ್. ಕೆ. ನಾರಾಯಣ್ ಮೊದಲಾದವರ ಸಾಹಿತ್ಯ ಕೃತಿಗಳಿಗೆ ವಿದೇಶದಲ್ಲಿ ಸಾಕಷ್ಟು ಬೇಡಿಕೆ ಇದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಜರ್ಮನಿಯ ವೂರ್ಲ್ಸ್‌ಬರ್ಗ್ ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಿದ ಪೀಠದ ಆಶ್ರಯದಲ್ಲಿ ಕರ್ನಾಟಕದ ಪ್ರಸಿದ್ಧ ಜಾನಪದ ತಜ್ಞ ಡಾ. ಬಿ.ಎ.ವಿವೇಕ ರೈಯವರು ಈ ದಶಕದ ಪೂರ್ವಾರ್ಧದಲ್ಲಿ ಮೂರು ವರ್ಷಗಳ ಕಾಲ ನಿರಂತರ ಅಲ್ಲಿನ ವಿದ್ಯಾರ್ಥಿಗಳಿಗೆ ಕನ್ನಡ ಕಲಿಸುವ ಕಾಯಕವನ್ನು ಮಾಡಿದ್ದರು. ಪರಿಣಾಮವಾಗಿ ಸಂಶೋಧನೆಯಲ್ಲಿ ತೊಡಗಿರುವ ಅಲ್ಲಿನ ವಿದ್ಯಾರ್ಥಿಗಳು ಕರ್ನಾಟಕಕ್ಕೆ ನಿರಂತರವಾಗಿ ಭೇಟಿ ನೀಡುತ್ತಿದ್ದಾರೆ. ಜರ್ಮನಿಯ ಬಾಸೆಲ್ ಮಿಷನ್‌ಗೂ ಕರ್ನಾಟಕದ ಕನ್ನಡಕ್ಕೂ ವಿಶೇಷವಾದ ನಂಟು ರೆ. ಎಫ್. ಕಿಟ್ಟೆಲರ ಕಾಲದಿಂದ ತೊಡಗಿದ್ದು ಇಂದಿಗೂ ಮುಂದುವರಿದುಕೊಂಡು ಬಂದಿದೆ. ಜರ್ಮನಿಯ ಹಾಗೂ ಕರ್ನಾಟಕದ ನಡುವಣ ಸಾಹಿತ್ಯಕ ಕೊಂಡಿಯಾಗಿ ಡಾ. ಶ್ರೀನಿವಾಸ ಹಾವನೂರರು ಬಹಳಷ್ಟು ಕೆಲಸ ನಿರ್ವಹಿಸಿದ್ದಾರೆ.

### ನೃತ್ಯ, ಸಂಗೀತ ಹಾಗೂ ಇತರ ಕ್ಷೇತ್ರಗಳು

ಐಸಿಸಿಆರ್ ಮೂಲಕ ಕರ್ನಾಟಕದ ಸಾಕಷ್ಟು ಕಲಾವಿದರು ವಿದೇಶಕ್ಕೆ ಹೋಗಿ ಕಲಾಪ್ರದರ್ಶನ ಮಾಡಿದ್ದಾರೆ. ಭರತನಾಟ್ಯವನ್ನು ವಿದೇಶದ ಹಲವಾರು ವೇದಿಕೆಗಳಿಗೆ ಬಹುಬಾರಿ ತಲುಪಿಸಿದ ಕೀರ್ತಿಗೆ ಶ್ರೀಮತಿ ಪ್ರತಿಭಾ ಪ್ರಹ್ಲಾದ್ ಭಾಜನರಾಗಿದ್ದಾರೆ. ಬೆಂಗಳೂರಿನ ನೃತ್ಯಗ್ರಾಮದ ಕಲಾವಿದೆಯರು, ಮಾಯಾರಾವ್, ಶ್ರೀಮತಿ ವೈಜಯಂತಿ ಕಾಶಿ ಮೊದಲಾದವರು ನಿರಂತರ ವಿದೇಶ ಸಂಚಾರ ಮಾಡಿ ಕರ್ನಾಟಕದ ಕೀರ್ತಿಯನ್ನು ಎತ್ತರಿಸಿದ್ದಾರೆ. ಕರ್ನಾಟಕದ ಗಂಗೂಬಾಯಿ ಹಾನಗಲ್, ಬಸವರಾಜ ರಾಜಗುರು, ಭೀಮಸೇನ್ ಜೋಷಿ, ಮಲ್ಲಿಕಾರ್ಜುನ ಮನ್ಸೂರ್ ಮೊದಲಾದ ಪ್ರಚಂಡ ಉತ್ತರಾದಿ ಗಾಯಕರು ವಿದೇಶಗಳಲ್ಲಿ ಸಂಚರಿಸಿ ತಮ್ಮ ಗಾಯನದ ಮೂಲಕ ದೇಶಕ್ಕೆ ಕೀರ್ತಿ ಹರಿಸಿದ್ದಾರೆ. ಕರ್ನಾಟಕದ ಶಾಸ್ತ್ರೀಯ ವಾದ್ಯಸಂಗೀತಕ್ಕೆ ವಿದೇಶದಲ್ಲಿ ಬಹಳ ಬೇಡಿಕೆಯಿದೆ. ವಿದೇಶೀ ವಾದ್ಯವಾದ ಸ್ಯಾಕ್ಸೋಫೋನನ್ನು ಭಾರತೀಯ ಶಾಸ್ತ್ರೀಯ ಸಂಗೀತಕ್ಕೆ ಒಗ್ಗಿಸಿ ಆ ಮೂಲಕ ವಿದೇಶೀಯರನ್ನೇ ತಬ್ಬಿಬ್ಬುಗೊಳಿಸಿದ ಕೀರ್ತಿ ಕರ್ನಾಟಕದ ಶ್ರೀ ಕದ್ರಿ ಗೋಪಾಲನಾಥ್ ಅವರಿಗೆ ಸಲ್ಲುತ್ತದೆ. ಪ್ರಸಿದ್ಧ ಸರೋದ್ ವಾದಕರಾದ ಮೈಸೂರಿನ ಪಂಡಿತ್ ರಾಜೀವ್ ತಾರಾನಾಥರು ಅಮೆರಿಕದಲ್ಲಿ ಅವರ ಸಂಗೀತ ಕಾರ್ಯಕ್ರಮಗಳನ್ನು ನಿಭಾಯಿಸುವುದಕ್ಕೆ ಒಬ್ಬ ಮ್ಯಾನೇಜರನ್ನೇ ನೇಮಕ ಮಾಡಿದ್ದಾರೆ! ಯುವ ತಲೆಮಾರಿನ ಖ್ಯಾತ ಕೊಳಲುವಾದಕರಾದ ಸರ್ವಶ್ರೀ ಪ್ರವೀಣ್ ಗೋಡ್ಖಿಂಡಿ, ಹಾಗೂ ಸ್ಯಾಕ್ಸೋಫೋನ್ ವಾದಕರಾದ ಕದ್ರಿಯವರ ಜುಗಲ್‌ಬಂದಿ ಸಂಗೀತಲೋಕವನ್ನೇ ಮರುಳು ಮಾಡಿದೆ. ಇನ್ಫೋರ್ವ ಯುವ ಕಲಾವಿದ ಶ್ರೀ ಪ್ರವೀಣ್ ಡಿ.ರಾವ್ ಇತ್ತೀಚೆಗಿನ ದಿನಗಳಲ್ಲಿ ವಿದೇಶದಲ್ಲಿ ಬಹು ಬೇಡಿಕೆಯಿರುವ ಸಂಗೀತ ನಿರ್ದೇಶಕ. ಹಾಗೇನೆ ಸಾಕಷ್ಟು ಬೇಡಿಕೆಯಿರುವ ಕರ್ನಾಟಕದ ಹಲವಾರು ವಾದನ ಕಲಾವಿದರು, ನೃತ್ಯ ಕಲಾವಿದರು ಭಾಷೆಯ ತೊಡಕು ಮೀರಿ ಅಲ್ಲಿನ ಸಂಗೀತಪ್ರಿಯರಿಗೆ ಆಪ್ಯಾಯಮಾನರಾಗಿದ್ದಾರೆ. ಕಳೆದ ಎರಡು ದಶಕಗಳಿಂದ ಪ್ರತಿವರ್ಷ ಮೂಡಬಿದಿರೆಯಲ್ಲಿ ನಡೆಯುವ 'ಆಳ್ವಾಸ್ ವಿರಾಸತ್' ಎಂಬ ಐದು ದಿನಗಳ ರಾಷ್ಟ್ರೀಯ ಮಟ್ಟದ ನೃತ್ಯ, ಸಂಗೀತ ಕಾರ್ಯಕ್ರಮಕ್ಕೆ ಸಣ್ಣ ಪ್ರಮಾಣದಿಂದ ತೊಡಗಿ ಬರುತ್ತಿದ್ದ ವಿದೇಶೀಯರ ಸಂಖ್ಯೆ, ಇತ್ತೀಚೆಗಿನ ಪ್ರತಿ ವರ್ಷಗಳಲ್ಲಿ ಮುನ್ನೂರನ್ನು ದಾಟಿದೆ. ಗಮನಿಸಬೇಕಾದ ಅಂಶವೆಂದರೆ ನಮ್ಮಲ್ಲಿನ ಸಾಂಸ್ಕೃತಿಕ ವೈವಿಧ್ಯಗಳನ್ನು ವಿದೇಶೀಯರು ಇರುವಲ್ಲಿಗೆ ಕೊಂಡೊಯ್ದು ಬಿಕರಿಮಾಡಬೇಕಿಲ್ಲ; ಬದಲಿಗೆ ಸರಕು ಚೆನ್ನಾಗಿದ್ದರೆ ಅವರೇ ಇಲ್ಲಿಗೆ ಬಂದು ಪ್ರೀತಿಯಿಂದ ಕೊಳ್ಳುತ್ತಾರೆ ಎಂಬುದು. ಕರ್ನಾಟಕದ ಹಂಪಿ ಉತ್ಸವ, ಕದಂಬ ಉತ್ಸವ ಇತ್ಯಾದಿಗಳಿಗೆ ಅಯಾಚಿತವಾಗಿ ವಿದೇಶೀಯರು ಬರುತ್ತಿದ್ದಾರೆ. ಮೈಸೂರಿನಲ್ಲಿ ನಡೆಯುವ ಜಗತ್ಪ್ರಸಿದ್ಧ ದಸರಾದ ಸಾಂಸ್ಕೃತಿಕ ಕಾರ್ಯಕ್ರಮಗಳು ವಿದೇಶೀಯರನ್ನು ಅದಾಗಿಯೇ ಸೆಳೆಯುವಷ್ಟು ಶಕ್ತವಾಗಿವೆ. ಜರ್ಮನಿಯ ಶ್ರೀ ಲುಡ್ವಿಗ್ ಪೆಶ್ಕ್ ಕರ್ನಾಟಕಕ್ಕೆ ಬಂದು ಕೊಳಲಿನ ಮೂಲಕ ಕರ್ನಾಟಕ ಸಂಗೀತ ನುಡಿಸಿದಾಗ, ಅಮೆರಿಕದ ಮಾರ್ತಾ ಆ್ಯಷ್ಟನ್ ನಮ್ಮ ಯಕ್ಷಗಾನ ಕಲಿತು ನಮ್ಮೆದುರೇ ಅದನ್ನು ಅಭಿನಯಿಸಿದಾಗ, ಜಪಾನಿನ ಮೊರಿಜರಿ ದಕ್ಷಿಣ ಕನ್ನಡದ ಭೂತಾರಾಧನೆಯ ಹಿನ್ನೆಲೆ ಮುನ್ನೆಲೆಗಳನ್ನು ಆಮೂಲಾಗ್ರವಾಗಿ ಸಂಶೋಧಿಸಿ ವರ್ಷಾನುಗಟ್ಟಲೆ ಅಲ್ಲೇ ಇದ್ದು ಗ್ರಂಥಗಳನ್ನು ರಚನೆಮಾಡಿದಾಗ, ಫಿನ್‌ಲ್ಯಾಂಡಿನ ಲಾರಿಹೋಂಕೋ ಕರ್ನಾಟಕಕ್ಕೆ ಬಂದು ಇಲ್ಲಿನ ಪ್ರಸಿದ್ಧ ಜನಪದ ಮಹಾಕಾವ್ಯಗಳಲ್ಲೊಂದಾದ 'ಸಿರಿಪಾಡ್ದನ'ವನ್ನು ಗೋಪಾಲನಾಯ್ಕರೆಂಬ ಹಳ್ಳಿಯ ಪಾಡ್ದನ ಕಲಾವಿದರ ಮೂಲಕ ಕೇಳಿ ತಿಳಿದು ಡಾ. ಬಿ.ಎ. ವಿವೇಕ ರೈ ಹಾಗೂ ಡಾ. ಚಿನ್ನಪ್ಪ ಗೌಡರ ಸಹಾಯದಿಂದ ಇಂಗ್ಲಿಷಿಗೆ ಹಾಗೂ ಫಿನ್ನಿಷ್ ಭಾಷೆಗೆ ಸಂಪುಟಗಳಾಗಿ ಅನುವಾದಿಸಿದಾಗ ಕನ್ನಡದ ಜನತೆ ಅಪರಿಮಿತ ಸಂತೋಷ ಪಟ್ಟದ್ದುಂಟು.

ಇಂದಿಗೂ ಭಾರತೀಯ ಜಾನಪದ ಕಲೆ ವಿದೇಶಗಳಲ್ಲಿ ತಮ್ಮ ಬೇಡಿಕೆ ಕಳೆದುಕೊಂಡಿಲ್ಲ. ತಂಡತಂಡವಾಗಿ ಜನಪದ ಕಲಾವಿದರು ವಿದೇಶಗಳಿಗೆ ಪ್ರವಾಸ ಹೋಗಿ ಜಾನಪದ ಪ್ರಕಾರಗಳನ್ನು ಪ್ರದರ್ಶಿಸಿ ಬರುತ್ತಾರೆ. ನಮ್ಮ ನಡುವಿನ ಭೂತಾರಾಧನೆಯಂಥ ಪ್ರದರ್ಶನ ಕಲೆಗಳು ವಿದೇಶಗಳನ್ನು ನೋಡುವುದಕ್ಕಾಗಿ ವಿದೇಶೀಯರು ಬರುತ್ತಲೇ ಇರುತ್ತಾರೆ. ಹಸೆ, ಗಂಜೀಫಾದಂಥ ಕಲೆಗಳಿಗೂ ವಿದೇಶದಲ್ಲಿ ಬೇಡಿಕೆಯಿದೆ. ಹಸೆಚಿತ್ತಾರದಲ್ಲಿ ಒಂದು ಪ್ರಕಾರವಾದ ಭತ್ತದ ತೆನೆಯ ತೋರಣಗಳನ್ನು ಕುರಿತು ತಿಳಿದುಕೊಳ್ಳಲು ಸ್ವಿಟ್ಜರ್‌ಲ್ಯಾಂಡ್, ಬ್ರಿಟನ್, ಜಪಾನ್ ಮುಂತಾದ ದೇಶಗಳಿಂದ ಜನರು ಸಾಗರದ ಸಿರಿವಂತೆಯ ಶ್ರೀ ಚಂದ್ರಶೇಖರರನ್ನು ಕಾಣುವುದಕ್ಕೆ ಸದಾ ಬರುತ್ತಿರುತ್ತಾರೆ. ಇತ್ತೀಚೆಗೆ ಜಪಾನ್ ಹಾಗೂ ದುಬೈಗಳ ಕಲಾಸಕ್ತರು ಸಿರಿವಂತೆ ಚಂದ್ರಶೇಖರರನ್ನು ತಮ್ಮ ದೇಶಕ್ಕೆ ಆಹ್ವಾನಿಸಿ ಭತ್ತದ ತೆನೆಯ ಹಸೆಯ ಪ್ರದರ್ಶನಗಳ ಏರ್ಪಾಡು ಮಾಡಿಸಿದ್ದರು. ಹೀಗೆ ಜಗತ್ತಿನ ವಿವಿಧ ದೇಶಗಳೊಂದಿಗೆ ಕನ್ನಡನಾಡು ಬಹಳ ಜವಾಬ್ದಾರಿಯುತ ಕೊಡುಕೊಳೆಯ ಸಂಬಂಧಗಳನ್ನು ಹೊಂದಿದೆ. ದೇಶದ ಸಮೃದ್ಧಿಯಲ್ಲಿ ಸಾಂಸ್ಕೃತಿಕ ಸಮೃದ್ಧಿಯ ಮಹತ್ವ ಅಲ್ಲಗಳೆಯಲಾದ್ದು. ❑

# ಅಂತಾರಾಷ್ಟ್ರೀಯ ವಾಣಿಜ್ಯ ಸಂಬಂಧ

* ದಾಸನೂರು ಕೂಸಣ್ಣ



ಅಂತಾರಾಷ್ಟ್ರೀಯ ಸಂಬಂಧಗಳು ಕೇವಲ ರಾಜತಾಂತ್ರಿಕ ವ್ಯವಹಾರಗಳಿಗೆ ಸೀಮಿತವಲ್ಲ. ಇದು ಬಹು ಆಯಾಮಗಳಲ್ಲಿ ನಿರ್ವಹಿಸಲ್ಪಡುವ ಹಲವು ಆರ್ಥಿಕ ಸಮುದಾಯಗಳ ಪರಸ್ಪರ ವ್ಯಾಪಾರಿಕ ವಹಿವಾಟಾಗಿರುತ್ತದೆ. ಆದುದರಿಂದ ಅಂತಾರಾಷ್ಟ್ರೀಯ ವ್ಯಾಪಾರ ಪ್ರತಿಯೊಂದು ದೇಶದ ಆರ್ಥಿಕಾಭಿವೃದ್ಧಿಗಳಿಗೆ ಪೂರಕವಾಗಿರುತ್ತದೆ. ಅದರಲ್ಲೂ ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರ ಅಂತಾರಾಷ್ಟ್ರೀಯ ವ್ಯಾಪಾರಗಳಿಂದ ಗಳಿಸಿದ ಮತ್ತು ಕಳೆದುಕೊಂಡ ದಾಖಲೆಗಳಿವೆ. ಅಂತಾರಾಷ್ಟ್ರೀಯ ವ್ಯಾಪಾರಗಳಲ್ಲಿ ದೇಶಿಯ ವ್ಯಾಪಾರದ ಗುಣಲಕ್ಷಣಗಳು ಇಣುಕದೆ, ಬಹು ರಾಷ್ಟ್ರೀಯ ಸಮುದಾಯಗಳು ಸಮ್ಮತಿಸಿ ಅನುಸಂಧಾನಿಸಿದ ಮಾರ್ಗ ಮತ್ತು ಅವುಗಳ ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ನಿರ್ವಹಿಸಲ್ಪಡುತ್ತಿರುತ್ತದೆ. ಭಾರತ ನಿಚ್ಚಳವಾದ ಮಾನವ ಮತ್ತು ಭೌತಿಕ ಸಂಪನ್ಮೂಲಗಳನ್ನು ಹೊಂದಿದೆ. ಆದುದರಿಂದ ವಿದೇಶಿಯ ವ್ಯಾಪಾರದಲ್ಲಿ ಭಾರತ ತನ್ನದೆ ಆದ ಸ್ಥಾನಮಾನಗಳನ್ನು ಉಳಿಸಿಕೊಂಡಿದೆ. "ಬಹು ಸಂಖ್ಯಾತ ಅಭಿವೃದ್ಧಿಶೀಲ ದೇಶಗಳಿಗೆ ಜಾಗತೀಕರಣದ ಅವಕಾಶಗಳನ್ನು ಸವಿಯಲಾಗುತ್ತಿಲ್ಲ; ಅನೇಕ ದೇಶಗಳು ತಮ್ಮ ಅಸ್ತಿತ್ವ ಉಳಿಸಿಕೊಳ್ಳದೆ ಮುಂದುವರಿಯುತ್ತಿವೆ". ಈ ಮಾತನ್ನು ಐ.ಎಂ.ಎಫ್ ತನ್ನ ಜಾಗತಿಕ ಆರ್ಥಿಕ ಹೊರನೋಟ (1997) ಎಂಬ ಅಧ್ಯಯನದ ಆವೃತ್ತಿಯಲ್ಲಿ ಪ್ರಕಟಿಸಲಾಗಿದೆ. ಈ ಹಿನ್ನೆಲೆಯಲ್ಲಿ ಜಾಗತಿಕ ಮಟ್ಟದಲ್ಲಿ ಭಾರತ ಹೊಂದಿರುವ ವ್ಯಾಪಾರ ಗಾತ್ರ, ಸ್ವರೂಪ, ವಲಯ ಮತ್ತು ದಿಕ್ಕುಗಳು, ಗಳಿಕೆ ಮತ್ತು ನಷ್ಟಗಳನ್ನು ಸ್ಥೂಲವಾಗಿ ಮಾತ್ರ ಚರ್ಚಿಸಲಾಗಿದೆ.

### ವ್ಯಾಪಾರ ರಚನೆ

ಐತಿಹಾಸಿಕವಾಗಿ ಅಂತಾರಾಷ್ಟ್ರೀಯ ವ್ಯಾಪಾರ ಜಗತ್ತಿನ ರಾಷ್ಟ್ರಗಳೊಳಗೆ ನಿರಂತರವಾಗಿ ನಡೆದು ಬಂದಿರುವ ಆರ್ಥಿಕ ವಹಿವಾಟಿನ ಸಂಸ್ಕೃತಿಯಾಗಿದೆ. ಅದರಲ್ಲೂ ಆಫ್ರಿಕಾ, ಏಶಿಯಾ ಮತ್ತು ಮಧ್ಯಪ್ರಾಚ್ಯದೇಶಗಳು ಹಾಗೂ ಲ್ಯಾಟಿನ್ ಅಮೆರಿಕ ದೇಶಗಳು ತಮ್ಮ ಪ್ರಾಥಮಿಕ ವಲಯದ ಸಂಪ್ರದಾಯಿಕ ಕೃಷಿ ಪ್ರಧಾನ ಉತ್ಪಾದನೆ ಮತ್ತು ಅವುಗಳ ವಿದೇಶಿ ಆಕರ್ಷಣೆಗೆ ಬಹು ಪ್ರಾಚೀನದಿಂದಲೂ ಹೆಸರುವಾಸಿಯಾಗಿವೆ. ಈ ದೇಶಗಳ ಸಂಪ್ರದಾಯಿಕ ಉತ್ಪಾದನೆಗಳಿಗೆ ಅಷ್ಟೇ ಬೇಡಿಕೆಗಳಿವೆ. ಅದರಲ್ಲೂ ಭಾರತದ ಸಂಬಾರ ಪದಾರ್ಥಗಳಂತಹ ಕೃಷಿ ಉತ್ಪನ್ನಗಳಿಗೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇಂದಿಗೂ ಭಾರಿ ಮನ್ನಣೆಗಳಿವೆ. ಕೈಗಾರಿಕಾ ಕ್ಷೇತ್ರದಲ್ಲಿ ಗಣನೀಯ ಸಾಧನೆಗಳಾಗುವ ಮುನ್ನಾ ದಶಕಗಳಲ್ಲಿ ಭಾರತ ವಿದೇಶಿ ವಿನಿಮಯ ಸಂಪಾದನೆಯನ್ನು ಕೃಷಿ ಉತ್ಪಾದನೆ ಮತ್ತು ಅದರ ಸಂಸ್ಕರಣೆ ಉತ್ಪಾದನೆಗಳಿಂದ ಗಳಿಸುತ್ತಿತ್ತು. ಅಭಿವೃದ್ಧಿ ಹೊಂದಿರದ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳು ಶೇ. 25 ರಿಂದ 40 ರಷ್ಟು ಒಟ್ಟು ನಿವ್ವಳ ಉತ್ಪಾದನೆ ಆದಾಯ ವಿದೇಶಿ ವ್ಯಾಪಾರಗಳಿಂದ ಗಳಿಸುತ್ತಿದ್ದವು (2000, ಮೈಕಲ್ ಪಿ ತೊಡಾರೊ). ಆದರೂ ಈ ದೇಶಗಳು ಹೆಚ್ಚುತ್ತಿದ್ದ ವ್ಯಾಪಾರ ಕೊರತೆ, ವಿದೇಶಿ ಸಾಲ ಮತ್ತು ತೀರುವಳಿ ಸಾಲಗಳ ಹೆಚ್ಚಳ, ಅಂತಾರಾಷ್ಟ್ರೀಯ ಮೀಸಲುಗಳಲ್ಲಿ ಕ್ಷೀಣತೆ, ಬಂಡವಾಳ ಹೂಡಿಕೆಯಲ್ಲಾಗುತ್ತಿದ್ದ ಹಿನ್ನಡೆ ಮತ್ತು ಇತ್ಯಾದಿ ಅಂಶಗಳು ಅವುಗಳ ಬಡತನ ಮತ್ತು ನಿರುದ್ಯೋಗ ಸಮಸ್ಯೆಗಳ ಮೇಲೆ ನೇರ ಪರಿಣಾಮ ಬೀರುತ್ತಿದ್ದ ಕಾರಣ ಅವುಗಳ ಆರ್ಥಿಕ ಬೆಳವಣಿಗೆಯ ದರಗಳು ಅಭಿವೃದ್ಧಿ ಹೊಂದಿರುವ ದೇಶಗಳ ಜೊತೆ ನಿಕಟವಾಗಿ ಪೈಪೋಟಿ ಮಾಡಲಾಗುತ್ತಿರಲಿಲ್ಲ. ಬಹುಶಃ ಈ ಅಂಶಗಳೆಲ್ಲವೂ ಭಾರತದಲ್ಲಿ ಪ್ರತಿಕೂಲ ವಾತಾವರಣಗಳನ್ನು ಸೃಷ್ಟಿಸುತ್ತಿದ್ದವು. 1990ರ ತರುವಾಯ ನಿಧಾನವಾಗಿ ಇವುಗಳ ಜಡತ್ವದಿಂದ ಹೊರಬರಲು ಭಾರತ ಶ್ರಮಿಸುತ್ತಿದೆ. ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವ ಮುನ್ನ ಭಾರತ ತನ್ನ ರಾಷ್ಟ್ರಾದಾಯದ ಅಧಿಕ ಪಾಲನ್ನು ಆಹಾರ ಪದಾರ್ಥಗಳ ಖರೀದಿ ಮತ್ತು ತೈಲೋತ್ಪನ್ನಗಳಿಗೆ ವ್ಯಯಿಸುತ್ತಿತ್ತು. ಯಾವಾಗ ಆಹಾರ ಸ್ವಾವಲಂಬನೆ ಕಂಡಿತೋ, ಅಲ್ಲಿಂದ ಅದರ ವಿದೇಶಿ ವ್ಯಾಪಾರದಲ್ಲಿ ನಿಧಾನಗತಿಯಲ್ಲಿ ಸುಧಾರಣೆ ಮತ್ತು ಪರಿವರ್ತನೆಗಳು ಕಾಣಲಾರಂಭಿಸಿತು.

### ಅಭಿವೃದ್ಧಿ ಆಯಾಮಗಳು

ಅಭಿವೃದ್ಧಿ ಸೂಚ್ಯಾಂಕ ಮತ್ತು ಬೆಳವಣಿಗೆ ದರಗಳೆರಡೂ ಅಭಿವೃದ್ಧಿ ಹೊಂದಿದ ಮತ್ತು ಅನಾಭಿವೃದ್ಧಿ ರಾಷ್ಟ್ರಗಳ ನಡುವೆ ಅಜಗಜಾಂತರ ಕಂದಕಗಳನ್ನು ನಿರ್ಮಿಸಿವೆ. ಇವೆರಡು ಪ್ರದೇಶಗಳಲ್ಲಿ ವಾಸಿಸುವ ಜನರ ಜೀವನಕ್ರಮಗಳೂ ಸಹ ಅನೇಕ ವೈರುಧ್ಯಗಳಿಂದ ಕೂಡಿವೆ. ಭಾರತ ಬಡತನದ ಸ್ಥಿತಿಯಲ್ಲಿ ಸ್ವತಂತ್ರವಾದಾಗ ಮರುಗಳಿಗೆಯಲ್ಲಿಯೇ ಸಮಸ್ಯೆಗಳ ಮಹಾಪೂರ ಮೇಳೈಸಲಾರಂಭಿಸಿದವು. ಅದರಲ್ಲೂ ಜನಸಂಖ್ಯೆಗೆ ಅನುಗುಣವಾದ

* ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನ ಸಂಸ್ಥೆ, ಬೆಂಗಳೂರು–72 Email : kusanna@isec.ac.in

| ಕೋಷ್ಟಕ-1 : ಭಾರತದ ರಫ್ತು ಮತ್ತು ಆಮದು ವಹಿವಾಟುಗಳ ಚಿತ್ರಣ | | | | | | | | | | |
|---|---|---|---|---|---|---|---|---|---|---|
| | ರೂ. ಕೋಟಿಗಳಲ್ಲಿ | | | | | ಯು.ಎಸ್ ಮಿಲಿಯನ್ ಡಾಲರ್ | | | | |
| ಆರ್ಥಿಕ ವರ್ಷ | ರಫ್ತು | ಬೆಳವಣಿಗೆ ದರ | ಆಮದು | ಬೆಳವಣಿಗೆ ದರ | ವ್ಯಾಪಾರ ಶಿಲ್ಕು | ರಫ್ತು | ಬೆಳವಣಿಗೆ ದರ | ಆಮದು | ಬೆಳವಣಿಗೆ ದರ | ವ್ಯಾಪಾರ ಶಿಲ್ಕು |
| 2004–05 | 375340 | 27.94 | 501065 | 39.53 | –125725 | 83536 | 30.85 | 111517 | 42.7 | –27981 |
| 2005–06 | 456418 | 21.6 | 660409 | 31.8 | –203991 | 103091 | 23.41 | 149166 | 33.76 | –46075 |
| 2006–07 | 571779 | 25.28 | 840506 | 27.27 | –268727 | 126414 | 22.62 | 185735 | 24.52 | –59321 |
| 2007–08 | 655864 | 14.71 | 1012312 | 20.44 | –356448 | 163132 | 29.05 | 251654 | 35.49 | –88522 |
| 2008–09 | 840755 | 28.19 | 1374436 | 35.77 | –533680 | 185295 | 13.59 | 303696 | 20.68 | –118401 |
| 2009–10 | 845534 | 0.57 | 1363736 | –0.78 | –518202 | 178751 | –3.53 | 288373 | –5.05 | –109621 |
| 2010–11 | 1142922 | 35.17 | 1683467 | 23.45 | –540545 | 251136 | 40.49 | 369769 | 28.23 | –118633 |
| 2011–12 | 1465959 | 28.26 | 2345463 | 39.32 | –879504 | 305964 | 21.83 | 489319 | 32.33 | –183356 |
| 2012–13 | 1634319 | 11.48 | 2669162 | 13.8 | –1034843 | 300401 | –1.82 | 490737 | 0.29 | –190336 |
| 2013–14 (p) | 1894182 | 15.9 | 2714182 | 1.69 | –820000 | 312610 | 4.06 | 450068 | –8.29 | –137458 |
| ಮೂಲ : ವಾಣಿಜ್ಯ ಇಲಾಖೆ ವಾರ್ಷಿಕ ವರದಿ:2013–14, ಭಾರತ ಸರ್ಕಾರ | | | | | | | | | | |

ಆಹಾರೋತ್ಪಾದನೆ ತೀವ್ರ ಸಮಸ್ಯೆಯಾಗಿತ್ತು. ಭಾರತದಲ್ಲಿ ಕೃಷಿ ಪ್ರಧಾನವಾಗಿದ್ದರೂ, ಅದರ ಅನೇಕ ನ್ಯೂನತೆಗಳಿಂದ ಆಹಾರ ಭದ್ರತೆಯಿರಲಿಲ್ಲ. ಭಾರತ ಸಹ ತನ್ನ ಮೊದಲ ಪಂಚವಾರ್ಷಿಕ ಯೋಜನೆಯಿಂದಲೆ ಆಮದು ಬದಲಿಕೆ (Import Substitutions) ಮತ್ತು ರಫ್ತು ಉತ್ತೇಜನ (Export Promotions) ನೀತಿಗಳನ್ನು ಅಳವಡಿಸಿತ್ತು. ಸಾಮಾನ್ಯವಾಗಿ, ಆಮದು ಬದಲಿಕೆ ನೀತಿಯ ಮೊದಲ ಹಂತದಲ್ಲಿ ಅವಶ್ಯಕವಾದ ಅನುಭೋಗಿ ವಸ್ತುಗಳಾದ ಆಹಾರ ಪದಾರ್ಥಗಳನ್ನು ಆಮದು ಮಾಡಿಕೊಳ್ಳುತ್ತಿತ್ತು. ಎರಡನೆ ಹಂತದಲ್ಲಿ ಅತ್ಯಾಧುನಿಕ ಯಂತ್ರೋಪಕರಣಗಳನ್ನು ಆಮದು ಮಾಡಿಕೊಂಡು ವಿವಿಧ ವಲಯಗಳ ದೇಶಿಯ ಉತ್ಪಾದನೆಯ ಗಾತ್ರವನ್ನು ಹಿಗ್ಗಿಸಿ ರಫ್ತು ಪ್ರೋತ್ಸಾಹಿಸಲು ಮುಂದಾಯಿತು. ಅಂತಿಮ ಹಂತದಲ್ಲಿ ಉತ್ಪಾದಿತ ಸರಕುಗಳನ್ನು ಆರ್ಥಿಕ ಮಾನದಂಡಗಳಾದ ಕಡಿಮೆ ಶ್ರಮಿಕ ದರ, ಅಧಿಕ ಉತ್ಪಾದಕತೆ ಹಾಗೂ ದೇಶಿಯ ಬೆಲೆಗಳನ್ನು ಅಂತಾರಾಷ್ಟ್ರೀಯ ಸ್ಪರ್ಧಾತ್ಮಕ ಬೆಲೆಗಳೊಂದಿಗೆ ಸಮೀಕರಿಸುತ್ತಾ ರಫ್ತು ಸಾಮರ್ಥ್ಯವನ್ನು ಅನೇಕ ಆರ್ಥಿಕ ರಕ್ಷಣ ಕ್ರಮಗಳ ಮೂಲಕ ಸಾಧಿಸುವುದಾಗಿತ್ತು.

ಆದುದರಿಂದ, ಹತ್ತು ಹಲವು ರಫ್ತು ಉತ್ತೇಜನ ನೀತಿಗಳ ನೆರವಿನಿಂದ ಪ್ರಾಥಮಿಕ ಮತ್ತು ದ್ವಿತೀಯ ವಲಯಗಳ ಪರಿಕರಗಳನ್ನು ಉತ್ಪಾದನಾ ದಕ್ಷತೆ ಮತ್ತು ಬೆಳವಣಿಗೆಯ ಲಾಭಾಂಶಗಳ ಮುಖಾಂತರ ಅಂತಾರಾಷ್ಟ್ರೀಯ ವ್ಯಾಪಾರವನ್ನು ವೃದ್ಧಿಸಲು ಕ್ರಮವಹಿಸುತ್ತಾ ಬಂದಿದೆ. ಜಾಗತಿಕ ಪರಿವರ್ತನೆಗಳಿಗೆ ಸಿಲುಕಿ ಅವುಗಳ ಸ್ವರೂಪಗಳೂ ಸಹ ಬದಲಾಗುತ್ತಾ ಬಂದಿವೆ. 1980 ರಿಂದ 1990 ತನಕ ಕಠಿಣ ದೇಶಿಯ ಮಾದರಿಯಾಗಿದ್ದ ವ್ಯಾಪಾರ ನೀತಿಗಳು, ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣಗಳ ಪ್ರಭಾವಗಳಿಂದ ಅವುಗಳೆಲ್ಲವೂ ಜಾಗತಿಕವಾದವು. ಕೋಷ್ಟಕ-1 ಪ್ರಕಾರ 2004–05ರಲ್ಲಿ 375,340 ಕೋಟಿಗಳಷ್ಟಿದ್ದ ರಫ್ತು 2013–14ರಲ್ಲಿ 1,894,182 ಕೋಟಿಗಳಿಗೇರಿತು. ಆದರೆ, 2012–13 ಮತ್ತು 2013–14ರಲ್ಲಿ ಜಾಗತಿಕವಾಗಿ ಜರುಗಿದ್ದ ಆರ್ಥಿಕ ಸಂಕಷ್ಟಗಳ ಕೆಟ್ಟ ಪರಿಣಾಮಗಳು ಭಾರತವನ್ನು ಕಾಡದೆ ಬಿಡಲಿಲ್ಲ. ಆದುದರಿಂದ, ಆವಾಗ ಜಾಗತಿಕ ವ್ಯಾಪಾರ ಬೆಳವಣಿಗೆಯ ದರ ಶೇ.2.3 ರಿಂದ 2.1ಕ್ಕೆ ಇಳಿಯಿತು. ಭಾರತದ ಬೆಳವಣಿಗೆ ದರವು ಶೇ.11.48ಕ್ಕೆ ಕುಸಿದು 2013–14ರಲ್ಲಿ 16ಕ್ಕೇರಿತು. ಇದು ಅಮೆರಿಕ ಡಾಲರ್ ಮೌಲ್ಯದಲ್ಲಿ ಋಣಾತ್ಮಕವಾಗಿ ಶೇ.1.82ಕ್ಕೆ ಕುಸಿದಿದೆ. ಆದುದರಿಂದ ದೇಶಿಯ ಆಂತರಿಕ ಆರ್ಥಿಕ ಉತ್ಪಾದನೆ ಸಮಸ್ಯೆಗಳು ಮತ್ತಷ್ಟು ಬಿಗಡಾಯಿಸಿದವು. ಆದರೆ, 2013–14ರಲ್ಲಿ 312.61 ಬಿಲಿಯನ್ ವ್ಯಾಪಾರ ವಹಿವಾಟು ನಡೆದು ಸ್ವಲ್ಪ ಸುಧಾರಣೆ ಕಂಡಿದೆ. ಹಾಗೆಯೇ 2003–04ರಲ್ಲಿ 501,065 ಕೋಟಿಗಳಿದ್ದ ಆಮದು ಸಹ 2013–14ರಲ್ಲಿ 2,714,182 ಕೋಟಿಗಳಾಗಿವೆ (450.1 ಬಿಲಿಯನ್ ಮೌಲ್ಯ ಮುಟ್ಟಿದೆ). ಈ ಪ್ರಗತಿಯನ್ನು 2003–04ರಲ್ಲಿ ಆಗಿರುವ ರಫ್ತು 63.08 ಬಿಲಿಯನ್ ಡಾಲರ್; ಆಮದು 78.01 ಬಿಲಿಯನ್ ಡಾಲರ್‌ಗಳಿಗೆ ಹೋಲಿಸಿದಾಗ ನಿಜವಾದ ಸಾಧನೆ ಗೋಚರವಾಗುತ್ತಿದೆ. ಈ ಕಾಲಾವಧಿಗಳಲ್ಲಿ ನಡೆದಿರುವ ರಫ್ತು ಸೇವಾ ವ್ಯಾಪಾರ 26.9 ಬಿಲಿಯನ್ ಡಾಲರ್ ಇಂದ 151.5 ಬಿಲಿಯನ್ ಡಾಲರ್‌ಗಳಿಗೇರಿದೆ. ಆಮದು ಸೇವಾ ವ್ಯಾಪಾರ ಸಹ 16.7 ರಿಂದ 78.5 ಬಿಲಿಯನ್ ಡಾಲರ್‌ಗಳಷ್ಟು ಅನುಕ್ರಮವಾಗಿ ಸಾಧನೆಗಳಾಗಿವೆ. ಭಾರತ ಅಂತಾರಾಷ್ಟ್ರೀಯ ವ್ಯಾಪಾರಗಳ ಮೂಲಕ ದೇಶಾಭಿವೃದ್ಧಿ ಮತ್ತು ಆರ್ಥಿಕ ಉತ್ತೇಜನ ಕಾಣಲು ಅನೇಕ ಪ್ರೋತ್ಸಾಹದಾಯಕ

| ಕೋಷ್ಟಕ–2 : ಭಾರತದ ಪ್ರಧಾನ ರಫ್ತು ಸರಕು ಮತ್ತು ಸರಂಜಾಮುಗಳು | | | | | |
|---|---|---|---|---|---|
| ಸರಕು ಮತ್ತು ಸರಂಜಾಮುಗಳು | ಒಟ್ಟು ಮೌಲ್ಯ (ಯು.ಎಸ್ ಮಿಲಿಯನ್ ಡಾಲರ್) | | | ಬೆಳವಣಿಗೆ ದರ | ಒಟ್ಟು ರಫ್ತಿನಲ್ಲಿ ಶೇಕಡಾವಾರು ಪಾಲು |
| | 2012 | 2013 | 2014 | | |
| ತೋಟದ ಬೆಳೆ | 1800.50 | 1732.10 | 1590.50 | –8.17 | 0.51 |
| ಕೃಷಿ ಮತ್ತು ಅವಲಂಬಿತ ಉತ್ಪಾದನೆಗಳು | 27427.04 | 32017.27 | 32777.59 | 0.81 | 10.33 |
| ಸಾಗರೋತ್ಪನ್ನಗಳು | 3443.63 | 3464.08 | 5014.73 | 44.76 | 1.6 |
| ಅದಿರು ಮತ್ತು ಖನಿಜಗಳು | 8405.43 | 5631.33 | 5604.22 | –0.48 | 1.79 |
| ಚರ್ಮ ಮತ್ತು ಅದರ ಉತ್ಪನ್ನಗಳು | 4803.23 | 4882.35 | 5687.63 | 16.49 | 1.82 |
| ಚಿನ್ನಾಭರಣಗಳು | 44887.70 | 43344.85 | 41100.13 | –5.18 | 13.15 |
| ಆಟೋಪಕರಣಗಳು | 210.34 | 206.62 | 236.44 | 14.44 | 0.08 |
| ರಾಸಾಯನಿಕ ಮತ್ತು ಅದರ ಅವಲಂಬಿ ವಸ್ತು | 39364.86 | 41504.68 | 49755.48 | 5.42 | 14 |
| ತಾಂತ್ರಿಕ ಉತ್ಪಾದನೆ | 58553.84 | 56796.94 | 61623.50 | 8.5 | 19.71 |
| ವಿದ್ಯುನ್ಮಾನ ಉತ್ಪಾದನೆ | 9365.08 | 8442.77 | 7690.68 | –8.91 | 2.46 |
| ಪ್ರಯೋಜನಾ ಪರಿಕರಗಳು | 83.23 | 145.97 | 39.65 | –72.84 | 0.01 |
| ಜವಳಿ | 27207.58 | 26362.39 | 30379.55 | 15.24 | 9.72 |
| ಕರಕುಶಲ ವಸ್ತುಗಳು | 279.95 | 203.76 | 277.13 | 36.01 | 0.09 |
| ಇತರೆ | 847.54 | 988.14 | 1037.11 | 4.96 | 0.33 |
| ಕಚ್ಚಾ ಹತ್ತಿ | 4327.93 | 3747.73 | 3622.89 | –3.33 | 1.16 |
| ಪೆಟ್ರೋಲಿಯಂ ಉತ್ಪನ್ನಗಳು | 56038.54 | 60859.81 | 62685.29 | 3 | 20.05 |
| ಅವರ್ಗೀಕೃತ ಸರಕುಗಳು | 18917.50 | 10069.88 | 9987.77 | –0.82 | 3.19 |
| ಒಟ್ಟು | 305963.92 | 300400.68 | 312610.29 | 4.06 | 100.00 |

**ಮೂಲ : ವಾಣಿಜ್ಯ ಇಲಾಖೆ ವಾರ್ಷಿಕ ವರದಿ : 2013–14, ಭಾರತ ಸರ್ಕಾರ**

ನೀತಿಗಳನ್ನು ಜಾರಿಗೊಳಿಸಿದೆ. ಇವುಗಳ ಮೂಲಕ ಮುಂದಿನ 2020ರ ಅವಧಿಯಲ್ಲಿ ಜಾಗತಿಕ ವ್ಯಾಪಾರದಲ್ಲಿ ಒಂದು ಮಹತ್ವದ ಪಾತ್ರವಹಿಸಲು ಶ್ರಮಿಸುತ್ತಿದೆ. ಕಳೆದ 10 ವರ್ಷಗಳಲ್ಲಿ ವಿಶ್ವ ವಾಣಿಜ್ಯ ನಿರ್ವಹಣೆಯಲ್ಲಿಯೂ ಸಹ ಜಾಗತಿಕ ವಿಶ್ವಾರ್ಹತೆ ಮೂಡಿಸಿದೆ.

### ರಫ್ತು ಉತ್ತೇಜನ ಕಾರ್ಯಕ್ರಮಗಳು

* ರಫ್ತು ಬುಟ್ಟಿಯಲ್ಲಿರುವ ವಸ್ತುಗಳನ್ನು ವಿವಿಧ ದಿಕ್ಕುಗಳ ಮಾರುಕಟ್ಟೆಗಳಿಗೆ ತಿರುಗಿಸುವುದು. * ರಫ್ತು ಸಂಬಂಧಿಸಿದ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು. * ಕಡಿಮೆ ಬಡ್ಡಿದರಗಳಲ್ಲಿ ಸಾಲಸೋಲಗಳನ್ನು ದೊರಕಿಸುವುದು. * ವ್ಯಾವಹಾರಿಕ ವೆಚ್ಚವನ್ನು ಕಡಿಮೆಗೊಳಿಸುವುದು. * ಸೇವಾ ವ್ಯಾಪಾರಗಳನ್ನು ವಿವಿಧ ದಿಕ್ಕುಗಳ ಮಾರುಕಟ್ಟೆಗಳಿಗೆ ತಿರುಗಿಸುವುದು. * ಭಾರತದ ಉತ್ಪನ್ನಗಳಿಗೆ ಬ್ರಾಂಡ್ ಹೆಸರನ್ನು ತಂದುಕೊಡುವುದು. * ತೋಟಗಾರಿಕಾ ಬೆಳೆಗಳಿಗೆ ಸಕಾಲಿಕ ಬೆಂಬಲ ನೀಡುವುದು. * ಸಂವೇದನೆಯುಳ್ಳ ದೇಶಿಯ ಕೈಗಾರಿಕೆಗಳಿಗೆ ರಕ್ಷಣೆ ಒದಗಿಸುವುದು.

ಭಾರತ ಆಹಾರ ಪದಾರ್ಥ ಮತ್ತು ಪೆಟ್ರೋಲಿಯಂ ಉತ್ಪನ್ನಗಳಿಗೆ ಅಪಾರ ಸಂಪತ್ತನ್ನು ವ್ಯಯಿಸುತ್ತಿತ್ತು. ಆಹಾರ ಉತ್ಪಾದನೆಯು ಬೆಳೆಯುತ್ತಿದ್ದ ಜನಸಂಖ್ಯೆಗೆ ಪೂರೈಸಲು ಸಾಧ್ಯವಾಗುತ್ತಿರಲಿಲ್ಲ. ಅದಕ್ಕಾಗಿ ಕೇಂದ್ರ ಸರ್ಕಾರ ಮೊದಲು ಆಹಾರ ಸಮಸ್ಯೆ ನೀಗಲು ಮುಂದಾಯಿತು. ಹೊಸ ಕೃಷಿ ನೀತಿ ಮತ್ತು ಆಧುನಿಕ ತಂತ್ರಜ್ಞಾನಗಳ ಮೂಲಕ ರಾಜ್ಯಗಳನ್ನು ಸಜ್ಜುಗೊಳಿಸಿತು. ಅದಕ್ಕಾಗಿ ಅದು ವೈಜ್ಞಾನಿಕವಾಗಿ ಸಿದ್ಧಪಡಿಸಿದ ಗೋಧಿ ಮತ್ತು ಭತ್ತದ ಬೆಳೆಗಳನ್ನು ಬೆಳೆಯಲು ರೈತರಿಗೆ ಅಗತ್ಯ ಸಹಕಾರ, ರಸಗೊಬ್ಬರ, ತಂತ್ರಜ್ಞಾನ ಮತ್ತು ಮಾರುಕಟ್ಟೆ ನೀಡಲು ಸರ್ಕಾರ ಮುಂದಾಯಿತು. ಪ್ರಸ್ತುತದ ರಫ್ತು ಬುಟ್ಟಿಯಲ್ಲಿರುವ ಪರಿಕರಗಳನ್ನು ನೋಡಿದಾಗ ಅದರ 30 ವರ್ಷಗಳ ಸಂಪ್ರದಾಯಿಕ ಧೋರಣೆ ಬದಲಾಗಿರುವುದು ಕಾಣುತ್ತಿದೆ. ಪ್ರಸ್ತುತದ ವಿದೇಶಿ ರಫ್ತು ವ್ಯಾಪಾರದಲ್ಲಿ ಪೆಟ್ರೋಲಿಯಂ ಉತ್ಪನ್ನಗಳು ಮೊದಲ ಸ್ಥಾನದಲ್ಲಿದೆ. ಅದರ ತರುವಾಯ

| ಕೋಷ್ಟಕ–3 : ಭಾರತದ ಪ್ರಧಾನ ರಫ್ತು ವಲಯ ಮತ್ತು ವಿದೇಶಗಳು | | | | | |
|---|---|---|---|---|---|
| ವಲಯ ಮತ್ತು ವಿದೇಶಗಳು | ಒಟ್ಟು ಮೌಲ್ಯ (ಯು.ಎಸ್ ಮಿಲಿಯನ್ ಡಾಲರ್) | | | ಬೆಳವಣಿಗೆ ದರ | ಒಟ್ಟು ರಫ್ತಿನಲ್ಲಿ ಶೇಕಡಾವಾರು ಪಾಲು |
| | 2012 | 2013 | 2014 | | |
| 1. ಯರೋಪ್ | 57798.24 | 56050.47 | 58304.10 | 4.02 | 18.65 |
| 2. ಆಫ್ರಿಕಾ | 24674.16 | 29142.52 | 31230.11 | 7.16 | 9.99 |
| 3. ಅಮೆರಿಕ | 50444.15 | 53343.69 | 54249.28 | 1.7 | 17.35 |
| 3.1. ಉತ್ತರ ಅಮೆರಿಕ | 38167.3 | 39825.67 | 43431.53 | 9.05 | 13.89 |
| 3.2. ಲ್ಯಾಟಿನ್ ಅಮೆರಿಕ | 12276.85 | 13518.03 | 10817.75 | –19.98 | 3.46 |
| 4. ಏಶಿಯಾ | 153104.8 | 152699.25 | 155277.23 | 1.69 | 49.67 |
| 5. ಸಿಐಎಸ್ ದೇಶಗಳು | 3059.98 | 3682.98 | 3508.79 | –4.73 | 1.12 |
| 6. ಅವರ್ಗೀಕೃತ ವಲಯಗಳು | 16882.58 | 5481.76 | 10040.79 | 83.17 | 3.21 |
| | 305963.92 | 300400.68 | 312610.29 | 4.06 | 100.00 |
| ಮೂಲ : ವಾಣಿಜ್ಯ ಇಲಾಖೆ ವಾರ್ಷಿಕ ವರದಿ : 2013–14, ಭಾರತ ಸರ್ಕಾರ | | | | | |

ತಾಂತ್ರಿಕ ಪರಿಕರಗಳು ಹಾಗೂ ಕೃಷಿ ಮತ್ತು ಅದರ ಅವಲಂಬಿತ ಪರಿಕರಗಳು ಮೂರನೆ ಸ್ಥಾನದಲ್ಲಿವೆ. ಸಿದ್ಧಗೊಂಡ ಚಿನ್ನಾಭರಣಗಳು ಒಟ್ಟು ರಫ್ತಿನಲ್ಲಿ ಶೇ.13ರಷ್ಟಿದೆ. ಜವಳಿ ಉದ್ಯಮ ಭಾರತದಲ್ಲಿ ಶರವೇಗದಲ್ಲಿ ಬೆಳೆಯುತ್ತಿದೆ. ಈ ನಿಟ್ಟಿನಲ್ಲಿ ಅದರಿಂದ ಶೇ.10ರಷ್ಟು ರಫ್ತಾಗುತ್ತಿದೆ (ಕೋಷ್ಟಕ–2). ರಫ್ತು ದಿಕ್ಕುಗಳನ್ನು ಅವಲೋಕಿಸಿದಾಗ, ಭಾರತದ ಸರಕು ಮತ್ತು ಸರಂಜಾಮುಗಳು ಜಗತ್ತಿನಾದ್ಯಂತ ಸರಬರಾಜಾಗುತ್ತಿವೆ. ಶೇ. 50ರಷ್ಟು ಏಶಿಯಾ ದೇಶಗಳಿಗೆ ಮತ್ತುಳಿದವು ವಿವಿಧ ಖಂಡಗಳಿಗೆ ಹೋಗುತ್ತಿವೆ.

| ಕೋಷ್ಟಕ–4 : ಭಾರತದ ಪ್ರಧಾನ ಆಮದು ಸರಕು ಮತ್ತು ಸರಂಜಾಮುಗಳು | | | | | |
|---|---|---|---|---|---|
| ಸರಕು ಮತ್ತು ಸರಂಜಾಮುಗಳು | ಒಟ್ಟು ಮೌಲ್ಯ (ಯು.ಎಸ್ ಮಿಲಿಯನ್ ಡಾಲರ್) | | | ಬೆಳವಣಿಗೆ ದರ | ಒಟ್ಟು ರಫ್ತಿನಲ್ಲಿ ಶೇಕಡಾವಾರು ಪಾಲು |
| | 2012 | 2013 | 2014 | | |
| 1. ರಾಶಿ ಆಮದು | 213495.93 | 222596.66 | 214913.73 | –3.45 | 47.75 |
| 1.1 ಆಹಾರ ಪಧಾರ್ಥಗಳು | 73.69 | 85.66 | 88.91 | 3.68 | 0.02 |
| 1.2. ರಸಗೊಬ್ಬರ | 11414.46 | 9074.95 | 6469.27 | –28.71 | 1.44 |
| 1.3. ಖಾದ್ಯ ತೈಲ | 9668.05 | 11235.00 | 9332.81 | –16.93 | 2.07 |
| 1.4. ಕಚ್ಚಾ ಪೆಟ್ರೋಲಿಯಂ | 154967.55 | 164040.56 | 165148.10 | 0.68 | 36.69 |
| 2. ಮುತ್ತು, ಅಮೂಲ್ಯ ಮತ್ತು ಅರೆ ಅಮೂಲ್ಯ ಕಲ್ಲುಗಳು | 28199.64 | 22666.61 | 24001.39 | 5.89 | 5.33 |
| 3. ಯಂತ್ರೋಪಕರಣ | 51748.42 | 52020.21 | 45058.91 | –13.38 | 10.01 |
| 4. ಪ್ರಯೋಜನಾ ಪರಿಕರಗಳು | 8764.59 | 6554.29 | 4517.81 | –31.07 | 1.00 |
| 5. ಇತರೆ | 187094 | 186866.66 | 161540.36 | –13.55 | 35.89 |
| | 489319.49 | 490736.65 | 450068.43 | –8.29 | 100.00 |
| ಮೂಲ : ವಾಣಿಜ್ಯ ಇಲಾಖೆ ವಾರ್ಷಿಕ ವರದಿ : 2013–14, ಭಾರತ ಸರ್ಕಾರ | | | | | |

| ಕೋಷ್ಟಕ-5 : ಭಾರತದ ಪ್ರಧಾನ ಆಮದು ವಲಯ ಮತ್ತು ವಿದೇಶಗಳು | | | | | |
|---|---|---|---|---|---|
| ವಲಯ ಮತ್ತು ವಿದೇಶಗಳು | ಒಟ್ಟು ಮೌಲ್ಯ (ಯು.ಎಸ್ ಮಿಲಿಯನ್ ಡಾಲರ್) | | | ಬೆಳವಣಿಗೆ ದರ | ಒಟ್ಟು ರಫ್ತಿನಲ್ಲಿ ಶೇಕಡಾವಾರು ಪಾಲು |
| | 2012 | 2013 | 2014 | | |
| 1. ಯರೋಪ್ | 94055.97 | 87528.32 | 70669.92 | –19.26 | 15.7 |
| 2. ಆಫ್ರಿಕಾ | 44104.39 | 41110.68 | 36842.74 | –10.38 | 8.19 |
| 3. ಅಮೆರಿಕ | 45023.75 | 59539.66 | 58123.03 | –2.38 | 12.91 |
| 3.1. ಉತ್ತರ ಅಮೆರಿಕ | 28845.2 | 32042.56 | 29258.19 | –8.69 | 6.5 |
| 3.2. ಲ್ಯಾಟಿನ್ ಅಮೆರಿಕ | 16178.56 | 27497.09 | 28864.84 | 4.97 | 6.41 |
| 4. ಏಶಿಯಾ | 296694.95 | 292685.93 | 273934.57 | –6.41 | 60.87 |
| 5. ಸಿಐಎಸ್ ದೇಶಗಳು | 8273.84 | 7879.78 | 7748.67 | –1.66 | 1.72 |
| 6. ಅವರ್ಗೀಕೃತ ವಲಯಗಳು | 1166.58 | 1992.27 | 2749.50 | 38.01 | 0.61 |
| | 489319.48 | 490736.64 | 450068.42 | –8.29 | 100.00 |

ಮೂಲ : ವಾಣಿಜ್ಯ ಇಲಾಖೆ ವಾರ್ಷಿಕ ವರದಿ : 2013–14, ಭಾರತ ಸರ್ಕಾರ

ಸೋವಿಯತ್ ಒಕ್ಕೂಟ ಅಳಿದ ಮೇಲೆ ಶೇ. 36ರಷ್ಟು ರಫ್ತನ್ನು ಯುರೋಪ್ ಮತ್ತು ಅಮೇರಿಕಾ ದೇಶಗಳು ಸ್ವೀಕರಿಸುತ್ತಿವೆ. ಆಫ್ರಿಕಾ ದೇಶಗಳಿಗೆ ಶೇ.10ರಷ್ಟು ಹೋಗುತ್ತಿವೆ (ಕೋಷ್ಟಕ–3). ಯುರೋಪ್ ಒಕ್ಕೂಟ ದೇಶಗಳಲ್ಲಿ ಬ್ರಿಟನ್ ಅಗ್ರಮಾನ್ಯ ರಫ್ತು ಸ್ವೀಕಾರ ದೇಶವಾಗಿದೆ. ಶೇ. 1.12ರಷ್ಟು ವಸ್ತುಗಳು ಸ್ವತಂತ್ರ ಕಾಮನ್ವೆಲ್ತ್ ರಾಷ್ಟ್ರಗಳಿಗೂ ಸರಬರಾಜಾಗುತ್ತಿವೆ. 1970ರ ವೇಳೆಗಾಗಲೆ ಆಹಾರೋತ್ಪಾದನೆಯಲ್ಲಿ ಸ್ವಾವಲಂಬನೆಯತ್ತ ನಿಧಾನವಾಗಿ ಕಾಲಿಡಲಾರಂಭಿಸಿತ್ತು. ಖಾದ್ಯ ತೈಲಾ ಹೊರತುಪಡಿಸಿ ಬಹುತೇಕ ಆಹಾರ ಪದಾರ್ಥಗಳ ಉತ್ಪಾದನೆಯಲ್ಲಿ ಸ್ವಾಲಂಬನೆ ಸಾಧಿತವಾಗಿರುವುದರಿಂದ ಇವುಗಳ ಆಮದು ಸಂಪೂರ್ಣವಾಗಿ ಕುಸಿದಿದೆ (ಕೋಷ್ಟಕ–4). ಒಟ್ಟು ಆಮದಿನಲ್ಲಿ ಅಂದರೆ ಶೇ.48 ರಷ್ಟು ಕ್ರೋಢೀಕೃತ ರಾಶಿ ಆಮದಿನೊಳಗೆ ಶೇ.37ರಷ್ಟು ಪೆಟ್ರೋಲಿಯಂ ಉತ್ಪನ್ನಗಳಿಗೆ ಹಣ ವ್ಯಯಿಸಲಾಗುತ್ತಿದೆ. ಈ ವಲಯದಲ್ಲಿ ಭಾರತವಿಂದಿಗೂ ಸ್ವಾವಲಂಬನೆ ಕಾಣಲು ಆಗುತ್ತಿಲ್ಲ. ಭಾರತ ದೇಶದ ಆರ್ಥಿಕಾಭಿವೃದ್ಧಿ ಮತ್ತು ಬೆಳವಣಿಗೆಗೆ ಪೂರಕವಾಗಿರುವ ಸರಕುಗಳನ್ನು ಮಾತ್ರ ಆಮದು ಮಾಡಿಕೊಳ್ಳುತ್ತಿದೆ. ಈ ನಿಟ್ಟಿನಲ್ಲಿ ಭಾರತವಿಂದು ಅನೇಕ ಯಶೋಗಾಥೆಗಳನ್ನು ಸಹ ಕಂಡಿದೆ. ಒಟ್ಟು ಆಮದಿನ ಶೇ. 37 ರಷ್ಟು ಸರಕು ಮತ್ತು ಸೇವೆಗಳು ಯುರೋಪ್, ಆಫ್ರಿಕ, ಹಾಗೂ ಅಮೇರಿಕ ಖಂಡಗಳಿಂದ ಸರಬರಾಜಾಗುತ್ತಿವೆ. ಯುರೋಪ್ ಒಕ್ಕೂಟ ದೇಶಗಳು ಶೇ.11 ರಷ್ಟನ್ನು ಒದಗಿಸುತ್ತಿವೆ. ಸೋವಿತ್ ಒಕ್ಕೂಟ ವಿಭಜನೆಯಾದ ಬಳಿಕ ಅದರ ಪ್ರಾಮುಖ್ಯತೆ ಇಳಿಮುಖವಾಗಿದೆ. ಏಶಿಯಾ ದೇಶಗಳು ಇನ್ನುಳಿದ ಶೇ.61ರಷ್ಟು ಆಮದಿನ ಪಾಲುದಾರರಾಗಿದ್ದಾರೆ (ಕೋಷ್ಟಕ–5). ದೇಶದ ಆಮದು ಮತ್ತು ರಫ್ತಿನ ಬುಟ್ಟಿಯನ್ನು ಒಮ್ಮೆ ನೋಡಿದಾಗ, ಅದರ ಅಭಿವೃದ್ಧಿಶೀಲತೆ ಮನವರಿಕೆಯಾಗದೆ ಇರದು (ಕೋಷ್ಟಕ–2 ಮತ್ತು 4). ಒಟ್ಟಾರೆ ಇಂದಿನ ಆಮದು ಸ್ಥಿತಿಗಳನ್ನು ಅವಲೋಕಿಸಿದಾಗ ಅದೊಂದು ಅಭಿವೃದ್ಧಿ ಪ್ರೋತ್ಸಾಹಿತವೆಂದು ನಿರ್ಧರಿಸಬಹುದು. ಒಂದು ಕಾಲದಲ್ಲಿ ಭಾರತ ಕೆಲವು ವಿದೇಶಿ ಮಾರುಕಟ್ಟೆಗಳನ್ನು ಮುಟ್ಟಲು ಸಾಧ್ಯವಾಗಿರಲಿಲ್ಲ. ವಿದೇಶಿ ವ್ಯಾಪಾರದಲ್ಲಿ ಜಾಗತಿಕ ಮೂಲೆ–ಮೂಲೆಗಳನ್ನು ಮುಟ್ಟಲು ಮೂರು ಸೂತ್ರಗಳಾದ ನಿಯಮಪರಿಪಾನೆ, ಅನುಷ್ಠಾನ ಮತ್ತು ಎಚ್ಚರಿಕೆ ಕೊಡುತ್ತಿರುವುದನ್ನು ಅಳವಡಿಸಿಕೊಳ್ಳಲಾಗಿದೆ.

### ಭಾರತದ ಪ್ರಧಾನ ವ್ಯಾಪಾರ ವಲಯಗಳು ಮತ್ತು ಒಪ್ಪಂದಗಳು

ಭಾರತ ಯಾವಾಗಲೂ ಮುಕ್ತ, ಸಮಾನ, ಉತ್ತೇಜಿತ, ಪಕ್ಷಪಾತವಿಲ್ಲದ ಹಾಗೂ ಕಾನೂನು ಬದ್ಧವಾದ ಅಂತಾರಾಷ್ಟ್ರೀಯ ವ್ಯಾಪಾರವನ್ನು ನಿರ್ವಹಿಸುತ್ತಾ ಬಂದಿದೆ. ಆದುದರಿಂದ ಯಶಸ್ವಿ ದ್ವಿಪಕ್ಷೀಯ ಒಪ್ಪಂದಗಳ ಮುಖೇನ ಪ್ರಾದೇಶಿಕ ವ್ಯಾಪಾರಗಳನ್ನು ರಾಜತಾಂತ್ರಿಕ ಸಂಧಾನಗಳಡಿ ವಿಶಾಲವಾದ ಸೈದ್ಧಾಂತಿಕ ತಳಹದಿಗಳ ಮೂಲಕ ಅಂತಾರಾಷ್ಟ್ರೀಯ ಮಾರುಕಟ್ಟೆಗಳನ್ನು ವಿಸ್ತರಿಸುತ್ತಿದೆ.

* ಏಷ್ಯಾ ದೇಶಗಳೊಂದಿಗೆ ವ್ಯಾಪಾರ * ದಕ್ಷಿಣ ಏಷ್ಯಾ ಮತ್ತು ಇರಾನ್ ಜೊತೆಗೆ ದ್ವಿಪಕ್ಷೀಯ ವ್ಯಾಪಾರ * ಆಸ್ಟೇಲಿಯ ಮತ್ತು ನ್ಯೂಜಿಲ್ಯಾಂಡ್‌ಗಳೊಂದಿಗೆ ದ್ವಿಪಕ್ಷೀಯ ವ್ಯಾಪಾರ * ಉತ್ತರ ಅಮೆರಿಕ ಮುಕ್ತ ವ್ಯಾಪಾರಿ ಒಪ್ಪಂದಗಳು (NAFTA) * ಯುರೋಪ್‌ನೊಂದಿಗೆ ಮತ್ತು ಯುರೋಪ್ ಒಕ್ಕೂಟ ರಾಷ್ಟ್ರಗಳೊಂದಿಗೆ ವ್ಯಾಪಾರ ಒಪ್ಪಂದಗಳು * ಸ್ವತಂತ್ರವಾಗಿರುವ ಕಾಮನ್ವೆಲ್ತ್ ದೇಶಗಳೊಂದಿಗೆ ನೇರ ವ್ಯಾಪಾರ (CIS) * ಲ್ಯಾಟಿನ್ ಅಮೆರಿಕ ಮತ್ತು ಕ್ಯಾರೇಬಿಯನ್ ರಾಷ್ಟ್ರಗಳೊಂದಿಗೆ ವ್ಯಾಪಾರ * ಉಪ ಸಹರಾ ಆಫ್ರಿಕಾ ರಾಷ್ಟ್ರಗಳೊಂದಿಗೆ ವ್ಯಾಪಾರ (SSA) * ಪಶ್ಚಿಮ ಏಶಿಯಾ ಮತ್ತು ಉತ್ತರ ಆಫ್ರಿಕಾ ರಾಷ್ಟ್ರಗಳೊಂದಿಗೆ ವ್ಯಾಪಾರ (WANA) * ಅಂತಾರಾಷ್ಟ್ರೀಯ ವ್ಯಾಪಾರಿ ಸಂಘಟನೆಗಳೊಂದಿಗೆ ವ್ಯಾಪಾರ ಸಂಬಂಧಗಳು.

| ಕೋಷ್ಟಕ–6 : ಭಾರತದ ಪ್ರಧಾನ ಪ್ರಾದೇಶಿಕ ಆಮದು ವಲಯ ಮತ್ತು ವಿದೇಶಿ ರಫ್ತು ವಲಯಗಳು | | | | | |
|---|---|---|---|---|---|
| ಆಮದು ವಲಯ ಮತ್ತು ವಿದೇಶಗಳು | ಆಮದು ಒಟ್ಟು ಮೌಲ್ಯ (ಯು.ಎಸ್ ಮಿಲಿಯನ್ ಡಾಲರ್) | | | ಬೆಳವಣಿಗೆ ದರ | ಒಟ್ಟು ರಫ್ತಿನಲ್ಲಿ ಶೇಕಡಾವಾರು ಪಾಲು |
| | 2012 | 2013 | 2014 | | |
| 1. ಏಶಿಯಾ | 296694.95 | 292685.93 | 273934.57 | –6.41 | 60.87 |
| 1.1. ಪೂರ್ವ ಏಶಿಯಾ | 16872.48 | 13930.25 | 10949.64 | –24.4 | 2.43 |
| 1.2. ಆಸಿಯಾನ್ | 42173.56 | 42566.36 | 41499.46 | –3.19 | 9.22 |
| 1.3. ಪಶ್ಚಿಮ ಏಶಿಯಾ–ಜಿ.ಸಿ.ಸಿ | 102393.66 | 108092.06 | 102047.79 | –5.59 | 22.67 |
| 1.4. ಇತರೆ ಏಶಿಯಾ ದೇಶಗಳು | 37942.17 | 35210.0 | 32.677.96 | –7.19 | 7.26 |
| 1.5. ಈಶಾನ್ಯ ಏಶಿಯಾ ದೇಶಗಳು | 94883.00 | 89907.33 | 84302.43 | –6.23 | 18.73 |
| 1.6. ದಕ್ಷಿಣ ಏಶಿಯಾ ದೇಶಗಳು | 2430.08 | 2679.95 | 2457.29 | –8.31 | 0.55 |
| 2. ಸಿಐಎಸ್ ದೇಶಗಳು | 8273.84 | 7879.78 | 7748.67 | –1.66 | 1.72 |
| ಒಟ್ಟು ಆಮದು | 489319.48 | 490736.64 | 450068.42 | –8.29 | 100.00 |
| ರಫ್ತು ವಲಯ ಮತ್ತು ವಿದೇಶಗಳು | | | | | |
| | 489319.48 | 490736.64 | 450068.42 | –8.29 | 100.00 |
| 1. ಏಶಿಯಾ | 153104.8 | 152699.25 | 155277.23 | 1.69 | 49.67 |
| 1.1. ಪೂರ್ವ ಏಶಿಯಾ | 2816.83 | 2732.65 | 2691.21 | –1.52 | 0.86 |
| 1.2. ಆಸಿಯಾನ್ | 36744 | 33008.31 | 33181.55 | 0.52 | 10.61 |
| 1.3. ಪಶ್ಚಿಮ ಏಶಿಯಾ–ಜಿ.ಸಿ.ಸಿ | 45360.29 | 51053.72 | 48241.67 | –5.51 | 15.41 |
| 1.4. ಇತರೆ ಏಶಿಯಾ ದೇಶಗಳು | 9537.16 | 11356.68 | 13018.81 | 14.64 | 4.16 |
| 1.5. ಈಶಾನ್ಯ ಏಶಿಯಾ ದೇಶಗಳು | 45349.59 | 39437.08 | 40811.09 | 3.48 | 13.05 |
| 1.6. ದಕ್ಷಿಣ ಏಶಿಯಾ ದೇಶಗಳು | 13296.5 | 15110.80 | 17332.89 | 14.71 | 5.54 |
| 2. ಸಿಐಎಸ್ ದೇಶಗಳು | 3059.98 | 3682.98 | 3508.79 | –4.73 | 1.12 |
| ಒಟ್ಟು ರಫ್ತು | 305963.92 | 300400.68 | 312610.29 | 4.06 | 100.00 |
| ಮೂಲ : ವಾಣಿಜ್ಯ ಇಲಾಖೆ ವಾರ್ಷಿಕ ವರದಿ : 2013–14, ಭಾರತ ಸರ್ಕಾರ | | | | | |

1. ಜಾಗತಿಕ ವ್ಯಾಪಾರಿ ಸಂಘಟನೆ (WTO) 2. ಏಶಿಯಾ ಮತ್ತು ಶಾಂತಿಸಾಗರಗಳಲ್ಲಿ ಆರ್ಥಿಕ ಮತ್ತು ಸಾಮಾಜಿಕ ಆಯೋಗ ರಾಷ್ಟ್ರಗಳೊಂದಿಗೆ ವ್ಯಾಪಾರ (ESCAP) 3. ವಿಶ್ವ ಸಂಸ್ಥೆಯ ವ್ಯಾಪಾರಿ ಮತ್ತು ಅಭಿವೃದ್ಧಿ ಸಮ್ಮೇಳನ (UNCTAD) 4. ಜಾಗತಿಕ ವ್ಯವಸ್ಥೆಯ ವ್ಯಾಪಾರಿ ಆಯ್ಕೆಗಳು (GSTP) 5. ಏಶಿಯಾ ಫೆಸಿಪಿಕ್ ವ್ಯಾಪಾರಿ ಒಪ್ಪಂದ (APTA) 6. ಬಂಗಾಳ ಕೊಲ್ಲಿ ಮೂಲಕ ವಿವಿಧ ತಾಂತ್ರಿಕ ವಲಯ ಮತ್ತು ಆರ್ಥಿಕ ಸಹಕಾರ (BIMSTEC) 7. ವಿನೂತನವಾದ ಬ್ರಿಕ್ಸ್ ವ್ಯಾಪಾರ (BRICS- Brazil, Russia, China, India, and South Africa) 8. ಇಬಿಸಾ (India, Brazil and South Africa) 9. ಹಿಂದೂ ಮಹಾಸಾಗರ ವ್ಯಾಪಾರಿ ಒಪ್ಪಂದ (Association for Regional Co-operation- IOR and ARC). ಭಾರತ ಸರ್ಕಾರದ ಅಂತಾರಾಷ್ಟ್ರೀಯ ವ್ಯವಹಾರಗಳ ಮಂತ್ರಾಲಯ ರಾಜತಾಂತ್ರಿಕ ಸಂಧಾನಗಳನ್ನು ನಡೆಸಿದರೆ, ವಾಣಿಜ್ಯ ಮಂತ್ರಾಲಯ ವಿದೇಶಿ ವ್ಯಾಪಾರ ನೀತಿಯನ್ನು ಸಿದ್ಧಪಡಿಸಿ ಅನುಷ್ಠಾನಗೊಳಿಸುತ್ತದೆ. ಇದನ್ನು 8 ವಿಭಾಗಳನ್ನಾಗಿ ವರ್ಗೀಕರಿಸಲಾಗಿದೆ. (ಸಾಮಾನ್ಯ ಆಡಳಿತ, ಹಣಕಾಸು ವಿಭಾಗ, ಆರ್ಥಿಕ ವಿಭಾಗ, ವ್ಯಾಪಾರ ನೀತಿ ವಿಭಾಗ, ಅಂತಾರಾಷ್ಟ್ರೀಯ ವ್ಯಾಪಾರ ಸೀಮಾ ವಿಭಾಗ, ರಾಜ್ಯ ವ್ಯಾಪಾರ ಮತ್ತು ಮೂಲ ಸೌಕರ್ಯ ವಿಭಾಗ, ಸರಬರಾಜು ವಿಭಾಗ ಮತ್ತು ತೋಟಗಾರಿಕೆ ವಿಭಾಗ. ಇವುಗಳೊಂದಿಗೆ, ಸರಕು ಆಧಾರಿತ ಮಂಡಳಿಗಳು ಮತ್ತು ಇತರೆ ಅಭಿವೃದ್ಧಿ

(50 ನೇ ಪುಟಕ್ಕೆ)

# ವಲಸೆ ಮತ್ತು ಸಂಬಂಧ

* ಡಾ. ಡೊಮಿನಿಕ್ ಡಿ.



ನಮ್ಮ ದಿನ ನಿತ್ಯದ ಚಟುವಟಿಕೆಗಳಲ್ಲಿ ನಾವೆಲ್ಲಾ ಒಂದು ಜಾಗಕ್ಕೆ, ವ್ಯಕ್ತಿಗೆ, ವಸ್ತುವಿಗೆ ಅಂಟಿಕೊಂಡು ಬದುಕುತ್ತೇವೆ ಎನ್ನುವ ಗ್ರಹೀತಕ್ಕೊಳಗಾಗಿ ಜೀವಿಸುತ್ತೇವೆ. ಆದರೆ ಈ ಗ್ರಹಿಕೆ ನಿಜವೇ? ಹೌದೆಂದು ಭಾಸವಾಗುತ್ತದೆಯಾದರೂ ಸಹ, ಅದು ನಿಜವಲ್ಲ. ಏಕೆಂದರೆ ನಮ್ಮ ಬದುಕು ಸಹ್ಯವಾಗುವುದೇ ಚಲನೆಯಿಂದ. ಅಂದರೆ ನಾವ್ಯಾರೂ ಸಹ ನಮ್ಮ ಕುಟುಂಬಗಳಲ್ಲಿ ನಮ್ಮ ಆಪ್ತರೊಡನೆ 24 ತಾಸು ಇರುವುದಿಲ್ಲ, ಇರಲಾಗದು. ನಮ್ಮ ಅರ್ಧದಷ್ಟು ಬದುಕು ಶಾಲೆ/ಕಾಲೇಜುಗಳಲ್ಲಿ ಅಥವಾ ಕೆಲಸದ ಜಾಗಗಳಲ್ಲೋ ಕಳೆದಿರುತ್ತದೆ. ಆದರೂ ನಾವು ನಮ್ಮ 'ಕುಟುಂಬ'ದಲ್ಲಿ ಇರುವಂತಹ ಅಲ್ಪ ಸಮಯವನ್ನೇ ಶಾಶ್ವತಗೊಳಿಸಿಕೊಂಡು ಮಾತಾನಾಡುತ್ತಿರುತ್ತೇವೆ... ಈ ಮೂಲಕ ನಮ್ಮ 'ನೇಟಿವಿಟಿ'ಯ ಸಂಸ್ಕೃತಿಯ ತಿಳಿವನ್ನು ಕಟ್ಟಿಕೊಂಡಿರುತ್ತೇವೆ. ಈ ಲೇಖನದಲ್ಲಿ ಮೇಲಿನ ಸಂಗತಿಯನ್ನು ಹಾಗೂ ಇನ್ನೆರಡು ವಿಷಯಗಳಾದ 'ಗಡಿ' ಮತ್ತು 'ಭೌಗೋಳಿಕತೆ'ಯ ಕಲ್ಪನೆಗಳ ಬಗ್ಗೆ ವಿಶ್ಲೇಷಿಸಲಾಗಿದೆ. ಈ ಪ್ರಕ್ರಿಯೆಯಲ್ಲಿ 'ವಲಸೆ' ಎಂಬುದನ್ನು ಸಕಾರಾತ್ಮಕವಾಗಿ ಗ್ರಹಿಸಬಹುದು ಎನ್ನುವ ತಿಳಿವಿಗೆ ಬರಲಾಗುತ್ತದೆ. ಇಂಥ ತಿಳಿವಿಗೆ ಬರಲು ಹಾಕಿಕೊಂಡಿರುವ ಚೌಕಟ್ಟೆಂದರೆ ನಮ್ಮ ಸಂವಿಧಾನದಲ್ಲಿ ಅಡಕವಾಗಿರುವ ವ್ಯಕ್ತಿಗೆ ಮುಕ್ತವಾಗಿರುವ ಚಲನೆಯ ಮೂಲಭೂತ ಹಕ್ಕು. ಈ ವರ್ಷದ ಮುಂಗಾರು ಪೂರ್ವ ಮಳೆ ಬರಲಾರಂಭಿಸಿದಾದ ಮೇಲೆ, ಒಂದು ಅಪೂರ್ವ ನೋಟ ಕೋಲಾರದಿಂದ ಬೆಂಗಳೂರು ಸೇರುವ ತನಕ ಗಮನಿಸಿದ್ದೆ – ರಸ್ತೆಯುದ್ದಕ್ಕೂ ಚಿಟ್ಟೆಗಳು ದಕ್ಷಿಣದ ದಿಕ್ಕಿನಿಂದ ಉತ್ತರಕ್ಕೆ ನೂರಾರು ಸಂಖ್ಯೆಯಲ್ಲಿ ಸಾಗುವುದನ್ನು ಕಂಡು ಅಚ್ಚರಿಗೊಂಡೆ. ನನ್ನ ಸ್ನೇಹಿತ ಅವೆಲ್ಲಾ ನಮ್ಮ ಹಾಗೆ 'ವಲಸೆ' ಹೋಗುತ್ತಿವೆಯೇನೋ ಎಂದ... ಆದರೆ, ನನ್ನ ನೆನಪು ರಂಗನತಿಟ್ಟಿನತ್ತ ಹಾರಿತ್ತು. ಅಲ್ಲಿ ನಾನಾ ದಿಕ್ಕುಗಳಿಂದ ಬರುವ ಪಕ್ಷಿಗಳು, ಅಲ್ಲಿಯೇ ಗೂಡು ಕಟ್ಟಿ ತನ್ನ ಸಂತತಿಯನ್ನು ವೃದ್ಧಿಸಿಕೊಳ್ಳುವ ಪರಿ ಮನಕ್ಕೆ ಮುದ ನೀಡುವ ಸಂಗತಿಯಾಗಿ, ನನ್ನಂತಹ ಜನರನ್ನು ಆ ಜಾಗ ಆಕರ್ಷಸುತ್ತಿದೆಲ್ಲವೇ? ಹಾಗೆಯೇ ಅರಣ್ಯದಲ್ಲಿ ಪ್ರಾಣಿಗಳು ಆಹಾರವನ್ನು ಹುಡುಕಿಕೊಳ್ಳುತ್ತಾ, ಒಂದು ಕಡೆಯಿಂದ ಮತ್ತೊಂದು ಕಡೆ ಚಲಿಸುವುದನ್ನು ಸಹ ಕಾಣಬಹುದು. ಅಂದರೆ ನಮ್ಮ ಜೀವಜಾಲದ ಎಲ್ಲಾ ಜೀವಿಗಳು ಚಲನೆಯಲ್ಲಿರುತ್ತವೆ... ಆದಿ ಮನುಷ್ಯ ನಾಗರಿಕನಾಗುವಾಗ ಈ ಜೀವ ಜಗತ್ತಿನ ಚಲನೆಯ ದಾರಿಗಳನ್ನೇ ತನ್ನ ಬೆಳವಣಿಗೆಯ ಹಾದಿಯನ್ನಾಗಿ ಮಾಡಿಕೊಂಡಿರಲೇ ಬೇಕು. ಹೀಗಿರುವಾಗ, 'ವಲಸೆ' ಎನ್ನುವ ಪದದ ಚಲನೆ ಮತ್ತು ಚಲಾವಣೆ ಯಾವಾಗ ಆಗಿರಬಹುದು?

ಅದರ ನಿರ್ದಿಷ್ಟ ಚಾರಿತ್ರಿಕ ಚಲನೆಯನ್ನು ಗಮನಿಸುವ ಬದಲು ಪರಿಸರದಲ್ಲಿ ನಡೆಯುವ ಋತುಮಾನಗಳು ಹೇಗೆ ಬದಲಾವಣೆಯನ್ನು ತರುತ್ತವೋ, ಹಾಗೆಯೇ ವಲಸೆ ಎಂಬುದೂ ಸಹ ನಿರಂತರವಾಗಿದೆಯೇನೋ!

ಆದರೂ ಸಹ ಪ್ರಸ್ತುತ ಗೋಳೀಕರಣ / ಪ್ರಪಂಚೀಕರಣ / ಜಾಗತೀಕರಣದ ಸನ್ನಿವೇಶದಲ್ಲಿ ವಲಸೆ ಎನ್ನುವುದು ನಿಜವಾಗಿ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ವಿದ್ಯಮಾನವಾಗಿ ಬೆಳೆದಿದೆ ಮತ್ತು ಸಾಮಾಜಿಕ ಬದಲಾವಣೆಯನ್ನು ಪ್ರಭಾವಿಸುವ ಮುಖ್ಯ ವಿಷಯವೂ ಆಗಿದೆ.

ಸಮಾಜಶಾಸ್ತ್ರೀಯವಾಗಿ ಎರಡು ಬಗೆಯ ವಲಸೆಗಳನ್ನು ಅಧ್ಯಯನಗಳಲ್ಲಿ ಗುರುತಿಸಲಾಗಿದೆ: ಒಂದು ಅನಿವಾರ್ಯ ಸನ್ನಿವೇಶಗಳಾದ ಬರ, ಗಲಭೆ, ಯುದ್ಧ ಸನ್ನಿವೇಶಗಳಲ್ಲಿ ಜೀವ ಉಳಿಸಿಕೊಳ್ಳಬೇಕೆಂಬ ಉದ್ದೇಶದಿಂದ ವಲಸೆ ಹೋಗುವಂತದ್ದು. ಇದೇ ರೀತಿಯ ಅಭಿವೃದ್ಧಿಗಾಗಿ ಅಂದರೆ ದೊಡ್ಡ ದೊಡ್ಡ ಅಣೆಕಟ್ಟೆಗಳನ್ನು, ಕಾರ್ಖಾನೆಗಳನ್ನು ಮತ್ತು ಗಣಿಗಾರಿಕೆಯನ್ನು ಆರಂಭಿಸುವಾಗಲೂ ಸಹ ಜನರು ವಲಸೆ ಹೋಗುತ್ತಾರೆ. ಇನ್ನು ಎರಡನೇ ಬಗೆಯ ವಲಸೆ ಹೋಗುವುದೆಂದರೆ ಸಾಮಾಜಿಕ ಚಲನೆಯಲ್ಲಿ ಮತ್ತಷ್ಟು ಉತ್ತಮಿಕೆಯನ್ನು ಸಾಧಿಸಿಕೊಳ್ಳಲು ವಲಸೆ ಹೋಗುವುದು. ಈ ಎರಡೂ ಬಗೆಯ ವಲಸೆ ಪ್ರಕ್ರಿಯೆಗಳು ಇಂದು ವಿಶ್ವದಾದ್ಯಂತ ಕಂಡು ಬರುತ್ತವೆ. ಈ ಎರಡೂ ಬಗೆಯ ವಲಸೆ ಪ್ರವೃತ್ತಿಗಳಲ್ಲಿ ಎದ್ದು ಕಾಣುವ ಲಕ್ಷಣಗಳೆಂದರೆ ತಾತ್ಕಾಲಿಕ ವಲಸೆ ಮತ್ತು ಶಾಶ್ವತ ವಲಸೆ. ಇಂಥ ವಲಸೆಗಳು ನಿಜವಾಗಿಯೂ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ವಿದ್ಯಮಾನವಾಗಿ ಬೆಳೆದಿದ್ದು ಮಾತ್ರ ವಸಾಹತುಶಾಹಿ ಆಧುನಿಕತೆ ಎನ್ನುವುದು ಜಗತ್ತನ್ನು ಆವರಿಸಿಕೊಂಡಾಗಲೇ. ಕೈಗಾರಿಕೆಗಳು ಮತ್ತು ನಗರಗಳು ಬೆಳೆದಂತೆಲ್ಲಾ ವಿಭಿನ್ನ ರೀತಿಯ ಜನರೂ ಸಹ ಅತ್ತ ವಲಸೆ ಹೋಗುವುದು

* ಪ್ರಾಧ್ಯಾಪಕರು.

ಹೆಚ್ಚಾಯಿತು. ಇಲ್ಲೇ ಸ್ಪರ್ಧೆಯೂ ಸಹ ಹೆಚ್ಚಾಗಿ, ಆಧುನಿಕ ವಿದ್ಯಾಭ್ಯಾಸದಿಂದ ವೃತ್ತಿ ಪರತೆಯನ್ನು ಗಳಿಸಿಕೊಂಡವರು ಮತ್ತು ಪಾರಂಪರಿಕ ಕೌಶಲ್ಯಗಳಲ್ಲೇ ಬದುಕನ್ನು ಕಟ್ಟಿಕೊಂಡವರ ನಡುವೆ ದೊಡ್ಡ ಬಿರುಕು ಕಾಣಿಸಿಕೊಳ್ಳ ತೊಡಗಿತು. ಇದೇ ಸಂದರ್ಭದಲ್ಲಿ ಆರ್ಥಿಕ ಹಿತಾಸಕ್ತಿಗಳಿಗಾಗಿ ಮತ್ತು ರಾಜಕೀಯ ನಿಯಂತ್ರಣಕ್ಕಾಗಿ ಆರಂಭವಾದ ವಸಾಹತುಶಾಹಿ ಮತ್ತು ತದನಂತರದಲ್ಲಿ ಉದಯಿಸಿದ ರಾಷ್ಟ್ರ–ಪ್ರಭುತ್ವಗಳು 'ಗಡಿ' ಮತ್ತು 'ಭೌಗೋಳಿಕತೆ'ಯ ಕಲ್ಪನೆಗಳನ್ನು ಹುಟ್ಟು ಹಾಕಿ ಈ ವಲಸೆ ಪ್ರಕ್ರಿಯೆಗಳಿಗೆ ಮತ್ತಷ್ಟು ಸ್ಫೋಟಕ ಗುಣವನ್ನು ವಲಸೆಗೆ ತಂದು ಕೊಟ್ಟಿವೆ.

ಈ ಪ್ರಕ್ರಿಯೆಯಿಂದಾಗಿ ಭಾರತದಲ್ಲೇ ಎದ್ದು ಕಾಣುವ ಮೂರು ಬಗೆಯ ವಲಸೆಗಳನ್ನು ಗುರುತಿಸಿಕೊಳ್ಳುತ್ತಾ ಅವು ಹೇಗೆ 'ಗಡಿ' ಮತ್ತು 'ಭೌಗೋಳಿಕತೆ'ಯ ಕಲ್ಪನೆಗಳನ್ನು ಹಿಂಸಾತ್ಮಕವಾಗಿ ನಾಗರಿಕ ಪೌರತ್ವವನ್ನು ನಾಚುವಂತೆ ಮಾಡಿವೆ ಎನ್ನುವುದನ್ನು ಗಮನಿಸಬಹುದು: ಮೊದಲನೆಯದ್ದು, ಇಂಡಿಯಾ – ಪಾಕಿಸ್ತಾನ ವಿಭಜನೆಯ ಸಂದರ್ಭದಲ್ಲಿ ಕಾಣಿಸಿಕೊಂಡ ವಲಸೆ. ಇಲ್ಲಿ ಹಿಂಸೆಯೇ ಚಾರಿತ್ರಿಕವಾಗಿ ಕಂಡಿತ್ತು. ಅದು ಇಂದಿಗೂ ಗಡಿ ಪ್ರದೇಶದಲ್ಲಿ ಮುಸುಕಿನ ಗುದ್ದಾಟವಾಗಿ ಕಾಣಿಸಿಕೊಳ್ಳುತ್ತಿದೆ. ಎರಡನೆಯದ್ದು ಟಿಬೆಟಿನಿಂದ ಬಂದ ವಲಸಿಗರು. ಇವರು ಭಾರತದಲ್ಲಿ ಅಲ್ಲಲ್ಲೇ ಹರಡಿಕೊಂಡಿದ್ದರೂ ಸಹ, ಕರ್ನಾಟಕದಲ್ಲಿ ಮೂರು ಕಡೆ ಮುಖ್ಯವಾಗಿ ನೆಲೆಸಿರುವುದನ್ನು ಗಮನಿಸಬಹುದು. ಇವರು ತಮ್ಮದೇ ಆದ ಪ್ರತ್ಯೇಕ ಸಾಂಸ್ಕೃತಿಕ ಬದುಕನ್ನು ಕಂಡುಕೊಳ್ಳುವಲ್ಲಿ ಯಶಸ್ವಿಯಾಗಿದ್ದು, ನೆರೆಹೊರೆಯವರೊಡನೆ ನೆಮ್ಮದಿಯನ್ನು ಕಂಡುಕೊಂಡಿದ್ದಾರೆನ್ನುವುದು ಅಚ್ಚರಿಯ ಸಂಗತಿಯಾಗಿದೆ. ಮೂರನೇಯದ್ದು, ಶ್ರೀಲಂಕಾದಿಂದ ವಲಸೆ ಬಂದ ತಮಿಳರು. ತಮಿಳ್ನಾಡಿನ ಆಯ್ದ ಪ್ರದೇಶಗಳಲ್ಲಿ ಇವರು ನಿರಾಶ್ರಿತರಾಗಿಯೇ ಅಸಹನೀಯ ಪರಿಸ್ಥಿಯಲ್ಲಿ ಮುಂದುವರೆಯುತ್ತಿದ್ದಾರೆ. ಈ ಮೇಲಿನ ಮೂರು ಉದಾಹರಣೆಗಳಲ್ಲಿ ಮೂರು ಬಗೆಯ ಸಂಗತಿಗಳನ್ನು ಅವು ಹೊರ ಹಾಕುತ್ತವೆ. ಇಲ್ಲಿ ಮುಕ್ತ ಚಲನೆಯ ಹಕ್ಕು ಶ್ರೀಲಂಕಾದಿಂದ ಬಂದ ತಮಿಳರಿಗೆ ಇನ್ನೂ ಸಾಧ್ಯವಾಗಿಲ್ಲ ಎನ್ನುವುದು ಆ ನಿರಾಶ್ರಿತ ಜಾಗಗಳಿಗೆ ಭೇಟಿ ನೀಡಿದಲ್ಲಿ ತಿಳಿಯುತ್ತದೆ. ಇದೊಂದು ನಕಾರಾತ್ಮ ವಲಸೆಯ ಪ್ರವೃತ್ತಿಯನ್ನು ತೋರಿಸುತ್ತದೆ.

ಹೀಗಿದ್ದಾಗ್ಯೂ ಯಾವುದೇ ಬದುಕು ನಿಂತ ನೀರಲ್ಲ. ಹಾಗೆಯೇ ವಲಸೆಯನ್ನು ಅರಿಯುವ ವಿಧಾನಗಳೂ ಸಹ ಬದಲಾಗಿವೆ. ಇತ್ತೀಚೆಗೆ ವಲಸೆ ಹೋಗುವವರನ್ನು ಡಯಸ್ಫೋರಿಗರು ಎಂದು ಕರೆಯಲಾಗುತ್ತಿದೆ. ಇಂಥ ಒಂದು ಅಧ್ಯಯನವನ್ನು ನಾವು ಇನ್ನು ಮುಂದೆ ಚರ್ಚೆಗೆ ತೆಗೆದುಕೊಳ್ಳೋಣ: ಈ ಅಧ್ಯಯನದ ಪ್ರಕಾರ, "ಡಯಾಸ್ಪೊರಾ' ಎನ್ನುವುದು ಆಧುನಿಕ ಸಂಕಥನಗಳಲ್ಲಿ ಬಳಕೆಯಾಗುತ್ತಿರುವ ಪಾರಿಭಾಷಿಕ ಪದ... ಅದೊಂದು ಏಕಕಾಲದಲ್ಲಿ ಬಹುಳವುಳ್ಳ ಚರಿತ್ರೆ, ಆರ್ಥಿಕ, ಸಮಾಜಶಾಸ್ತ್ರೀಯ, ಮಾನವಶಾಸ್ತ್ರೀಯ, ರಾಜಕೀಯ, ಸಾಂಸ್ಕೃತಿಕ ವಲಯಗಳಲ್ಲಿ ಬಳಕೆಯಾಗುತ್ತಿರುವ ಪಾರಿಭಾಷಿಕ ಪದವಾಗಿದೆ."

ಅದೇ ಅಧ್ಯಯನದ ಪ್ರಕಾರ ಈ ಪಾರಿಭಾಷಿಕ ಪದವಾಗಿ ಬೆಳೆದ್ದು ಮಾತ್ರ ಇತ್ತೀಚೆಗಷ್ಟೆ, "ಡಯಾಸ್ಪೊರಾ ಎಂಬ ಪದವು ಆಕ್ಸ್‌ಫರ್ಡ ನಿಘಂಟಿನ 1987ರ ಆವೃತ್ತಿಯವರೆಗೂ ಬಳಕೆಯಲ್ಲಿರಲಿಲ್ಲ. 1991ರ ಆವೃತ್ತಿಯಲ್ಲಿ ಡಯಾಸ್ಪೊರಾ ಪದ ಅದರಲ್ಲಿ ಸೇರಿಕೊಂಡಿತು. ಈ ಹೊಸ ಆವೃತ್ತಿಯಲ್ಲಿ ಹೊಸ ಅನುಬಂಧಗಳ ಜೊತೆ ಡಯಾಸ್ಪೊರ ಪರಿಕಲ್ಪನೆಯನ್ನು ದಾಖಲಿಸಲಾಯಿತು. 1993ರ ಆಕ್ಸಫರ್ಡ ನಿಘಂಟಿನ ಆವೃತ್ತಿಯಲ್ಲಿ ಡಯಾಸ್ಪೊರಾ ಎಂದರೆ 'ತಾಯ್ನಾಡಿನಿಂದ ದೂರಾಗಿ ಬದುಕುತ್ತಿರುವ ಯಾವುದೇ ಜನರು' ಎಂಬ ಅರ್ಥ ನೀಡಲಾಗಿದೆ." ಇಂಥ ಅಧ್ಯಯನ ಕೈಗೊಂಡವರು ಡಾ. ಆರ್. ತಾರಿಣಿ ಶುಭದಾನಿ. ಇವರು ಗುರುತಿಸುವಂತೆ ಈ ಡಯಾಸ್ಪೊರಾ ಪ್ರಕ್ರಿಯೆ ಹಿಂದೆ ನಾವು ಕಟ್ಟಿಕೊಂಡ ತಾಯ್ನಾಡು ಎನ್ನುವ ಕಲ್ಪನೆಯನ್ನು ಮುರಿದು ಕಟ್ಟುವಂತಹ ಸ್ಥಿತಿ ಉದಯಿಸಿದ್ದು ಅದೊಂದು ಮಿಶ್ರತಳಿ ಸಂಸ್ಕೃತಿಗೆ ಕಾರಣವಾಗಿದೆ. ಹಾಗಾಗಿ ಈ ಸ್ಥಿತಿಯನ್ನು ತಾರಣಿಯವರು ಮೂರು ದೃಷ್ಟಿಗಳಲ್ಲಿ ಗುರುತಿಸುತ್ತಾರೆ, "ಮೊದಲನೆಯದಾಗಿ, ಭಾರತದ ರಾಜಕೀಯ ಡಯಾಸ್ಪೊರಾವನ್ನು ನೋಡುವ ರಾಜಕೀಯ ದೃಷ್ಟಿಕೋನ. ಎರಡನೆಯದಾಗಿ ಡಯಾಸ್ಪೊರಿಗರಾದ ಭಾರತೀಯರು ಭಾರತ ಮತ್ತು ಭಾರತೀಯತೆಯನ್ನು ನೋಡುವ ದೃಷ್ಟಿ. ಮೂರನೆಯದಾಗಿ,




ಭಾರತೀಯ ಸಂಸ್ಕೃತಿ ಎನ್ನುವುದು ಆರ್ಥಿಕ ಉತ್ಪಾದನೆಯಾಗಿ ಬದಲಾಗುತ್ತಿರುವ ಸನ್ನಿವೇಶದಲ್ಲಿ ಭಾರತೀಯ ಡಯಾಸ್ಪೊರಾ ಕಾಣುವ ಬಗೆ. ಈ ದೃಷ್ಟಿಕೋನಗಳಿಂದ ನಮಗೆ ಭಾರತೀಯ ಡಯಾಸ್ಪೊರಾದ ನಾನಾ ಆಯಾಮಗಳು ದೊರೆಯಬಹುದು. ಸ್ವಾತಂತ್ರ್ಯ ನಂತರ ಡಯಾಸ್ಪೊರಾ ಚಟುವಟಿಕೆ ಭಾರತದಲ್ಲಿ ಹೆಚ್ಚಾಗಿದೆ. ಭಾರತದ ಡಯಾಸ್ಪೊರಿಗರು ತಮ್ಮದೇ ಆದ ಅಸ್ಮಿತೆಯನ್ನು ಪಡೆದುಕೊಂಡಿದ್ದಾರೆ. ಪಾಶ್ಚಾತ್ಯ ಸಮಾಜಗಳಲ್ಲಿ ಭಾರತೀಯ ಡಯಾಸ್ಪೊರಾವನ್ನು ಪ್ರೋತ್ಸಾಹಕ ದೃಷ್ಟಿಯಿಂದ ನೋಡಲಾಗುತ್ತಿದೆ. ಭಾರತೀಯತೆಯ ಹೊಸ ವ್ಯಾಖ್ಯಾನಗಳನ್ನು ಅವು ಉತ್ಸಾಹದಿಂದಲೇ ಸ್ವಾಗತಿಸುತ್ತಿವೆ." ಈ ಮಾತುಗಳು ಸ್ವಲ್ಪ ಉತ್ಸಾಹದಿಂದಲೇ ಕೂಡಿವೆ ಎನ್ನಬಹುದು. ಇದೇ ಧಾಟಿಯ, ಲೇಖಕ ಅಮಿತಾಬ್ ಘೋಷ್ ಪ್ರಕಾರ ಹತ್ತೊಂಬತ್ತನೆಯ ಶತಮಾನದ ಮೊದಲ ಭಾಗದಲ್ಲಿ ಆರಂಭವಾದ ಭಾರತೀಯರ ವಲಸೆ ಒಂದು ಆಧುನಿಕ ಕಾಲದ ಮುಖ್ಯವಾದ ಜನಸಂಖ್ಯಾ ಸ್ಥಾನಾಂತರವಾಗಿದೆ. ಇದೀಗ ಭಾರತೀಯ ಸಂಸ್ಕೃತಿ 'ವಿಶ್ವಸಂಸ್ಕೃತಿ'ಯಾಗುತ್ತಿದೆ. ಭಾರತದ ಬಗ್ಗೆ ಹೊರಗಿನ ಆಸಕ್ತಿಗಳು ಅನಿವಾಸಿ ಭಾರತೀಯರನ್ನು ಮತ್ತು ಸ್ವದೇಶದಲ್ಲಿರುವ ಭಾರತೀಯರನ್ನು ಏಕ ಕಾಲಕ್ಕೆ ಆಸಕ್ತಿಯಿಂದ ಗಮನಿಸುವಂತೆ ಮಾಡುತ್ತಿವೆ. ಇವರ ಸಂಖ್ಯೆ ಇಂದು 30 ಮಿಲಿಯನ್ ದಾಟುತ್ತಿದೆ ಎನ್ನಲಾಗುತ್ತದೆ. ಹೀಗೆನ್ನುವಾಗ ಜನಗಳ ನಡುವೆ 'ಜಾಗತಿಕ ಪೌರತ್ವ'ದ ಕಲ್ಪನೆ ಗಟ್ಟಿಗೊಳ್ಳುತ್ತಿದೆ ಎನ್ನಲಾಗುತ್ತಿದೆ. ಆದರೆ ಇದು ನಿಜವಾಗಿಯೂ ಹೌದಾದರೆ, ಇನ್ನೂ ಸಹ ಅದನ್ನು ಸ್ಥಳೀಯವಾಗಿ ಸಾಧ್ಯವಾಗಿಸಿಕೊಳ್ಳಲು ಬಹು ಶ್ರಮ ಪಡಬೇಕಾಗಿದೆ. ಏಕೆಂದರೆ, ನಾವು ಇನ್ನೂ ಸಹ ಚಲನೆಯೇ ಮುಖ್ಯವಾದ 'ಜಂಗಮ ಪ್ರಜ್ಞೆ'ಯಾಗಿ ಜೀವ ಧಾತುವಾಗಿದೆ ಎನ್ನುವುದನ್ನು ನಾವು

**(51 ನೇ ಪುಟಕ್ಕೆ)**

# ಕರ್ನಾಟಕದ ತಂತ್ರಜ್ಞಾನ ಸಂಬಂಧ

* ಮಾಧವ



ಕರ್ನಾಟಕ ರಾಜ್ಯವು ಇತ್ತೀಚಿನ ವರ್ಷಗಳಲ್ಲಿ ಜಾಗತಿಕ ಭೂಪಟದಲ್ಲಿ ವಿಶಿಷ್ಟವಾಗಿ ಗುರುತಿಸಿಕೊಂಡಿದೆ. ಭಾರತದ ಮಾಹಿತಿ ತಂತ್ರಜ್ಞಾನ ರಂಗದಲ್ಲಿಯೇ ರಾಜ್ಯವು ಮುಂಚೂಣಿಯಲ್ಲಿ ಇದೆ. ಅದರಲ್ಲೂ ವಿಶೇಷವಾಗಿ ರಾಜಧಾನಿ ಬೆಂಗಳೂರು, ದೇಶದ ಸಾಫ್ಟ್‌ವೇರ್ ಉದ್ಯಮದ ರಾಜಧಾನಿ ಎಂದೂ ಖ್ಯಾತವಾಗಿದೆ. ರಾಜ್ಯವು ವಿಶ್ವದಲ್ಲಿಯೇ ನಾಲ್ಕನೆ ಅತಿದೊಡ್ಡ ತಂತ್ರಜ್ಞಾನ ಕೇಂದ್ರ (technology cluster) ಎಂಬ ಅಭಿವಾದನಕ್ಕೂ ಪಾತ್ರವಾಗಿರುವುದು ರಾಜ್ಯದ ಇನ್ನೊಂದು ಹೆಗ್ಗಳಿಕೆಯಾಗಿದೆ.

ಐ.ಟಿ, ಐ.ಟಿ ಆಧಾರಿತ ಸೇವೆಗಳು, ಜೈವಿಕ ತಂತ್ರಜ್ಞಾನ, ಎಂಜಿನಿಯರಿಂಗ್, ದೂರಸಂಪರ್ಕ, ಆಟೊಮೊಬೈಲ್, ಜವಳಿ, ಸಿದ್ಧ ಉಡುಪು, ವೈಮಾನಿಕ ಅಂತರಿಕ್ಷ, ಆನಿಮೇಷನ್, ಪ್ರವಾಸೋದ್ಯಮ, ಪುನರ್ ಬಳಕೆ ಇಂಧನ ಮತ್ತಿತರ ಕ್ಷೇತ್ರಗಳಲ್ಲಿ ರಾಜ್ಯದ ಆರ್ಥಿಕ ಸಾಧನೆ ಗಮನಾರ್ಹವಾಗಿದೆ. ದೇಶದ ಒಟ್ಟು ರಫ್ತು ವಹಿವಾಟಿನಲ್ಲಿಯೂ ರಾಜ್ಯದ ಕೊಡುಗೆ ಗಣನೀಯವಾಗಿದೆ.

ಮಾಹಿತಿ ತಂತ್ರಜ್ಞಾನ (ಐ.ಟಿ) ರಂಗದ ಶಕ್ತಿ ಕೇಂದ್ರವಾಗಿ ಬೆಳೆಯುವ ನಿಟ್ಟಿನಲ್ಲಿ ಕರ್ನಾಟಕವು ದಾಪುಗಾಲು ಹಾಕುತ್ತ, ಸಿಲಿಕಾನ್ ಕಣಿವೆ ಖ್ಯಾತಿಯ ಕ್ಯಾಲಿಫೋರ್ನಿಯಾಗೆ ಸರಿಸಮನಾಗಿ ಬೆಳೆಯುತ್ತ, ಭಾರತದ ಸಿಲಿಕಾನ್ ಕಣಿವೆ ಎಂದೂ ಗಮನ ಸೆಳೆಯುತ್ತಿದೆ. ಬೆಂಗಳೂರಿನ ಬೆಳವಣಿಗೆಗೆ ಪೂರಕವಾಗಿ ಮೈಸೂರು,ಮಂಗಳೂರು ಮತ್ತು ಹುಬ್ಬಳ್ಳಿ – ಧಾರವಾಡ ನಗರಗಳಲ್ಲೂ ಐ.ಟಿ ಉದ್ದಿಮೆಯು ವೇಗವಾಗಿ ಬೆಳವಣಿಗೆ ಕಾಣುತ್ತಿದೆ. ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ಸಾಫ್ಟ್ ವೇರ್, ವೈವಿಧ್ಯಮಯ ಸರಕುಗಳ ರಫ್ತು ವಹಿವಾಟಿನಲ್ಲಿ ರಾಜ್ಯವು ತನ್ನದೇ ಆದ ವಿಶಿಷ್ಟ ಕೊಡುಗೆ ನೀಡುತ್ತ ಇಡೀ ವಿಶ್ವವೇ ರಾಜ್ಯದ ಸಾಧನೆಯತ್ತ ಬೆರಗುಗಣ್ಣಿನಿಂದ ನೋಡುವಂತೆ ಮಾಡಿದೆ. ದೇಶದ ಒಟ್ಟು ಸಾಫ್ಟ್ ವೇರ್ ರಫ್ತಿನಲ್ಲಿ ರಾಜ್ಯದ ಪಾಲು ಶೇ 40ರಷ್ಟು ಇರುವುದು ರಾಜ್ಯದ ಪಾಲಿಗೆ ನಿಜಕ್ಕೂ ಹೆಮ್ಮೆಯ ವಿಷಯವಾಗಿದೆ. ಇದಕ್ಕೆ ಬೆಂಗಳೂರಿನಲ್ಲಿ ಕೇಂದ್ರೀಕೃತಗೊಂಡಿರುವ ದೇಶಿ ಮತ್ತು ಬಹುರಾಷ್ಟ್ರೀಯ ಸಾಫ್ಟ್ ವೇರ್ ಸಂಸ್ಥೆಗಳ ಕೊಡುಗೆಯೂ ಮುಖ್ಯವಾಗಿದೆ.

ಸಾಫ್ಟ್ ವೇರ್ ರಫ್ತು ಮತ್ತು ಹೊರಗುತ್ತಿಗೆ ರಂಗದ ದೇಶದ ಎರಡು ಮತ್ತು ಮೂರನೆ ಅತಿದೊಡ್ಡ ಸಂಸ್ಥೆಗಳಾದ ಇನ್ಫೊಸಿಸ್ ಮತ್ತು ವಿಪ್ರೊ ಬೆಂಗಳೂರಿನಲ್ಲಿ ನೆಲೆಗೊಂಡಿರುವುದು ಜಾಗತಿಕವಾಗಿ ರಾಜ್ಯದ ಹಿರಿಮೆ ಹೆಚ್ಚಿಸಿವೆ. ಈ ಎರಡೂ ಐ.ಟಿ ದಿಗ್ಗಜ ಸಂಸ್ಥೆಗಳೂ ಸೇರಿದಂತೆ ಇತರ ಬಹುರಾಷ್ಟ್ರೀಯ ಸಂಸ್ಥೆಗಳಲ್ಲಿ ದುಡಿಯುತ್ತಿರುವ ಮತ್ತು ವಿದೇಶಗಳಲ್ಲಿ ಬೆಂಗಳೂರು ಮೂಲದ ಸಂಸ್ಥೆಗಳ ಪರವಾಗಿ ಕೆಲಸ ಮಾಡುತ್ತಿರುವ ರಾಜ್ಯದ ಐ.ಟಿ ಪರಿಣತರು ಕರ್ನಾಟಕದ ಕುಶಲ ಮಾನವ ಸಂಪನ್ಮೂಲದ ಹೆಮ್ಮೆಯ ಪ್ರತಿನಿಧಿಗಳಾಗಿದ್ದಾರೆ. ಸಾಫ್ಟ್ ವೇರ್ ರಫ್ತು ನಂತರದ ಸ್ಥಾನಗಳಲ್ಲಿ ಎಂಜಿನಿಯರಿಂಗ್ ಉತ್ಪನ್ನ, ಚಿನ್ನಾಭರಣ, ಸಾಗರ ಉತ್ಪನ್ನ, ಸಿದ್ಧ ಉಡುಪು ಮತ್ತಿತರ ಸರಕುಗಳ ತಯಾರಿಕಾ ಘಟಕಗಳೂ ಜಾಗತಿಕ ವಹಿವಾಟಿನಲ್ಲಿ ತಮ್ಮದೇ ಆದ ಕೊಡುಗೆ ನೀಡಿ ಗಮನ ಸೆಳೆಯುತ್ತಿವೆ. ಕರ್ನಾಟಕ ರಾಜ್ಯವು ಕೈಗಾರೀಕರಣ ಮತ್ತು ಅತ್ಯಂತ ಪ್ರಗತಿಪರ ರಾಜ್ಯಗಳಲ್ಲಿ ಒಂದಾಗಿರುವುದರಲ್ಲಿ ಎರಡು ಮಾತಿಲ್ಲ. ಕೈಗಾರಿಕೆ ಮತ್ತು ತಂತ್ರಜ್ಞಾನ ರಂಗಕ್ಕೆ ಉತ್ತೇಜನ ನೀಡುವಲ್ಲಿ ರಾಜ್ಯವು ಸದಾ ಮುಂಚೂಣಿಯಲ್ಲಿಯೇ ಇದೆ. ಸಂಪನ್ಮೂಲ, ಕೌಶಲ್ಯ, ತಂತ್ರಜ್ಞಾನ ಮತ್ತು ಜ್ಞಾನ ಆಧಾರಿತ ಸರಕು ಮತ್ತು ಸೇವೆಗಳ ಮೂಲಕ ಆರ್ಥಿಕ ಅಭಿವೃದ್ಧಿಯಲ್ಲಿ ದಾಪುಗಾಲು ಹಾಕುತ್ತಿದೆ. ಜತೆಗೆ ಸಂಪತ್ತನ್ನೂ ವೃದ್ಧಿಸುತ್ತಿದೆ. ಕೈಗಾರಿಕಾ ಸ್ನೇಹಿ ಉದ್ಯಮ ನೀತಿ, ಅತ್ಯುತ್ತಮವಾದ ಮಾನವ ಸಂಪನ್ಮೂಲ, ಉತ್ತಮ ಮೂಲಸೌಕರ್ಯ ಮತ್ತು ಉದ್ಯಮಿಗಳಿಗೆ ನೆರವಾಗುವ ವಾತಾವರಣವು ದೇಶ – ವಿದೇಶಗಳ ಬಂಡವಾಳ ಹೂಡಿಕೆದಾರರನ್ನು ಚುಂಬಕದಂತೆ ಆಕರ್ಷಿಸುತ್ತಿದೆ.

ಉದ್ಯಮಿಗಳು ಯಾವುದೇ ಕಿರಿಕಿರಿ ಇಲ್ಲದೆ ತಮ್ಮ ವಹಿವಾಟು ಆರಂಭಿಸಲು, ಮುನ್ನಡೆಸಲು ರಾಜ್ಯ ಸರ್ಕಾರ ಸಕಲ ಸೌಲಭ್ಯಗಳನ್ನು ಒದಗಿಸುತ್ತಿದೆ. ಮುಂದಿನ 5 ವರ್ಷಗಳಲ್ಲಿ ರಾಜ್ಯದ ರಫ್ತು ಪ್ರಮಾಣವನ್ನು ದುಪ್ಪಟ್ಟುಗೊಳಿಸಲೂ ಸರ್ಕಾರ ಯೋಜನೆ ಹಾಕಿಕೊಂಡಿದೆ. ಸದ್ಯದ 3 ಲಕ್ಷ ಕೋಟಿ ರೂಪಾಯಿಗಳಷ್ಟು ರಫ್ತು ವಹಿವಾಟನ್ನು 6 ಲಕ್ಷ ಕೋಟಿ ರೂಪಾಯಿಗಳಿಗೆ ಹೆಚ್ಚಿಸಲು ಕಾರ್ಯಪ್ರವೃತ್ತವಾಗಿದೆ. ಈ ಉದ್ದೇಶಕ್ಕೆ ಅಗತ್ಯವಾದ ಮೂಲ ಸೌಕರ್ಯ ಮತ್ತಿತರ ಸೌಲಭ್ಯಗಳನ್ನು ಕಲ್ಪಿಸಲು ಕಟಿಬದ್ಧವಾಗಿದೆ.

* ಹಿರಿಯ ಪತ್ರಕರ್ತರು.

| ಪಟ್ಟಿ –1 | | |
|---|---|---|
| **ಕರ್ನಾಟಕದ ಪ್ರಮುಖ ರಫ್ತು ವಹಿವಾಟಿನ ಚಿತ್ರಣ (ಕೋಟಿ ರೂಪಾಯಿಗಳಲ್ಲಿ)** | | |
| **ಸರಕು** | **ವರ್ಷ** | |
| | **2012–13** | **2013–14** |
| 1. ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ಸಾಫ್ಟ್ ವೇರ್ | 1,56,000 | 1,78,000 |
| 2. ಸಿದ್ಧ ಉಡುಪು | 7,670 | 8,900 |
| 3. ಪೆಟ್ರೋಲ್ ಮತ್ತು ಪೆಟ್ರೋಲಿಯಂ ಉತ್ಪನ್ನ | 33,915 | 35,392 |
| 4. ಎಂಜಿನಿಯರಿಂಗ್ | 12,568 | 17,978 |
| 5. ಕಬ್ಬಿಣ ಅದಿರು ಮತ್ತು ಇತರ ಖನಿಜ | 1,735 | 739 |
| 6. ರೇಷ್ಮೆ ಉತ್ಪನ್ನ | 654 | 650 |
| 7. ಕಾಫಿ | 3,534 | 3,598 |
| 8. ಔಷಧ ಮತ್ತು ಸೌಂದರ್ಯ ಪ್ರಸಾದನ | 7,233 | 8,300 |
| 9. ಕೃಷಿ ಮತ್ತು ಸಂಸ್ಕರಿತ ಆಹಾರ | 1,149 | 1,300 |
| 10. ಹರಳು ಮತ್ತು ಚಿನ್ನಾಭರಣ | 24,483 | 24,175 |
| 11. ಗೋಡಂಬಿ | 847 | 1,200 |
| 12. ಕರಕುಶಲ | 374 | 516 |
| 13. ಸಾಗರ ಉತ್ಪನ್ನ | 632 | 1067 |
| 14. ಪ್ಲಾಸ್ಟಿಕ್ ಸರಕು | 788 | 700 |
| 15. ಸಂಬಾರ ಪದಾರ್ಥ | 904 | 1150 |
| 16. ಉಣ್ಣೆ ಮತ್ತು ಉಣ್ಣೆ ಉತ್ಪನ್ನ | 150 | 176 |
| 17. ಚರ್ಮದ ಉತ್ಪನ್ನ | 452 | 450 |
| 18. ರಾಸಾಯನಿಕ ಉತ್ಪನ್ನ | 491 | 562 |
| 19. ಇತರ ಉತ್ಪನ್ನಗಳು | 4,789 | 5,565 |
| **ಒಟ್ಟು** | **2,58,368** | **2,90,418** |

ದೇಶದ ರಫ್ತು ವಹಿವಾಟಿನ ಜತೆಗೆ ರಾಜ್ಯದ ರಫ್ತಿನ ಹೋಲಿಕೆಯ ಈ ಮುಂದಿನ ಅಂಕಿ ಅಂಶಗಳೇ ರಾಜ್ಯವು ಅಂತಾರಾಷ್ಟ್ರೀಯ ಉದ್ದಿಮೆ ರಂಗಕ್ಕೆ ನೀಡುತ್ತಿರುವ ಕೊಡುಗೆಯ ಸ್ಪಷ್ಟ ಚಿತ್ರಣ ನೀಡುತ್ತವೆ.

| ಪಟ್ಟಿ –2 | | | |
|---|---|---|---|
| **ದೇಶದ ರಫ್ತು ವಹಿವಾಟಿನ ಜತೆ ರಾಜ್ಯದ ರಫ್ತು ಪ್ರಮಾಣದ ಹೋಲಿಕೆಯ ಚಿತ್ರಣ (ಕೋಟಿ ರೂಪಾಯಿಗಳಲ್ಲಿ)** | | | |
| **ಭಾರತ** | **ವರ್ಷ** | | **ಬೆಳವಣಿಗೆ** |
| | **2012–13** | **2013–14** | |
| 1. ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ಸಾಫ್ಟ್ ವೇರ್ | 4,10,400 | 4,47,200 | 9% |
| 2. ಇತರ ಉತ್ಪನ್ನಗಳು | 16,34,318 | 18,99,730 | 16% |
| 3. ಒಟ್ಟು | 20,44,718 | 23,46,930 | 12% |

## ಮಷೀನ್ ಟೂಲ್ಸ್

'ಎಲ್ಲ ಕೈಗಾರಿಕೆಗಳ ತಾಯಿ' ಎಂದೇ ಪರಿಗಣಿಸಿರುವ ಮತ್ತು ಬೆಂಗಳೂರು ಸುತ್ತಮುತ್ತ ಗಮನಾರ್ಹ ಪ್ರಮಾಣದಲ್ಲಿ ಬೀಡು ಬಿಟ್ಟಿರುವ ಮಷೀನ್ ಟೂಲ್ಸ್ ಉದ್ದಿಮೆ ರಂಗವು ಕೂಡ ರಾಜ್ಯದ ಅರ್ಥ ವ್ಯವಸ್ಥೆಗೆ ಮತ್ತು ರಫ್ತು ವಹಿವಾಟಿಗೆ ಮಹತ್ವದ ಕೊಡುಗೆ ನೀಡುತ್ತ ವಿಶ್ವದ ಗಮನ ಸೆಳೆಯುತ್ತಿದೆ. ಮಷೀನ್ ಟೂಲ್ಸ್ ರಂಗವು ಸರ್ಕಾರಿ ಗುತ್ತಿಗೆ, ವೈಮಾನಿಕ ಅಂತರಿಕ್ಷ ಮತ್ತು ಜನರಲ್ ಎಂಜಿನಿಯರಿಂಗ್ ರಂಗಗಳಲ್ಲಿ ದೊಡ್ಡ ಪ್ರಮಾಣದಲ್ಲಿಯೇ ವಹಿವಾಟು ನಡೆಸುತ್ತಿದೆ. ದೇಶದ ಕೈಗಾರಿಕಾ ಪ್ರಗತಿಯಲ್ಲಿ ಕರ್ನಾಟಕ ರಾಜ್ಯವು ಯಾವಾಗಲೂ ಮುಂಚೂಣಿಯಲ್ಲಿಯೇ ಇದೆ. ಉದ್ಯಮಶೀಲತೆಯ ಗುಣಗಳನ್ನು ಮೈಗೂಡಿಸಿಕೊಂಡಿರುವ ನಾಗರಿಕರು, ಎಂಜಿನಿಯರಿಂಗ್, ಆಡಳಿತ ನಿರ್ವಹಣೆ, ಮೂಲ ವಿಜ್ಞಾನ ರಂಗದಲ್ಲಿನ ಪರಿಣತ ಮಾನವ ಸಂಪನ್ಮೂಲ, ಉನ್ನತ ಮಟ್ಟದ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳು, ಬಂಡವಾಳ ಹೂಡಿಕೆಗೆ ಇರುವ ವಿಪುಲ ಅವಕಾಶ ಮತ್ತು ಮಾಹಿತಿ ಸಂವಹನ ಪರಿಣತಿ, ಮಾಹಿತಿ ತಂತ್ರಜ್ಞಾನ ರಂಗದಲ್ಲಿನ ಪ್ರಗತಿಯನ್ನು ಸದ್ಬಳಕೆ ಮಾಡಿಕೊಂಡ ಜಾಣತನ, ರಸ್ತೆ, ರೈಲು, ಬಂದರು ಮತ್ತು ವಿಮಾನ ಯಾನದಂತಹ ಸಂಪರ್ಕ ಮೂಲ ಸೌಕರ್ಯಗಳು ಮತ್ತಿತರ ಕಾರಣಕ್ಕೆ ರಾಜ್ಯ ಈಗಾಗಲೇ ಕೈಗಾರಿಕಾ ಪ್ರಗತಿಯಲ್ಲಿ ತನ್ನದೇ ಆದ ವಿಶಿಷ್ಟ ಛಾಪನ್ನು ದಾಖಲಿಸಿದೆ. ರಾಜ್ಯ ಸರ್ಕಾರವೂ ಕೈಗಾರಿಕಾ ಪ್ರಗತಿಗೆ ಪೂರಕವಾದ ಕಾರ್ಯಕ್ರಮಗಳ ಜಾರಿಗೆ ಬದ್ಧತೆ ತೋರಿಸುತ್ತಲೇ ಬಂದಿದೆ. ಹೀಗಾಗಿ ಬಹುರಾಷ್ಟ್ರೀಯ ಸಂಸ್ಥೆಗಳು, ಮಾಹಿತಿ ತಂತ್ರಜ್ಞಾನ ರಂಗದ ಜಾಗತಿಕ ದಿಗ್ಗಜದ ಸಂಸ್ಥೆಗಳು ರಾಜ್ಯದಲ್ಲಿ ಅದರಲ್ಲೂ ವಿಶೇಷವಾಗಿ ಬೆಂಗಳೂರಿನಲ್ಲಿ ತಮ್ಮ ಅಭಿವೃದ್ಧಿ ಮತ್ತು ಸಂಶೋಧನಾ

| ಕರ್ನಾಟಕ ಶೇಕಡಾವಾರು ಚಿತ್ರಣ | | | |
|---|---|---|---|
| 1. ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ಸಾಫ್ಟ್ ವೇರ್ | 1,56,000 | 1,78,000 | 14% |
| 2. ಇತರ ಉತ್ಪನ್ನಗಳು | 10,23,69 | 1,12,418 | 10% |
| 3. ಒಟ್ಟು | 2,58,368 | 2,90,418 | 12% |

***

| ಕರ್ನಾಟಕದ ಶೇಕಡಾವಾರು ಪಾಲು | | |
|---|---|---|
| 1. ಅಖಿಲ ಭಾರತ ರಫ್ತು | 12.05% | 12.37% |
| 2. ಸಾಫ್ಟ್ ವೇರ್ ರಫ್ತು | 39.00% | 40.00% |
| 3. ಸರಕು ಉತ್ಪನ್ನ ರಫ್ತು | 06.26% | 05.92% |

ಕೇಂದ್ರಗಳನ್ನು ತೆರೆದಿವೆ. ಎಂಜಿನಿಯರಿಂಗ್ ಘಟಕಗಳು, ಆಟೊಮೊಬೈಲ್ ಬಿಡಿಭಾಗ ಕೈಗಾರಿಕೆಗಳು, ಚಿನ್ನಾಭರಣ, ಜವಳಿ, ಸಿದ್ಧ ಉಡುಪು ಮತ್ತು ಸಂಸ್ಕರಿತ ಆಹಾರ ರಂಗಗಳೂ ರಾಜ್ಯದಲ್ಲಿ ಬೆಳವಣಿಗೆ ಸಾಧಿಸಿ ರಫ್ತು ವಹಿವಾಟಿಗೆ ಗಣನೀಯ ಕೊಡುಗೆ ನೀಡುತ್ತಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಿ ಸ್ವಾಮ್ಯದ ಉದ್ದಿಮೆಗಳಿಂದ ಸಾಕಷ್ಟು ಪ್ರಮಾಣದಲ್ಲಿ ಬೇಡಿಕೆ ದೊರೆತರೆ ರಾಜ್ಯದ ಕಿರು, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳ (ಎಂಎಸ್ಎಂಇ) ಉತ್ಪಾದನಾ ಚಟುವಟಿಕೆಯು ಇನ್ನಷ್ಟು ಗರಿಗೆದರಲಿರುವುದರಲ್ಲಿ ಸಂದೇಹ ಇಲ್ಲ. ಕೇಂದ್ರೋದ್ಯಮಗಳಾದ ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್ (ಬಿಎಚ್ಇಎಲ್), ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ (ಬಿಇಎಂಎಲ್), ಹಿಂದೂಸ್ತಾನ್ ಏರೊನಾಟಿಕ್ಸ್ ಲಿಮಿಟೆಡ್ (ಎಚ್ಎಎಲ್) ಮುಂತಾದವುಗಳ ಕೊಡುಗೆಯನ್ನೂ ನಿರ್ಲಕ್ಷಿಸುವಂತಿಲ್ಲ. ಮಷೀನ್ ಟೂಲ್ಸ್ ರಂಗವು ಸರ್ಕಾರಿ ಗುತ್ತಿಗೆ, ವೈಮಾನಿಕ ಅಂತರಿಕ್ಷ ಮತ್ತು ಜನರಲ್ ಎಂಜಿನಿಯರಿಂಗ್ ರಂಗಗಳಲ್ಲಿ ದೊಡ್ಡ ಪ್ರಮಾಣದಲ್ಲಿಯೇ ವಹಿವಾಟು ನಡೆಸುತ್ತಿದೆ. ಬೆಂಗಳೂರಿನ ಪೀಣ್ಯ ಕೈಗಾರಿಕಾ ವಲಯದಲ್ಲಿ ಇರುವ ಆಟೊಮೊಬೈಲ್ ಬಿಡಿಭಾಗ ಮತ್ತು ಎಂಜಿನಿಯರಿಂಗ್ ರಂಗದ ಕೈಗಾರಿಕಾ ಘಟಕಗಳು ಪುನಶ್ಚೇತನದ ಹಾದಿಗೆ ಮರಳಿ ಪ್ರಗತಿಯತ್ತ ಮುನ್ನಡೆದಿವೆ.

**ಜವಳಿ ಉದ್ಯಮ** : ಜವಳಿ ಕ್ಷೇತ್ರವು ಅದರಲ್ಲೂ ಮುಖ್ಯವಾಗಿ ರಫ್ತು ಆಧಾರಿತ ಸಿದ್ಧ ಉಡುಪು ತಯಾರಿಕಾ ಘಟಕಗಳು ವಿದೇಶಿ ಬೇಡಿಕೆ ಪೂರೈಸಲು ಶ್ರಮಿಸುತ್ತಿವೆ. ಭಾರತದ ಸಿದ್ಧ ಉಡುಪಿನ ಬಹುದೊಡ್ಡ ಮಾರುಕಟ್ಟೆ ಎನಿಸಿದ ಅಮೆರಿಕ ಮತ್ತು ಐರೋಪ್ಯ ರಾಷ್ಟ್ರಗಳಲ್ಲಿ ಸದ್ಯಕ್ಕೆ ಆರ್ಥಿಕ ಸ್ಥಿತಿ ಚೇತರಿಕೆಯ ಹಾದಿಯಲ್ಲಿ ಇರುವುದರಿಂದ ಜವಳಿ ಉದ್ಯಮವು ಪ್ರಗತಿ ಹಾದಿಯಲ್ಲಿ ಇದೆ. ಹತ್ತಾರು ಬಗೆಯ ಕೈಗಾರಿಕೆಗಳು, ಆರ್ಥಿಕ ಚಟುವಟಿಕೆಗಳ ನೆರವಿನಿಂದ ಕರ್ನಾಟಕ ರಾಜ್ಯವು ಅಂತಾರಾಷ್ಟ್ರೀಯ ವಹಿವಾಟಿನಲ್ಲಿ ಇಡೀ ವಿಶ್ವದ ಗಮನ ಸೆಳೆಯುತ್ತಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ❑

## ಅಂತಾರಾಷ್ಟ್ರೀಯ ವಾಣಿಜ್ಯ ಸಂಬಂಧ

(45ನೇ ಪುಟದಿಂದ)

ಪ್ರಾಧಿಕಾರಗಳು, ವ್ಯಾಪಾರಿ ಪ್ರೋತ್ಸಾಹ ಸಂಸ್ಥೆಗಳು, ಹಾಗೂ ಸಾರ್ವಜನಿಕ ಉದ್ದಿಮೆ ಆಧಾರಿತ ನಿಗಮಗಳು ವಿದೇಶಿ ವ್ಯಾಪಾರಗಳನ್ನು ನಿರಂತರವಾಗಿ ಉತ್ತೇಜಿಸುತ್ತಿರುತ್ತವೆ. ಸಾಮಾಜಿಕವಾಗಿ ಅಲಕ್ಷಿತ ಸಮುದಾಯಗಳಿಗೆ, ಮಹಿಳೆಯರಿಗೆ, ವಿಕಲಚೇತನರಿಗೆ ಉದ್ಯೋಗ ಮತ್ತು ತಾಂತ್ರಿಕ ಪ್ರಾವೀಣ್ಯತೆ ನೀಡಿ ಅವರನ್ನು ಆರ್ಥಿಕ ಮತ್ತು ಸಾಮಾಜಿಕವಾಗಿ ಒಳಗೊಳ್ಳುವ ಪರಿಸರವನ್ನು ಸಹ ಸೃಷ್ಟಿಸುತ್ತಿದೆ.

### ಭಾರತದ ಪ್ರಾದೇಶಿಕ ವ್ಯಾಪಾರ ನೀತಿ

ಭಾರತ ಮತ್ತು ಆಸಿಯಾನ್ ದೇಶಗಳೊಂದಿಗೆ 2009ರಲ್ಲಿ ವಿಶಾಲ ವ್ಯಾಪಾರಿ ತಳಹದಿಯ ಮೇಲೆ ಸರಕು ಮತ್ತು ಸೇವೆಗಳ ವಿನಿಮಯಕ್ಕಾಗಿ ಒಪ್ಪಂದವಾಗಿದೆ. ಅಲ್ಲಿಂದಾಚೆಗೆ ಆಸಿಯಾನ್ ದೇಶಗಳಾದ ಬ್ರುನ್ಯೆ, ಕಾಂಬೋಡಿಯಾ, ಇಂಡೋನೇಶಿಯ, ಮಲೇಶಿಯಾ, ಮ್ಯಾನ್ಮಾರ್, ಫಿಲಿಪ್ಪೈನ್ಸ್, ಸಿಂಗಾಪುರ್, ಥೈಲ್ಯಾಂಡ್ ಹಾಗೂ ವಿಯಟ್ನಾಮ್ ಪ್ರಾದೇಶಿಕ ವ್ಯಾಪಾರಿ ವಲಯಗಳಾಗಿ ಸೇರಿವೆ. ಇವುಗಳಿಗೆ 2013–14ರಲ್ಲಿ 312,610 ಮಿಲಿಯನ್ ಡಾಲರ್ ರಫ್ತು ಮಾಡಿದ್ದು ಮತ್ತು 450,068 ಮಿಲಿಯನ್ ಡಾಲರ್ ಮೊತ್ತದ ಆಮದು ಪಡೆದಿದೆ. ಭಾರತ ಏಶಿಯಾ ಖಂಡದ ಹಿರಿಯಣ್ಣನಂತೆ ವರ್ತಿಸುತ್ತಾ ನೆರೆಹೊರೆದೇಶಗಳ ವಿಶ್ವಾಸಗಳನ್ನು ಗೆದ್ದಿದೆ. ಆದುದರಿಂದಾಗಿ, ಇಲ್ಲಿನ ಉತ್ಪಾದಿತ ಮತ್ತು ಸೇವೆಗಳನ್ನು ಅವುಗಳಿಗೆ ನೀಡುತ್ತಾ ದೇಶಿಯ ಅಭಿವೃದ್ಧಿಗೆ ಪೂರಕವಾಗಿ ನಿಂತಿದೆ. ಈಶಾನ್ಯ ದೇಶಗಳಾದ ಚೈನಾ, ಜಪಾನ್, ಕೊರಿಯಾ ಗಣತಂತ್ರ, ಹಾಂಗ್‌ಕಾಂಗ್, ತೈವಾನ್, ಪ್ರಜಾಪ್ರಭುತ್ವವಾದಿ ಕೊರಿಯಾ, ಮಕೋವ ಮತ್ತು ಮಂಗೋಲಿಯಾ ಭಾರತದ ಒಟ್ಟು ರಫ್ತಿನ್ನಲ್ಲಿ ಶೇ.13 ರಷ್ಟನ್ನು ಸ್ವೀಕರಿಸುತ್ತಿವೆ. ಅವುಗಳಿಂದ ಶೇ.19ರಷ್ಟು ಆಮದಾಗುತ್ತಿದೆ (ಕೋಷ್ಟಕ–6) ಸಾರ್ಕ್ ದೇಶಗಳೊಂದಿಗೂ ಭಾರತ ಸುಮಧುರವಾದ ವ್ಯಾಪಾರ ಬಾಂಧವ್ಯಗಳನ್ನು ಹೊಂದಿದೆ. ಇದರ 14ನೇ ಸಮ್ಮೇಳನದಲ್ಲಿ (2007) ಭಾರತ, ಪಾಕಿಸ್ತಾನ ಮತ್ತು ಶ್ರೀಲಂಕಾಗಳನ್ನು ಕನಿಷ್ಠೇತರ ಅಭಿವೃದ್ಧಿ ಒಪ್ಪಂದದ ದೇಶಗಳೆಂದು ಹಾಗೂ ಆಫಘಾನಿಸ್ತಾನ, ಬಾಂಗ್ಲಾದೇಶ, ಭೂತಾನ್, ಮಾಲ್ದೀವ್ಸ್, ಮತ್ತು ನೇಪಾಳಗಳನ್ನು ಕನಿಷ್ಠ ಅಭಿವೃದ್ಧಿ ಒಪ್ಪಂದದ ದೇಶಗಳೆಂದು ವಿಂಗಡಿಸಲಾಗಿದೆ. ಈ ದೇಶಗಳು ತಮ್ಮದೆಯಾದ ವ್ಯಾಪಾರಿ ಒಪ್ಪಂದಗಳನ್ನು ಮಾಡಿಕೊಂಡಿದ್ದು (SAPTA). ಇದು ಸೀಮಾ ಸುಂಕ ವಿನಾಯತಿ, ವ್ಯಾಪಾರ ರಿಯಾಯ್ತಿ, ವ್ಯಾಪಾರೇತರ ಆರ್ಥಿಕ ಸಹಕಾರಗಳನ್ನು ಸಾರ್ಕ್ ದೇಶಗಳಿಗೆ ನೀಡುತ್ತಿದೆ. ಸಾರ್ಕ್ ದೇಶಗಳೊಂದಿಗೂ 2012–13ರಲ್ಲಿ 305964 ಮಿಲಿಯನ್ ಡಾಲರ್ ಮೌಲ್ಯದ ರಫ್ತು ವಹಿವಾಟು ನಡೆಸಿದ್ದು, ಮತ್ತು 489319 ಮಿಲಿಯನ್ ಡಾಲರ್ ಆಮದು ಮಾಡಿಕೊಂಡಿದೆ. ಹಾಗೆಯೇ 2013–14ರಲ್ಲಿ 300,400 ಮಿಲಿಯನ್ ಡಾಲರ್ ಮೌಲ್ಯದ ರಫ್ತು ವಹಿವಾಟು ಮತ್ತು 490, 737 ಮಿಲಿಯನ್ ಡಾಲರ್ ಮೊತ್ತದ ಆಮದು ಮಾಡಿಕೊಂಡಿದೆ. ಭಾರತ ಇತರೆ ಜಾಗತಿಕ ದೇಶಗಳ ಮನಸ್ಸು ಗೆಲ್ಲಲು ಹಾಕುವ ಹೆಜ್ಜೆಗಳ ಮಾದರಿಯಲ್ಲಿಯೇ ಪ್ರಾದೇಶಿಕ ವಲಯಗಳ ವ್ಯಾಪಾರ ವೃದ್ಧಿಗೆ ಅಷ್ಟೇ ಆಸಕ್ತಿಹೊಂದಿದೆ. ಅದನ್ನು ಅಕ್ಷರಶಃ ಕೃತಿರೂಪಪಗೊಳಿಸಿದೆ. ಅದರ ಪಕ್ಷಿನೋಟ ಕೋಷ್ಟಕ–6ರಲ್ಲಿ ಸಾದರವಾಗಿದೆ.

### ಉಪಸಂಹಾರ

ಭಾರತ ರಫ್ತು ಮತ್ತು ಆಮದುಗಳಲ್ಲಿ ಸಾಧಿಸಿದ ಫಲಗಳು ದೇಶದ ಆಂತರಿಕ ಆರ್ಥಿಕ ಅಂಶಗಳಲ್ಲಿ ಕಾಣುತ್ತಿರುತ್ತವೆ. ಆದರೆ, ದೇಶದ ವಿತ್ತೀಯ ಮತ್ತು ಹಣಕಾಸು ನೀತಿಗಳು ರಫ್ತು ಮತ್ತು ಆಮದುಗಳಿಗೆ ಪ್ರೋತ್ಸಾಹಿತವಾಗಿಲ್ಲದಿದ್ದರೆ ವಿದೇಶಿ ವ್ಯಾಪಾರ ಧನಾತ್ಮಕವಾಗಿರುವುದಿಲ್ಲ. ಆವಾಗ ವ್ಯಾಪಾರದ ಕೊರತೆಗಳನ್ನು ಅನುಭವಿಸುತ್ತದೆ. ಭಾರತವಿಂದು ಪರಿಮಾಣಾತ್ಮ ವ್ಯಾಪಾರದೊಂದಿಗೆ ಗುಣಾತ್ಮಕ ಆರ್ಥಿಕ ರಕ್ಷಣಾ ನೀತಿಗಳಿಂದ ವಿದೇಶಿ ಮಾರುಕಟೆಗಳನ್ನು ಗೆಲ್ಲಲು ಮುಂದಾಗಬೇಕಿದೆ. ಭಾರತದ ಆರ್ಥಿಕಾಭಿವೃದ್ಧಿಗೆ ಪ್ರತಿಕೂಲವಾಗುತ್ತಿರುವ ಸಂದಾಯ ಬಾಕಿಗಳಲ್ಲಿಯೂ ಸಹ ರಚನಾತ್ಮಕ ಬದಲಾವಣೆಗಳನ್ನು ತರಬೇಕಿದೆ. ❑

# ನಿಮಗಿದು ತಿಳಿದಿದೆಯೇ?

## ಟ್ರಿಪ್ಸ್

ಟ್ರಿಪ್ಸ್ ಎಂದರೆ ಬೌದ್ಧಿಕ ಆಸ್ತಿ ಹಕ್ಕುಗಳಿಗೆ ಸಂಬಂಧಿಸಿದ ವಾಣಿಜ್ಯ ವಿಷಯವಾಗಿದೆ. ಇದು, ಜಗತ್ತಿನ ಎಲ್ಲ ಬೌದ್ಧಿಕ ಆಸ್ತಿ ಹಕ್ಕುಗಳಿಗೆ ಒಪ್ಪಿತವಾದ ಸಾಮಾನ್ಯ ನೀತಿ ನಿಯಮಗಳನ್ನು ಒಳಗೊಂಡ ಅಂತಾರಾಷ್ಟ್ರೀಯ ಒಪ್ಪಂದಕ್ಕೊಳಪಟ್ಟಿದೆ. ಬೌದ್ಧಿಕ ಆಸ್ತಿಯ, ಬಳಕೆ, ಲಭ್ಯತೆ ಹಾಗೂ ಪೇಟೆಂಟ್ ವಿಷಯಗಳಲ್ಲಿ ಇದು ರಕ್ಷಣೆ ಒದಗಿಸುತ್ತದೆ. ವಿಶ್ವವ್ಯಾಪಾರ ಸಂಘಟನೆಯ ಸದಸ್ಯ ರಾಷ್ಟ್ರಗಳೆಲ್ಲ ಈ ನಿಯಮಾವಳಿ ವ್ಯಾಪ್ತಿಗೊಳಪಡುತ್ತವೆ. ಬೌದ್ಧಿಕ ಆಸ್ತಿ ಹಕ್ಕುಗಳು ಅತಿಕ್ರಮಣಕ್ಕೊಳಗಾದ ಸನ್ನಿವೇಶಗಳಲ್ಲಿ ಈ ಒಪ್ಪಂದಗಳ ಮೂಲಕ ವ್ಯಾಜ್ಯ ಇತ್ಯರ್ಥಗೊಳಿಸಲಾಗುತ್ತದೆ. ವಿಶ್ವವಾಣಿಜ್ಯ ಸಂಘಟನೆಯ ಸದಸ್ಯ ರಾಷ್ಟ್ರಗಳು ಈ ಒಪ್ಪಂದಕ್ಕೆ ಬದ್ಧರಾಗಿದ್ದು, ಎಲ್ಲ ನೀತಿ ನಿಯಮಾವಳಿಗಳನ್ನು ಹಾಗೂ ಇತ್ಯರ್ಥ ಪ್ರಕ್ರಿಯೆಗಳನ್ನು ಪಾಲಿಸಲೇ ಬೇಕಾಗುತ್ತದೆ. ಭೌತಿಕ ಆಸ್ತಿ ಹಕ್ಕುಗಳಲ್ಲಿ ಕಾಪಿರೈಟ್, ಸರ್ವಿಸ್ ಮಾರ್ಕ್, ಔದ್ಯಮಿಕ ವಿನ್ಯಾಸ, ಸಾಧನೆ, ದೃಶ್ಯ ಶ್ರಾವ್ಯ ನಿರೂಪಣೆಗಳು, ಸೇರಿರುತ್ತವೆ.

* * *

## ಮೆರ್ಕೊಸೂರ್

ಇದು ಲ್ಯಾಟಿನ್ ಅಮೆರಿಕದಲ್ಲಿರುವ ಒಂದು ವಾಣಿಜ್ಯ ಬ್ಲಾಕ್ ಆಗಿದೆ. ಬ್ರೆಜಿಲ್, ಅರ್ಜೆಂಟೈನಾ, ಉರುಗ್ವೆ, ಪರಾಗ್ವೆ ಮತ್ತು ವೆನಿಜುಲಾ ಈ ವಾಣಿಜ್ಯ ವಲಯದಲ್ಲಿ ಬರುತ್ತವೆ. ಚಿಲಿ, ಬೊಲಿವಿಯಾ, ಕೊಲಂಬಿಯಾ, ಈಕ್ವೆಡಾರ್, ಮತ್ತು ಪೆರು ಐದು ಸಹವರ್ತಿ ದೇಶಗಳಾಗಿವೆ.

1991ರಲ್ಲಿ ಅಸ್ತಿತ್ವಕ್ಕೆ ಬಂದ ಈ ವಲಯ ಸರಕು ಹಾಗೂ ದೇಶಗಳ ಮುಕ್ತ ಸಂಚಾರಕ್ಕೆ ಅವಕಾಶ ಕಲ್ಪಿಸುತ್ತವೆ. ಭಾರತ, ಪೆರುಗ್ವೆಯಲ್ಲಿ ಈ ಕುರಿತ ಚೌಕಟ್ಟು ಒಪ್ಪಂದಕ್ಕೆ ಸಹಿ ಹಾಕಿದೆ.

ಇದರನ್ವಯ ಮೊದಲ ಹಂತದಲ್ಲಿ ಪರಸ್ಪರ ವಿನಿಮಯದ ದರಕ್ಕೆ ಆದ್ಯತೆ ಹಾಗೂ ಎರಡನೇ ಹಂತದಲ್ಲಿ ಮುಕ್ತ ವಾಣಿಜ್ಯ ವಲಯ ಸಂಚಾರ ಕುರಿತಂತೆ ಮುಕ್ತವಾಗಿ ವ್ಯವಹರಿಸಲು ಅವಕಾಶವಿರುತ್ತದೆ. ಈ ವಲಯದಲ್ಲಿ ಆಹಾರ ತಯಾರಿಕೆ, ಸಾವಯವ ರಸಾಯನಿಕಗಳು, ಔಷಧಿ, ಪ್ಲಾಸ್ಟಿಕ್, ರಬ್ಬರ್ ಉತ್ಪನ್ನ, ಮಷಿನರಿ ಕೊಡುಕೊಳ್ಳುವಿಕೆಗೆ ಅವಕಾಶವಿರುತ್ತದೆ. ❑

(47 ನೇ ಪುಟದಿಂದ)

# ವಲಸೆ ಮತ್ತು ಸಂಬಂಧ

ಅರಗಿಸಿಕೊಂಡಿಲ್ಲ. ಆದ್ದರಿಂದ ವಲಸೆ ಎನ್ನುವುದು ನಕಾರಾತ್ಮಕವಾಗಿಯೇ ಉಳಿದೆ ಎನ್ನಬಹುದು. ಏಕೆಂದರೆ ಇದು ಎಲ್ಲರನ್ನು ಅಂದರೆ, ಕೂಲಿಕಾರ್ಮಿಕರನ್ನು ಒಳಗೊಳ್ಳುವ ವಿದ್ಯಮಾನವಾಗಿ ಇನ್ನೂ ಬೆಳೆದಿಲ್ಲ. ಇದು ಕೇವಲ ಮಧ್ಯಮ ವರ್ಗ ಮತ್ತು ಬಂಡವಾಳಶಾಹಿ ಕುಲೀನರನ್ನು ಮಾತ್ರ ಪರಿಗಣಿಸಿ ಹೇಳಬಹುದೇನೋ! ಇದು ಒಂದು ಬಗೆಯ ಸವಾಲಾದರೆ ಅದರ ಮತ್ತೊಂದು ಸವಾಲು ಭಾರತಕ್ಕೆ ಎದುರಾಗುತ್ತದೆ. ಅಂದರೆ ಹೇಗೆ ಬಹುಸಂಖ್ಯಾತ ಭಾರತೀಯರು ಅನಿವಾಸಿಗಳಾಗಿ ವಿಭಿನ್ನದೇಶಗಳು ಅಂದರೆ ಸುಮಾರು 90 ದೇಶಗಳಿಗಿಂತಲೂ ಅಧಿಕ ದೇಶಗಳಲ್ಲಿ ಬದುಕನ್ನು ಕಂಡುಕೊಳ್ಳುತ್ತಿರುವಾಗ, ಭಾರತದೊಳಗೇ ನಾವೆಷ್ಟು ಅವಕಾಶಗಳನ್ನು ಒದಗಿಸುತ್ತಿದ್ದೇವೆ ಎನ್ನುವ ಸವಾಲು ಎದುರಾಗುತ್ತಿದೆ.

ಮಾಧ್ಯಮಗಳು ಗುರುತಿಸುವಂತೆ, ಇನ್ನು 30 ವರ್ಷದಲ್ಲಿ ವಲಸಿಗರದ್ದೇ ಪಾರುಪತ್ಯವಾಗಿ ಅಮೆರಿಕ ಪಲ್ಲಟಗೊಳ್ಳುತ್ತದೆ. ವಿಶ್ವದ ದೊಡ್ಡಣ್ಣ ಎನ್ನಿಸಿಕೊಂಡಿರುವ ಅಮೆರಿಕದಲ್ಲಿ ಯುರೋಪ್ ಹಾಗೂ ಲ್ಯಾಟಿನ್ ಅಮೆರಿಕದಿಂದ ವಲಸೆ ಹೋದ ಬಿಳಿಯರದ್ದೇ ಪಾರುಪತ್ಯ. ಆದರೆ 2043ರ ಹೊತ್ತಿಗೆ ಅಮೆರಿಕದಲ್ಲಿ ಬಿಳಿಯರು ತಮ್ಮ ಅಸ್ತಿತ್ವ ಕಳೆದುಕೊಂಡು ಅಲ್ಪಸಂಖ್ಯಾತರಾಗಲಿದ್ದಾರೆ ಎಂದು ಅಮೆರಿಕದ ಜನಗಣತಿ ಸಮೀಕ್ಷಾ ವರದಿ ಅಂದಾಜಿಸಿದೆ. 2043ರ ಆಸುಪಾಸಿನಲ್ಲಿ ಅಮೆರಿಕ ಬಹುಸಂಖ್ಯಾತ ಮತ್ತು ಅಲ್ಪಸಂಖ್ಯಾತರ ದೇಶ ಎನಿಸಿಕೊಳ್ಳಲಿದೆ. ಲ್ಯಾಟಿನ್ ಅಮೆರಿಕದಿಂದ ವಲಸೆ ಬಂದ ಬಿಳಿಯರ (ನಾನ್–ಹಿಸ್ಪ್ಯಾನಿಕ್) ಜನಸಂಖ್ಯೆಯು ಅತಿದೊಡ್ಡ ಸಮುದಾಯವೆಂದು ಗುರುತಿಸಿಕೊಂಡರೂ ಯಾವೊಂದು ಸಮುದಾಯಕ್ಕೂ ಬಹುಸಂಖ್ಯಾತ ಪಟ್ಟ ಸಿಗದು ಎಂದು ಸಮೀಕ್ಷೆ ಹೇಳಿದೆ.

ಅಮೆರಿಕದ ಜನಸಂಖ್ಯೆಯಲ್ಲಿ ಶೇಕಡ 37ರಷ್ಟು ಜನಸಂಖ್ಯೆ ಅಲ್ಪಸಂಖ್ಯಾತರನ್ನು ಒಳಗೊಂಡಿದೆ. ಇದರಲ್ಲಿ ಅಮೆರಿಕದ ಮೂಲ ನಿವಾಸಿಗಳು, ಯುರೋಪ್, ಲ್ಯಾಟಿನ್ ಅಮೆರಿಕ, ಭಾರತ ಸೇರಿದಂತೆ ವಿವಿಧ ಕಡೆಯಿಂದ ವಲಸೆ ಹೋದವರು ಸೇರಿದ್ದಾರೆ. ಈ ಅಲ್ಪಸಂಖ್ಯಾತರ ಜನಸಂಖ್ಯಾ ಪ್ರಮಾಣ 2060ರ ಹೊತ್ತಿಗೆ ಶೇಕಡ 57ಕ್ಕೆ ಏರಿಕೆಯಾಗಲಿದೆ. ಇದೇ ಗತಿ ಮುಂದೆ, ಅಂದರೆ, 2060ರಲ್ಲಿ ಪ್ರತಿ ಮೂರು ಅಮೆರಿಕ ನಿವಾಸಿಯಲ್ಲಿ ಒಬ್ಬ ಮೂಲ ನಿವಾಸಿ ಇರಲಿದ್ದಾನೆ ಎನ್ನುತ್ತದೆ ಸಮೀಕ್ಷೆ. ಇದೇ ಅವಧಿಯೊಳಗೆ ಅಮೆರಿಕದಲ್ಲಿರುವ ಆಫ್ರಿಕನ್ ಮೂಲದ ಜನಸಂಖ್ಯೆಯು 4.1ಕೋಟಿಯಿಂದ 6.1 ಕೋಟಿಗೆ ಏರಿಕೆಯಾಗಲಿದೆ. ಹಾಗೆಯೇ ಏಶಿಯಾ ವಲಸಿಗರ ಜನಸಂಖ್ಯಾ ಪ್ರಮಾಣ 1.5 ಕೋಟಿಯಿಂದ 3.4 ಕೋಟಿಗೆ ಜಿಗಿಯಲಿದೆ. ಇದಲ್ಲದೇ ಭಾರತೀಯ ಮೂಲದ ಅಮೆರಿಕನ್ನರು ಮತ್ತು ಅಲಾಸ್ಕಾ ಮೂಲ ನಿವಾಸಿಗಳ ಜನಸಂಖ್ಯಾ ಪ್ರಮಾಣವೂ 3.9 ದಶಲಕ್ಷದಿಂದ 6.3 ದಶಲಕ್ಷಕ್ಕೆ ಏರಿಕೆಯಾಗಿದೆ ಎಂದು ವರದಿ ಹೇಳಿದೆ. ಇಂತಹ ಪರಿಸ್ಥಿತಿಯ ಪರಿಣಾಮವಾಗಿ ಸಾಮಾಜಿಕ ಬದಲಾವಣೆ ಎನ್ನುವುದು ಯಾವ ಸ್ವರೂಪದ್ದು ಎನ್ನುವ ಪ್ರಶ್ನೆ ನಮ್ಮೆದುರು ನಿಲ್ಲುತ್ತದೆ. ಈ ನಿಟ್ಟಿನಲ್ಲಿ ನಾವು ಗಮನಿಸಬೇಕಾದ ಅರಿಮೆಗಳು ಎರಡು ಬಗೆಯಾದುವು: ಒಂದನೆಯದ್ದು: 'ಮೀನಿಂಗ್ ಇಸ್ ಇನ್ ಮೂವ್‌ಮೆಂಟ್' ಎನ್ನುವುದು ಕನ್ನಡ ಸಂಸ್ಕೃತಿಯಲ್ಲಿ ಗುರುತಿಸಿಕೊಂಡಂತೆ, 'ಜಂಗಮ ಪ್ರಜ್ಞೆ'ಯಾಗಬೇಕು. ಎರಡನೆಯದ್ದು, ಬಹುತ್ವದ ಬದುಕಿನ 'ಭಿನ್ನತೆ'ಯೇ ನಿಜವಾದ ಮೀನಿಂಗ್' ಆಗುವ ಸಾಧ್ಯತೆಯತ್ತ ನಮ್ಮ ತಿಳಿವಳಿಕೆಗಳು ಬೆಳೆಯಬೇಕಾಗುತ್ತದೆ. ಹಾಗಾದಾಗ, ವಲಸೆ ಎನ್ನುವುದು 'ವಿಶ್ವ ಭ್ರಾತೃತ್ವ'ದ ಕಲ್ಪನೆಯಾಗುವ ಸಾಧ್ಯತೆಯಾಗಬಹುದು. ಆದರೆ ಆ ನಿಟ್ಟಿನಲ್ಲಿ ಸಾಗುವಾಗ ಸರ್ಕಾರಗಳೂ ಸಹ ಹೊಸ ಪೀಳಿಗೆಗೆ ಸ್ಪಂದಿಸಬೇಕಾಗುತ್ತದೆ. ಅಂದರೆ, ಆರ್ಥಿಕ ಸಮಾನತೆಯನ್ನು ಎಲ್ಲಾ ರಂಗಗಳಲ್ಲೂ ಸಾಧಿಸಬೇಕಾದ ಜರೂರು ಇದೆ. ❑

# ವಾರ್ತಾ ವಿಶೇಷ

ಚೀನಾ ನೇತೃತ್ವದಲ್ಲಿ 10 ಸಾವಿರ ಕೋಟಿ ಡಾಲರ್ (ರೂ. 6.40 ಲಕ್ಷ ಕೋಟಿ) ಮೊತ್ತದಲ್ಲಿ ಸ್ಥಾಪನೆಯಾಗಿರುವ ಏಶಿಯಾ ಮೂಲಸೌಕರ್ಯ ಹೂಡಿಕೆ ಬ್ಯಾಂಕ್ (ಎಐಐಬಿ) ಒಪ್ಪಂದಕ್ಕೆ ಭಾರತ ಸೇರಿದಂತೆ ವಿಶ್ವದ 50 ರಾಷ್ಟ್ರಗಳು ಸಹಿ ಹಾಕಿವೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಮುಖ ಹಣಕಾಸು ಸಂಸ್ಥೆಯಾಗಿ ಸ್ಥಾಪನೆಯಾಗಿರುವ ಬ್ಯಾಂಕ್‌ನ 50 ದೇಶಗಳ ಸ್ಥಾಪಕ ಪ್ರತಿನಿಧಿಗಳು ಚೀನಾದ 'ಗ್ರೇಟ್ ಹಾಲ್ ಆಫ್ ಪೀಪಲ್'ನಲ್ಲಿ ಜೂನ್ 29 ರಂದು ಒಪ್ಪಂದಕ್ಕೆ ಸಹಿ ಹಾಕಿದರು. ಭಾರತದ ಪರವಾಗಿ ರಾಯಭಾರಿ ಶ್ರೀ ಅಶೋಕ್ ಕಾಂತಾ ಸಹಿ ಮಾಡಿದರು. ಏಶಿಯಾ ದೇಶಗಳಿಗೆ ಹಣಕಾಸು ಒದಗಿಸುವ ಉದ್ದೇಶದಿಂದಲೇ ಈ ಬ್ಯಾಂಕ್ ಸ್ಥಾಪನೆಯಾಗಿದ್ದು, ಎಲ್ಲ ದೇಶಗಳ ಪಾಲು, ನಿರ್ವಹಣೆ ರೀತಿ ಮತ್ತು ನೀತಿ ನಿರೂಪಣೆಯ ವಿಧಾನಗಳನ್ನು ಒಪ್ಪಂದ ಒಳಗೊಂಡಿದೆ.

* * *

ದೇಶದ ಎಂಟು ಪ್ರಮುಖ ಕೈಗಾರಿಕಾ ವಲಯಗಳು ಕಳೆದ ಆರು ತಿಂಗಳಲ್ಲಿಯೇ ಗರಿಷ್ಠ ಮಟ್ಟದ ಸಾಧನೆ ತೋರಿವೆ. ಮೇ ತಿಂಗಳಲ್ಲಿ ಶೇ. 4.4 ರಷ್ಟು ಉತ್ತಮ ಸಾಧನೆ ದಾಖಲಾಗಿದೆ. 2014ರ ಮೇ ತಿಂಗಳಲ್ಲಿ ಶೇ. 3.8 ರಷ್ಟು ಪ್ರಗತಿ ಕಂಡುಬಂದಿತ್ತು. ಕಲ್ಲಿದ್ದಲು (ಶೇ. 7.8), ಶುದ್ಧೀಕರಿಸಿದ ಉತ್ಪನ್ನಗಳು (ಶೇ. 7.9) ಮತ್ತು ವಿದ್ಯುತ್ ಉತ್ಪಾದನೆ (ಶೇ. 5.5) ವಲಯದಿಂದ ಅತ್ಯುತ್ತಮ ಕೊಡುಗೆ ಬಂದಿದ್ದರಿಂದ ಮೇ ತಿಂಗಳಲ್ಲಿನ ಎಂಟೂ ಪ್ರಮುಖ ಕೈಗಾರಿಕೆಗಳ ವಿಭಾಗದ ಸಾಧನೆ ಮೇಲ್ಮಟ್ಟದ್ದಾಗಿದೆ. ಮೂಲ ಸೌಕರ್ಯ ವಲಯಕ್ಕೆ ಸೇರಿದ ಈ ಎಂಟು ಪ್ರಮುಖ ಕೈಗಾರಿಕಾ ವಿಭಾಗಗಳಿಂದಲೇ ದೇಶದ ಒಟ್ಟಾರೆ ಕೈಗಾರಿಕಾ ಉತ್ಪಾದನೆಯ ಸೂಚ್ಯಂಕಕ್ಕೆ (ಐಐಪಿ) ಶೇ. 38 ರಷ್ಟು ಕೊಡುಗೆ ಬರುತ್ತದೆ.

* * *

**ತೈಲ ಆಮದು ಇಳಿಕೆ**

ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ಬೆಲೆ ಇಳಿಮುಖವಾಗಿಯೇ ಇದೆ. ಹೀಗಾಗಿ ಪ್ರಸಕ್ತ ವರ್ಷದಲ್ಲಿ ಭಾರತದ ಕಚ್ಚಾತೈಲ ಆಮದು ಶೇ. 21.7ರಷ್ಟು ತಗ್ಗಿದೆ.

ಇದರಿಂದ ತೈಲ ಆಮದು ಮೌಲ್ಯವು ರೂ 5.48 ಲಕ್ಷಕೋಟಿಗಳಿಗೆ ಇಳಿಕೆಯಾಗುವ ಸಾಧ್ಯತೆ ಇದೆ ಎಂದು ಪೆಟ್ರೋಲಿಯಂ ಸಚಿವಾಲಯ ಅಂದಾಜು ಮಾಡಿದೆ.

ಈ ವರ್ಷ 18.80 ಕೋಟಿ ಟನ್ ಆಮದು ಮಾಡಿಕೊಳ್ಳಲು ನಿರ್ಧರಿಸಲಾಗಿದೆ. 2014–15ರಲ್ಲಿ ರೂ 6.78 ಲಕ್ಷ ಕೋಟಿ ಮೌಲ್ಯದ 18.90 ಕೋಟಿ ಟನ್ ಕಚ್ಚಾತೈಲ ಆಮದಾಗಿತ್ತು. ಮೌಲ್ಯದಲ್ಲಿ ಆಮದು ಪ್ರಮಾಣ ಕಡಿಮೆ ಆಗಿದೆ.

* * *

ರಫ್ತು ಉತ್ತೇಜನಕ್ಕಾಗಿ 21 ರಾಜ್ಯಗಳು 'ರಫ್ತು ಆಯುಕ್ತರನ್ನು ನೇಮಕ ಮಾಡಿವೆ. ಕೇಂದ್ರದ ವಾಣಿಜ್ಯ ಸಚಿವಾಲಯದ ಸಲಹೆ ಮೇರೆಗೆ ರಾಜ್ಯ ಸರ್ಕಾರಗಳು ಈ ಕ್ರಮ ಕೈಗೊಂಡಿವೆ ಎಂದು ಸಚಿವಾಲಯದ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ. ❑


## Subscription Coupon

**[For New membership /Renewal/Change of Address]**

I want to subscribe to :

Yojana / Kurukshetra / Ajkal / : 1 yr. Rs.100/-; 2 yrs, Rs.180/- ; 3 yrs, Rs.250/-

Bal Bharati : 1 yr. Rs.80/-; 2 yrs, Rs.150/- ; 3 yrs, Rs.200/-

**(Circle the magazine of your choice and the period of subscription)**

DD/PO/MO No.______________________________ date ____________

Name (in block letters) : ______________________________

Subscriber's profile : Student / Academician / Institution / Others

Address : ______________________________

______________________________

PIN : ____________________

The amount may kindly be sent in the form of D.D. It should be drawn in favour of ADG (I/C), Publications Division, Min. of I & B, GOI and payable at New Delhi. The D.D. along with duly filled cupon may kindly be sent to The Business Manager (Journals), Publications Division, Ministry of Information & Broadcasting, Room No. 48-53, Soochna Bhawan, CGO Complex, Lodi Road, New Delhi – 110 003.

Please allow us 4 to 6 weeks for the dispatch of the first issue.

P.S. : For Renewal / change in address, please quote your subscription number